ವಿಶ್ವ ಕನ್ನಡ ಸಮ್ಮೇಳನ-೨೦೧೧
ಬೆಳಗಾವಿ

# ಶತಮಾನದ ಗಾನ

ಕೈಯ್ಯಾರ ಕಿಞ್ಞಣ್ಣ ರೈ

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

# ಶತಮಾನದ ಗಾನ

ಕಯ್ಯಾರ ಕಿಞ್ಞಣ್ಣ ರೈ

ಕರ್ನಾಟಕ ಸರ್ಕಾರ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು – ೫೬೦ ೦೦೨

**SHATHAMANADA GANA** (song of the Century) Collection of one hundred and eleven Poems by **Kayyara Kinhanna Rai,** M.A. ; Published by **Manu Baligar**, Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೧
ಪ್ರತಿಗಳು : ೧೦೦೦
ಪುಟಗಳು : xxxvi + ೨೮೭
ಬೆಲೆ : ರೂ. ೭೫/–

ರಕ್ಷಾಪುಟ ವಿನ್ಯಾಸ : **ಕೆ. ಚಂದ್ರನಾಥ ಆಚಾರ್ಯ**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦ ೦೨೦ ದೂ : ೨೩೩೪೨೭೨೪



**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

## ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ **"ವಿಶ್ವ ಕನ್ನಡ ಸಮ್ಮೇಳನ"** ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ ೨೪.೦೧.೨೦೧೧

**(ಬಿ.ಎಸ್. ಯಡಿಯೂರಪ್ಪ)**

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು – ೦೧

## ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೧.೨೦೧೧

**(ಗೋವಿಂದ ಎಂ. ಕಾರಜೋಳ)**



## ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

**(ರಮೇಶ್ ಬಿ.ಝುಳಕಿ)**
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

## ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ!

**ಎಲ್.ಎಸ್. ಶೇಷಗಿರಿ ರಾವ್**
ಅಧ್ಯಕ್ಷ
ದಿನಾಂಕ ೧೬.೧೨.೨೦೧೦ ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ



## ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ. ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವ ಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ

ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ದಿನಾಂಕ ೧೧.೦೧.೨೦೧೧



## ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

**ಅಧ್ಯಕ್ಷರು**
ಪ್ರೊ. ಎಲ್.ಎಸ್. ಶೇಷಗಿರಿರಾವ್

**ಸದಸ್ಯರು**
ಡಾ॥ ಚಂದ್ರಶೇಖರ ಕಂಬಾರ
ಡಾ॥ ಎಂ.ಎಂ. ಕಲಬುರ್ಗಿ
ಡಾ॥ ದೊಡ್ಡರಂಗೇಗೌಡ
ಡಾ॥ ಅರವಿಂದ ಮಾಲಗತ್ತಿ
ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ
ಡಾ॥ ಪ್ರಧಾನ್ ಗುರುದತ್ತ
ಡಾ॥ ಹಂಪ ನಾಗರಾಜಯ್ಯ
ಡಾ॥ ಎಚ್.ಜೆ. ಲಕ್ಕಪ್ಪಗೌಡ
ಶ್ರೀಮತಿ ಸಾರಾ ಅಬೂಬಕರ್
ಡಾ॥ ಪಿ.ಎಸ್. ಶಂಕರ್

**ಸದಸ್ಯ ಕಾರ್ಯದರ್ಶಿ**
ಶ್ರೀ ಮನು ಬಳಿಗಾರ್, ಕ.ಆ.ಸೇ.
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಮುನ್ನುಡಿ

ಈ 'ಶತಮಾನದ ಗಾನ' ನನ್ನ ಪ್ರಕಟಿತ ಹಾಗೂ ಅಪ್ರಕಟಿತ ನೂರ ಹನ್ನೊಂದು ಕವನಗಳ ಸಂಪುಟ. 'ಶ್ರೀಮುಖ'ದಿಂದ ತೊಡಗಿ 'ಪಂಚಮೀ' ವರೆಗಿನ ಸಂಗ್ರಹಗಳಿಂದಲೂ, ಹೊಸತಾಗಿ ರಚಿಸಿದ ಕವಿತೆಗಳಿಂದಲೂ ಹಲಕೆಲವನ್ನು ಈ ಸಂಪುಟದಲ್ಲಿ ಒಟ್ಟುಗೂಡಿಸಿ ಕೊಡಲಾಗಿದೆ.

ಇಲ್ಲಿ ನೂರಕ್ಕೂ ಮಿಕ್ಕಿದ ಕವನಗಳಿರುವುದರಿಂದ, ಆ ಸಂಖ್ಯಾಸಂಕೇತವಾಗಿಯೂ, ಈ ಶತಮಾನದ ಕಾಲಾವಧಿ, ಕವಿಯ ಬದುಕಿಗೆ ನೀಡಿದ ನೋವು ನಲಿವುಗಳ ಅಭಿವ್ಯಕ್ತಿಯದ್ಯೋತಕವಾಗಿಯೂ ಕೃತಿಗೆ 'ಶತಮಾನದ ಗಾನ' ಎಂಬೀ ಹೆಸರು ಸಂದಿದೆ.

ಮನುಷ್ಯ, ನೂರುವರ್ಷಗಳ ಪೂರ್ಣಾಯುಸ್ಸು ಜೀವಿಸಬೇಕು. ಜೀವಿತ ನಿರರ್ಥಕವಲ್ಲ; ಸಾರ್ಥಕ, ಬಾಳುವೆ ತಿರಸ್ಕಾರಕ್ಕಲ್ಲ; ಪುರಸ್ಕಾರಕ್ಕೆ, ಕರ್ಮನಿರತನಾಗಿ ಕರ್ಮಫಲ ಲೇಪವಿಲ್ಲದೆ, ಪೂರ್ಣಮಾನವನೆನಿಸಿ, ತುಂಬುಬಾಳುವೆ ಬದುಕುವುದು ಜೀವಿತ ತತ್ವ. ಶತಮಾನದ ಗಣನೆ ಜೀವನದ ಪರಮೋನ್ನತಿಯ ಚರಮಲಕ್ಷ್ಯ. ಇಂತು ಶತಮಾನದ ಅಂಕಿತ ಆಕರ್ಷಕ ಉನ್ನತಿಯೆಡೆಗೆ, ಪೂರ್ಣತೆಯ ಕಡೆಗೆ ಬೆರಳು ತೋರಿಸುವುದರಿಂದ.

ಪರಿಪೂರ್ಣತೆಯು ಹಾಗೂ ಸಮುನ್ನತಿಯು ಈ ಭವ್ಯ ಕಲ್ಪನೆ, ಪ್ರತಿಭಾಶಾಲಿಯಾದ ಕವಿಗೂ ಸಹಜವಾಗಿ ಸ್ಫೂರ್ತಿಯನ್ನು ನೀಡುವುದು. ಅದರಿಂದ, ಕವಿಯೂ ಜೀವಿತದ ಸಿದ್ಧಿಯನ್ನು ಗಳಿಸುವುದರೊಂದಿಗೆ, ಲೋಕಕ್ಕೆ ಪೂರ್ಣತೆಯ ಹಾಗೂ ಉನ್ನತಿಯ ಸಂದೇಶವನ್ನು ಸಾರಬಲ್ಲನು. ಎಲ್ಲಾ ದೇಶದ ಎಲ್ಲಾ ಭಾಷೆಯ ಶ್ರೇಷ್ಠ ಕವಿಗಳ ಕಂಠದಿಂದ ಅಂತಹ ಧ್ವನಿ ಮೊಳಗಿ ಮಾರ್ಮೊಳಗಿ ತರಂಗತರಂಗಿತವಾಗಿ ಸರ್ವತ್ರ ಹಬ್ಬಿದೆ. ಈ 'ಶತಮಾನದ ಗಾನ'ದಲ್ಲಿ ಮಿಂಚಿದ ಪ್ರತಿಭೆ ಅಂತಹ ಉನ್ಮೇಷವನ್ನು ಉಂಟುಮಾಡುತ್ತದೆಯೇ ಎಂದು ರಸಿಕರು ಹೇಳಬೇಕು.

ಕನ್ನಡ ಸಂಸ್ಕೃತ ತುಳು ಮಲೆಯಾಳಿ ಇತ್ಯಾದಿ ಬಹುಭಾಷಾವಿದ್ವಾಂಸರೂ, ಸಂಶೋಧಕರೂ ಸ್ವತಃ ಶ್ರೇಷ್ಠ ಕವಿಗಳೂ ಆದ ಶ್ರೀ ಪುಂಡೂರು ವೆಂಕಟರಾಜ ಪುಣಿಂಚತ್ತಾಯರು ಈ ಸಂಪುಟದ ಅಧ್ಯಯನದ ಫಲವಾಗಿ ಸಮೀಕ್ಷೆಯೊಂದನ್ನು ಬರೆದು ಉಪಕಾರ ಮಾಡಿದ್ದಾರೆ. 'ವಾಕ್ ಶ್ರೀಯುತನೊಳ್ ಅಮತ್ಸರತ್ವಮ್ ಆಗದು'

ಎಂಬ ಕವಿವಾಣಿಯನ್ನು ತನ್ನ ಸಹೃದಯತೆಯ ಸದ್ಗುಣದಿಂದ ಅಲ್ಲವಾಗಿಸಿದ್ದಾರೆ. ಅವರಿಗೆ ನಾನು ಕೃತಜ್ಞನು.

ಇವಿಷ್ಟು ಆಯ್ದ ಕವನಗಳೆಂದು ಹೇಳಲಾರೆ. ಆಯ್ಕೆ ಶತಮಾನದ ಲೆಕ್ಕಕ್ಕೆ ಹೊರತು ತರತಮ ಯೋಗ್ಯತೆಯ ದೃಷ್ಟಿಯಿಂದಲ್ಲ. ಹೆತ್ತವರಿಗೆ ತಮ್ಮ ಎಲ್ಲಾ ಮಕ್ಕಳಲ್ಲೂ ಒಂದೇ ತೆರನ ವಾತ್ಸಲ್ಯ. ಕವಿಗೂ ಅಂತಯೇ. ಕಾವ್ಯರಸಿಕರಲ್ಲಿ ಭಿನ್ನರುಚಿ ಇದ್ದರೆ ಅದು ಅವರ ಇಷ್ಟ. ಪ್ರಾಚೀನವೂ ಸತ್ವಶಾಲಿಯೂ, ಸಮೃದ್ಧವೂ ಆದ ಭಾಷೆ ಸಾಹಿತ್ಯಗಳ ಸಾಲಿನಲ್ಲಿ ಕನ್ನಡಕ್ಕೂ ಮನ್ನಣೆಯ ಮಣೆಯಿದೆ. ಮಹಾಕಾವ್ಯಗಳು ದೃಶ್ಯ ಶ್ರವ್ಯ, ಚಂಪೂಕೃತಿಗಳು, ಅಲಂಕಾರಛಂದಸ್ಸು, ಶಾಸ್ತ್ರಗ್ರಂಥಗಳು, ಭಾಷಾ ಸಾಹಿತ್ಯಗಳ ನಾನಾ ಪ್ರಕಾರಗಳು ಕನ್ನಡದಲ್ಲಿ ಬೇಕಾದಷ್ಟು ಬೆಳೆದುಬಂದಿವೆ. ಆಧುನಿಕ ವೈಜ್ಞಾನಿಕ ಲೋಕದ ಮನೋಧರ್ಮಕ್ಕೆ ಅನುಗುಣವಾದ ನವೀನಸಾಹಿತ್ಯ ಸೃಷ್ಟಿಯೂ ಸಾಕಷ್ಟು ಆಗಿದೆ. ಕಾಳಿನೊಂದಿಗೆ ಜಳ್ಳೂ ಸೇರಿರುತ್ತದೆ. ಆದರೆ ಗೇರಿ ನೋಡಿದಾಗ ಕಾಳಿನ ರಾಶಿಯೇ ಹೆಚ್ಚಾಗಿದ್ದರೆ ಕೃಷಿಕನಿಗೆ ತೃಪ್ತಿ. ಕನ್ನಡ ಸಾಹಿತ್ಯ ಕೃಷಿಯಲ್ಲೂ ಇಂತಹ ಸಂತೃಪ್ತಿಯನ್ನು ನಾವು ಧಾರಾಳ ತಂದು ಕೊಳ್ಳಬಹುದು. ನಮ್ಮ ಪ್ರಾಚೀನಾರ್ವಾಚೀನ ಸಾಹಿತ್ಯವನ್ನು ಅವಲೋಕಿಸಿದರೆ ವಿಶ್ವಸಾಹಿತ್ಯದ ಕೃತಿರತ್ನ ಮಾಲೆಯಲ್ಲಿ ಮಿರುಗಿ ಮೆರೆಯುವ ಮಣಿಗಳನ್ನು ನಾವು ಕನ್ನಡದಲ್ಲಿಯೂ ಕಾಣಬಹುದು. ಆ ಬಗ್ಗೆ ಹೆಮ್ಮೆ ಪಟ್ಟುಕೊಳ್ಳಬಹುದು.

ಈ ಶತಮಾನದ ಎರಡು ಭೀಕರ ಮಹಾ ಯುದ್ಧಗಳು ಮಸಗಿದುವು. ತತ್ಪರಿಣಾಮವಾಗಿ ಲೋಕದ ನಾಗರಿಕಜೀವನದಲ್ಲಿ ತೀವ್ರ ಕಂಪನವುಂಟಾಯಿತು. ಜನರ ಜೀವನ ತೀರಾ ನವೀನ ನೀತಿಯನ್ನು ಅನುಸರಿಸಬೇಕಾಗಿ ಬಂತು. ಕ್ರಾಂತಿಕಾರೀಭಾವನೆಗಳಿಗೆ ಹೊಸ ಚಾಲನೆ ದೊರಕಿತು. ಸಾಮ್ರಾಜ್ಯ ಪ್ರಭುತ್ವಗಳ ಕುರಿತು, ಐಶ್ವರ್ಯ ದರ್ಪಗಳ ಕುರಿತು ಜನತೆ ಕೆರಳಿತು; ಈ ಕಾಲಾವಧಿ, ಕವಿಗಳಿಗೆ ಅಮಿತ ಸ್ಫೂರ್ತಿಯನ್ನು ನೀಡಿದೆ. ಪ್ರಕೃತಿ ಸಹಜವಾದೀ ಸ್ಫೂರ್ತಿಯಿಂದ ನೂತನ ಕಾವ್ಯ ಸಾಹಿತ್ಯ ಪ್ರಕಾರಗಳು ಲೋಕಾದ್ಯಂತ ಮೂಡಿಬಂದಿವೆ. ಇಂತಹ ಪರಿಸರದಿಂದ ಪ್ರಭಾವಿತರಾಗಿ ಕನ್ನಡದ ಕವಿಗಳೂ ಈ ಶತಮಾನದಲ್ಲಿ ಹಾಡಿದ್ದಾರೆ. ಉತ್ತಮ ಕಾವ್ಯಗಳನ್ನೂ ನೀಡಿದ್ದಾರೆ. ಕಾವ್ಯರಸಿಕರ ಪ್ರಶಂಸೆಗೆ ಪಾತ್ರರೂ ಆಗಿದ್ದಾರೆ.

ಕನ್ನಡದ ಈ ಹಿರಿಯ ಪಂಕ್ತಿಯಲ್ಲಿ ನಾನು ಅತ್ಯಂತ ಕಿರಿಯನು. ಹೆಬ್ಬೆರಳು ತೋರುಬೆರಳು ನಡುಬೆರಳುಗಳ ಸಾಲಿನಲ್ಲಿ ಕೇವಲ ಕಿರುಬೆರಳಿನಂತಿರುವವನು. ಆದರೂ ಅದೇ ಕನ್ನಡದ ಕುಲಗೋತ್ರಕ್ಕೆ ಸೇರಿದವನೆಂಬ ಅಭಿಮಾನ ನನ್ನದು. ಬದುಕಿನುದ್ದಕ್ಕೂ ನಾಡುನುಡಿಗಳ ಪ್ರೇಮದ ಪುಣ್ಯ ಭಾರವನ್ನು ಹರಕೆಯ ಹೊರೆಯನು ಹೊತ್ತುಕೊಂಡು, ನಿಡುದಾರಿ ನಡೆಯುತ್ತಾ ಬಂದಿದ್ದೇನೆ. ಮುಂದೆ ಒಂದು ಸುದಿನ ಸೂರ್ಯೋದಯದಲ್ಲಿ ಕನ್ನಡ ತಾಯಿಯ ಅಡಿಗಳಿಗೆ ಮುಡಿಮುಟ್ಟಿಸಿ, ಹರಕೆಯ ಹೊರೆ ಅರ್ಪಿಸಿ, ನನ್ನ ಪಾಲಿನ ಋಣದ ಭಾರವನ್ನು ಕೈಲಾದಷ್ಟು ಇಳಿಸಿ, ಜೀವನದಲ್ಲಿ ಸಾರ್ಥಕ್ಯ ಪಡೆಯಲು ಹಾರೈಸುತ್ತೇನೆ. ಅದಕ್ಕಿಂತ ಹೆಚ್ಚಿನ ಭಾಗ್ಯ ಬೇರೇನಿದೆ?



ಪೆರಡಾಲ **ಕಯ್ಯಾರ ಕಿಞ್ಞಣ್ಣರೈ**
೮ ಜೂನ್ ೧೯೮೫
೭೦ನೆಯ ಜನ್ಮದಿನ.

ಇದರ ಮೊದಲನೆಯ ಮುದ್ರಣ, ಒಂದು ವರ್ಷದಲ್ಲಿಯೇ ಮುಗಿದುಹೋಯಿತು. ಕಲ್ಲಿಕೋಟೆಯ ವಿಶ್ವವಿದ್ಯಾನಿಲಯ ಕನ್ನಡ ಸ್ನಾತಕೋತ್ತರ ತರಗತಿಗೆ ಇದನ್ನು ಪಠ್ಯವಾಗಿಟ್ಟು ಪ್ರೋತ್ಸಾಹಿಸಿದ್ದಕ್ಕೆ ನಾನು ಕೃತಜ್ಞನು. ಇಂದು ಈ ದ್ವಿತೀಯ ಮುದ್ರಣವನ್ನೂ ಹೊರತರುತ್ತಿರುವ ‘ಕವಿತಾ ಕುಟೀರ’ಕ್ಕೆ ನಾನು ಆಭಾರಿಯಾಗಿದ್ದೇನೆ.

ಪೆರಡಾಲ, **ಕಯ್ಯಾರ ಕಿಞ್ಞಣ್ಣರೈ**
೧-೧-೧೯೯೨

## ಶತಮಾನದ ಗಾನ–ಸಮೀಕ್ಷೆ

ಕವಿ ಕಯ್ಯಾರ ಕಿಞ್ಞಣ್ಣರೈಗಳ ನೂರ ಹನ್ನೊಂದು ಕವನಗಳ ಒಂದು ಬೃಹತ್ ಸಂಕಲನ ಶತಮಾನದ ಗಾನ ಮನುಷ್ಯ ಜೀವನದ ವಿವಿಧ ಭಾವ ಸಂಘರ್ಷಗಳನ್ನು ವೈಯಕ್ತಿಕ ಮತ್ತು ಸಾಮಾಜಿಕ ಪ್ರಕ್ರಿಯೆ ಪ್ರತಿಕ್ರಿಯೆಗಳನ್ನು, ನೋವು–ನಲಿವುಗಳನ್ನು, ವಿಷಾದ ಆಶಾವಾದಗಳನ್ನು ಕಾವ್ಯಮುಖದಲ್ಲಿ ಅಭಿವ್ಯಕ್ತಿಗೊಳಿಸುವ ಈ ಸಂಪುಟವು, ಬದುಕಿನ ಆರೋಹಣ ಅವರೋಹಣಗಳನ್ನು ಪ್ರತಿಬಿಂಬಿಸುವ ಸಪ್ತಸ್ವರಗಳ ಸಂಕೇತದಲ್ಲಿ ಏಳುಸ್ತರಗಳಾಗಿ ಇಲ್ಲಿ ವಿಭಾಗಗೊಂಡಿದೆ.

ಭಾವ–ಜೀವ, ಪ್ರಕೃತಿ–ಪ್ರೀತಿ, ತತ್ತ್ವ–ಸತ್ವ, ನಾಡುನುಡಿಗಳಿಗೆ ಸಂಬಂಧಿಸಿದ ಭಾವಗೀತಗಳು, ರೋಚಕ ಕಥನಕವನಗಳು, ಚತುರ್ದಶಿಗಳು ಜೊತೆಗೆ ಪ್ರಗತಿಗಾಮೀ ಧೋರಣೆಯುಳ್ಳ ಕವನಗಳು ಸೇರಿ ಈ ಸಂಕಲನಕ್ಕೆ ವೈಶಾಲ್ಯ ವೈವಿಧ್ಯಗಳ ಹರಹನ್ನು ತಂದುಕೊಟ್ಟಿವೆ.

ಕನ್ನಡನವೋದಯದ ಕಾವ್ಯಪರಂಪರೆಯ ಆರಂಭಕಾಲದಲ್ಲಿಯೇ ಕವನಿಸಲು ಪ್ರಾರಂಭಿಸಿದ ಕವಿಗಳ ಸಾಲಿನಲ್ಲಿ ಶ್ರೀ ಕಯ್ಯಾರರು ಗಣನೀಯವಾದ ಹೆಸರು ಗಳಿಸಿದರು. ಸ್ವಾತಂತ್ರ್ಯಪೂರ್ವದಭಾರತದಲ್ಲಿ ಉಸಿರಾಡಿದ ಕನ್ನಡ ಕವಿಯ ಆಸೆಆಕಾಂಕ್ಷೆಗಳು, ಸ್ವತಂತ್ರಭಾರತದ ಭವ್ಯ ಚಿತ್ರಣ, ಮಾತೃ ಭೂಮಿಯ ಬಗೆಗಿನ ಸುಂದರ ಸ್ವಪ್ನಗಳು, ವಿಶ್ವವಿಶಾಲ ಕಲ್ಪನೆಗಳ ನಡುವೆ ಕವಿ ಕಂಡ ತಾಯ್ನಾಡಿನ ಮಧುರ ದರ್ಶನ– ಇವೇ ಅವರ ಆದಿಕಾಲದ ಕವನದ ವಸ್ತುವಿಷಯಗಳಾಗಿದ್ದುವು. ಸತ್ವಯುತವಾದ ಭಾಷೆ, ಶ್ರುತಿ ಮಧುರವಾದ ಪದಶೈಲಿ, ಓದಿದೊಡನೆ ಹೃದ್ಗತವಾಗುವ ಗುಣವುಳ್ಳ ವಾಕ್ಯಪುಂಜಗಳು ಇವು ಕಯ್ಯಾರರ ಕವಿತೆಗಳ ವಿಶಿಷ್ಟ ಗುಣಗಳಾಗಿವೆ.

ಕನ್ನಡ ಸಂಸ್ಕೃತಮಿಶ್ರವಾದ ಮಣಿಪ್ರವಾಳ ಶೈಲಿ ಶ್ರೀಕಯ್ಯಾರರಿಗೆ ತುಂಬು ಪ್ರಿಯವಾದುದು. "ಇವರ ಕಾವ್ಯ ಭಾಷೆಯ ಸಂಸ್ಕೃತಿಭೂಯಿಷ್ಠವಾಗಿದ್ದು, ಮುಟ್ಟಿದಲ್ಲೆಲ್ಲ ಸಿಡಿಯಬಲ್ಲ ಉದ್ರೇಕಕಾರೀ ಗೀತಗುಣವನ್ನು ಹೊಂದಿದೆ" ಎಂಬುದಾಗಿ ಕವಿ ಶ್ರೀ ಸುಬ್ರಾಯ ಚೊಕ್ಕಾಡಿಯವರು 'ದಕ್ಷಿಣ ಕನ್ನಡ ಕಾವ್ಯ'ದಲ್ಲಿ ಕಯ್ಯಾರರ ಕವನಗಳ ಬಗ್ಗೆ ಆಡಿದ ಮಾತುಗಳು ಗಮನಾರ್ಹ.

"ಸಕ್ಕದದ ಸಕ್ಕರೆಗೆ ಕನ್ನಡದ ಕತ್ತುರಿಯು ಸೇರಿದರೆ ಸವಿಯದನು ಕೇಳಬೇಕೆ?
ವಾಲ್ಮೀಕಿಜತೆಯಲ್ಲಿ ಪಂಪನಂ ಕಲಿತಲಲಿ ಆಗುವಮಿತಾನಂದ ಹೇಳಬೇಕೆ?"

ಎಂದು ಶ್ರೀ ಕಯ್ಯಾರರೇ ತಮ್ಮ 'ಸ್ವಗತ' ಎಂಬ ಕವಿತೆಯಲ್ಲಿ ಒಂದೆಡೆ



ಹೇಳಿದ್ದಾರೆ.

ಭಾರತೀಯ ಕಾವ್ಯಮೀಮಾಂಸೆಯನ್ನು ಚೆನ್ನಾಗಿ ಅರಗಿಸಿಕೊಂಡ ಕಯ್ಯಾರರು ಶುದ್ಧಭಾರತೀಯ ಕವಿ, ಅಲಂಕಾರ, ಗುಣ, ವಕ್ರೋಕ್ತಿ, ಧ್ವನಿಗಳು ಇವರ ಕವಿತೆಗಳಿಗೆ ಜೀವ ತುಂಬುತ್ತವೆ. ಕಾವ್ಯರಚನೆ ಕವಿಯೊಬ್ಬನ ಪಾಲಿಗೆ ಸಹಜ ಕ್ರಿಯೆಯಾದರೂ ಈ ಕವಿಯ ಪಾಲಿಗೆ ಅದೊಂದು ಅಜ್ಞಾತಕ್ರಿಯೆಯಾಗಿ ಬಿಡುತ್ತದೆ. ತನ್ನ ಕಾವ್ಯಸ್ಫೂರ್ತಿ ತನಗೇ ಒಂದು ಅದ್ಭುತ ಅನುಭವವಾಗಿ ಅವರಿಗೆ ಅನಿಸುತ್ತದೆ.

"ಎಂಥ ಸುಂದರದ ಸ್ವಪ್ನ ಸಂತೋಷ ಎದೆಯ ತುಂಬುತಿಹುದು?
ಎತ್ತಣಿಂದಲೀ ಲಹರಿಯುನ್ಮೇಷ ತೇಲಿತೇಲಿ ಬಹುದು?"

'ಶತಮಾನದ ಗಾನ'ದ ಮೊದಲ ಕವನ 'ಲಹರಿ'ಯಲ್ಲಿ ಕವಿ ವ್ಯಂಜಿಸಿರುವ ಉದ್ಗಾರ ಇದು! "ಯಾರು ಮಿಡಿವರೆನ್ನೆದೆಯ ತಂತಿಯನು ರಾಗ ರಂಜಿಸಿಬಹುದು" ಎಂದು ಅವರನ್ನು ಅವರೇ ಪ್ರಶ್ನಿಸಿಕೊಳ್ಳುತ್ತಾರೆ. ಕವಿತೆಯ ಹುಟ್ಟನ್ನು ವರ್ಣಿಸಿದ ರೀತಿಯಂತೂ ಇನ್ನಷ್ಟು ಸುಂದರ.

"ಕಾಳರಾತ್ರಿಯಲಿ ಮಿಂಚು ಹೊಳೆದಂತೆ ಮರಣಗರ್ಭದಲ್ಲಿ ಅಮೃತ ಶಿಶುವಂತೆ
ಪಾಪಿಯಜಮಿಳಗೆ ಮೋಕ್ಷ ದೊರೆತಂತೆ ಕಠಿಣಶಿಲೆಯಲ್ಲಿ ಮೂರ್ತಿಕೆಡೆದಂತೆ
ಎತ್ತಣಿಂದಲೀ ಲಹರಿಯುನ್ಮೇಷ?"

"ಮಣ್ಣುಮುದ್ದೆಯಲಿ ಬೊಂಬೆ ಸಮೆದಂತೆ ಓಟೆತೂತಿನಲ್ಲಿ ಸಪ್ತ ಸ್ವರದಂತೆ
ಕೊಳಕುಗದ್ದೆಯಲ್ಲಿ ಬೆಳೆಯು ಬಂದಂತೆ ಕೆಸರಕೊಳದಲ್ಲಿ ಕಮಲ ಬಂದಂತೆ
ಎತ್ತಣಿಂದಲೀ ಲಹರಿಯುನ್ಮೇಷ?"

ವಾಚ್ಯಾರ್ಥವೇ ಪ್ರಧಾನವೆಂಬ ಭ್ರಮೆ ಹುಟ್ಟಿಸುವ ಕಯ್ಯಾರರ ಕೆಲವು ಕವಿತೆಗಳನ್ನು ನಾವು ಸಲೀಸಾಗಿ ಓದುತ್ತಾ ಹೋದಂತೆ ನಮ್ಮ ಭ್ರಮನಿರಸನವಾಗುತ್ತದೆ. ತಾನು ಹೇಳಬೇಕಾದ್ದನ್ನು ಕವಿ ಒಳ್ಳೆಯ ಪರಿಭಾಷೆಯಲ್ಲಿ ಹೇಳುತ್ತಾ ವಾಚ್ಯಾತೀತ ಧ್ವನಿಗೆ ಹೆಚ್ಚು ಒತ್ತುಕೊಡುತ್ತಾರೆ. 'ನೀನು ನನ್ನ ಭಾವನೆಯಲಿ' ಕವನವನ್ನು ಇದಕ್ಕೆ ಉದಾಹರಿಸಬಹುದು. 'ಬೆಳ್ಳಿಯ ಹಾಡು' ಕವಿತೆಯಲ್ಲೀ ಹೆಚ್ಚು ಕಡಿಮೆ ಇದೇ ಗುಣವನ್ನು ಕಾಣುತ್ತೇವೆ. 'ಬೆಳ್ಳಿ ಮೂಡುವ ಕಾಲವನೆ ಕಾದು ಕುಳಿತಿದ್ದೆ' ಎಂಬಲ್ಲಿ ನಿದ್ರೆಯಿಲ್ಲದ ದೀರ್ಘ ರಾತ್ರಿಯ ದುರಂತ ಸ್ವಪ್ನಗಳು ನಮ್ಮ ಯೋಚನೆಯ ಹರಹನ್ನು ಇನ್ನಷ್ಟು ವಿಸ್ತರಿಸುತ್ತವೆ. "ಸುದಿನ ಸೂರ್ಯೋದಯವ ಕಾಂಬ ನಂಬುಗೆಯೊಂದು ಬಗೆಯರಳಿರುವುದಿಂದು– ಬಾಳ್ವೆ, ಹಿರಿದೆಂದು" ಎಂಬ ಮಾತಿನಲ್ಲಿ ಮಾನವನು ಆಶಾವಾದದ ಕಲ್ಪನೆಯಿಂದಲೇ ಬದುಕಿನ ಎಲ್ಲ ದುಃಖವನ್ನೂ ಮರೆಯಬಲ್ಲನೆಂಬ ಕಟುಸತ್ಯವನ್ನು ಕವಿ ವೇದ್ಯಪಡಿಸುತ್ತಾನೆ. ಹಾಗೆಂದು ನಾಳೆ ಸುಖವೇ ಬಂದೀತೆಂಬ ಭರವಸೆಯೇನೂ ಕವಿಗಿಲ್ಲ. ನಾಳಿನ ಚಿಂತೆ ಇಂದು ಅನಗತ್ಯವೆನ್ನುತ್ತಾರೆ ಅವರು:

"ನಾಳೆ ಸುಖವಿಲ್ಲೆಂದು ಇಂದು ಚಿಂತಿಸಬೇಡ, ಇಂದಿನೊಳು ನಾಳೆಯನು ಬೆರಸಲೇಕೆ? ಈ ಕ್ಷಣವು ನಗುತಿರಲು, ಈ ದಿನವು ಸುಖವಿರಲು ಬಾಳ್ವೆ ಬೆಳಗುವುದೆಂದು ಮರೆಯಲೇಕೆ?"

ಮನುಷ್ಯನ ಸಾಧನೆಗೆ ಸರಿಯಾದ ಮಾರ್ಗಬೇಕು. ಸಾಧನೆ ಸರಿಯಾಗಿದ್ದರೆ ಸಿದ್ಧಿಯಲ್ಲಿ ನ್ಯೂನತೆ ಬರದು ಎಂಬ ವಿಶ್ವಾಸ ಕವಿಯದು.

"ಪೌರುಷಪರಾಕ್ರಮದಿ ವೀರ, ಭವರಂಗದಲಿ ಹೋರಾಡಿ ಜಯಪದವಿ ಪಡೆ ದಾರಿಗ"

ಹಾಗೆಯೇ

"ಬದುಕಬೇಕೆಂದೆನು ಬಯಕೆಯೊಂದಿಲ್ಲರೆ ಬಾಳ್ಗೆಪೌರುಷವಿಲ್ಲ ಪಂಥವಿಲ್ಲ."

ಎನ್ನುತ್ತಾರೆ. ಕವಿ. ಬದುಕಿನಲ್ಲಿ ಕಷ್ಟಗಳನ್ನು ಲಘುವಾಗಿ ಸ್ವೀಕಾರ ಮಾಡುವ ಮೂಲಕ ನಮ್ಮ ಬದುಕು ಇನ್ನಷ್ಟು ದೃಢವಾಗುತ್ತದೆ ಎಂಬುದು ಕವಿಯ ಸ್ವಾನುಭವ.

"ಬಾಳುವೆಯ ಬಟ್ಟಲಲಿ ನಂಜೆರೆದು ಕುಡಿಯೆನಲು ಕಹಿಯೆನದೆ ಕುಡಿಕುಡಿದೆ ! ಬದುಕಬಲ್ಲೆ"

'ಕೆಸರುಚೆಲ್ಲುವ ಕೆಲರ ನಡುವೆ' ಕವನ ಕೆಲವೊಂದು ಉನ್ನತ ಮಾನವೀಯ ಮೌಲ್ಯಗಳನ್ನು ನಮಗೆ ಸಾರುತ್ತದೆ.

"ಕೊಳಕುಜನರಿಹರೆಂದು ಕೊಳೆಬಟ್ಟೆಯುಡಬೇಡ ತಲೆಯ ತಗ್ಗಿಸಬೇಡ ಧೀರ ಯುವಕ ! ಬಿಳಿಯ ಬಟ್ಟೆಯನುಟ್ಟೆ ಎದೆಚಾಚಿ ಮುನ್ನಡೆದೆ ತುಂಬಿದಾಯುಷ್ಯದಲಿ ಬಾಳಿ ಬದುಕ"

ಯಾವ ಸಂದರ್ಭದಲ್ಲೂ ಮನುಷ್ಯ ತನ್ನ ಧ್ಯೇಯವಾದಿತ್ವವನ್ನು ಬಿಟ್ಟು ಕೊಡಬಾರದೆಂಬ ಸೂಚ್ಯಸಂದೇಶ ಇಲ್ಲಿ ವ್ಯಕ್ತವಾಗಿದೆ.

ಆಧ್ಯಾತ್ಮಿಕರು ವಿವರಿಸುವ 'ದ್ವಂದ್ವ'ವೂ ದ್ವಂದ್ವಾತೀತನಾದ ಪರಮಾತ್ಮನೂ 'ಅಭಿನ್ನ' ಕವಿತೆಯ ವಸ್ತುವಾಗಿದೆ. ಆದರೆ ಕಯ್ಯಾರರು ಹೇಳುವ ಆಧ್ಯಾತ್ಮ ವಿಚಾರ ಹೊಸ ರೀತಿಯದು:

"ಸುತ್ತ ಜಗಿಯುತಿಹ ಹರಿತ ಹಲ್ಲುಗಳು ಮಧ್ಯೆ; ನಾಲಿಗೆಯ ಸುಳಿವು ನಾಲ್ಕು ಗೋಡೆಯೆಡೆ ಕಂಬ ಕಲ್ಲುಗಳು ಮುದ್ದು ಮೂರುತಿಯ ನಿಲುವು"

ಹೀಗೆ ಪರಸ್ಪರ ವಿರುದ್ಧ ಪ್ರಕೃತಿಯ ದ್ವಂದ್ವಗಳನ್ನು ಪ್ರಸ್ತಾಪಿಸುವ ಕವಿ ಕೊನೆಗೂ

"ಕೆಂಪು ನೆತ್ತರಿನ ಮಾಂಸಮುದ್ದೆಯಲಿ ಕೆಚ್ಚಲೊಳಗೆ ನೊರೆಹಾಲು; ಗುಂಡಿಗೊಬ್ಬರದ ಹೊಂಡ ಗದ್ದೆಯಲಿ ಹೆಚ್ಚಹಸಿರು ತೆನೆಕಾಳು"

ಎಂದು ಒಳತನ್ನೇ ಅರಸುವ ಪ್ರಯತ್ನ ಮಾಡುತ್ತಾರೆ. ಈ ದ್ವಂದ್ವಗಳ ಸಮ್ಮಿಶ್ರ ಜಗತ್ತೇ ನಿಜವಾದ ಜಗತ್ತು ಎಂದು ಸಾರುತ್ತಾರೆ. "ಪ್ರಕೃತಿ ಪುರುಷ



ಬೇರೆಂದು ಸಾರುವರು ಪ್ರೇಮಸುಧೆಯನುಂಡಿಹರೆ" ಎಂಬ ಕವಿತೆಯ ಆರಂಭದ ನುಡಿಗಳಲ್ಲೇ ಈ ಧ್ವನಿಯ ಪ್ರಸ್ತಾಪವಿದೆ. ಹೀಗೆ ಜಗತ್ತನ್ನು ತಾತ್ವಿಕವಾಗಿ ವ್ಯಾಖ್ಯಾನಿಸಿದ ಬಳಿಕೆ–

"ವಿವಿಧ ರೀತಿಗಳ ವಿವಿಧ ನೀತಿಗಳ ವಿವಿಧ ಜನರ ಜಗವೊಂದೆ; ಈ ಪ್ರಕಾರಗಳು ಈ ವಿಕಾರಗಳು ಭಿನ್ನವಲ್ಲ ಬುಡವೊಂದೆ"

ಎಂಬ ಸಿದ್ಧಾಂತಕ್ಕೆ ಕವಿ ತಲುಪುತ್ತಾರೆ. 'ಕೋಟಿಯೆದೆಗಳೊಕ್ಕೂಟವಾಗಲಿ, ಸುಮನ ಮನಗಳರಳಿರಲಿ, ಕಾಲಕೂಟದುರಿಯಿಂದ ಬೆಂದರೂ ಕೊನೆಗೆ ಸೊದೆಯ ಸೊಗವಿರಲಿ' ಎಂಬ ಸುಖದುಃಖ ಸಮನ್ವಯದ ತತ್ವದಲ್ಲಿ ಈ ಕವಿತೆ ಉಪಸಂಹಾರ ವಾಗುತ್ತದೆ.

ಲೌಕಿಕ ಭಾವಗಳನ್ನು ಅಭಿವ್ಯಕ್ತಗೊಳಿಸುವಾಗಲೂ ತಾತ್ತ್ವಿಕತೆಯ ಲೇಪ ಹಚ್ಚಿ, ಕಾವ್ಯ ಮೌಲ್ಯವನ್ನು ಹೆಚ್ಚಿಸುವ ಕಯ್ಯಾರರ ಕವಿತೆಗಳಿಗೆ 'ಹಣತೆ ಹಚ್ಚು' ಒಂದು ಉತ್ತಮ ನಿದರ್ಶನವಾಗಬಲ್ಲುದು. ದೀಪಾವಳಿ ಹಬ್ಬವನ್ನು ಸಾಂಕೇತಿಕವಾಗಿ ಇಟ್ಟುಕೊಂಡು ಹೆಣೆದ ಕವನವಿದು. 'ಕಾರ ತಿಂಗಳಿನ ಘೋರ ರಾತ್ರಿಗೂ ವಿದ್ಯುದುನ್ಮೇಷ ಬಹುದು' ಎಂಬ ಶುಭಹಾರೈಕೆಯುಳ್ಳ ಈ ಕವಿ ಮನುಷ್ಯನ ಅಜ್ಞಾನದ ಬಗೆಗೆ ಕನಿಕರಪಡುತ್ತಾ 'ಮನವು ಮನೆಯು ಜೀವನವು ಕತ್ತಲು, ಹಣತೆ ಹಚ್ಚು ಸೊಗವಿಂತು' ಎಂಬುದಾಗಿ ಜ್ಞಾನದ ಹಣತೆ ಹಚ್ಚಲು ಕರೆ ನೀಡುತ್ತಾರೆ. ಕಷ್ಟದ ಸಂಕಟದ ಬಾಳದಾರಿಯಲಿ ಧೈರ್ಯ ದಂಡಹಿಡಿನೆಡೆಗು, ಬೇನೆಬೇಗುದಿಯೊ ಸಾವು ಸಂಕಟವೊ ತಲೆಯನೆತ್ತಿ ನಡೆ ಕಡೆಗು ಎಂದು ಧೈರ್ಯವನ್ನೂ ತುಂಬುತ್ತಾರೆ.

ಕಯ್ಯಾರರ ಕಾವ್ಯಸ್ಫೂರ್ತಿ ಹುಟ್ಟಿದ್ದು ನಮ್ಮ ದೇಶದ ಸ್ವಾತಂತ್ರ್ಯ ಹೋರಾಟಕಾಲದಲ್ಲಿ ಪರದಾಸ್ಯದ ಕೊಳೆಯಲ್ಲಿ ಒರಗಿರುವ ಭಾರತೀಯರನ್ನು ಎಚ್ಚರಿಸಲು ತಮ್ಮ ಕವನಗಳ ಮೂಲಕ ಅವರು ಸ್ವಾತಂತ್ರ್ಯದ ಕಹಳೆಯನ್ನು ಮೊಳಗಿದರು. ಜನಮನದಲ್ಲಿ ದೇಶಾಭಿಮಾನದ ಸ್ಫೂರ್ತಿ ಉಕ್ಕೇರುವಂತೆ ಹಾಡಬಯಸಿದರು.

"ನವಭಾವ ನವಜೀವ ನವಶಕ್ತಿ ತುಂಬಿಸುವ ಹಾಡೊಮ್ಮೆ ಹಾಡಬೇಕು; ಜಾತಿ ಕುಲ ಮತ ಧರ್ಮಪಾಶಗಳ ಕಡಿದೊಗೆದು ಎದೆಹಿಗ್ಗಿ ಹಾಡಬೇಕು; ಉನ್ನತೋನ್ನತ ಘನಹಿಮಾದ್ರಿಶಿಖರವನೇರಿ ಹಾಡಲ್ಲಿ ಹಾಡಬೇಕು; ಗಂಡೆದೆಯ ಗರ್ಜನೆಗೆ ಮೂಹತ್ತು ಮೂರ್ಕೋಟಿ ಕಲಕಂಠ ಬೆರೆಸಬೇಕು. ನಡೆನುಡಿಗಳೆಡೆಯಲ್ಲಿ ಪದತಾಳಗತಿಯಲ್ಲಿ ಕ್ರಾಂತಿಕಿಡಿ ಕೆರಳಬೇಕು.

ತನ್ನ ಹಾಡಿನ ಫಲಶ್ರುತಿ ಹೀಗಿದ್ದರೆ ಮಾತ್ರ ಕವಿಗೆ ತೃಪ್ತಿ. ನಾಲ್ಕು ದಶಕಗಳ ಹಿಂದೆಯೇ ಕಾಳಿಂಗರಾಯರೇ ಮೊದಲ;ಆದ ಗಮಕಿಗಳ ಕಂಠದಿಂದ ಮೊಳಗಿದ್ದ ಈ ಹಾಡು ಸಮಗ್ರ ಕನ್ನಡನಾಡನ್ನೇ ಜಾಗೃತಿಗೊಳಿಸಿತು. ಕನ್ನಡಿಗರ ಮೈಮನಗಳಲ್ಲಿ

ಪುಳಕವನ್ನು ಹುಟ್ಟಿಸಿತ್ತು. ಈ ಹಾಡಿನ ಮೂಲಕ ಕಯ್ಯಾರರ ಕಾವ್ಯ ಶೈಲಿ ಆ ಕಾಲದಲ್ಲಿ ಕೋಟಿ ಕೋಟಿ ಕನ್ನಡಿಗರ ಹೃದಯಗಳಲ್ಲಿ ಮಾರ್ದನಿಗೊಂಡಿತ್ತು– ಎಂಬುದಂತೂ ಎಲ್ಲರೂ ತಿಳಿದ ವಿಚಾರ.

ಹೆಚ್ಚು ಕಡಿಮೆ ಇದೇ ಭಾವವನ್ನು ಸ್ವಲ್ಪ ನವುರಾಗಿ ಹೇಳುವ ಅವರ ಇನ್ನೊಂದು ಕವನ 'ಹಾಡು ಕವಿಯೇ ಹಾಡು', ಕಯ್ಯಾರರ ಅಭಿಪ್ರಾಯದಂತೆ ಕಾವ್ಯರಚನೆಯ ಮೂಲ ಉದ್ದೇಶ ಯಾವುದು? 'ಕಾವ್ಯಂ ಯಶಸೇ ಅರ್ಥಕೃತೇ ವ್ಯವಹಾರವಿದೇ' ಮುಂತಾದ ಮಮ್ಮಟನು ಪ್ರಸ್ತಾಪಿಸಿರುವ ಉದ್ದೇಶಗಳಲ್ಲಿ ಕೊನೆಯದಾದ 'ಶಿವೇತರಕ್ಷತೆಯೇ' ಮತ್ತು 'ಸದ್ಯಃ ಪರ ನಿರ್ವೃತಯೇ' ಎಂಬ ಉದ್ದೇಶಗಳಿಗಾಗಿ ಮಾತ್ರ ನಮ್ಮ ಕವಿಗಳು ಹಾಡುವಂತಾಗಲಿ– ಎಂದು ಅವರು ಹಾರೈಸುತ್ತಾರೆ.

"ಹಾಡು ಕವಿಯೇ ಹಾಡು ಹೊಸತೊಂದು ಹಾಡು; ಜನದ ಕಲ್ಯಾಣಕ್ಕೆ ಮನದ ಕಲ್ಯಾಣಕ್ಕೆ ಯುಗಯುಗದ ಜಗದ ಕಲ್ಯಾಣಕ್ಕೆ ಹಾಡು."

'ಹೊಸ ಹಾಡು' ಕವನದಲ್ಲಿ 'ಕವಿಯ ನುಡಿಗಳು ಕ್ರಾಂತಿಯ ಕಿಡಿಗಳಾಗಬೇಕೆಂದು ಕವಿ ಬಯಸಿದರೆ ಇಲ್ಲಿ, ಅವು ಮಂಗಲದ ನುಡಿಗಳಾಗಲೆಂದು ಆಶಿಸಲಾಗಿದೆ.

"ಸೊಲ್ಲು ಒಂದೇ ಸಾಕು ಪ್ರತಿಭೆ ಮಿಂಚಿರಲು, ಋಷಿರಸನೆಯಲ್ಲಿ ಗಾಯತ್ರಿ ಕುಣಿದಿರಲು ಓಂ ಎಂಬ ಅಕ್ಷರವೆ, ಬ್ರಹ್ಮವಾಗಿರಲು ನಾಲ್ಕು ವೇದಗಳೋದಿ, ಬೇರೇನು ಹೇಳು? ಸಿಡಿದ ನುಡಿ ಮಂತ್ರವೆನೆ, ಋಷಿಸದೃಶ ಹಾಡು, ಮಾತು ಜ್ಯೋತಿರ್ಲಿಂಗ, ಎನೆಹಿಗ್ಗಿ ಹಾಡು"

ಈ ಮಾತುಗಳಲ್ಲಿ ಭಾರತೀಯ ಸಂಸ್ಕೃತಿಯ ಆಳ ಹಾಗೂ ವೈಶಾಲ್ಯಗಳನ್ನು ತುಂಬಲು ಕವಿ ಯತ್ನಿಸಿದ್ದಾರೆ,.

"ಉನ್ಮುಖ ವಿಲಾಸಿ" ಚಂದ್ರಲೋಕಕ್ಕೆ ಪ್ರಯಾಣ ಮಾಡಿ ಬಂದ ವಿಜ್ಞಾನಿಗಳನ್ನು ಕುರಿತು ಬರೆದ ಕವನ. ಮಾನವ ಉನ್ಮುಖಿಯಾಗದೆ ಜ್ಞಾನದ ಬೆಳಕನ್ನು ಪಡೆಯಲಾರ.ಹೊಸ ಜ್ಞಾನದ ಅನ್ವೇಷಣೆಯೇ ವಿಜ್ಞಾನ. ಕವಿ ವಿಜ್ಞಾನಯುಗಕ್ಕೆ ನಮ್ಮನ್ನು ಆಹ್ವಾನಿಸುತ್ತಾರೆ. 'ಹರಕು ಮನೆಯೆಲ್ಲ ಮುರಿದು ಹೋಗಲಿ – ತೇಪೆ ಹಚ್ಚಬೇಡ, ಹೊಸತು ತಳಹದಿಯ ಕಜ್ಜ ಸಾಗಲಿ – ನಿನ್ನ ಸೃಷ್ಟಿ ನೋಡ" ಎನ್ನುತ್ತಾರೆ. ವಿಜ್ಞಾನಕ್ಕೆ ಪ್ರೋತ್ಸಾಹ ಕೊಡದ, ದೇಶವನ್ನು ಹೀಗೆ ಹೀಯಾಳಿಸುತ್ತಾರೆ.

'ಘೂಕಲೋಕವೇ ಕಣ್ಣುಮುಚ್ಚಿಕೊಳಿ, ಬೆಳಕು ಬಹಳ ಕಷ್ಟ. ಮಿಂಚಿನಲ್ಲಿ ಮಿಂದವರು ಹೋಗಲಿ, ನಿಶೆಯೆ ನಿಮಗೆ ಇಷ್ಟ."

ಪ್ರಪಂಚದ ಹುಟ್ಟು ಬದುಕು ಸಾವುಗಳ ಬಗೆಗಿನ ಅನಿಶ್ಚಿತತೆಯ ಭಾವ



ತುಮುಲವೇ 'ತುಮುಲ' ಕವನದ ವಸ್ತು. ಇಲ್ಲಿ ಅಲೌಕಿಕ ಭಾವನೆಗಳು ಲೌಕಿಕವನ್ನು ತುಳಿದು ನಿಲ್ಲುತ್ತದೆ. ಕವಿ ಸಂಸಾರದ ಕಷ್ಟಗಳಿಗಾಗಿ ತಪಿಸುವುದನ್ನು ಕಾಣುತ್ತೇವೆ. "ಇಷ್ಟಕಷ್ಟಗಳ ಮಿಶ್ರಣ ಕುಡಿದೆ. ಭವರೋಗ ನೀಗಲೊಲ್ಲದು, ಮೂಲಿಕೆಯ ಕೊಡುವೆಯೇನು?" ಎಂದು ದೇವರದಲ್ಲಿ ಔಪಚಾರಿಕವಾಗಿ ಕೇಳಿದರೂ ಮರುಕ್ಷಣದಲ್ಲಿಯೇ "ಬೇಡುವುದು ಹೀನವೆಂಬುದು ಬಲ್ಲೆ, ಬೇಡೆನ್ನೆ; ಹಿರಿಮೆ ಉಳಿಸಿಕೊ ನೀಡಿ ಸಲುವ ಸಮಪಾಲು; ಎನ್ನುತ್ತಾರೆ. ಕೊನಗೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, "ಏಕೆ ನಿನ್ನಲಿ ಹರಕೆ? ಎನಗುಂಟು ಎನ್ನಿಷ್ಟ, ಎನ್ನ ಬಾಳನು ಬೆಳಗಬಹುದು ನಾನು" ಎಂದು 'ತನ್ನ ಕರ್ತವ್ಯವೇ ತನ್ನ ಒಳಿತಿಗೆ ಹಾದಿ'ಯೆಂಬ ಕರ್ಮಯೋಗಿಯ ತತ್ತ್ವವನ್ನು ಸಾರುತ್ತಾರೆ.

'ಅತಿಥಿ' ಕವನ ಓದುವಾಗ ಮೈ ರೋಮಾಂಚನವಾಗುತ್ತದೆ. ಕವಿ ಮರಣಕ್ಕೆ ಅಂಜುವುದಿಲ್ಲ. ಮರಣವನ್ನು ಬದುಕಿನ ಅತಿಥಿಯಾಗಿ ಕಾಣುತ್ತಾರೆ. ಹೇಳದೆ ಬರುವ ಈ ಅತಿಥಿಯ ಬಗೆಗೆ ಪೂರ್ವಯೋಚನೆ ಮಾಡಿ ಏನು ಫಲ? ನಾ ಬಯಸದಿದ್ದರೂ ನೀನು ಬಂದೇ ಬರುವೆ, ಅದಕ್ಕಾಗಿ ಬಾರೆಂದು ಕರೆಯದಿರುವೆ, ಎನ್ನುತ್ತಾರೆ. 'ಹೇಳದೆಯೇ ನೀ ಬರುವ ಪುಣ್ಯ ಪುರುಷ' ಎಂದು ಹೊಗಳುತ್ತಾರೆ. ಈ ಮನೆ ನಿನ್ನದು, ಬೇಕಾದಾಗ ನೀ ಬಂದುಕೋ ಎಂದು ಈ ದೇಹದ ಒಡೆತನವನ್ನೇ ಅತಿಥಿಗೆ ಒಪ್ಪಿಸುತ್ತಾರೆ. 'ನಿನ್ನ ಕರೆ ಬಂದಾಗ ಓಗೊಟ್ಟು ಓಡಿಬಹೆ'ನೆಂದು ಮಾತುಕೊಡುತ್ತಾರೆ.

"ನಿನ್ನ ಮಧುರಾಲಿಂಗನಕೆ ನಾನು ಹಾತೊರೆವೆ, ಮಡಿಲಲ್ಲಿ ಹಾಯಾಗಿ ಮಲಗಲುಂಟು"

ಎಂಬ ಈ ಮಾತನ್ನು ಕವಿ ನಿರ್ಭಯವಾಗಿ ಹಾಡಿದರೂ, ಓದುಗನಿಗೆ ಅದು ಮೈನವಿರೇಳಿಸುವ ಕಲ್ಪನೆಯಾಗದೆ ಉಳಿಯುವದಿಲ್ಲ. ಇಲ್ಲಿ ಕವಿಯ ಮಾನಸಿಕ ಸ್ಥಿಮಿತದ ಮಟ್ಟವನ್ನು ತಲುಪಲು ಎಲ್ಲ ಓದುಗರಿಂದಲೂ ಸಾಧ್ಯವಾಗುವುದಿಲ್ಲ. ಕವಿತೆಯ ಕೊನೆಯ ಸಾಲುಗಳಲ್ಲಿ ಇಂದೆ ಬಂದರು ಬಿಡದೆ ಸ್ವಾಗತಿಸುವೆ ಎಂದು ಕವಿ ಭಿನ್ನವಿಸಿಕೊಂಡರೂ, "ಕೈಗೆತ್ತಿರುವ ಕರ್ತವ್ಯ ಕೆಲವುಂಟು ಶ್ರಮಿಸುತಿಹೆನು; ನೀ ಬರುವುದಕೆ ಮುನ್ನ ಪೂರೈಸುವೆನು ಎನ್ನ ಕೆಲಸಗಳನೆಲ್ಲ ನಾ ಸಿದ್ಧನಹೆನು" ಎಂದು ಮೊದಲು ಹೇಳಿದ ಮಾತುಗಳೇ ಕವಿಯ ಮುಖ್ಯ ಮನೋಗತವಾಗಿ ನಮ್ಮ ಮುಂದೆ ನಿಲ್ಲುತ್ತವೆ. ಅಂತೂ 'ಅತಿಥಿ'ಯು ಬಹಳ ದೀರ್ಘಕಾಲದವರೆಗೆ ನಮ್ಮ ಹೃದಯಲ್ಲಿ ದನಿಗೊಡಬಲ್ಲ ತೀವ್ರಭಾವಸಾಂದ್ರತೆಯುಳ್ಳ ಒಂದು ಉತ್ತಮ ಭಾವಗೀತೆಯೆಂಬುದರಲ್ಲಿ ಸಂದೇಹವಿಲ್ಲ.

## ೨

ಪ್ರಕೃತಿ ಪ್ರೀತಿಯನ್ನು ಕುರಿತು ಹನ್ನೆರಡು ಭಾವಗೀತೆಗಳು ಎರಡನೆಯ

ಬಾಗದಲ್ಲಿ ಸಮಾವೇಶಗೊಂಡಿದೆ. ನಾವು ಕಾಣುವ ಸೂರ್ಯದೀಪ್ತಿಯನ್ನು ಪರಾಮತ್ಮನ ಪ್ರೀತಿಯೆಂದು ತಿಳಿಯುವ ಕವಿಯ ಅಂತರ್ದೃಷ್ಟಿ 'ಚೇತನ' ಕವನದ ಪ್ರಧಾನವಸ್ತು. ಪ್ರತಿನಿತ್ಯವೂ ಆಗುತ್ತಿರುವ ಸುರ್ಯೋದಯವು ಈ ಜಡಜಗತ್ತನ್ನು ಚೈತನ್ಯಮಯವನ್ನಾಗಿ ಮಾಡುತ್ತದೆ. ಸೃಷ್ಟಿಗೆ ಚಿರಯೌವನವನ್ನು ತಂದುಕೊಡುತ್ತದೆ.

"ಹಚ್ಚನೆಯ ಹಸಿರು ಸೀರೆಯನ್ನುಟ್ಟು ಹೊಲತಾಯ ಗರ್ಭದಿಂದು ದಿಸಿ ಬಂದಿತೊ ತೆನೆಯ ರಾಶಿ"

ಎಂಬ ಸೃಷ್ಟಿಯ ವೈಚಿತ್ರ್ಯಕ್ಕೆ ಕವಿ ಸೋಜಿಗಪಡುತ್ತಾರೆ. ಹಾಗೆಯೇ ಗ್ರಹ ಮಂಡಲ, ನಕ್ಷತ್ರ ರಾಶಿ, ವರ್ಷಧಾರೆಗಳ ಸೌಂದರ್ಯವು ಪ್ರಕೃತಿಪ್ರೇಮಿಯಾದ ಕವಿ ಆಸ್ವಾದ್ಯ ವಿಷಯಗಳಾಗುತ್ತವೆ.

"ಅಂಬರಕನ್ಯೆಯ ತುಂಬಿದ ಮುಖದಿ, ಉಷಃಕಿರಣದರಸಿನ ಲೇಪನದಿ, ಬೆಳ್ಳಿಬೊಟ್ಟು ಮಿನುಗಿರೆ ಶೋಭನದಿ, ಮಂದಹಾಸದರುಣೋದಯ ಜಗದಿ, ಪ್ರಕೃತಿಯೆ ಪರಿಮಳ ಪುಷ್ಪವತಿ, ಪೃಥ್ವಿಯು ಬಂಧುರ ಗಂಧವತಿ"

'ಪ್ರಕೃತಿ' ಕವನದ ಮೊದಲ ಚರಣಗಳಲ್ಲಿ ಮೂಡಿಬಂದ ಈ ರೂಪಕ ತುಂಬ ಹೃದ್ಯವಾಗಿದೆ. ಭ್ರಮರಗೀತೆಯಲ್ಲಿ ಇಡಿಯ ಕವನವೇ ಒಂದು ಪೂರ್ಣ ರೂಪಕವಾಗಿ ಮೆರುಗುಗೊಂಡಿದೆ. ಪ್ರಪಂಚದ ಸ್ತ್ರೀಯರನ್ನೆಲ್ಲ ಸುಮಗಳೆಂದೂ, ಪುರುಷರನ್ನೆಲ್ಲ ಭ್ರಮರಗಳೆಂದೂ ರೂಪಣೆ ಮಾಡಿರುವ ಈ ಕವನದಲ್ಲಿ,

"ಒಂದೇ ಸುಮವು ನಿನ್ನದಿಹುದು ಅದನೆ ಆಯ್ದುಕೋ; ಬಂದ ಭಾಗ್ಯ ಸವಿದು ನೋಡು ತೃಪ್ತಿ ಗೆಯ್ದುಕೋ"

ಎಂದು ಭ್ರಮರಗಳಿಗೆ ಹಿತವಚನ ನುಡಿಯುತ್ತಾರೆ ಕಯ್ಯಾರರ ಸುಂಟರಗಾಳಿ ಪಂಜೆ ಮಂಗೇಶರಾಯರ 'ತೆಂಕಣಗಾಳಿಯಾಟ'ದ ಸವಿನೆನಪನ್ನು ತಾರದೆ ಇರುವುದಿಲ್ಲ. ಈ ವಿಭಾಗದಲ್ಲಿ ಬರುವ 'ನೇತ್ರಾವತಿ', 'ಪೊಸಡಿ ಗುಂಪೆ', 'ತುಳುನಾಡಿತಿ' ಕವನಗಳು ಕವಿಗೆ ತನ್ನ ಹುಟ್ಟು ನಾಡು ನುಡಿಗಳ ಬಗೆಗಿರುವ ಅಭಿಮಾನವನ್ನು ವ್ಯಕ್ತಪಡಿಸುತ್ತವೆ. ಈ ಪ್ರಪಂಚದ ವ್ಯವಹಾರವೆಲ್ಲ ಭಗವಂತನು ಆಡಿಸುವ ಬಯಲಾಟವೆಂಬ ಸುಂದರ ಕಲ್ಪನೆ ಭಾಗವತ ಕವನದಲ್ಲಿ ಮೂಡಿಬಂದಿದೆ.

"ಸೃಷ್ಟಿರೂಪಕದ ಸೂತ್ರ ಪಾತ್ರಗಳ ಜೋಡಿಸುವವನು 'ಭಗವಂತ' ಅದರ ಪ್ರತಿಬಿಂಬಬಿದ್ದ ಬಯಲಾಟ, ಆಡಿಸುವನು ಭಾಗತವ"

೩

ಕಯ್ಯಾರರ ಕಾವ್ಯಪ್ರಜ್ಞೆ ಹಾಗೂ ಕಥನ ಶೈಲಿಯ ಸೊಬಗನ್ನು ಈ ಮೂರನೆಯ ವಿಭಾಗದ ಕವನಗಳು ವಿಶದಪಡಿಸುತ್ತವೆ. 'ಊರ್ಮಿಳಾ' ಕನ್ನಡ ಕಾವ್ಯಪ್ರಪಂಚದಲ್ಲಿ ಕ್ರಾಂತಿಯೆಬ್ಬಿಸಿದ ಕವನ. ಸೀತಾವಿರಹವನ್ನೂ ಸೀತಾನ್ವೇಷಣೆಯ ಕಥೆಯನ್ನೂ ಒಂದು 'ಕಾಂಡ'ವಾಗಿ ಬೆಳೆಸಿ ಬರೆದ ವಾಲ್ಮೀಕಿ, ಗುರುತಿಸದೇ ಇದ್ದುದಕ್ಕೆ ಆಕೆಯ



ಬಗೆಗೆ ಒಂದೇ ಒಂದು ಮಾತನ್ನಾದರೂ ಬರೆಯದುದಕ್ಕೆ ಕವಿಗಳು ವಾಲ್ಮೀಕಿಯನ್ನೇ ತರಾಟೆಗೆ ತೆಗೆದುಕೊಳ್ಳುತ್ತಾರೆ.

'ಎಣೆವಕ್ಕಿ ಬೇರಾಗೆ ಅದಕ್ಕಾಗಿ ಮರುಗಿಹನು' ಪಕ್ಷಿಹೃದಯದ ಬೇನೆಯರಿತು ಬಲು ಬರೆದವನು, ಮೂಕ ಸೃಷ್ಟಿಯೊಳಾದರನಿತು ಕರುಣಿಪ ಕವಿಯು, ಪ್ರೇಮಪಿಂಡದೊಳಿಂತು ಪ್ರೀತಿದೋರುವ ಋಷಿಯು ಹಾ ಹಂತ! ಇದನಿಂತು ಮರೆಯಬಹುದೆ ಮಹಾಂತ?"

ಎಂದು ಪ್ರಸ್ಥಾಪಿಸಿ ಕೊನೆಗೆ "ಕವಿಯು ಋಷಿಯಹುದಯ್ಯ, ಬ್ರಹ್ಮರ್ಷಿ ಇರಬಹುದು.... ಆದರವನಲಿ ಮನುಷ್ಯ ಹೃದಯವಿಲ್ಲೇನು?" ಎಂದು ನೊಂದು ನುಡಿಯುತ್ತಾರೆ. ಹಾಗೆಂದು ವಾಲ್ಮೀಕಿ ಬರೆಯದ ಒಂದು ವಿಷಯದ ಕುರಿತು ತಾನಾದರೂ ಬರೆಯವನೆಂಬ ದಿಟ್ಟತನ ತೋರದೆ, ತನಗೆ ಅಂಥಾ ಕವಿತಾಶಕ್ತಿ ಇಲ್ಲವೆಂದು ಭಿನ್ನವಿಸಿಕೊಳ್ಳುತ್ತಾರೆ. "ಅರಸಿಕನು ನಾನೆಂತು ಬರೆವೆ ಕ್ಷಮಿಸೌತಾಯೆ!" ಎಂದು ಕ್ಷಮೆಯನ್ನು ಬೇಡುತ್ತಾರೆ. ಇದು 'ಊರ್ಮಿಳಾ' ಕವನದ ವಸ್ತು. ಒಬ್ಬ ಕವಿಯ ಬಗೆಗೆ ಬರೆಯಲಾದ ವಿಮರ್ಶೆಯೇ ಒಂದು ಸುಂದರ ನೀಳ್ಗವನವಾಗಿ ಇಲ್ಲಿ ಮೂಡಿಬಂದಿದೆ.

"ಬೇಡುವೆಂ: ಚಂದ್ರವಂಶದ ಕುಡಿಯ ಕಾಪಾಡು" ಮಹಾಭಾರತದ ಕುಂತೀಕರ್ಣರ ಸಂಬಂಧವನ್ನು ಆಧರಿಸಿ ಬರೆದ ಕಥನಕವನ.

ಗಂಗಾನದಿಯ ಮಡಿಲಲ್ಲಿ ಸೂರ್ಯಸುತ ಕರ್ಣ ತೇಲುತ್ತಿದ್ದಾನೆ. ದಡದಲ್ಲಿ ಕುಂತಿ ನಿಂತು ಸಂಭ್ರಮ ವಿಭ್ರಾಂತಳಾಗಿ ನೋಡುತ್ತಿದ್ದಾಳೆ. 'ಸುಂದರ ಸುಪುತ್ರನನು ಪಡೆದರೂ, ಮುದ್ದಾಡಿ ಮೊಲೆಯೂಡಲಾರದಿಹ ನಿರ್ಭಾಗ್ಯೆ ಆಕೆ. ಕರ್ಣನಾದರೋ ಎಂಥವನು? ಬ್ರಾಹ್ಮಣರೂಪದಲ್ಲಿ ಬಂದು ಬೇಡಿದ್ದ ಇಂದ್ರನಿಗೆ ತನ್ನ ಮೈಯ ಕವಚವನ್ನೇ ಸುಲಿದುಕೊಟ್ಟ ದಾನವೀರ. ಕೃಷ್ಣ ಬಂದು 'ಹೇ ವೀರ, ನೀನಲ್ತೆ ಮಾತೆ ಕುಂತಿಯ ಹಿರಿಯ ಸುಕುಮಾರ! ಕುರುಕುಲದ ಪೀಳಿಗೆಯ ಪುಣ್ಯಪಟ್ಟವನೇರೆ ನೀನೊಡಂಬಡಬಾರ' ಎಂದಾಗ 'ಕೊಂದ ನೆನ್ನಂಯು ದೊರೆಂಯು ಕೌರವೇಂದ್ರನನೆಂದು ನೊಂದನಲ್ಲದೆ' ಕೃಷ್ಣನ ಮಾತಿಗೆ ಆತ ಸಂತೋಷಪಡಲಿಲ್ಲ. ಮತ್ತೆ ಕುಂತಿಯದೂ ಅಂಥದೇ ಇನ್ನೊಂದು ಸಮೀಪನ. ಆಕೆಯನ್ನು ಕಂಡ ಕರ್ಣನು "ನಿನ್ನ ಬರವೇನು? ಬಯಕೆಯೇಂ? ಸಲಿಸುವೆಂ ನುಡಿ ತಾಯೆ' ಎಂದು ಭಿನ್ನವಿಸಿಸುತ್ತಾನೆ. ಆಗ ಕುಂತಿ "ಉಪ್ಪನ್ನವಿತ್ತವಗೆ ತಪ್ಪೆಣಿಸದಿರು ಮಗನೆ, ಹೇಡಿಯೆನೆ ಹಿಂದುಳಿಯದಿರು ರಣದಿ, ಬೇಡುವೆಂ. ಚಂದ್ರವಂಶದ ಕುಡಿಯ ಕಾಪಾಡು ತೊಟ್ಟ ಶರವಂ ಮರಳಿ ಮರೆತುಬಿಡು. ನಿನಗಕ್ಕೆ ಮಂಗಳಂ...' ಎನ್ನುತ್ತಾಳೆ. ಎಂಥಾ ದುರ್ಭರ ದುರಂತ ಸನ್ನಿವೇಶ! ಕರ್ಣ ಕೌರವನ ಕಡೆಯಿಂದ ಹೋರಾಡ ಬೇಕು. ಪಾಂಡವರನ್ನು ಕಾಪಾಡಲೂ ಬೇಕು. ಈ ಎರಡು ವಿರುದ್ಧಕ್ರಿಯೆಗಳ

ನಡುವೆ ಧರ್ಮಶೀಲನಾಗಿ, ದಯಾವೀರನಾಗಿ, ದಾನಶೂರನಾಗಿ ಬದುಕಲು ಕರ್ಣನಂಥವರಿಗೇ ಸಾಧ್ಯವೇನೋ ಎಂದು ನಮಗೆ ಅನಿಸಿಹೋಗುತ್ತದೆ. ಅಮಾನುಷವೆಂದು ಕಂಡರೂ, ಶುದ್ಧ ಮಾನುಷವಾದ ಕರ್ಣನ ಈ ವಿಶಿಷ್ಟ ವ್ಯಕ್ತಿತ್ವವನ್ನು ಕಯ್ಯಾರರು ಬಹಳ ಮಾರ್ಮಿಕವಾಗಿ ಮೂಡಿಸಿದ್ದಾರೆ.

'ಕಾಗಿನೆಲೆಯಲ್ಲಿ ಕೋಗಿಲೆಯ ಕೂಹೂ'– ಇವೆರಡಕ್ಕಿಂತ ಭಿನ್ನವಾಗಿ ನಿಲ್ಲುವ ಕಥನಕವನ.

"ನಾಲ್ಕುನೂರು ವರ್ಷಗಳ ತೆರೆಸರಿಸು, ಎಂಥ ದೃಶ್ಯ ನೋಡು; ಕಾಗಿನೆಲೆಯಲ್ಲಿ ಕೋಗಿಲೆಯ ಕುಹೂ, ಕೇಳು ಕವಿಯ ಹಾಡು"

ಎಂದು ಹೊಸ ಶೈಲಿಯಲ್ಲಿ ಆರಂಭವಾಗುವ ಈ ಕವನ ನಮ್ಮ ಕನ್ನಡದ ಸಂತ ಕವಿ ಕನಕದಾಸನನ್ನು ಕುರಿತು ಬರೆದದ್ದು.

ದೇವಲೋಕದಲ್ಲಿ ನಾರದಪರ್ವತರೊಳಗೆ ವಾಗ್ವಾದ– 'ಹರಿಭಕ್ತರಲ್ಲಿ ನಾನೇ ಮೇಲು' ಎಂದು ನಾರದ ಹೇಳಿದರೆ 'ನೀನೊ ಯೆನ್ನಿಂ ಕೆಳಗೆ' ಎಂದು ಪರ್ವತ ಹೇಳುತ್ತಾನೆ– ಈ ವಿವಾದವನ್ನು ಹರಿಯೇ ಇತ್ಯರ್ಥ ಮಾಡಲಿ ಎಂದು ಬೃಹಸ್ಪತಿಯ ಸಲಹೆ. ಹರಿ ಹೇಳುತ್ತಾನೆ. "ಹೋಗಿ ಕಾಗಿನೆಲೆಗೆ, ಆತನೋ ಕುರುಬ! ಮಂದೆ ಬೇಕವಗೆ, ದಾರಿ ತೋರ್ಪ ನಿಮಗೆ" ಎಂದು. ಇದು ಕಥೆಯ ಪೀಠಿಕಾಸಂಧಿ. ಮುಂದೆ ಕನಕನ ಕಥೆಯ ಆರಂಭ. ಬಾಡ ಎಂಬ ಊರಿನಲ್ಲಿ ಬೀರಪ್ಪ ಬಾಚವ್ವರಿಗೆ ತಿಮ್ಮಪ್ಪನೆಂಬ ಮಗ ಹುಟ್ಟುತ್ತಾನೆ. ಅವನು ಹುಟ್ಟಿದ ಮೇಲೆ ತಂದೆತಾಯಂದಿರ ಭಾಗ್ಯ ಬಂಗಾರ ಹೆಚ್ಚುತ್ತದೆ. ಆತ 'ಕನಕ' ನೆನಿಸುತ್ತಾನೆ. ಕನಕನ ಕನಸಿನಲ್ಲಿ ಭಗವಂತ ಬಂದು ಭವಸಮುದ್ರವನು ದಾಂಟಿ ಬಾ ಇಲ್ಲಿ, ಎಂದು ಹೇಳುತ್ತಾನೆ. ಆದರೆ ಕನಕನಿಗೆ ಭೋಗಭಾಗ್ಯ ಬಿಡಲು ಮನಸಿಲ್ಲ. ಭಗವಂತನಿಗೆ ಕನಕನನ್ನು ಬಿಡಲು ಮನಸ್ಸಿನಲ್ಲ. ದೇವರಿಂದ ಕನಕನ ಸತ್ತ್ವಪರೀಕ್ಷೆಯ ಆರಂಭ. ಆತನ ಬದುಕಿಗೆ ಸಿಡಿಲಿನ ಹೊಡೆತ. ಕುಟುಂಬದ ಎಲ್ಲರೂ ಮಡಿದು ಆತ ಅನಾಥ ನಾಗುವನು. ಈಗ ಕೇಶವನೇ ಅವನಿಗೆ ನಾತ. ಆತ ಊರೂರು ಸುತ್ತಿ ಉಡುಪಿಗೆ ಬರುತ್ತಾನೆ. ಕೃಷ್ಣನನ್ನು ಸ್ತುತಿಸುತ್ತಾನೆ. ದೇಗುಲದಲ್ಲಿ ಮೂಡುಮುಖವಾಗಿ ನಿಂತ ಕೃಷ್ಣ ಕನಕನನ್ನು ಕಾಣಲು ಪಶ್ಚಿಮಾಭಿಮುಖನಾದ. ಕನಕನ ಕಿಂಡಿಯ ನಿರ್ಮಾಣ ವಾಯಿತು.

ಆಕಾಶದಲ್ಲಿ ತುಂಬುರನಾರದರು ಈ ದೃಶ್ಯ ಕಂಡರು:

"ನಿನ್ನ ನುಡಿಯೇ ವೇದ, ನಿನ್ನೊಳೇ ಹರಿಯೊಲವು, ನೀನು ಕುರುಬನು ನಾವೆ ಕುರಿಮಂದೆಯು"

ಎಂದು ಸಾರಿಯೇ ಬಿಟ್ಟರು. ಒಂದು ಪೌರಾಣಿಕ ಹಿನ್ನೆಲೆಯನ್ನು ಎತ್ತಿಕೊಂಡು flash backನಲ್ಲಿ ಕನಕನ ಬದುಕನ್ನು ಚಿತ್ರಿಸುವ ಈ ಕವನ ಓದುತ್ತಾ ಹೋದಂತೆ



ನಾಟಕದ ದೃಶ್ಯಗಳಾಗಿ ನಮ್ಮ ಕಣ್ಣ ಮುಂದೆ ಸುಳಿಯುತ್ತದೆ. ನಾಟಕದ ಕೊನೆಯ ಭರತವಾಕ್ಯ ಯಾರನ್ನೂ ಆಶೀರ್ವದಿಸುವುದಕ್ಕೆ ಹೋಗದೆ ಒಂದು ಸಾರ್ವಕಾಲಿಕ ಸಂದೇಶವನ್ನು ಸಾರುತ್ತದೆ. ಈ ಸಂದೇಶ ಹೀಗಿದೆ:

"ಕನಕದಾಸರ ನೆನೆದು ಕವನಿಸುವ ಕವಿವರರೆ, ದೀನದಲಿತರ ಕಣ್ಣನೀರನೊರಸಿ; ಕನಕದರ್ಶನದಲ್ಲಿ ಪಾಲ್ಗೊಳುವ ಪ್ರೇಕ್ಷಕರೆ, ಎದೆಯ ಕತ್ತಲೆ ಕಳೆಯೆ ತಿಳಿವನುರಿಸಿ"

ಮುಂದಿನ ಕಥನಕವನ – 'ಸಾವಿನಲಿ ಸವಿಯುಂಡನು' ಕಲೆಯನ್ನು ಕೆತ್ತಿದ. ಶಿಲ್ಪಿ ಬಡವನಾಗಿ, ಕಲೆ ಶ್ರೀಮಂತವಾಗುವ ಕಠೋರಸತ್ಯವೇ ಈ ಕವನದ ಜೀವಾಳ.

"ಹಾಲು ಮೊಸರಂ ಕುಡಿದು, ಬೆಣ್ಣೆತುಪ್ಪವ ಸವಿದು, ಪಸುವಿಂಗೆ ಪಸಿವುಂಟೆ ಕೇಳ್ದರಿಲ್ಲ"

ಇದು ಸಮಾಜದ ಸ್ವಭಾವ. ಇಂಥ ಸಮಾಜದಲ್ಲಿ ಉಸಿರಾಡಿದ ಶಿಲ್ಪಿ ಬದುಕಿನಲ್ಲಿ ಉಣ್ಣದ ಸವಿಯನ್ನು ಸಾವಿನಲ್ಲಿ ಉಂಡ ಎಂಬುದನ್ನು ಕವಿಗಳು ಇಲ್ಲಿ ಅತ್ಯಂತ ಮಾರ್ಮಿಕವಾಗಿ ಸಾರಿದ್ದಾರೆ.

'ಕನ್ನಡದ ಜೇನ್ನುಡಿಗೆ ಸಕ್ಕರೆಯು ಸೇರಿತೆ'ನೆ ವಚನ ಸಾಹಿತ್ಯ ಸಂಪದವನ್ನು ಹೆಚ್ಚಿಸಿದ ಬಸವಣ್ಣನವರ ಬದುಕು ಬರೆಹಗಳ ಕುರಿತಾದ ಸುಂದರ ಚಿತ್ರಣವೇ 'ಮಲೆಯ ಗಜರಾಜ ಮನೆಗೆ ಬಂದಿತು' ಎಂಬ ಕಥನಕವನ. ಇಲ್ಲಿ ಕವನಿಸುವ ಕ್ರಿಯೆ ಗೌಣವಾಗಿ ಕಥನಿಸುವ ಕ್ರಿಯಗೆ ಹೆಚ್ಚು ಪ್ರಾಧಾನ್ಯ ಸಂದಿದೆ.

'ಪಂಜರದ ಪಕ್ಷಿ' ಗೂಡು ಸೇರಿದ ಪಕ್ಷಿಯೊಂದರ ಆತ್ಮಕಥನ. ಸ್ವಾರ್ಥಿಯಾಗಿ ತನ್ನ ಸುಖಕ್ಕೆ ಇತರರನ್ನು ಬಲಿಕೊಡುವ ಹಾಗೆಯೇ ಇತರರ ಸ್ವಾತಂತ್ರ್ಯವನ್ನು ಕಸಿಯುವ ಮಾನವಪ್ರವೃತ್ತಿಯನ್ನು ಇಲ್ಲಿ ಖಂಡಿಸಲಾಗಿದೆ.

ಇಳೆಯಾಂಡನೆಂಬ ಶಿವಶರಣನ ತ್ಯಾಗದ ಪರಮಾವಧಿಯನ್ನು 'ಎಲ್ಲ ಕಳಕೊಂಡು ಎಲ್ಲವನು ಪಡೆದ' ಎಂಬ ಕನವದಲ್ಲಿ ಚಿತ್ರಿಸಿದೆ.

'ಯೋಧಗಾಥ' ಚೀನಾ ಭಾರತ ಯುದ್ಧದಲ್ಲಿ ಮಡಿದ ವೀರಯೋಧನೊಬ್ಬನ ಹಾಗೂ ಆತನ ತಾಯಿಯ ಕುರಿತಾದ ಒಂದು ದಾರುಣ ಕಥೆ. ಇಲ್ಲಿ ಕಥೆ ಕಾಲ್ಪನಿಕವಾದರೂ, ಅತ್ಯಂತ ಹೃದಯಸ್ಪರ್ಶಿಯಾಗಿದೆ. ಮಗನನ್ನು ಯುದ್ಧಕ್ಕಾಗಿ ಹರಿಸಿ ಕಳುಹಸಿದ ತಾಯಿ. 'ಕರು ಸತ್ತುಹೋದ ಹಟ್ಟಿಯ ದನದ ಕಣ್ಣೀರ ಒರೆಸುತಿರುವಳು' ಎಂದು ಕವಿಗಳು ವರ್ಣಿಸುವಾಗ ನಮ್ಮ ಕಣ್ಣುಗಳು ತೇವವಾಗದೆ ಇರುವುದಿಲ್ಲ. ಆಕೆಯ ಗಂಡನೂ ಸ್ವಾತಂತ್ರ್ಯದ ಯುದ್ಧದಲ್ಲಿ ಮಡಿದವನು. ಈಗ ಮಗನೂ ಯುದ್ಧಕ್ಕೆ ಹೋಗಿದ್ದಾನೆ. ಭಾರತ ಚೀನ ಗಡಿಯಲ್ಲಿ ಮಡಿದಿದ್ದಾನೆ. ಯುದ್ಧದ ವಿಚಾರ ಏನಾಗಿದೆಯೆಂದು ಆಕೆಗೆ ತಿಳಿಯದು. ಇದೇ ಸಂದರ್ಭದಲ್ಲಿ ಯುದ್ಧನಿಧಿಗಾಗಿ ಹಣ ಸಂಗ್ರಹಿಸಲು ಕವಿಗಳು ಈ ಮಹಾತಾಯಿಯ ಮನೆಗೆ

ಹೋಗುತ್ತಾರೆ. ಆಕೆ ವಿಚಾರವನ್ನೇ ಮೌನವಾಗಿ ಕೇಳಿದಳಂತೆ:

"ಬೆರಗಾಗಿ ಕೇಳುತ್ತಿದ್ದಳು ತಾಯಿ! ಕೊನೆಗೊಮ್ಮೆ ನಿಟ್ಟುಸಿರುಬಿಟ್ಟು ಒಳಹೋಗಿ ಮರಳಿ, ಹಳೆಯ ಪಟ್ಟೆಯ ಬಟ್ಟೆಯಲಿ ಸುತ್ತಿ ಕಟ್ಟಿರುವ ಗಂಟು ಬಿಚ್ಚಿದಳಾಕೆ ಸುರುಳಿ ಸುರುಳಿ! ಗಿಳಿಯೋಲೆ ಮೂಗುತಿಯು ನತ್ತು ತಾಳಿಯು ಇತ್ತು ! ಹಣೆಗೊತ್ತಿ ಮೊಗವೆತ್ತಿ ನುಡಿದಳಿಂತು: ಪುಣ್ಯವಂತರೆ! ಎನಗೆ ಮಗುವ ಕಂಡಂತಾಯ್ತು ಅವನೆನ್ನ ಸಂಪತ್ತು. "ಕೊಳ್ಳಿರೀ ಸೊತ್ತು"

ಎಂದು ತನ್ನಲ್ಲಿರುವ ಆಭರಣಗಳ ಗಂಟನ್ನು ಯುದ್ಧನಿಧಿಗಾಗಿ ಅರ್ಪಿಸುತ್ತಾಳೆ. ಇಲ್ಲಿ ಚಿತ್ರಿತವಾದ ಒಂದು ಸಣ್ಣ ಬಡ ಕುಟುಂಬದ ಕಥೆ ಒಂದು ದೇಶದ ದೊಡ್ಡ ಶ್ರೀಮಂತ ಇತಿಹಾಸವಾಗುತ್ತದೆ.

'ದಿಗಂತದಾಚೆಗೆ' 'ನೌಶೇರ ಶೂರ' ಕವನಗಳು ದೇಶಕ್ಕೋಸ್ಕರ ಬಲಿದಾನ ಮಾಡಿದ ವೀರರನ್ನು ಕುರಿತು ಬರೆದ ಕವನಗಳಾದರೆ, 'ವಿವೇಕಸ್ಮೃತಿ' ವಿವೇಕಾನಂದರ ನೆನಪನ್ನೂ, 'ಕಾಲಾತೀತ' ಗಾಂಧೀಜಿಯವರ ನೆನಪನ್ನೂ ತರುವ ಕವನಗಳಾಗಿವೆ. 'ಕಾಲಾತೀತ'ದ ಕೊನೆಯಲ್ಲಿ ಬರುವ–

"ಬುದ್ಧ ಮಹಮ್ಮದ ಕ್ರಿಸ್ತ ಜರತುಷ್ಟ್ರ ಜಿನದೇವ ಸಾಕ್ರೆಟಿಸ್ ಪ್ಲೇಟೊ ಟಾಲಿಸ್ಟಾಯ್ ಮುಂತಾದ ಸಂತರೆಲ್ಲರು ಸೇರಿರುವ ದಿವ್ಯ ಸಭೆಯಲ್ಲಿ ಅಧ್ಯಕ್ಷತೆಯ ಪೀಠ ಗಾಂಧಿಯೇರಿರೆ, ಘೋಷ ಕೇಳಿಸಿತು ಮರ್ತ್ಯದಿಂ ಮೊಳಗಿ ಮಾರ್ಮೊಳಗುತಲಿ:

ರಘುಪತಿ ರಾಘವ ರಾಜಾರಾಮ್ ಪತಿತಪಾವನ ಸೀತಾರಾಮ್..."

ಎಂಬ ಕಲ್ಪನೆ ಗಾಂಧೀಜಿಯವರ ಅಲೌಕಿಕ ವ್ಯಕ್ತಿತ್ವವನ್ನೂ ಕಾಲಾತೀತವಾದ ಹಿರಿಮೆಯನ್ನು ವ್ಯಕ್ತಪಡಿಸುತ್ತದೆ.

'ಸ್ವಗತ' ರೈಗಳ ಆತ್ಮಕಥನ ರೂಪದ ಕವನ. ಅವರು ತಮ್ಮ ಬಾಲ್ಯದ ಸ್ಮೃತಿಯನ್ನು ಕವನಿಸುತ್ತಾ–

"ಪಾಟ ಬ್ರಾಹ್ಮಣರೊಡನೆ, ಆಟ ಹೊಲೆಯವರೊಡನೆ, ಓದುವುದು ಒತ್ತಾಯ ಆಡುವುದೆ ಹಿತವು; ಗೆಳೆಯ ಹೊಲೆಯನ ಕಂಡು, ಸಾಲೆ ತಪ್ಪಿಸಿಕೊಂಡು ದನ ಮೇಯಿಸುತ ಬಂದ ದಿನವೆಂಥ ಸುಖವು"

ಎಂದು ಹೇಳಿಕೊಂಡರೂ, "ಸಂಸ್ಕೃತವನೋದಿದೆನು ಕನ್ನಡದ ಜನತೆಗೆ, ಉಭಯ ಸಾಹಿತ್ಯಗಳ ಬರಿಯ ಸಾಹಿತ್ಯಗಳ ಓದಿ ಸವಿ ಸವಿಯುವುದೆ ಹಿತವಾಯ್ತು ನನಗೆ" ಎಂದು ಸಾಹಿತ್ಯದ ಬಗೆಗೆ ಆಗಲೇ ತಮಗಿದ್ದ ಒಲವನ್ನೂ ವ್ಯಕ್ತಪಡಿಸಿದ್ದಾನೆ. ಕೊನೆಗೆ 'ನಾ ನಿರಾಶಾವಾದಿಯಲ್ಲ, ಮುಂದೊಂದು ದಿನ ಶಕ್ತಿಯುತ ಸಾಹಿತ್ಯ ಸೃಷ್ಟಿಸುವೆನು' ಎಂಬ ಭರವಸೆಯನ್ನೂ ನೀಡಿದ್ದಾರೆ.

೪

'ಪ್ರಗತಿಪಥ' ವಿಭಾಗದಲ್ಲಿ ವರ್ತಮಾನಯುಗದ ಸಾಮಾಜಿಕ ಶೋಷಣೆಯ



ವಿರುದ್ಧದ ಕೂಗನ್ನು ಕಾಣುತ್ತೇವೆ. ಇಲ್ಲಿನ ಮೊದಲ ಕವನ 'ಕೊರಗ' ಕಯ್ಯಾರರ ಅತ್ಯಂತ ಶ್ರೇಷ್ಠ ಕವನಗಳಲ್ಲೊಂದು ಎಂದು ಹೆಸರು ಗಳಿಸಿದೆ. ನಮ್ಮ ಬುದ್ಧಿವಂತ ಸಮಾಜ ಕೊರಗ ಜನಾಂಗಕ್ಕೆ ಆ ಹೆಸರನ್ನಿಟ್ಟ ಬಗ್ಗೆ ಕವಿ ಅಸಹನೆಯಿಂದ ಹೇಳುತ್ತಾರೆ.

"ನಾಡನಾಳುವ ಮಂದಿ, ಉತ್ತಮೋತ್ತಮಜನರು, ವೇದಶುದ್ಧ ಸಮಾಜ, ಮುಖಕೆ ಉಗುಳುವ ತೆರದಿ ಇವನ ಪೀಳಿಗೆಗೆ ಎಸೆದ ಹೆಸರು ಕಾಡಿನ ಕೊರಗ"

ಇಲ್ಲಿ 'ಉಗುಳುವ' ಮತ್ತು 'ಎಸೆದ' ಎಂಬ ಪದಗಳು ಕವಿಯ ವಿವಕ್ಷೆಯನ್ನು ಅತ್ಯಂತ ಸಮರ್ಥವಾಗಿ ಅಭಿವ್ಯಕ್ತಗೊಳಿಸಲು ಹೆಚ್ಚು ಸಹಾಯಕವಾಗಿವೆ. 'ಕೊರಗ' ಎಂಬ ನಾಮಪದವನ್ನು ಕ್ರಿಯಾಪದವನ್ನಾಗಿಯೂ ಬಳಸಿ, ಶಬ್ದಶ್ಲೇಷೆ ಅರ್ಥಶ್ಲೇಷೆಗಳನ್ನು ಸಾಧಿಸುವ ಕವಿಗಳು ಉಪನಿಷತ್ತಿನ ವಿಶಾಲ ತತ್ತ್ವಗಳನ್ನು ಈ ಕವಿತೆಯ ಸಾಲುಗಳಲ್ಲಿ ತುಂಬುವ ಪ್ರಯತ್ನ ಮಾಡುತ್ತಾರೆ.

ಈ ವಿಭಾಗದಲ್ಲಿ ಬರುವ 'ಅಭೇದ' 'ರಣನಾದ', 'ಆಟಮಾಟ', ವಿಪ್ಲವ' ಮುಂತಾದ ಕವನಗಳಲ್ಲಿ ವ್ಯಕ್ತವಾಗುವ ಪ್ರಗತಿಪರಮನೋಭಾವಗಳ ವಿಚಾರಕ್ರಾಂತಿ ಯನ್ನು ಬಡಿದೆಬ್ಬಿಸುತ್ತವೆ.

'ಬಾ ಹೊರಗೆ' ಕವನದಲ್ಲಿ ಗುಡಿಯೊಳಗಿನ ಪೂಜಾರಿಯ ಮಾಡುತ್ತಿರುವ ಅನ್ಯಾಯಗಳ ವಿರುದ್ಧ ಸಿಡಿದೇಳುವ ಪ್ರವೃತ್ತಿಯನ್ನೂ ಕಾಣುತ್ತೇವೆ.

"ಬ್ರಾಹ್ಮಣರು ಹರಿಜನರು ಒಂದೇ ರಕ್ತ, ರಾಮನೂ ರಹೀಮನೂ ಏಕಶಕ್ತ" ಎಂದು ಹೇಳುವ ಅವರ ಸಮನ್ವಯದೃಷ್ಟಿ ಇಷ್ಟರೊಳಗೇ ಸೀಮಿತವಾಗದೆ, "ಪಾದ್ರಿಯೂ ಮುಲ್ಲನೂ ದೇವಭಕ್ತ, ಕ್ರಿಸ್ತನಿಗು ಕೃಷ್ಣನಿಗು ಭೇದ ವ್ಯರ್ಥ, ಇಂತಿಹುದು 'ನವಯುಗದ ಕ್ರಾಂತಿನಾದ" ಎಂಬ ವಿಶ್ವಮಾನವ ಸಂದೇಶವನ್ನೂ ಅದರಲ್ಲಿ ಸಾರುತ್ತಾರೆ. ಇದೇ ಪ್ರಗತಿ ವಿಚಾರವನ್ನು 'ನಮ್ಮ ದೇವರು' ಕವನದಲ್ಲೂ ಕಾಣಬಹುದು. ಇಲ್ಲಿ ಒಂದು ತರದ compromiseನ ಪ್ರವೃತ್ತಿ ಕಂಡುಬರುವುದಾದರೂ, ಅದು ವೇದಾಂತಿಯ ಸಂಕುಚಿತ ಪ್ರವೃತ್ತಿಯನ್ನು ಖಂಡಿಸುವ ದನಿಯನ್ನು ಒಳಗೊಂಡಿದೆ.

"ವೇದಾಂತಿ ನೀ ಪುಣ್ಯವಂತ ದೇವರದೂತ, ಹೋಗು ಮೋಕ್ಷಕೆ ಪಾಪಜೀವನಂ ಬೇಡ; ವೈಕುಂಠವೋ ಮತ್ತು ಕೈಲಾಸವೋ ಹತ್ತು ಬೋಧನೆಯ ಬಿಟ್ಟು ನೀ ಸಾಧನೆಯ ಮಾಡ"

ಎಂದು ನುಡಿಯುವುದರೊಂದಿಗೆ,

"ದುಡಿತವೇ ನಮ್ಮ ದೇವರು, ಲೋಕ ದೇವಕುಲ, ಬೆವರೆ ಹೂ ಹಣ್ಣುಕಾಯ್, ಕಣ್ಣೀರೆ ತೀರ್ಥಂ; ಎಮ್ಮೊಂದಿಗರ; ಬಾಳ ಸಾವುನೋವಿನ ಗೋಳ ಉಂಡಿಹೆವು ಸಮಪಾಲ ನಮಗದುವೆ ಮೋಕ್ಷಂ"

ಎಂಬ 'ಕಾಯಕವೇ ಕೈಲಾಸ' ತತ್ತ್ವದ ಚಿಂತನೆಯನ್ನೂ ಕಾಣುತ್ತೇವೆ.

'ವಿಶ್ವಗರ್ಭದ ಗೋಳು' ಕಳೆದ ಮಹಾಯುದ್ಧದ ಸಂದರ್ಭದಲ್ಲಿ ಬರೆಯಲಾದ ಕವನ. ಯುದ್ಧದ ಬಗೆಗಿನ ಭಯಾನಕ ಕಲ್ಪನೆ, ಜಗತ್ತಿನ ಅಸಹಾಯಕತೆ, ಅವತಾರ

ಪುರುಷನೊಬ್ಬನ ಅನಿವಾರ್ಯತೆ ಮುಂತಾದ ಭಾವಗಳನ್ನು ಬಿಂಬಿಸುವ ಈ ಕವನದಲ್ಲಿ 'ರಣಪ್ರಮತ್ತರ ಬೊಬ್ಬೆಯಡಗಲಿಹುದು; ಹೊಸ ಜಗದ ನಿರ್ಮಾಣವಾಗಲಿದೆ' ಎಂಬ ಆಶಾವಾದಿತ್ವವೂ ಅಡಕವಾಗಿದೆ. ಹೆಚ್ಚು ಕಡಿಮೆ ಇದೇ ಆಶಯವನ್ನೇ 'ಚಿನ್ನದ ಕನಸು ಕಂಡೆನೊಂದು' ಕವನದಲ್ಲೂ ಕಾಣುತ್ತೇವೆ.

ಙ

ಕನ್ನಡ ನವೋದಯ ಕಾವ್ಯೇತಿಹಾಸದ ಆರಂಭಕಾಲದಲ್ಲಿ ದೇಶಪ್ರೇಮದ ಭವ್ಯಭಾವನೆಯನ್ನು ಹೊತ್ತು ಮೂಡಿಬಂದ ಕಯ್ಯಾರರ ಅನೇಕ ಕವಿತೆಗಳು ಅವರ ಕಾವ್ಯರಚನೆಯ ಕಾಯಕಕ್ಕೆ ಒಳ್ಳೆಯ ಹೆಸರನ್ನು ತಂದುಕೊಟ್ಟಿವೆ. ಭಾರತಮಾತೆಯ ಹಿರಿಮೆಯನ್ನಿತ್ತಿ ಹಾಡಿದ ಅವರ ಸುಪ್ರಸಿದ್ಧವಾದ ಶ್ರೀಮುಖ ಕವನ ಹೀಗೆ ಆರಂಭವಾಗುತ್ತಿದೆ.

"ಆರ್ಯರೋ ಮೊಗಲರೋ ಕ್ರೈಸ್ತರೋ ತಡೆಯೇನು? ಎಲ್ಲರೂ ಬರಲೆಂದು ಸ್ವಾಗತಿಸಿದೆ; ಜಾತಿಮತ ಬೇರೆನದೆ ಬಣ್ಣನುಡಿ ಬದಲೆನದೆ ಭೇದವೆಣಿಸದೆ ತಾಯೆ! ನೀ ಸಲಹಿದೆ"

ಭಾರತಾಂಬೆಯ ಬಗ್ಗೆ ಕವಿಗಿರುವ ದೇಶಪ್ರೇಮ ಅನನ್ಯವಾದುದು.

"ಹಸಿರುಡುಗೆ ಪಸೆದುಟ್ಟು, ಸಿರಿಮುಡಿಗೆ ಹೂತೊಟ್ಟು ಭುವನೇಶ್ವರಿಯೆ ನೀನು ಮೆರೆಯಬೇಕು; ಶುಭದಿನದ ಹೊಸ ಬೆಳಕಿನಾನಂದ ಶೋಭೆಯಲಿ ನಿನ್ನ ಶ್ರೀಮುಖವೊಮ್ಮೆ ನೋಡಬೇಕು"

ಎಂದು ಕವಿಗಳು ಆಶಿಸುತ್ತಾರೆ. 'ಅಲ್ಲ – ಇದು ಬರಿಮಣ್ಣು' ಕವಿತೆಯಲ್ಲಿ ನಾನು ಜನನಿಯ ಗರ್ಭದಲ್ಲಿ ಹುಟ್ಟಿ ಭಾರತಾಂಬೆಯ ಮಡಿಲಲ್ಲಿ ಬೆಳೆದೆ' ಎಂಬ ಉನ್ನತ ಭಾವನೆಯಿದೆ. ಈ ದೇಶದ ಜನರು ಒಗ್ಗಟ್ಟಾಗದಿದ್ದರೆ, ದೇಶದಪ್ರಗತಿ ಅಸಾಧ್ಯ– ಎಂಬ ತತ್ತ್ವವನ್ನು 'ಐಕ್ಯಗಾನ' ಕವಿತೆಯಲ್ಲಿ ವ್ಯಕ್ತಪಡಿಸಿದ್ದಾರೆ. ಇದೇ ಭಾವನೆ 'ಈ ಕನಸು' ಕವಿತೆಯಲ್ಲೂ ಮೂಡಿಬಂದಿದೆ.

"ದಾರಿದ್ರ್ಯ ದಾಸತ್ವ ದೌರ್ಬಲ್ಯಗಳ ದೂಡಿ ಪೂರ್ಣ ಮಾನವರಾಗಿ ಬಾಳಬೇಕು; ಸ್ವಾತಂತ್ರ್ಯ ಸಮಭಾವ ಸೌಹಾರ್ದಗಳು ಕೂಡಿ ರಾಷ್ಟ್ರ ಜೀವನವರಳಿ ತೋರಬೇಕು."

ಮಾತೃಭೂಮಿಯ ಬಗೆಗಿನ ಅಭಿಮಾನವೇ ಅವರ ಅನೇಕ ಕವಿತೆಗಳಿಗೆ ವಸ್ತುವಾಗಿರುವುದನ್ನು ಕಾಣಬಹುದು.

"ಎನ್ನೊಡಲ ಕರುಳ ಕುಂಕುಮವ ತೆಗೆದೊಪ್ಪಿಸುವ ಹೆರೆಹಣೆಗೆ ಬೊಟ್ಟಿಟ್ಟು ಮೆರೆಯೆ ತಾಯೆ! ನಿನ್ನ ಸಿರಿಮೊಗದ ಮಾಂಗಲ್ಯ ಭಾಗ್ಯಂ ಬೆಳಗೆ ಸವೆ ಸವೆಯಲೀ ದೇಹ! ಸಾವನರಿಯೆ"



"ನಿನ್ನ ಸೇವೆಯೊಳಿದುವೆ ತನುವು ತೃಣವಾಗಿರಲಿ, ಯಜ್ಞಕುಂಡದೊಳಿಂದೆ ಅಹುತಿಗೆ ಸಲಲಿ; ಧಗಧಗಿಸಲೀ ದೇಹ! ಸತ್ಯಸಂತೋಷದಲಿ ಅರ್ಪಿಸುವೆವಿದೊ ಪುಣ್ಯ ಪಾದಪದ್ಮದಲಿ"

ಗಾಂಧೀಜಿಯ ಬಗ್ಗೆ ಗಾಂಧೀವಾದದ ಬಗ್ಗೆ ಕವಿಗೆ ಎಲ್ಲಿಲ್ಲದ ಅಭಿಮಾನ. ಅವರ ಕವನಗಳಲ್ಲಿ ಒಂದು ಸಿಂಹಪಾಲು ಈ ಆಶಯಗಳಿಗೆ ಸಲ್ಲುತ್ತದೆ. ಗಾಂಧೀಜಿಯವರ ಪ್ರಥಮ ದರ್ಶನವಾದ ಸಂದರ್ಭದಲ್ಲಿ 'ಶಾಂತಸಾಮ್ರಾಜ್ಯದ ಮಹಾಂತ ಸಾಮ್ರಾಟನನು ಕಂಡೆನಣ್ಣಾ' ಎಂದು ಅವರು ಹಿಗ್ಗಿ ಹಾಡಿದರು. ಮುದೊಂದು ದಿನ ಅವರ ಸಮಾಧಿಯನು ಕಂಡಾಗ, ಅಂಥಾ ಮಹಾತ್ಮನ ಘೋರ ನಿರ್ಯಾಣವನ್ನು ನೆನೆದು;

"ಹೊಡೆದೆವೋ ಹೊಡೆತದಲಿ ನೋಯದನ, ಕೊಂದೆವೋ ಕೊಲಬಾರದೆಂದವನ, ಸುಟ್ಟೆವೋ ಬೆಂಕಿಯಲಿ ಸುಡದವನ, ಮರೆತೆವೋ ನಾವ್ ಮರೆಯಬಾರದನ"

ಎಂದು ದುಃಖಿಸುತ್ತಾ ಕೊನೆಗೆ,

"ಕಳೆದೆವಯ್ಯೋ ಕಳಕೊಳ್ಳಬಾರದನ, ಹೇ ರಾಮ! ನಾವೆಂಥ ಪಾಪಿಜನ".

ಎಂದು ಕಣ್ಣೀರುಗರೆಯುತ್ತಾರೆ. ಇಲ್ಲಿನ ಪ್ರತಿಯೊಂದು ಚರಣದಲ್ಲೂ ಮಡುಗಟ್ಟಿ ನಿಂತ 'ಕರುಣಭಾವ' ಇಡಿಯ ಕವಿತೆಯನ್ನೇ ಒಂದು ಶೋಕಗೀತೆಯನ್ನಾಗಿ ಮಾರ್ಪಡಿಸಿದ. ಪ್ರತಿಯೊಂದು ಚರಣವೂ ಗಾಂಧೀಜಿವನದ ಹಿರಿಮೆಯನ್ನು ಸಾರುತ್ತಾ ಹೋಗುತ್ತದೆ. ಕೊನೆಯ ಸಾಲುಗಳಲ್ಲಿ ಅದು ಒಂದು climaxಗೆ ಬಂದು ತಲುಪುತ್ತದೆ. ಕವಿತೆ ಶೋಕದ ರುದ್ರಮೌನದಲ್ಲಿ ಸ್ತಬ್ಧವಾಗಿ ನಿಂತುಬಿಡುತ್ತದೆ.

"ಹೇ ರಾಮ ಕೈ ಮುಗಿಯುತ ನಿಂತೆ, ಹೇ ರಾಮ ಮೈ ನಡುಗುವುದಂತೆ, ಹೇ ರಾಮ ಕಂಬನಿಯೊಸರಿತ್ತೆ, ಹೇ ರಾಮ ನನಗಿದುವೇ ಚಿಂತ;

ಹೇ ರಾಮ ನಮಗಗಾಗಿಯೇ ಸತ್ತೆ, ಹೇ ರಾಮ ನಿನಗಾಗಿಯೆ ಅತ್ತೆ,"

ಕನ್ನಡದ ವರಕವಿ ಮುದ್ದಣದ ಶತಮನೋತ್ಸವದ ಸಂದರ್ಭದ ಬರೆದ ಕವನ 'ನೂರು ನೂರು ಕಣ್ಣೀರು' ಆ ಕವಿಯ ಶೋಕಮಯ ಜೀವನದ ಪರಿಚಯವನ್ನು ನೀಡುವಲ್ಲಿ ಸಮರ್ಥವಾಗಿದೆ. ಎಳೆ ವಯಸ್ಸಿನಲ್ಲಿ ಇಹಲೋಕವನ್ನು ತ್ಯಜಿಸಿದ ಆತನನ್ನು ನೆನೆದು ಕವಿಗಳು ಬರೆದ ಈ ಸಾಲುಗಳು ತುಂಬ ಮಾರ್ಮಿಕವಾಗಿವೆ.

"ಎಳತು ಮಾಮರದ ಹೊಸತು ಶಾಖೆಯಲಿ ಪಂಚಮಸ್ವರದ ಗಾನ ಅಯ್ಯೋ! ರಣಹದ್ದು ಹೊಂಚುಹಾಕುತಲಿ ಒಯ್ಯೆ! ಹಾರಿತೋ ಪ್ರಾಣ–ಕೊರಳ ಮೇಲೆತ್ತಿ ಶುಭನವೋದಯವ ಸಾರಿತೊಂದು ಮುಂಗೋಳಿ' ಕಣ್ಣು ತೆರೆದು ಜನ ಕಂಡಿತ್ತೆ ಜಗವ ಜುಟ್ಟು ಕೊಯ್ದಳೋ ಕಾಳೀ!"

ಕಯ್ಯಾರರ 'ಬೆಂಕಿ ಬಿದ್ದಿದೆ ಮನೆಗೆ' ಕರ್ನಾಟಕದಾದ್ಯಂತ ಭುಗಿಲೆಬ್ಬಿಸಿ ಕವಿತೆ. ಕಾಸರಗೋಡು ಸಮಸ್ಯೆಯ ಬಗ್ಗೆ ಕನ್ನಡಿಗರು ಮಾಡಬೇಕಾದ ಕಾರ್ಯದ ತ್ವರೆಯನ್ನು ಎಷ್ಟು ಗಾಢವಾಗಿ ಈ ಕವಿತೆ ಸಾರುತ್ತದೆಂದರೆ, ಇನ್ನೊಂದು ನಿಮಿಷ ತಡಮಾಡಿದರೆ ಇಲ್ಲಿ ಕನ್ನಡದ ಮನೆ ಸುಟ್ಟು ಹೋಗುತ್ತದೆ – ನಮ್ಮ ಭಾಷೆ ಸಂಸ್ಕೃತಿಯ ಗೋಡೆಗಳು ಉರಿದುಬೀಳುತ್ತವೆ– ಎಂದು ಕವಿ ಜನರನ್ನು ಕೂಗಿ ಕರೆಯುತ್ತಾರೆ.

"ಬೆಂಕಿ ಬಿದ್ದಿದೆ ಮನೆಗೆ ಓ ಬೇಗ ಬನ್ನಿ; ಎಲ್ಲರೂ ಎದ್ದೆದ್ದು ಓಡಿ ಬನ್ನಿ; ಕನ್ನಡದ ಗಡಿ ಕಾಯೆ, ಗುಡಿ ಕಾಯೆ, ನುಡಿಕಾಯೆ, ಕಾಯಲಾಗದ ಸಾಯೆ! ಓ ಬನ್ನಿ ಬನ್ನಿ!" ನೀವು ಬರುವುದಾದರೂ ಹೇಗೆ ಬರಬೇಕು? "ಹಾರೆ ಗುದ್ದಲಿ ಕೊಡಲಿ ನೊಗ ನೇಗಿಲೆತ್ತುತಲಿ, ನೆಲದಿಂದ ಹೊಲದಿಂದ ಹೊರಟುಬನ್ನಿ" "ನೀವು ಎಲ್ಲಿ ಎಲ್ಲಿ ಇದ್ದೀರೋ ಅಲ್ಲಿ ಅಲ್ಲಿಂದ ಹಾಗೆಯಾ ಹೊರಟು ಬನ್ನಿ"– ಎಂದು ಆಲೋಚನೆ ಮಾಡಲಿಕ್ಕೂ ಅವಕಾಶ ಕೊಡದೆ ಕವಿಗಳು ಕರೆನೀಡುತ್ತಿದ್ದಾರೆ. ನಮ್ಮ ಭಾವಕ್ಕೆ ವೇಗವನ್ನು ಕೊಡುವ ಈ ಕವಿತೆ ಅತ್ಯಂತ ಪರಿಣಾಮಕಾರಿಯಾಗಿ ಮೂಡಿಬಂದಿದೆ.

ಪಂಜೆಮಂಗೇಶರಾಯರನ್ನು, ಗೋವಿಂದ ಪೈಗಳನ್ನು ಕುರಿತ ಕವನಗಳೂ ಭಾರತದೇಶ ಕನ್ನಡನಾಡು – ತುಳುನಾಡುಗಳಿಗೆ ಸಂಬಂಧಿಸಿದ ಇತರ ದೇಶ ಪ್ರೇಮಗೀತೆಗಳನ್ನೂ ಈ ವಿಭಾಗದಲ್ಲಿ ಕಾಣಬಹುದು.

## ೬

ಕೃಷಿ ಮತ್ತು ಕಾವ್ಯಕೃಷಿ– ಎರಡೂ ಶ್ರೀ ಕಯ್ಯಾರರ ಪ್ರಿಯ ವೃತ್ತಿಗಳು.

"ನಾನು ಮಣ್ಣಿನ ಮಗನು ಮಂದಾರಮಾಲೆಯೆನೆ ನೊಗನೇಗಿಲಂ ಹೊತ್ತು ತಿರುಗುವವನು; ಹೊಲ ನೆಲವನುಳುವವನು ಕೆಸರಿನಲಿ ಕಸದಲ್ಲಿ ಗೊಬ್ಬರದ ಗುಂಡಿಯಲಿ ದುಡಿಯುವವನು"

ಎಂದು ಅವರು 'ಪುನರ್ನವ' ಕವಿತೆಯಲ್ಲಿ ಹೇಳಿದ ಮಾತುಗಳನ್ನು ಇಲ್ಲಿ ಸ್ಮರಿಸಬಹುದು.

ನೇಗಿಲು ಮತ್ತು ಲೇಖನಿ ಎರಡೂ ನನ್ನ ಕಯ್ಯಲ್ಲಿ ನಿತ್ಯವೂ ಇರಲಿ – ಎಂದು ಅವರು ಆಶಿಸುತ್ತಾರೆ.

"ನೇಗಿಲಿನ ಸಮಕೆ ಲೇಖನಿ ಹಿಡಿದ ಕಯ್ಯಲ್ಲಿ ಗೆರೆತಪ್ಪದಿರೆ ಬರೆವೆ ಭೂಪಟದಿ – ಪುಟದಿ; ತಲೆಯ ತೂಗಿತು ತೆನೆಯ ಭಾರದಲಿ ನವಶಾಲಿ, ಅರಳಿ ಬಂದಿತೊ ಕವಿತೆ, ಹೊಸತು ಸಂಪುಟದಿ"

ಆದ್ದರಿಂದಲೇ ಇರಬೇಕು ಈ ಕವಿಗೆ ರೈತರೆಂದರೆ ತುಂಬ ಅಭಿಮಾನ. 'ನಮಸ್ತೆ' ಕವಿತೆ ನಮ್ಮ ನಾಡಿನ ರೈತರನ್ನು ಕುರಿತೇ ಬರೆದದ್ದು.



"ಕೆಸರಿನಿಂದಮೃತಕಲಶವನೆತ್ತಿ ಕೊಡುತಿರುವೆ ಹಸಿದ ಬಾಯಾರಿದ ಜಗತ್ತಿಗನ್ನವನೆರೆವೆ! ಸಸ್ಯ ಶಾಮಲೆ ಸುಜಲೆ ಸುಫಲೆ ಮಾತೆಯ ಪುಣ್ಯ – ಪುತ್ರ ರೈತ ನಮಸ್ತೆ! ನೀನೆ ಪರಮಪವಿತ್ರ"

ಎಂದು ರೈತಲೋಕಕ್ಕೆ ಅವರು ಕೈಮುಗಿಯುತ್ತಾರೆ.

ಚತುರ್ದಶಿ Sonnetಗಳಿಗೇ ಮೀಸಲಾದ, ಈ ವಿಭಾಗದಲ್ಲಿ ಶ್ರೀ ಕಯ್ಯಾರರು ಇತರ ಕವಿಗಳನ್ನು ಅಭಿನಂದಿಸುವ ಕಾರ್ಯವನ್ನೂ ಮಾಡಿದ್ದಾರೆ.

"ಭವದೀಯ ಲೇಖನಿಯು ಚಿರವಿನೂತನ ರಾಜಕೀಯ ತತ್ವದ ಖನಿಯು ಪಶುಪಂಥವಂ ಮೆಟ್ಟಿ ಮುರಿದಿಕ್ಕಿ ಸತ್ಯಧರ್ಮಕೆ ಪಟ್ಟ ಕಟ್ಟಿಸಿದೆ; ಭರತಪುತ್ರರ ಘೋಷವನು ಮುಗಿಲುಮುಟ್ಟಿಸಿದೆ"

ಎಂದು ಮಹಾಭಾರತದ ಮಹಾಕವಿ ವೇದವ್ಯಾಸನನ್ನೂ "ಸಂಸ್ಕೃತದ ಕೃತಿ ರಚನೆಯಲಿ ನೀನು ಕಾಳಿದಾಸನಿಗೆ ಗಣ್ಯಗುರುವೆಂದು ರಸಿಕಲೋಕವೆ ನಿನಗೆ ತಲೆವಾಗುತಿಹುದಯ್ಯ" ಎಂದು ಆದಿಕವಿ ವಾಲ್ಮೀಕಿಯನ್ನೂ "ಭವಭೂತಿ ಕಾಳಿದಾಸರ ನಾಟಕಗಳೋದಿ ಸಾಹಿತ್ಯ ಸವಿಯುಂಡು, ರಸಲೋಕ ಕೊಬ್ಬುತಿದೆ. ಅದೊಡೇಂ ಶೂದ್ರಕನೆ, ನಿನ್ನಂತೆ ಎನ್ನ ಮನವಂ ಸೂರೆಗೊಂಡವರು ಬೇರಿಲ್ಲ" ಎಂದು ಸಂಸ್ಕೃತಕವಿ ಶೂದ್ರಕನನ್ನೂ, "ನೀ ಮಹಾಕವಿ ವಿಶ್ವಕವಿಯೆನಿಸಿ ಮೆರೆದೆ; ನಿನ್ನ ಹಿರಿಮೆಗೆ ಹಿಗ್ಗಿ ನಾ ತೊದಲ್ನುಡಿದೆ. ನಾಡಿನ ನವೋದಯಕೆ ಹಾಡಿದೈ ಕವಿಗುರುವೆ" ಎಂದು ವಿಶ್ವಕವಿ ರವೀಂದ್ರನಾಥ ಠಾಗೋರರನ್ನು ಅವರು ಹೊಗಳಿದ್ದಾರೆ.

'ಲೆನಿನ್' ಕವಿತೆಯಲ್ಲಿ ಲೆನಿನ್ ಮಾಡಿದ ಸಾಹಸ ಸಾಧನೆಗಳನ್ನೆಲ್ಲಾ ವಿವರಿಸುತ್ತ ಕೊನೆಗೆ 'ನಿನ್ನ ಗರಿಮೆಯನು ಗುರುತಿಸಬಲ್ಲೆ ನಾನಿಲ್ಲೆ; ಹಿಂಸೆ ಕಳೆದರೆ ಗಾಂಧಿ ತಾತನದೆ ನಿನಗೆ ಬೆಲೆ' ಎಂದು ಗಾಂಧೀ ಲೆನಿನರನ್ನು ತುಲನೆ ಮಾಡಿ ಹೇಳಿದ ಮಾತು ತುಂಬ ಅರ್ಥವತ್ತಾಗಿದೆ.

## ೭

'ತತ್ತ್ವಸತ್ವ' ಕಯ್ಯಾರರ ದೀರ್ಘಕಾಲದ ಬದುಕಿನ, ದೀರ್ಘಕಾಲದ ಸಾಧನೆಯ ಮತ್ತು ಭೋಧನೆಯ ಅನುಭವದ ಕಡಲಲ್ಲಿ ರೂಪುಗೊಂಡ ತತ್ವಮುಕ್ತಾಫಲಗಳು. ಕೆಲವೊಂದು ವೈದಿಕ ಮಂತ್ರಗಳ ಹಾಗೂ ಉಪನಿಷತ್ತುಗಳ ಅನುವಾದಗಳೂ ಈ ವಿಭಾಗದಲ್ಲಿ ಅಡಕವಾಗಿವೆ.

ಮೊದಲನೆಯದಾದ 'ಅವನೆ' ಕವಿತೆಯಲ್ಲಿ ಸರ್ವಾಂತರ್ಯಾಮಿಯಾದ ಪರಮಾತ್ಮನನ್ನು ಹುಡುಕುವ ಪ್ರಯತ್ನವಿದೆ. ಹಾಗೆಯೇ ಮನುಷ್ಯಶಕ್ತಿಗೆ ಮಿಗಿಲಾದ ಯಾವುದೋ ಒಂದು ಅಜ್ಞಾತಶಕ್ತಿ ಈ ಲೋಕದಲ್ಲಿ ಅಡಗಿದೆಯೆಂದೂ ಅದರ ಪ್ರಭಾವದಿಂದಲೇ ಈ ಜಡಜಗತ್ತು ನಿತ್ಯ ಉಸಿರಾಡುತ್ತಿದೆಯೆಂದು 'ಚಿಂತನ'

ಕವಿತೆಯಲ್ಲಿ ವಿವರಿಸಿದೆ.

ಶಬ್ದಶಕ್ತಿಯ ಪ್ರಾದುರ್ಭಾವ, ಪ್ರಣವದ ವಿಕಾಸ, ವೇದ – ಉಪನಿಷತ್ತುಗಳ ಸೃಷ್ಟಿ– ಮುಂತಾದ ವಿಷಯಗಳ ಪ್ರಸ್ತಾಪ 'ಬಾನ್ ಬೆಳಕೆ' ಕವಿತೆಯಲ್ಲಿ ಬಂದಿದೆ. "ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ, ತತ್ತ್ವಂ ಪೂಷನ್ನಪಾವೃಣು" ಎಂಬ ವೈದಿಕ ಮಂತ್ರದ ಛಾಯೆ ಕೊನೆಯ ಚರಣದಲ್ಲಿ ತುಂಬ ಸೊಗಸಾಗಿ ಮೂಡಿಬಂದಿದೆ.

"ಹೊನ್ನ ಬಣ್ಣದ ಪಾತ್ರ, ಮೋಹಮಾಯೆಯ ಚಿತ್ರ, ಮುಸುಕಾಯಿತದರಿಂದ ಸತ್ಯಮುಖವು;

ಮೋಸತೆರೆಯೇ ತೊಲಗು, ಬಾನ್‌ಬೆಳಕೆ ತೊಳತೊಳಗು, ಸತ್ಯ ಧರ್ಮವ ಬೆಳಗು ನಿತ್ಯ– ಸುಖವು"

'ಊದಿಬಿಡು ನೀ' ಮತ್ತು 'ದೂಡಿಬಿಡಬೇಡ' ಕವಿತೆಗಳಲ್ಲಿ ಭಕ್ತಿ ಮಾರ್ಗದ ಅವಲಂಬನವಿದೆ. ಭಗವಂತನೊಡನೆ ಭಕ್ತನು ಭಿನ್ನವಿಸಿಕೊಳ್ಳುವ ಆಕ್ರಂದನಭಾವವನ್ನಿಲ್ಲಿ ಕಾಣಬಹುದು:

"ಇಲ್ಲಿ ದೂರದಲಿ, ಗುಡಿಯ ಹೊರಗೆ ಕೈ ಮುಗಿದು ಬಾಗಿ ನಿಂತೆ; ದಿವ್ಯ ದರ್ಶನವ ಕಂಡೆ ಹೇ ಪ್ರಭೋ, ಚೆಲುವು ದೂರದಿಂದೆ" "ನಿನ್ನ ಪುಣ್ಯಾಗ್ನಿ ಸ್ಪರ್ಶ ಮಾತ್ರದಲಿಭೂತಿಯೆನಿಸೆ ದೇಹ; ಖಂಡಕರ್ಪೂರದಂತೆ ಜ್ವಲಿಸಿತೋಭವ ಪಾಪಗೇಹ!"

ಮುಂತಾದ ಸಾಲುಗಳು ತುಂಬ ಚೆನ್ನಾಗಿ ಮೂಡಿಬಂದಿವೆ. 'ಬಿಡಿಸೆನ್ನ ಸೆರೆಯ' ಕವನದಲ್ಲೂ ಇಂಥದೇ ಸುಂದರಭಾವವನ್ನು ಕಾಣುತ್ತೇವೆ. ಆದರೆ ಇಲ್ಲಿ ಭಗವಂತನನ್ನು ಇದುವರೆಗೆ ನೆಚ್ಚಲಾಗದ ಅಪರಾಧಕ್ಕಾಗಿ ಪಶ್ಚಾತ್ತಾಪಡುವ ಭಾಗವೂ ಸೇರಿಕೊಂಡಿದೆ.

"ನೆಲದ ನೀರ ಪಿಪಾಸೆ, ಚೆಲುವು ನಲವುಗಳಾಸೆ, ಬಂಧುಬಳಗದ ಬಾಸೆಗಾಂ ಕಾದಿದೆ; ಬಾಳ ತೇರಿಗೆ ಬಿಸಿಲು–ಕುದುರೆ ಹೂಡಿದೆನಯ್ಯೊ! ಎತ್ತಿಕೊಳ್ಳೀ ಶಿಶುವ ಮುತ್ತಿಡೆಂದೆ"

ಎಂದು ಬೇಡಿಕೊಳ್ಳುತ್ತಾ ಕವಿ 'ನನ್ನನ್ನು ಸಂಸಾರದ ಸೆರೆಯಿಂದ ಬಿಡಿಸು' ಎಂದು ವಿನಂತಿಸಿಕೊಳ್ಳುತ್ತಾರೆ.

ವೈದಿಕ ಮಂತ್ರಗಳ ಅತ್ಯಂತ ಸುಂದರ ಅನುವಾದವೊಂದಕ್ಕೆ ಉದಾಹರಿಸ ಬಹುದಾದ ಕವನ 'ಮರುದ್ಭಿರಗ್ನೆ ಆಗಹಿ'

"ಅಗ್ನಿ ಬಾ ಮರುತುಗಳ ಜತೆಗೆ ಬಾ, ಈ ಸುಂದರಾಧ್ವರಕೆ ಸಂಭ್ರಮೋಲ್ಲಸದಿ ಬಾ, ಸೋಮರಸಪೀಯೂಷಪಾನಕಿದೊ ಪಾರಿ ಬಾ, ಬಾ ನಿನ್ನೊಳೆನ್ನ ಕರುಳಿನ ಕರೆಯು ಕರುಣಿ ಬಾ, ಅಗ್ನಿ ಬಾ ಮರುತಗಳ ಜತೆಗೆ ಬಾ!"

ಹಾಗೆಯೇ 'ಸಂಹಿತೆ' 'ತೋರು ಬೆಳಕಂ ಮುಂದೆ' 'ಶಾಂತಿ ಮಂತ್ರ' ಮುಂತಾದ ಮಂತ್ರಾನುವಾದಗಳು ಸಹ ಆಯಾ ಮಂತ್ರಾರ್ಥಗಳನ್ನು ಕನ್ನಡಿಸುವಲ್ಲಿ ಸಫಲವಾಗಿವೆ.



'ಹರಿತ ಕತ್ತಿಯ ಧಾರೆಯಂತೆ' 'ಮರಣದಿಂ ಮುಂದೇನು' ಮೊದಲಾದ ಕವಿತೆಗಳು ನಮ್ಮ ಉಪನಿಷತ್ತುಗಳ ಕಾವ್ಯಾತ್ಮಕಭಾಗದ ಸುಂದರ ಅನುವಾಗಳಾಗಿವೆ.

ಕವಿ ಭಾವಜೀವ. ಕಲ್ಪನೆಯ ರೆಕ್ಕೆಗಳ ಮೂಲಕ ಆತ ದಿಗಂತಕ್ಕೂ ಹಾರಬಲ್ಲ. ಶತಮಾನಗಳ ಹಿಂದಿನ ಅನಂತಕ್ಕೂ ಹಾರಬಲ್ಲ. ದೇಶ ಕಾಲಾತೀತವಾದ ಕವಿಪ್ರತಿಭೆಗೆ ಭಾವಗಳ ಸರಮಾಲೆ ಎಲ್ಲಿಂದಲೂ ದಕ್ಕಬಲ್ಲುದು ಸಿಕ್ಕಬಲ್ಲದು, ತನಗೆ ಉಂಟಾದ ಭಾವತನ್ಮಯತೆಯನ್ನು ಕಾವ್ಯರೂಪದಲ್ಲಿ ಹಿಡಿದಿಡಲು ಶಕ್ತನಾದರೆ ಮಾತ್ರ ಕವಿಯ ಕಾವ್ಯ ಭಾವಪೂರ್ಣವಾಗುತ್ತದೆ. ಇಲ್ಲದಿದ್ದರೆ ಭಾವಗಳ ಸರಮಾಲೆಯ ಬದಲು ಪದಗಳ ಸರಮಾಲೆ ಮಾತ್ರ ಉಳಿದೀತಷ್ಟೆ.

ಕಯ್ಯಾರರ ಕವಿತೆಗಳಲ್ಲಿ ಪದಗಳೂ ಭಾವಗಳೂ ಅಭಿನ್ನವಾಗಿ ರೂಪುಗೊಳ್ಳುವುದರಿಂದ ಎರಡೂ ನಮಗೆ ಹೃದ್ಯವಾಗಿ ಗೋಚರಿಸುತ್ತವೆ. ಮಹಾಕವಿ ಕುವೆಂಪು ಶ್ರೀ ಪು.ತಿ.ನ. ಮುಂತಾದವರ ಕವಿತೆಗಳಲ್ಲಿ ಇಂತಹ ಕಾವ್ಯಗುಣವನ್ನು ನಾವು ಧಾರಾಳವಾಗಿ ಕಾಣಬಹುದು.

ಯಾವುದೇ ಕಾವ್ಯವನ್ನಾಗಲೀ ಕವನವನ್ನಾಗಲಿ ಆಸ್ವಾದಿಸುವಾಗ ಕವಿಯ ಕಾಲ ಪರಿಸರ ಸನ್ನಿವೇಶಗಳನ್ನು ಅರ್ಥಮಾಡಿಕೊಂಡರೆ ಮಾತ್ರ ಅದರ ನಿಜವಾದ ಅಸ್ವಾದನೆ ದೊರೆಯುತ್ತದೆ. ನಮ್ಮ ಕಾಲ, ನಮ್ಮ ಪರಿಸರ, ನಮ್ಮ ಸನ್ನಿವೇಶಗಳಿಗೆ ಸರಿಯಾಗಿ ಆ ಭಾವಗಳನ್ನು ತರಿಸಿಕೊಂಡು ಅಸ್ವಾದಿಸಲು ಹೊರಟರೆ, ಅನೇಕಶಃ ಅಸ್ವಾದನೆಯೇ ಇಲ್ಲದೆ ಹೋಗಿ, ಕಾವ್ಯ ನೀರಸವೆನಿಸಲೂಬಹುದು. ಆದ್ದರಿಂದಲೇ ಕಾವ್ಯಾಸ್ವಾದಕನಿಗೆ ಅರ್ಥವ್ಯಕ್ತಿ, ತನ್ಮಯತೆ, ಕುತೂಹಲ, ಭಾವಶೋಧನೆ ಎಂಬೀ ಗುಣಗಳೊಂದಿಗೆ ಕಾಲಪ್ರಜ್ಞೆಯೂ ಇರಬೇಕೆಂಬುದರಲ್ಲಿ ಎರಡು ಮಾತಿಲ್ಲ.

ಕಯ್ಯಾರರ ಕವಿತೆಗಳನ್ನು ಅಸ್ವಾದಿಸಲು ಕೆಲವೊಮ್ಮೆ ಅಂತಹ ಕಾಲ ಪ್ರಜ್ಞೆಯೂ ಅವಶ್ಯಬೇಕಾಗುತ್ತದೆ. ಏಕೆಂದರೆ ಸ್ವಾತಂತ್ರ್ಯಪೂರ್ವದಿಂದ ಇಂದಿನವರೆಗೆ ಸುಮಾರು ಅರ್ಧಶತಮಾನಕ್ಕಿಂತ ಹೆಚ್ಚಿನ ಕಾಲದಲ್ಲಿ ಅವರು ಬರೆದ ಆಯ್ದ ನೂರಹನ್ನೊಂದು ಕವಿತೆಗಳು ಈ ಸಂಕಲನದಲ್ಲಿವೆ. ಕನ್ನಡ ಕಾವ್ಯ ಪ್ರಪಂಚದಲ್ಲಿ ಆಗಾಗ್ಗೆ ಆದ ಅಗುತ್ತಿರುವ ದೀಢೀರ್ ಬದಲಾವಣೆಗಳಿಗೆ ಈ ಕವಿ ಹೆಚ್ಚು ಒತ್ತು ಕೊಡಲು ಬಯಸಿದಂತೆ ಕಾಣುವುದಿಲ್ಲ. ಭಾರತೀಯ ಕಾವ್ಯಪರಂಪರೆಯನ್ನು ಬಹಳವಾಗಿ ನೆಚ್ಚಿಕೊಂಡ ಈ ಕವಿ, ಒಂದು ಸೀಮಿತ ಪರಿಧಿಯೊಳಗೆ, ತನ್ನ ಸ್ವಂತಿಕೆಯನ್ನು ಹಾಗೆಯೇ ಉಳಿಸಿಕೊಂಡು, ಎಷ್ಟು ಬದಲಾವಣೆ ಸಾಧ್ಯವೋ, ಅಷ್ಟನ್ನು ಮಾತ್ರ ಸ್ವೀಕರಿಸುತ್ತಾ ಬಂದಿದ್ದಾರೆ. ಈವೊಂದು ತಾತ್ವಿಕ ಅನುಸಂಧಾನದಲ್ಲಿ ಅಷ್ಟೇ ಅಭಿಮಾನವೂ ಪ್ರೀತಿಯೂ ಅವರಿಗಿದೆಯೆಂಬುದನ್ನು ಅವರು ತಮ್ಮ ಕವಿತೆಗಳ

ಮೂಲಕವೇ ಸಾರುತ್ತಾ ಬಂದಿರುವುದನ್ನು ನಾವು ಗಮನಿಸಬಹುದು. ಇದರಿಂದಾಗಿ ಈ ಸಂಕಲನದುದ್ದಕ್ಕೂ ಕಾಣುವ ಕಯ್ಯಾರರ ಕಾವ್ಯಶೈಲಿ ಅವರದೇ ಎಂದು ಪ್ರತ್ಯೇಕವಾಗಿ ಗುರುತಿಸಬಹುದಾದ ಶೈಲಿಯ ಒಂದು ಮಾದರಿಯಾಗಿ ಉಳಿದುಕೊಂಡು ಬಂದುದನ್ನೂ ನಾವು ಅಭಿಮಾನಪೂರ್ವಕ ಗುರುತಿಸಬಹುದಾಗಿದೆ.

ಶ್ರೀ ಕಯ್ಯಾರರು ಮುಕ್ತಛಂದಸ್ಸಿನ ಮಾರ್ಗವನ್ನು ಅವಲಂಬಿಸದೆ, ವಿವಿಧ ಛಂದೋವಿಲಾಸಗಳಲ್ಲಿಯೇ ತಮ್ಮ ಪ್ರತಿಭೆಗೆ ನಿಲುಕಿದ ಹೊಸಹೊಸ ಭಾವಗಳನ್ನು ಬಿಂಬಿಸುವ ಪ್ರಯತ್ನ ಮಾಡಿದ್ದಾರೆ. ಇದರಿಂದಾಗಿ ಛಂದಸ್ಸಿನಲ್ಲಿಯೂ ಹೊಸತನವನ್ನು ಹುಡುಕುವ ಕೆಲಸ ಅವರಿಗೆ ಅನಿವಾರ್ಯವಾಯಿತು. ಈ ಸಂಕಲನದಲ್ಲಿ ಅಂತಹ ಹಲವಾರು ಛಂದೋ ವೈವಿಧ್ಯವನ್ನು ನಾವು ಗುರುತಿಸಬಹುದು.

ಇದು ಕಯ್ಯಾರರ ಕವಿತೆಗಳ ಅಧ್ಯಯನದ ಒಂದು ಸಮೀಕ್ಷೆ. ಕಾವ್ಯ ರಸಾಸ್ವಾದನೆಯ ಮೌಲಿಕ ಅಂಶಗಳನ್ನು ಗುರುತಿಸುವ ಕೆಲಸವನ್ನು ಈ ಸಮೀಕ್ಷೆಯ ಮೂಲೋದ್ದೇಶವಾಗಿ ಇಟ್ಟುಕೊಂಡಿದ್ದೇನೆ. ಈ ನಿಟ್ಟಿನಿಂದ ಕಯ್ಯಾರರ ಕವನಗಳ ಒಂದು ಅಧ್ಯಯನ ಇಲ್ಲಿ ನಡೆದಿದೆ. ಹಾಗೆಂತ ಸಮಗ್ರ ಸಂಕಲನದ, ಎಲ್ಲ ಕವನಗಳನ್ನೂ ಸ್ಪರ್ಶಿಸುವ ಕೆಲಸವನ್ನು ನಾನು ಮಾಡಲಿಲ್ಲ, ನನಗೆ ಪ್ರಿಯವಾದ ಹಾಗೂ ಈಗಾಗಲೇ ಜನಪ್ರಿಯವಾಗಿರುವ ಅವರ ಕೆಲವೊಂದು ಪ್ರಸಿದ್ಧ ಕವನಗಳನ್ನು ಕೆಲವನ್ನು ದಿಕ್ಸೂಚಿಯಾಗಿ ಆಯ್ದುಕೊಂಡು ಉದಾಹರಿಸುವ ಪ್ರಯತ್ನ ಮಾಡಿದ್ದೇನೆ. ಎಂದು ಮಾತ್ರ ಹೇಳಬಲ್ಲೆ.

ಎಡನೀರು,
೧-೬-೧೯೮೬ ವೆಂಕಟರಾಜ ಪುಣಿಂಚತ್ತಾಯ



# ಪರಿವಿಡಿ


ಶುಭ ಸಂದೇಶ iii
ಚೆನ್ನುಡಿ iv
ಎರಡು ನುಡಿ v
ಅಧ್ಯಕ್ಷರ ಮಾತು vi
ಪ್ರಕಾಶಕರ ಮಾತು vii
ಆಯ್ಕೆ ಸಮಿತಿ ix
ಮುನ್ನುಡಿ xi
ಶತಮಾನದ ಗಾನ-ಸಮೀಕ್ಷೆ xiv

ನಾದ : ಒಂದು – ಭಾವ ಜೀವ ೩–೩೯
ನಾದ : ಎರಡು – ಪ್ರಕೃತಿ ಪ್ರೀತಿ ೪೩–೭೧
ನಾದ : ಮೂರು – ಕಥನ ಕವನ ೭೫–೧೪೩
ನಾದ : ನಾಲ್ಕು – ಪ್ರಗತಿ ಪಥ ೧೪೭–೧೬೭
ನಾದ : ಐದು – ನಾಡು ನುಡಿ ೧೭೧–೨೩೭
ನಾದ : ಆರು – ಚತುರ್ದಶಿ ೨೪೧–೨೪೮
ನಾದ : ಏಳು – ತತ್ವ ಸತ್ವ ೨೫೧–೨೮೭

# ಶತಮಾನದ ಗಾನ

**ಭಾವಜೀವ**

ಎಂಥ ಸುಂದರ ಸ್ವಪ್ನ ಸಂತೋಷ
ಎದೆಯ ತುಂಬುತಿಹುದು;
ಎತ್ತಣಿಂದಲೀಲಹರಿಯುನ್ಮೇಷ
ತೇಲಿ ತೇಲಿ ಬಹುದು?



# ಶತಮಾನದ ಗಾನ

## ನಾದ : ಒಂದು – ಭಾವ ಜೀವ

## ಲಹರಿ

ಎತ್ತಣಿಂದಲೀ ಲಹರಿಯುನ್ಮೇಷ?
ಎಂಥ ಸುಂದರದ ಸ್ವಪ್ನ ಸಂತೋಷ !
ಯಾರು ಮಿಡಿವರೆನ್ನೆದೆಯ ತಂತಿಯನು ?
ರಾಗ ರಂಜಿಸುವುದು ;
ಯಾರು ನುಡಿಸುವರು ಕವನಪಂಕ್ತಿಯನು?
ಹಾಡು ಗುಂಜಿಸಿಹುದು.

* * *

ಕಾಳರಾತ್ರಿಯಲಿ ಮಿಂಚು ಹೊಳೆದಂತೆ,
ಮರಣಗರ್ಭದಲಿ ಅಮೃತಶಿಶುವಂತೆ,
ಪಾಪಿಯಜಮಿಳಗೆ ಮೋಕ್ಷದೊರೆತಂತೆ,
ಕಠಿಣ ಶಿಲೆಯಲ್ಲಿ ಮೂರ್ತಿ ಕಡೆದಂತೆ,
–ಎತ್ತಣಿಂದಲೀ ಲಹರಿಯುನ್ಮೇಷ?
ಕರಿಯ ಕೋಗಿಲೆಗೆ ಸವಿಯ ಕೊರಳಂತೆ
ಗರಿಯ ನವಿಲಿಂಗೆ ಕುಣಿವ ಬೆಡಗಂತೆ,
ಮೊಲೆಯ ಮಾಂಸದಲಿ ಸೊದೆಯ ಹಾಲಂತೆ
ಕೊಲುವ ಕೋವಿಯಲಿ ಕಾವ ಗುಣದಂತೆ.
–ಎತ್ತಣಿಂದಲೀ ಲಹರಿಯುನ್ಮೇಷ?
ಮಣ್ಣಮುದ್ದೆಯಲಿ ಬೊಂಬೆ ಸಮೆದಂತೆ,
ಓಟೆ ತೂತಿನಲಿ ಸಪ್ತಸ್ವರದಂತೆ
ಕೊಳಕು ಗದ್ದೆಯಲಿ ಬೆಳೆಯು ಬಂದಂತೆ,
ಕೆಸರ ಕೊಳದಲ್ಲಿ ಕಮಲ ನಿಂದಂತೆ,
ಎತ್ತಣಿಂದಲೀ ಲಹರಿಯುನ್ಮೇಷ?

* * *

ಎಲ್ಲೊ ಹಿಂದುಗಡೆ ಯಾರೊ ಎಳೆಯುವರು
ಹಗ್ಗ ಜಗ್ಗಿಹಿಡಿದು;
ತೆರೆಯ ಮುಂದುಗಡೆ ವೇಷ ಕುಣಿಸುವರು
ಬೊಂಬೆಗುಂಟೆ ಬಿರುದು?
ಎನ್ನ ಪಾಲೊ, ಬರಿ ಸೊನ್ನೆ ಸೊನ್ನೆಯು,
ನೂರು ಸೊನ್ನೆ ವ್ಯರ್ಥ
ಅಂಕೆ ಬೆನ್ನೊಳಿರೆ ಸೊನ್ನೆಗೊ ಬೆಲೆಯು
ಇದುವೆ ಬಾಳ್ವೆಯರ್ಥ.
ಎನ್ನದೇನಿಲ್ಲ ಎಲ್ಲವೆಲ್ಲರದು
ಕೊನೆಗೆ ನಾನೆ ಇಲ್ಲ.
ನಾನೆ ಇಲ್ಲದಿಹ ಅರಿವು ಮೂಡಿತೆ?
ಮತ್ತೆ ಚಿಂತೆ ಸಲ್ಲ.
*   *   *
ಎದೆಯ ಕಾಮನೆಯು ಕವಿಯ ಭಾವನೆಯು
ಅಳಿಯದುಳಿವುದುಂಟು.
ರಾಗ ಮಿಡಿವುದು ಹಾಡು ನುಡಿವುದು
ಅರ್ಥವದಕೆ ನಂಟು;
ಅರ್ಥವಿಲ್ಲದಿರೆ ವ್ಯರ್ಥಜೀವನ
ತಿರುಳ ತಿಳಿದು ನೋಡು,
ಎನಿತುಯಿನಿದುಯೀ ತಂತಿ ರಾಗವು
ಕಣ್ಗೆ ಕಾಣಲರಿದು,
ಮಧುರಮಧುರವೀ ಕಾವ್ಯಯೋಗವು.
ಅಲ್ಲ ಮೆಲುಕು– ಬರಿದು!
*   *   *
ಎಂಥ ಸುಂದರದ ಸ್ವಪ್ನ ಸಂತೋಷ
ಎದೆಯ ತುಂಬುತಿಹುದು ?
ಎತ್ತಣಿಂದಲೀ ಲಹರಿಯುನ್ಮೇಷ
ತೇಲಿ ತೇಲಿ ಬಹುದು?
* * * *



## ಹಾಡುವ ಹಕ್ಕಿಗೆ

ಆತ್ಮಸಾಂದ್ರಾನಂದ
ಲಾಸ್ಯಲಹರಿಯ ಹಕ್ಕಿ
ಏನ ಜಾನಿಸಿ ಮುನ್ನ
ಹಾಡುತಿಹುದೋ? ॥೧॥

ಅವಿಷ್ಕೃತಾಮೋದ
ದಾವೇಗದಿಂ ಸೊಕ್ಕಿ
ಏತಕಣಕಿಸುತೆನ್ನ
ಕಾಡುತಿಹುದೋ? ॥೨॥

ಆದ್ಯಂತವರಿಯದಿಹ
ಸ್ವಪ್ನ ಸಂತಸವುಕ್ಕಿ
ತನ್ನ ತಾ ಮರೆವನ್ನ
ಹಾಡುಲಿಹುದೋ? ॥೩॥

ನಿನ್ನ ಬಳಿ ಬಹೆನೆಂದು
ತನ್ನ ನೆಲೆಯೊಳು ನಿಂದು
ಸನ್ನುತಿಯೊಳುನ್ನತನ
ಬೇಡುತಿಹುದೋ ॥೪॥

ಚಿಂತೆಸಂತೆಯನಿರಿಸ
ದುಃಖತಂತಿಯ ಮಿಡಿಸಿ
ವ್ಯರ್ಥಬಾಳದಿರೆಂದು
ಆಡುತಿಹುದೋ ॥೫॥

ಸ್ವರ್ಣಸುಖಕಿದೆ ರೀತಿ
ಪುಣ್ಯಪದಕವು ಪ್ರೀತಿ

ಜಯಜೀವನದ ಜ್ಯೋತಿ
ಜೋಡಿಸುವುದೊ ? ॥೬॥

* * * *

ಹಕ್ಕಿ ಹಾಡಲೆ ಹಾಡ
ಹಾಡಬೇಡನೆ ಮಾಡ
ಅಲ್ಲಿ ಜೋಡಿಸಿ ನೋಡ
ಧನ್ಯಜೀವಿಯ ಗೂಡ. ॥೭॥

* * * *

## ನೀನು ನನ್ನ ಭಾವನೆಯಲಿ

ಪ್ರೇಮಜಲತರಂಗದಲ್ಲಿ
ಅದರೊಳವಿತ ಭಾವನೆಯಲಿ
ಭಾವಿಸಿರ್ಪ ಎದೆಯ ತಳದಿ
ರಾಜ್ಯಕಟ್ಟಿ ನೆಲಸಿಹೆ ।
ಅಲ್ಲಿ ನಿನ್ನ ಅಮರಗಾನ,
ಇಂದು ಕಾಂಬೆನದರ ತಾಣ. ॥೧॥

ಎಂತೊ ಏನೊ ಏತಕೆಂದು
ತಿಳಿಯದೇ ಮುಂಬರಿಯಲೆಂದು
ದಾರಿ ಕಂಡು ಕಾಣದಾಗಿ
ಕುಗ್ಗಿ ಬಗ್ಗಿ ವ್ಯಥೆಯನಾಂತೆ;
ಆಗ ಕಂಡಿತೊಂದು ಥಳಕು,
ನಿನ್ನ ರಾಜ್ಯದೆಡೆಯ ಬೆಳಕು. ॥೨॥



ಮನದೊಳಾಸೆ ಮೂಡಲಾಗಿ
ಬೆಳಕು ಕಂಡ ಕಡೆಯ ಸಾಗಿ
ದಿಟ್ಟಿಯಿಟ್ಟು – ನೋಡುವಲ್ಲಿ
ಕಾಣದಾಯ್ತು – ಕತ್ತಲಲ್ಲಿ!
ಎದೆಯೊಳಾಸೆ ಮೂಡಿತು;
ನೋಡಲೊಡನೆ ಬಾಡಿತು. ॥೩॥

ಇಂತು ಬಹಳ ದಿನವ ಕಳೆಯೆ,
ಜೀವಿತವ ನಿರಾಶೆ ತನ್ನ
ಚಿಂತೆಗೋಲಿನಿಂದಲಳೆಯೆ,
ಇಂದು ಕಂಡೆ ನಿಜವ ನಿನ್ನ
ಇನ್ನು ನಿನ್ನ ಮಾಟದಾಟ
ಎನ್ನ ಬಗೆಯ ಬೆರೆಸದಿರಲಿ. ॥೪॥

ಎನ್ನೆದೆಯೊಳು ನಿನ್ನ ಕಂಡೆ–
ನೀಗ ನಿನ್ನೊಳಾನೆ ಬೆರೆತೆ;
ನೀನು ನನ್ನ ಭಾವನೆಯಲಿ.
ನಾನು ಜಲತರಂಗದಲ್ಲಿ.
ಮನದ ರಾಜ್ಯದಲ್ಲಿ ಸುಖಿಪ
ಧನ್ಯ ನಾನು ನಿನ್ನ ವೇಣು. ॥೫॥

* * * *

## ಬೆಳ್ಳಿ ಹಾಡು

ಬೆಳ್ಳಿ ಮೂಡುವ ಕಾಲವನೆ ಕಾದು ಕುಳಿತಿದ್ದೆ ।
ಕತ್ತಲೆಯ ಕೊಳೆ ತೊಳೆದು ಬೆಳ್ಳಿ ಬೆಳಗಿದುದು ॥

ಜಡ ಜೀವನಕೆ ಜ್ವರವು ಹಿಡಿದಿತ್ತು, ಬಿಡದಿತ್ತು,
ಅಡಸಿರಲು ವ್ಯಾಮೋಹ ಗಾಢತಮವು.
ತಡವಾದುದೆಚ್ಚರವು. ನೋಳ್ಪುದೇನಚ್ಚರಿಯು,
ಹೋಗಿತ್ತದೋ ಹೊತ್ತು–ಕತ್ತಲೆಯ ಸುತ್ತು ! ॥೧॥

ಎಂತು ಸಂತಸವಿತ್ತು, ಎಲ್ಲೂ ಉಲ್ಲಸವಿತ್ತು,
ಚೆಲುವೆ ಚೇತನಗೊಂಡು ನಲಿನಲಿಯುತಿತ್ತು;
ಹಾ ಹಂತ! ನಾನಂಥ ದಿನದೊಳೊರಗಿರಲೇಕೆ?
ಬೆಲೆಯುಳ್ಳ ಬಾಳುವೆಯ ಬರಿಗೊಳಿಸಬೇಕೆ ? ॥೨॥

ಹೋದ ಹಗಲಿನ ಹೊಳಪ ಕಂಡಿಲ್ಲ– ಮರವೆಯಲಿ
ಕರಗಿಹೋಯಿತು, ಪಾಪಿಯಾಯುಸ್ಸಿನಂತೆ;
ಇರುಳಿಡೀ ನಿದ್ರಿಸದೆ ಹೊರಳಿದೆನು ಹಾಸಿನಲಿ.
ಬರುವ ದಿನ ಸುದಿನವೆಂಬ ನಿರೀಕ್ಷೆಯಿಂದೆ ॥೩॥

ಕಳೆದ ಕಾಲವ ನೆನೆದು ಕಳವಳಿಸಿ ಫಲವಿಲ್ಲ,
ಬಿದ್ದ ಹಣ್ಣೆಂದಿಗೂ ಮರಳಿ ಮರಕಿಲ್ಲ;
ಸುದಿನ ಸೂರ್ಯೋದಯವ ಕಾಂಬ ನಂಬುಗೆಯೊಂದು,
ಬಗೆಯರಳಿರುವುದಿಂದು– ಬಾಳ್ವೆ ಹಿರಿದೆಂದು.

* * * *

## ಏಕೆ

ಕಾಣದಿಹ ದಾರಿಯಲಿ
ಮುಂದಿರುವ ಕಷ್ಟಗಳ
ಇಂದು ನೆನೆಯುತ ನೀನು ಮರುಗಲೇಕೆ? ॥೧॥

ಇಂದು ನಿನ್ನಯ ಗತಿಯ
ಜೀವನದ ಸಂಸ್ಕೃತಿಯು
ಬೆಂದೊಡಲ ಬೆಂಕಿಯಲಿ ದಹಿಸಲೇಕೆ ॥೨॥



ಸರಳತೆಯ ದಾರಿಯಲಿ
ಚಿಂತೆಸಂತೆಯನಿರಿಸಿ
ನಿತ್ಯದಾನಂದವನು ಕೆಡಿಸಲೇಕೆ ॥೩॥

ನಾಳೆಯೆಂಬುದು ವಿಕೃತಿ
ಇಂದು ಬಂದಿದೆ ಪ್ರಕೃತಿ
ಪ್ರಕೃತಿಯನು ವಿಕೃತಿಯೊಳು ಮುಚ್ಚಲೇಕೆ ॥೪॥

ನಾಳೆ ಸುಖವಿಲ್ಲೆಂದು
ಇಂದು ಚಿಂತಿಸಬೇಡ
ಇಂದಿನೊಳು ನಾಳೆಯನು ಬೆರೆಸಲೇಕೆ? ॥೫॥

ಈ ಕ್ಷಣವು ನಗುತಿರಲು
ಈ ದಿನವು ಸುಖವಿರಲು
ಬಾಳ್ವೆ ಬೆಳಗುವುದೆಂದು ಮರೆಯಲೇಕೆ ? ॥೬॥

ಕಾಣದಿಹ ದಾರಿಯಲಿ
ಮುಂದಿರುವ ಕಷ್ಟಗಳ
ಇಂದು ನೆನೆಯುತ ನೀನು ಮರುಗಲೇಕೆ?

* * * *

## ದಾರಿಗ

ಎತ್ತಣಿಂದೈತಂದೆ? ಗೊತ್ತುಗುರಿಯಿಲ್ಲದೆಯೆ
ಸುತ್ತಿಸುಳಿಯುತ್ತಿಹೆಯೆಲೋ ದಾರಿಗ ॥೧॥

ಆವನಾದೇಶಕಿಂತೀವಿಧದ ಭ್ರಮಣೆಯಿಂ
ನೋವನಾನುವೆ ಹೇಳೆಲೋ ದಾರಿಗ. ॥೨॥

ಕುಂಟುತ್ತೈದುವೆಯೇಕೆ? ನೆಂಟರಿಲ್ಲವೆ ನಿನಗೆ?
ಒಂಟಿಯಾಳಾಗಿಹೆಯೆಲೋ ದಾರಿಗ. ॥೩॥

ಭೂರಿ ಕತ್ತಲೆಯಲ್ಲಿ ! ತೋರುವವನಿಲ್ಲದಿರೆ,
ಸಾರಲೇಂ ಫಲವಿಹುದೆಲೋ ದಾರಿಗ. ॥೪॥

ಹೋಗೆಂದು ಹೇಳಿದನೆ ? ಆಗುಹೋಗುಗಳ ನೀ–
ನಾಗ ಚಿಂತಿಸಲಿಲ್ಲವೇ ದಾರಿಗ. ॥೫॥

ತನ್ನ ಬುದ್ಧಿಯ ಬಲದ, ಮುನ್ನಡೆಯುವಾ ಛಲದ
ಉನ್ನತಿಕೆಯಿಲ್ಲವಿಲ್ಲೇಂ ದಾರಿಗ. ॥೬॥

ನೇರಾದ ದಾರಿಯನು ಸೇರಲರಿವಿಹುದೇನು?
ಸಾರು ಸೇರ್ವೈಗುರಿಯನೇ ದಾರಿಗ. ॥೭॥

ಆದರಾಲಿಸು ಸೊಲ್ಲ. ಹೋದ ಹಾದಿಯದಲ್ಲ
ಸಾಧನೆಗೆ ಸಜ್ಜಾಗೆಲೋ ದಾರಿಗ. ॥೮॥

ಪೌರುಷ ಪರಾಕ್ರಮದಿ ವೀರ ! ಭವರಂಗದಲಿ
ಹೋರಾಡಿ, ಜಯಪದವಿ ಪಡೆ ದಾರಿಗ. ॥೯॥

ಕಟ್ಟು ಕೆಡಿಸಲು ಬಹುದು. ಗುಟ್ಟು ಗುಡಿಸಲು ಬಹುದು;
ಕಷ್ಟಗಳ ನೀಗಿ ಸಾಗೈ ದಾರಿಗ. ॥೧೦॥

ಬೆಂದು ಬಾಡಿದ ಜೀವ ಎಂದು ನೀಗಲಿ ನೋವ ?
ಹೊಂದು ನೀ ಸುಖಭಾವ ನಡೆ ದಾರಿಗ. ॥೧೧॥

ಕೊನೆಗಾಣಲೀ ಪಥದಿ ಘನದ ಕಾರ್ಯವನೇನ
ನೆನೆದಿರುವೆ? ತಿಳಿದಿಲ್ಲವೇ ದಾರಿಗ. ॥೧೨॥



ಎಲ್ಲವನು ತಿಳಿದಾತನಲ್ಲೋರ್ವನಿಹನೆಂದು
ಬಲ್ಲವರು ಹೇಳುವರು– ಕೇಳ್–ದಾರಿಗ. ॥೧೩॥

ಆತನಿದ್ದರೆ, – ಕೇಳು; ಏತಕೆಂದೀ ಬಾಳು ?
ಭೀತಿಯಂ ಬಿಟ್ಟೇಳು, ನಡೆ ದಾರಿಗ. ॥೧೪॥

ಕೇಳಿ ಕಲಿತೆಲ್ಲವನು, ಬಾಳ ಬೆಳಗಲು ಬಲಿತ
ಆಳಾಗಿ, ಬಾ ಮರಳಿ, ನಡೆ ದಾರಿಗ. ॥೧೫॥

* * * *

## ಪಥಿಕ – ಯುವಕ

ಕತ್ತನೆತ್ತಿ ನಡೆಯುತಿರಲು
ಸುತ್ತು ಮುತ್ತು ನೋಡದಿರಲು
ಎಡವಿ ಬಿದ್ದರೇನದೊಮ್ಮೆ?
ಅಡಗದಂದು ನಡೆವ ಹೆಮ್ಮೆ,
ಪಥಿಕ, ದಾರಿಬಿಡದೆಯೆ
ಮೊದಲ ಬಾರಿ ಕೆಡೆದೆಯೆ ?
(ಹೋಗು ಸಾಗು ಬೆಚ್ಚದೆ;
ಎದೆಯ ಧೃತಿಗೆ ಮೆಚ್ಚಿದೆ.)

* * *

ಬಾಳಬೆಳಕು ಬೆಳಗಲೆಂದು
ಮನದಿ ಹುಚ್ಚು ಹೆಚ್ಚಿದಂದು
ಊದ ಹೋಗಿ ಮುಖಕೆ ಸಿಡಿದ
ಬೆಂಕಿ ಕಿಡಿಗೆ ಬೆಂಕೆವಡೆದ
ಯುವಕ ನಿನ್ನ ಸಾಹಸವನು

ನೆನೆಯುತನಿಶ ಮೋಹಿಸುವೆನು.
(ಅಪ್ಪುದೆಂದು ತಪ್ಪದು;
ತಪ್ಪದಂದು ಒಪ್ಪದು.)

* * * *

## ಬದುಕು

ಜೀವನದ ಕಲ್ಪತರು ಪಡೆದನುಭವದ ಫಲವು
ಸಿಹಿಯೊ ಸಿಹಿ ! ಬೇರೇನು ಹೇಳಲೊಲ್ಲೆ;
ಬಾಳುವೆಯ ಬಟ್ಟಲಲಿ ನಂಜೆರೆದು ಕುಡಿಯೆನಲು,
ಕಹಿಯೆನದೆ ಕುಡಿಕುಡಿದೆ? ಬದುಕಬಲ್ಲೆ ॥೧॥

ಬದುಕು– ಮಾನವನೆದೆಯೊಳಡಗಿದಾಶಾಜ್ಯೋತಿ !
ಅದು ನಂದಿದಂದು ಬಲಗುಂದಲಿಹುದು;
ಬೆಳಕೆತ್ತಿ ಹಿಡಿದಂದು, ಮನುಜ ಬದುಕಿರುವಂದು,
ಹಾರಾಟ ಹೋರಾಟ ಹಲವಿರುವುದು. ॥೨॥

ಬದುಕಬೇಕೆಂದೆನುವ ಬಯಕೆಯೊಂದಿಲ್ಲದಿರೆ,
ಬಾಳ್ಗೆ ಪೌರುಷವಿಲ್ಲ– ಪಂಥವಿಲ್ಲ;
ಸಾಣೆ ಹಿಡಿಯದ ವಜ್ರ, ಮಸೆಯದಲಗಿನ ಮೊನೆಯು,
ಬೆಳಗಲಿಲ್ಲ– ಹರಿತವಾಗಲೊಲ್ಲ ! ॥೩॥

ಬದುಕು ಭಾಗ್ಯದ ನಿಧಿಯು, ಕಾಪಿಡುತಿಹರು ಕೆಲರು,
ಕಾಡುತಿಹ ಖಳರಿಹರು, ಸುತ್ತಿ ಮುತ್ತಿ;
ಹೊಗಳಿಕೆಗೆ ಹಿಗ್ಗದೆಯ ತೆಗಳಿಕೆಗೆ ತಗ್ಗದೆಯೆ,
ನಿಧಿ ಸೂರೆಯಾಗದೆಯೆ– ಬಾಳ್ದೆ, ತೃಪ್ತಿ ! ॥೪॥

* * * *



## ಕೆಸರು ಚೆಲ್ಲುವ ಕೆಲರ ನಡುವೆ

ಬಿಳಿಯ ಬಟ್ಟೆಯನುಟ್ಟು
ಎದೆ ಚಾಚಿ ಮುನ್ನಡೆವ,
ಯುವಕ, ಮೆಚ್ಚಿದೆ ನಾನು – ಮೈಮರೆಯಬೇಡ;
ಮತ್ಸರವು ಮನದಲ್ಲಿ
ಕೊಳೆಕೆಸರು ಕೈಯಲ್ಲಿ
ಕಣ್ ನಿನ್ನ ಮೈಯಲ್ಲಿ – ಸುತ್ತಲುಂ ನೋಡ ! ॥೧॥

ಸುತ್ತು ಲೋಕವ ನೋಡಿ,
ಹತ್ತು ಜನರೊಡಗೂಡಿ,
ಗುಣವಂತ ಘನವಂತನೆನಿಸಿಕೊಂಡಿರುವೆ;
ಹಿಗ್ಗದಿರು ಚೆಂಡಿನೊಲು,
ತಗ್ಗದೆಯೆ ನೀ ಬಾಳು,
ಕೆಸರು ಚೆಲ್ಲುವ ಕೆಲರ ನಡುವೆ ನಿಂತಿರುವೆ ! ॥೨॥

ತಿರುಪತಿಯ ಬೆಟ್ಟಕ್ಕೆ
ಪುಣ್ಯಮಯ ಪಟ್ಟಕ್ಕೆ
ಏರುತೇರುತ ಮುಂದೆ ಸಾರಿ ಹೋಗುತಿರೆ;
ನಿನ್ನ ಜತೆಗಿದ್ದವನು,
ಬೆನ್ನ ಹಿಂದಿದ್ದವನು
ಏರಿ ಸೋತಿರೆ ಹಿಂದಕೆಳೆವ ನೋಡದಿರೆ ॥೩॥

ಹಸಿರುಬೆಳೆ ಹೊಲವನ್ನು
ಪಶುಜಾತಿ ನೋಳ್ಪಂತೆ,
ನಿನ್ನ ಕೀರ್ತಿಯ ಕಂಡು ಕಣ್ಬಿಡುವರು;
ದೃಢವಾದ ದೇಹವನು
ರೋಗಾಣು ಕೆಡಿಪಂತೆ,
ಬಾಳುವೆಯ ಬಟ್ಟಲಲಿ ನಂಜೆರೆವರು ! ॥೪॥

ಕೊಳಕು ಜನರಿಹರೆಂದು
ಕೊಳೆಬಟ್ಟೆಯುಡಬೇಡ
ತಲೆಯ ತಗ್ಗಸಬೇಡ ಧೀರ ಯುವಕ !
ಬಿಳಿಯ ಬಟ್ಟೆಯುನ್ನುಟ್ಟೆ
ಎದೆಚಾಚಿ ಮುನ್ನಡೆದೆ
ತುಂಬಿದಾಯುಷ್ಯದಲಿ – ಬಾಳಿ ಬದುಕ. ॥೫॥

* * * *

## ಅಭಿನ್ನ

ಬಾನು ಬುವಿಯು ದೂರೆಂದು ದೂರುವರು
ಶ್ರೀದಿಗಂತ ಕಂಡಿಹರೆ?
ಪ್ರಕೃತಿ ಪುರುಷ ಬೇರೆಂದು ಸಾರುವರು
ಪ್ರೇಮಸುಧೆಯನುಂಡಿಹರೆ? ॥೧॥

ಕಡಲು ನೀರೊರತೆ, ಪೊಡವಿ ಮಣ್ಣೆಲ್ಲ
ದಡವ ತೆರೆಗಳಪ್ಪುತಿವೆ,
ಗಿರಿಯ ಘನಭಾರ ಧರೆಯ ಹೊರಬಲ್ಲ
ಶಿರದಿ ಪುಲ್ಗಳೊಪ್ಪುತ್ತಿವೆ ॥೨॥

ಎನಿತು ರೂಪವನಿತಿದೆ ವಿರೂಪವು
ಬೆಳಕು ಕತ್ತಲೆಗಳಂತು;
ಕೃಷ್ಣವೇಣಿ ಗೌರಾಂಗಿಗೊಪ್ಪಲು
ಚೆಲುವೆ ಚೆಲ್ಲಿಹುದು ಮತ್ತು. ॥೩॥

ಸುತ್ತು ಜಗಿಯುತಿಹ ಹರಿತ ಹಲ್ಲುಗಳು
ಮಧ್ಯ ನಾಲಿಗೆಯ ಸುಳಿವು.
ನಾಲ್ಕು– ಗೋಡೆಯೆಡೆ ಕಂಬ ಕಲ್ಲುಗಳು
ಮುದ್ದು ಮೂರುತಿಯ ನಿಲುವು. ॥೪॥



ಎಷ್ಟು ದ್ವೇಷವಿದೆ ಅಷ್ಟೆ ತೋಷವು
ಕಾಂತ ಕಬ್ಬಿಣದ ಕೂಟ ;
ಲಜ್ಜೆ ಮೊಗವಿರಲು ಸಜ್ಜೆ ಸೊಗವಿರಲು
ಸತಿಯ ಬೇಟ ರಸದೂಟ ॥೫॥

ಕುಂಭಕರ್ಣ ದಶಕಂಠ ಶೂರ್ಪನಖೆ
ಲಂಕೆಯಲ್ಲಿ ಮಯತನಯೆ:
ಮುಳ್ಳು ಮೊಸಳೆ ಕೆಸರಿಡಿದ ಕೆರೆಯ ಕಡೆ
ನಿಲ್ಲು– ತಾವರೆಯ ಮನೆಯ ! ॥೬॥

ಅಳವೆಷ್ಟಿಹುದೊ ಅಗಲಷ್ಟಿಹುದು
ಜಲಧಿಗದುವೆ ಗಾಂಭೀರ್ಯ;
ಮೇಲೆಯೆತ್ತಲು ಕೆಳಗೆವೊತ್ತಲು
ಶ್ರೀ ತ್ರಿವಿಕ್ರಮನ ಶೌರ್ಯ. ॥೭॥

ಅಣುವಿಗಿಂತಲಣು ಮಹತಿಗಿಂ ಮಹತು
ದೇವರಿದ್ದು ಕಂಡಿಲ್ಲ !
ಸಸ್ಯಶ್ಯಾಮಲೆಯು ಸುಜಲೆ ಸುಫಲೆಯು
ಅಕ್ಕಿಯಿದ್ದುವುಂಡಿಲ್ಲ ! ॥೮॥

ದೇಶ ಕೋಸಲದಿ ರಾಜ ದಶರಥ
ಕೈಕೆ ಮಂಥರೆಯರಲ್ಲಿ;
ನಾ ಸ್ವತಂತ್ರನು ನಾ ಸುಮಂತ್ರನು
ದೂರು ಸೇರುತಿದೆ ಡಿಲ್ಲಿ. ॥೯॥

ಕೆಂಪು ನೆತ್ತರಿನ ಮಾಂಸ ಮುದ್ದೆಯಲಿ
ಕೆಚ್ಚಲೊಳಗೆ ನೊರೆಹಾಲು;
ಗುಂಡಿ ಗೊಬ್ಬರದ ಹೊಂಡ ಗದ್ದೆಯಲಿ
ಹಚ್ಚ ಹಸಿರು ತೆನೆ ಕಾಳು. ॥೧೦॥

ಪುಣ್ಯಕೋಟಿ ಪಶು, ವ್ಯಾಘ್ರನರ್ಬುದನು
ಹೃದಯಸಂಪ್ರೀತಿ ಹೆಚ್ಚೆ;
ಅಣ್ಣ ತಂಗಿಯನು ಕೊಂದು ತಿಂದನೆ ?
ದೇವದೇವಗದು ಮೆಚ್ಚೆ ? ॥೧೧॥

ವಿವಿಧ ರೀತಿಗಳ ವಿವಿಧ ನೀತಿಗಳ
ವಿವಿಧ ಜನರ ಜಗವೊಂದೆ !
ಈ ಪ್ರಕಾರಗಳು ಯೀವಿಕಾರಗಳು
ಭಿನ್ನವಲ್ಲ ಬುಡವೊಂದೆ. ॥೧೨॥

ಕೋಟಿಯೆದೆಗಳೊಕ್ಕೂಟವಾಗಲಿ
ಸುಮನಮನಗಳರಳಿರಲಿ ;
ಕಾಲಕೂಟದುರಿಯಿಂದ ಬೆಂದರೂ
ಕೊನೆಗೆ ಸೊದೆಯ ಸೊಗವಿರಲಿ ! ॥೧೩॥

* * * *

## ಹಣತೆ ಹಚ್ಚು

ಕಾಲಕಾಲಕೂ ಬೆಂದ ಭೂಮಿಗದೆ
ಮಳೆಯ ಬೆಳೆಯ ಸಿರಿನೋಟ ;
ವರ್ಷವರ್ಷಕೂ ನೊಂದ ಜೀವಕಿದೆ
ಹಬ್ಬ ದಿಬ್ಬಣದ ಕೂಟ. ॥೧॥

ಕಾರತಿಂಗಳಿನ ಘೋರರಾತ್ರಿಗೂ
ವಿದ್ಯುದುನ್ಮೇಷಬಹುದು ;
ದೂರ ಸಹರದಾ ಮರುಧರಿತ್ರಿಗೂ
ಪವನ ಪುಲಕಸುಖವಿಹುದು. ॥೨॥



ಉತ್ತುಬಿತ್ತು ಬೇಸತ್ತ ರೈತನಿಗೆ
ಹಿಗ್ಗು ಕೊಯ್ಲು ದಿನವೊಮ್ಮೆ ;
ಓದಿ ಓದಿ ಓದಿಸಿದ ಓಜನಿಗೆ
ಚಟ್ಟ ಗಟ್ಟಿಗನೆ ಹೆಮ್ಮೆ ! ॥೩॥

ಗಹನಗಹ್ವರದ ನಿಬಿಡಮಧ್ಯದಲಿ
ಕರಿಯ ಕೋಗಿಲೆಯ ಹಾಡು ;
ಕೆಸರತಳದ ಕೊಳೆನೀರ ಹೊಂಡದಲಿ
ನೂರು ದಳದ ಹೂ ನೋಡು ॥೪॥

ಹೊತ್ತ ಬಳಲಿಕೆಯ ಹೆತ್ತ ನರಳಿಕೆಯ
ಪುತ್ರಮುಖವು ಮಾಯಿಸದೆ ?
ದೇಹದಂಡನೆಗೆ ದಾಹಗೊಂಡವಗೆ
ಕುಡಿತೆ ನೀರು ಸೊಗಯಿಸದೆ ? ॥೫॥

ಉಪ್ಪು ಕಡಲಿನಲಿ ಚಿಪ್ಪಿನೊಡಲಿನಲಿ
ಸ್ವಾತಿಹನಿಯೆ ಮಣಿ ಮುತ್ತು :
ದುಃಖ ಹೃದಯದೊಳು ಉಕ್ಕಿಬಂದಿರಲು
ಪ್ರೀತಿ ಮಾತೆ ಸೊದೆಬಿತ್ತು ! ॥೬॥

ನೂರು ಯೋಜನದ ದೂರ ಯಾತ್ರಿಕಗೆ
ಚಾರುಚಂದ್ರಿಕಾ ಶಾಂತಿ;
ಊರ ಹೊರಗೆ ತಳ್ಳಿರುವ ಹೊಲೆಯನಿಗೆ
ಶಿವನೆ ಶರಣು– ಗತಿ ನಾಸ್ತಿ ॥೭॥

ಹಾವೆ ಹಗ್ಗ, ಮಂಥರವೆ ಮಂತು, ನೊರೆ
ಕಾಲಕೂಟ– ಸೊದೆ ಬಂತು !
ಮನವು ಮನೆಯು ಜೀವನವು ಕತ್ತಲು
ಹಣತೆ ಹಚ್ಚು– ಸೊಗವಿಂತು ॥೮॥

ಕಷ್ಟ ಕಂಟಕದ ಬಾಳದಾರಿಯಲಿ
ಧೈರ್ಯದಂಡ ಹಿಡಿ ನಡೆಗು;
ಬೇನೆಬೇಗುದಿಯೊ, ಸಾವು ಸಂಕಟವೊ,
ತಲೆಯನೆತ್ತಿ ನಡೆ– ಕಡೆಗು ! ॥೯॥

* * * *

## ಹೊಸ ಹಾಡು

ನವಭಾವ–ನವಜೀವ–ನವಶಕ್ತಿ ತುಂಬಿಸುವ
ಹಾಡೊಮ್ಮೆ ಹಾಡಬೇಕು;
ತೀವ್ರತರ ಗಂಭೀರ ಭಾವನೆಯ ತೆರೆಮಸಗಿ
ವೀರಧ್ವನಿಯೇರಬೇಕು; ॥೧॥

ಜಾತಿ–ಕುಲ–ಮತ–ಧರ್ಮಪಾಶಗಳ ಕಡಿದೊಗೆದು
ಎದೆಹಿಗ್ಗಿ ಹಾಡಬೇಕು;
ಯುಗಯುಗಗಳಾಚೆಯಲಿ ಲೋಕಲೋಕಾಂತದಲಿ
ಆ ಹಾಡು ಗುಡುಗಬೇಕು : ॥೨॥

ಉನ್ನತೋನ್ನತ ಘನಹಿಮಾದ್ರಿ ಶಿಖರವನೇರಿ
ಹಾಡಲ್ಲಿ ಹಾಡಬೇಕು;
ಹಾಡುನುಡಿಗುಂಡುಗಳು ಹಾರಿ ದಶದಿಕ್ಕಿನಲಿ
ಭಯವ ಬೆನ್ನಟ್ಟಬೇಕು; ॥೩॥

ಗಂಡೆದೆಯ ಗರ್ಜನೆಗೆ ಮೂಹತ್ತು ಮೂರ್ಕೋಟಿ
ಕಲಕುಂಠ ಬೆರೆಸಬೇಕು ;
ಭೂಮ್ಯಂತರಾಳದಲಿ ನಭಚಕ್ರಗೋಳದಲಿ
ಮಾರ್ದನಿಗಳೇಳಬೇಕು ॥೪॥



ಜಡನಿದ್ರೆ ಸಿಡಿದೆದ್ದು ವೀರಾಟ್ಟಹಾಸದಲಿ
ಬಾನು ಬುವಿ ಬೆಳಗಬೇಕು;
ನಡೆನುಡಿಗಳೆಡೆಯಲ್ಲಿ, ಪದತಾಳ ಗತಿಯಲ್ಲಿ
ಕ್ರಾಂತಿಕಿಡಿ ಕೆರಳಬೇಕು : ॥೫॥

ಅಳಿದುಳಿದ ಭವ್ಯತೆಯ ರುದ್ರಶಿಖಿಯುಜ್ವಲಿಸೆ
ಹಾಡುತಿದಿಯೊತ್ತಬೇಕು :
ದಿವಸ ದಿವಸಗಳಿಂದ ಮನದಿ ಮರುಗುತಲಿದ್ದೆ
ಹಾಡಿಂತು ಹಾಡಬೇಕು. ॥೬॥

ಎನ್ನ ಪಾಡಿಗೆ ದುಃಖ ತಾಯಿಗಿದು ಹಿರಿಮರುಕ
ನಾನಿದನು ಸಹಿಸಲೆಂತು ?
ಎನ್ನಕೃತಿಯಪಮಾನ ದೇವಿಗಿದೆ ದುಮ್ಮಾನ
ನಾನಿದನು ನೋಡಲೆಂತು ? ॥೭॥

ಜಯಜನನಿ, ಶಿರವೆತ್ತಿ ವೀರಭರವಸೆಯಿಂದ
ಹೊಸ ಹಾಡ ಕೇಳಿ ನೋಡು:
ಇದೊ ಮೊದಲು, ಮುನ್ನಿಲ್ಲ– ಮುಗಿದುದಂದಿನ ಪಾಡು,
ಹೊಸತಿಂದು ಹೊಸತು ಹಾಡು. ॥೮॥

* * * *

## ಕವಿ–ಕೃತಿ

ಕಲ್ಪನಾಮಹಿಮಾವಿಮಾನಯಾನವನೇರಿ,
ಪ್ರತಿಭಾಲಸಲ್ಲಹರಿ ರಶ್ಮಿರಾಶಿಯ ಬೀರಿ,
ಭೂವ್ಯೋಮ ಜಲಧಾಮ ಭೂಮಸಂದರ್ಶನದಿ,
ಲೋಕಾಂತ ರೋದೋಂತ ನಾಕಾವಲೋಕನದಿ
ವಿಪುಲ ವಿಭವಾನುಭವಿ ;
ಸಕಲ ಸಾಧಕ ಜೀವಿ.

೨

ಉನ್ನತೋನ್ನತದ ಪರಮೋನ್ನತಿಯ ಮುಟ್ಟುತಲಿ,
ಅಂತರಂತರದಂತರಾಳದಲಿ ಸುತ್ತುತಲಿ,
ದಿಗ್ದಿಗಂತಗಳಂಚು ಮುಂಚಿ ಮೈಚಾಚುತಲಿ,
ಕಾಲಗರ್ಭದಗಾಧತೆಯ ತಳವ ಬಾಚುತಲಿ,
ಬಳೆದಿಹ ತ್ರಿವಿಕ್ರಮಂ
ತವಪದೋಪಕ್ರಮಂ.

೩

ನೀಲಿಮಾಕಾಶ ಸುವಿಶಾಲ ವಕ್ಷೋದ್ಭಾಸಿ,
ಕೋಟಿತಾರಾನಿಕರ ಚಂಡರುಚಿ ಶೀತಶಶಿ,
ಆಕರ್ಷಿತಾನ್ಯೋನ್ಯ ಚೈತನ್ಯ ಗ್ರಹಚಕ್ರ,
ಉದಯಾಸ್ತಮಾನ ಮಧ್ಯಾಂತರಿತ ದಿನ ರಾತ್ರ,
ವಿಶ್ವದ ವಿಶೇಷಗಳು
ತವ ನವೋನ್ಮೇಷಗಳು.

೪

ಮಧುರ ಮಧುಮಾಸ ಮದಮತ್ತ ಜೀವಿತಹರ್ಷ
ವಿದ್ಯುತ್ಪ್ರಭಾಮೇಘ ನಿರ್ಘೋಷಮಯ ವರ್ಷ
ಹಿಮಸಮಾಧಿಸ್ಥ ಹೇಮಂತಮುನಿ ಭವ್ಯತಾ
ಸಾರ್ವರ್ತುಕಂ ಸರ್ವಕಾಲೀನ ನವ್ಯತಾ
ತವದಿವ್ಯದರ್ಶನಂ
ಚಿರಕಾವ್ಯ ಚಿತ್ರಣಂ.

೫

ಅಣುಘನಂ ಕ್ಷಣಯುಗಂ ವಿಫಲಸಾಫಲ್ಯಗಳು,
ತನುಮನಂ ಜನಜಗಂ ವಿಕಲಸಾಕಲ್ಯಗಳು,
ದುಃಖಸುಖ ಭೋಗಯೋಗಂ ಬಂಧಮೋಕ್ಷಗಳು
ಜನನಮರಣಾದ್ಯಂತದಾಶಾ ನಿರಾಶೆಗಳು



ಈ ಪ್ರಕೃತಿ ವಿಕೃತಿಗಳು,
ತವಸೂಕ್ಷ್ಮ ಸಾಕ್ಷಿಗಳು.

೬

ಮೃಣ್ಮಯ ಜಡಾದ್ರಿಯಿಂ ಸ್ವರ್ಣನದಿಯಿಳಿಯುವುದು
ಅಂಧಂತಮಸ್ಸಿನಲಿ ಚಿತ್ಪ್ರಭೆಯು ಹೊಳೆಯುವುದು,
ಪಾತಾಳ ಪಾಪಕೂಪದಿ ಪುಣ್ಯವೊಸರುವುದು,
ವಿದ್ವೇಷವಿಷವಲ್ಲಿ ಪ್ರೇಮಸುಮರವರಿಳಿಪುದು,
ತವಸುಖಸ್ಪರ್ಶನಂ;
ವಿದ್ಯುದಾಲಿಂಗನಂ.

೭

ಜೀವಲೋಕದ ತಾನ, ದೇವಲೋಕದ ಗಾನ,
ಹೇವಿಶ್ವಕವಿ! ನಿನ್ನ ಕೃತಿಯಲಂಕೃತಿಪೂರ್ಣ;
ರಸಭಾವಸಂಪನ್ನವೀ ಸೃಷ್ಟಿ ಸಂತಾನ,
ಇದೆ ತವ ಮಹಾಕಾವ್ಯ– ಶಾಶ್ವತ ನವನವೀನ !
ಕವಿ ನೀನೆ ನಿತ್ಯಂ;
ನಿನ್ನ ಕೃತಿ ಸತ್ಯಂ.

* * * *

## ಉನ್ಮುಖವಿಲಾಸಿ

ಗಗನದೆತ್ತರಕೆ ನೆಗೆವ ಜೀವವೇ,
ಉನ್ಮುಖವಿಲಾಸಿ ಮನವೆ !
ನಮನ ನಿನಗೆ, ಕವಿನಮನ ನಿನಗೆಯೀ
ವಿಶ್ವವಿಜಯ ಸಾಹಸಕೆ. ॥೧॥

ಗೋಳ–ಗೋಳಗಳ ದಾಂಟು ವಿಕ್ರಮದಿ
ನೀನಸೇತುಸಂಚಾರಿ;
ಏರು ಮೇರುಗಿರಿ, ಸೇರು ಗರುಡಗುರಿ
ಹಾರು ನಿರ್ವಾಯ ಸೇರಿ. ॥೨॥

ಅಪ್ಪಳಿಸುವ ನೊರೆತೆರೆಯ ಮೇಲುಗಡೆ
ವಾತ ಶೀತಳಕೆ ಮೆಚ್ಚಿ,
ಸುಡುವ ಸೂರ್ಯಬಿಂಬಕ್ಕೆ ಕೀಳುಗಡೆ
ಬೆಂಕಿಯಿಂದ ಬಿಸಿಹೆಚ್ಚಿ ॥೩॥

ಬಿದ್ದೆಯೋ ನೀನು ! ಭೋರ್ಗರೆವ ಕಡಲು
ಆಳವರಿಯದಾಳಕ್ಕೆ !
ಅಲ್ಲಿ– ತಿಮಿತಿಮಿಂಗಿಲದ ಜತೆ ಮಲಗು,
ಶಾಂತಿಯೆನಿತು ಸಾವಿಂಗೆ ! ॥೪॥

ಸತ್ತರೂ ಬದುಕೆ ! ವೀರಮರಣದಲಿ
ಅಪ್ಸರೆಯರ ವರಮಾಲೆ;
ಹೇಡಿಗಳಿಗುಂಟೆ ಸುಖದ ತೊಟ್ಟಿಲಲಿ
ಸ್ವರ್ಗ ಸೇರುವಾ ಲೀಲೆ ? ॥೫॥

ಎದ್ದೆಯ್ಯೆ ನೀನು ! ಮೃತ್ಯು ಮುಖದಿಂದ
ಬಂದ ನಚಿಕೇತನೆಂದೆ ;
ನಿನ್ನ ನಿರಶನಕೆ ಚಕಿತ ಯಮನೆಂದ ;
ನೀ ಚಿರಂಜೀವಿ ಮುಂದೆ. ॥೬॥

ಉಂಟೆ? ಇಲ್ಲವೆ? ಈ ಚಿರಪ್ರಶ್ನೆ
ಬಿಡಿಸಿ ಹೊಡೆದೆ ಜಯಭೇರಿ,
ಪಂಚಭೂತ ಪಂಚೇಮದ್ರಿಯಂಗಳನು
ಗೆದ್ದೆ ಖೇಚರವಿಹಾರಿ ! ॥೭॥



ಚಂದ್ರಮಂಗಳರ ಸುತ್ತು ಧಾವಿಸಿದೆ
ಲಕ್ಷನಕ್ಷತ್ರ ಶೋಭೆ–
ಕಂಡು, ರೋಮಾಂಚಗೊಂಡು ಮೈಮರೆದೆ :
ಧನ್ಯಜೀವಿ ನೀನೆಂಬೆ ॥೮॥

ನಾಕ–ಲೋಕ–ಸೋಪಾನ ಸಾಧಿಸಿದೆ
ಕೀರ್ತಿಧವಳಗಜಯಿಳಿಸೆ,
ನೆಲದ ತಾಯಿ ನೋಂತಿರುವ ನೋಂಪಿಯಿದು
ನಿನ್ನ ವಿಜಯವನೆ ಮೆರೆಸೆ, ॥೯॥

ನೀರಿನಾಳವನು ಕಡೆದ ಕಲಿತನಕೆ
ಅಮೃತಕುಂಭವದೊ ಕಾಣ್ಕೆ ;
ವಾಯುಗರ್ಭ ಶೋಧಿಸಿದ ಸಾಹಸಕೆ
ಸೃಷ್ಟಿದಿವ್ಯತೆಯ ತೋರ್ಕೆ ॥೧೦॥

ನಿನ್ನ ಪ್ರೇಯಸಿಯ ಬಿಟ್ಟು ನೀ ನಡೆದೆ
ಜಗದ ಶ್ರೇಯಸಿನ ಕಡೆಗೆ
ಮೇಲುಲೋಕವನು ತೇಲಿಬಂದವನು
ಕವಿಯ ನಮನವಿದೊ ನಿನಗೆ ! ॥೧೧॥

ಹೊಸತು ಯುಗದ ಕರ್ತಾರ ನೀನಲ್ತೆ
ವಿಜ್ಞಾನ ನಿನ್ನ ದೃಷ್ಟಿ;
ಗಾಳಿ–ಬೆಳಕು–ನೆಲ–ಜಲವು ಗಗನತಲ
ವಶ್ಯ ನಿನಗೆ ಸೃಷ್ಟಿ ! ॥೧೨॥

ಊರಿಬಂದಿರುವೆ ಹಸಿರು ಬಾವುಟದ
ಶೂನ್ಯಗಗನದಲಿ ಶೂರ !
ಲೋಕ ಬೆರಗಾಯ್ತು ವಿಶ್ವವಿಜಯದಲಿ
ಶಾಂತಿಸಂದೇಶ ಸಾರ. ॥೧೩॥

ಬರುವ ದಿನದ ವಿಭು ಗಗನವಿಜ್ಞಾನಿ !
ಅರಿವೆ ಹಿರಿಯ ಗುರುವು ;
ಕಣ್ಣಿದ್ದು ಕುರುಡು, ಕಿವಿಯಿದ್ದು ಕಿವುಡು,
ಅಜ್ಞಾನಿಗಿಲ್ಲ ದಿನವು. ॥೧೪॥

ನೀ ಪಾರದರ್ಶಿ, ನೀನೆ ಪರಮರ್ಷಿ
ಇದೆ ತಪಶ್ಚರ್ಯೆ ನಿಜಕು;
ಪಂಚಾಗ್ನಿ ಮಧ್ಯೆ ನೀನುರಿದುಯೆದ್ದೆ !
ಎದೆಯ ಬೆಂಕಿಯೇ ಬೆಳಕು ॥೧೫॥

ಈ ವಸುಂದರಾ ರತ್ನಗರ್ಭದಿಂ
ಪುಣ್ಯ ಪಿಂಡವಂ, ಹೊತ್ತು
ಏರಿ ದಿವದೊಂದು ದಾರಿಯಲಿ ನಡೆದೆ,
ಧೀರ ನೀನೆಯೀ ಹೊತ್ತು ! ॥೧೬॥

ಆಕಾಶಬಟ್ಟೆ ಮೈಮರೆದು ಸುತ್ತಿ
ಗ್ರಹ ತಾಳಮೇಳ ಹೂಡಿ :
ಧೀಶಕ್ತಿ ಕಾಂಬ ದೀವಿಟಿಗೆಯೆತ್ತಿ,
ಬಯಲಾಟ ಗೈದೆ ಕೂಡಿ. ॥೧೭॥

ಬಿದ್ದಲ್ಲಿ ಬಿದ್ದು ಕೊಳೆಯಾಗಬೇಡ,
ಹಂದಿ ಹಿಂಡಿನಂತೆ !
ಮೃಗರಾಜನೆನಿಸಿ ಮೈಮುರಿದು ನೋಡ,
ಹೋಗು ದೂರ ಮುಂತೆ ! ॥೧೮॥

ಹುಚ್ಚಿ ಗುಬ್ಬಚ್ಚಿ, ಬೆಚ್ಚಿ ಬೀಳದಿರು
ಗರುಡಗಮನವದುವೆ !
ಮಂದೆ ಮುಂದೆ ಮುಂದೊಂದುದಿನ ಬಹುದು
ಹಾರೈಸು ಮೇಗೆ ನೆಗೆವೆ. ॥೧೯॥



ಘೂಕಲೋಕವೇ, ಕಣ್ಣು ಮುಚ್ಚಿಕೊಳಿ
ಬೆಳಕು ಬಹಳ ಕಷ್ಟ;
ಮಿಂಚಿನಲ್ಲಿ ಮಿಂದವರು ಹೋಗಲಿ
ನಿಶೆಯೆ ನಿಮಗೆ ಇಷ್ಟ. ॥೨೦॥

ಬಾವಿಕಪ್ಪೆಯೆ, ಕೊಳಕು ಹೊಂಡದೊಳೆ
ಕೆಸರ ಕುಡಿದು ಹಿಗ್ಗು.
ಹೊರಗೆಯೇನು ನಡೆದಿದ್ದರೇನಂತೆ
ತರಗಿನಡಿಗೆ ನುಗ್ಗು. ॥೨೧॥

ತಗ್ಗಿದವರು ಮೇಲಾಗಲಿಲ್ಲ ಮಗು,
ಬಗ್ಗಿದವಗೆ ಗುದ್ದೊಂದು ;
ತಲೆಯನೆತ್ತಿ ನಡೆ, ನೀನು ಬೆಳಕಿನೆಡೆ,
ಜಾಡ್ಯ ಹೊಡೆದು ಹಾಕಿಂದು. ॥೨೨॥

ಹರಕುಮನೆಯೆಲ್ಲ ಮುರಿದುಹೋಗಲಿ
ತೇಪೆ ಹಚ್ಚಬೇಡ;
ಹೊಸರು ತಳಹದಿಯ ಕಜ್ಜ ಸಾಗಲಿ
ನಿನ್ನ ಸೃಷ್ಟಿ ನೋಡ. ॥೨೩॥

ಅಗ್ನಿಕುಂಡವೋ ಅರಳುಮಲ್ಲಿಗೆಯೊ
ಶಿರದ ಮೇಲೆ ಧರಿಸು ;
ಹಾವು ಮುತ್ತಿತೋ ಹಾರಿ ಸುತ್ತಿತೋ
ವರಣಮಾಲೆ ವರಿಸು. ॥೨೪॥

ಬ್ರಹ್ಮಾಂಡಭಾಂಡ ಬೇಗುದಿಯುತಿಹುದು
ಅದರನಡಿಮೇಲು ತೊಳಸು;
ದಾಸ್ಯ ದೀನತೆಯ ಹಾಸ್ಯ ಹೀನತೆಯು
ದಗ್ಧ! ಹೊಸ ರುಚಿಯ ಬಳಸು. ॥೨೫॥

ದೂರದೂರದ ದಿಗಂತರದಂತರವು
ಸಾರಿಸಾರಿ ಬಳಿಬಂತು;
ಏರುಯೇರುಯೆತ್ತರ ನಿರಂತರವು
ಸೇರು ಸೇರು ಗುರಿಯಿಂತು. ॥೨೬॥

ಹಿರಿಮೆ ಪಡೆಯೆ ಹೋರಾಟವೇರಲಿ
ಬಾಳಿಗದುವೆ ಬುತ್ತಿ;
ಆತ್ಮ ತಪಿಸೆ ಪರಮಾತ್ಮ ಸೇರಲಿ,
ಪೂರ್ಣವಹುದು ಮುಕ್ತಿ. ॥೨೭॥

* * * *

## ಹಾಡು ಕವಿಯೇ ಹಾಡು

ಹಾಡು ಕವಿಯೇ ಹಾಡು
ಹೊಸತೊಂದು ಹಾಡು
ಜನದ ಕಲ್ಯಾಣಕ್ಕೆ
ಮನದ ಕಲ್ಯಾಣಕ್ಕೆ
ಯುಗಯುಗದ ಜಗದ ಕಲ್ಯಾಣಕ್ಕೆ ಹಾಡು.

* * * *

ಈ ಹೆಣ್ಣು ಆ ಗಂಡು
ರತಿಮನ್ಮಥರ ದಂಡು,
ಮುಕ್ಕಣ್ಣಿನುರಿಗೊಂಡು
ಸುಟ್ಟರೂ ಸೊಗವುಂಡು ;
ಅಂಥ ಹಳೆ ಪಾಡುಗಳ
ಮುಗಿಸಯ್ಯ ಬೇಗ ;



ಹೊಸ ಜಗಕೆ ಹೊಸ ಯುಗಕೆ
ಹೊಸ ಹೊಸತು ರಾಗ. ॥೧॥
ಮರಗಳಶ್ವತ್ಥಗಳು,
ಮನುಜರೊ ತ್ರಿವಿಕ್ರಮರು,
ಖಗವೆಲ್ಲ ಗರುಡಕುಲ,
ಮೃಗ ಸಿಂಹರಾಜ,
ನದಿಯೊ ಭಾಗೀರಥಿಯು,
ನಗವೊ ಹೈಮಾಚಲವು,
ಬೆಳಕೊ ಸೂರ್ಯಪ್ರಭೆಯು,
ಪರಿಪೂರ್ಣ ತೇಜ.
ಶೂನ್ಯತೆಯ ಕಳೆದುಳಿದ
ಪೂರ್ಣತೆಗೆ ಹಾಡು;
ಅದು ಪೂರ್ಣ, ಇದು ಪೂರ್ಣ,
ಉದು ಪೂರ್ಣ ಹಾಡು. ॥೨॥

ಸೊಲ್ಲು ಒಂದೇ ಸಾಕು
ಪ್ರತಿಭೆ ಮಿಂಚಿರಲು,
ಋಷಿಯ ರಸನೆಯಲಿ
ಗಾಯತ್ರಿ ಕುಣಿದಿರಲು;
ಓಂ ಎಂಬ ಅಕ್ಷರವೆ
ಬ್ರಹ್ಮವಾಗಿರಲು,
ನಾಲ್ಕು ವೇದಗಳೋದಿ
ಬೇರೇನು ಹೇಳು ?
ಸಿಡಿದ ನುಡಿ ಮಂತ್ರವೆನೆ
ಋಷಿ ಸದೃಶ ಹಾಡು;
ಮಾತು ಜ್ಯೋತಿರ್ಲಿಂಗ
ಎನೆ ಹಿಗ್ಗಿ ಹಾಡು. ॥೩॥

ಸಂತೆಯ ಸಮಸ್ತಪದ
  ಬರಿದೊ ಬರಿ ದೂಳು;
ಸದ್ದು ಗದ್ದಲಕರ್ಥ
  ಎಂಬರದು ಗುಲ್ಲು.
ಕಳ್ಳಸುಳ್ಳರ ನುಡಿಗೆ
  ಇಲ್ಲವೈ ತಿರುಳು
ಗುಹೆಯ ಮಾರ್ದನಿಯಂತೆ
  ಗೋಳು ಎಲ್ಲೆಲ್ಲು,
ಆ ಧಾಟಿ ಹಿಡಿಯದಿರು
  ತಿರುಬೊಬ್ಬೆ ಬೇಡ ;
ಸಂಯಮವ ನೀ ತೋರು
  ಹಾಡು ಹೊಸ ಹಾಡ. ॥೪॥

ಅಗಣಿತದ ನಕ್ಷತ್ರ
  ಮಿನುಗೆ ಬಾಂದಳವ,
ಚಂದ್ರಚಂದ್ರಿಕೆಯೊಂದೆ
  ಹಾಲಿಸಿತು ನೆಲವ,
ನೂರಾರು ಕೌರವರು
  ಸೋಮಕುಲದವರು,
ಪಂಚಪಾಂಡವರಲ್ತೆ
  ಬಳಿಯ ಬೆಳಗಿದರು !
ಬೇಡ ಬೆಳಕಿಲ್ಲದಿಹ
  ಹಣತೆ ಹಚ್ಚುವುದು,
ಹಾಡ ಶಕ್ತಿಯ ಗೀತ
  ಮನಕೆ ಮೆಚ್ಚುವುದು. ॥೫॥

ಹೆರಲಾರದೆಯೆ ಹೆತ್ತು,
  ಬದುಕದೆಯೆ ಸತ್ತು



ಮನೆಗೆ ಮಸಣದ ತರುವ
  ಸಂತತಿ ವಿಪತ್ತು.
ಪಡೆದ ಪುಣ್ಯೋದರಕೆ
  ಸೊದೆ ಸೊಗವನಿತ್ತು
ಮೆರೆವ ಮಗು ಮನೆ ಬೆಳಗೆ
  ಸೊಡರ ಕುಡಿಯಾಯ್ತು.
ದೂರದೂರಕೆ ದೂಡು
  ದುಗುಡ ಕಾರ್ಮೋಡ;
ಅಮೃತದೊಂದೇ ಬಿಂದು
  ಸುರಿವಂತೆ ಹಾಡ. ॥೬॥

ಅತ್ತಿಹಣ್ಣಿನ ಒಳಗೆ
  ಕ್ರಿಮಿಕೀಟ ಕೋಟಿ
ಹುಟ್ಟಿ ಸಾವುವು ಗಳಿಗೆ
  ಶತಜನ್ಮದಾಟಿ.
ಎಷ್ಟು ಜನರಿದ್ದೇನು
  ದುಷ್ಟ ಸಂತತಿಯು?
ಹೆತ್ತ ಹೊಟ್ಟೆಗೆ ನಂಜು
  ನೋವು, ದುರ್ಗತಿಯು. ॥೭॥

ಹುಟ್ಟಿದರು ಸತ್ತಂತೆ
  ಭೂಭಾರ ಬದುಕು,
ನಡೆಹೆಣಗಳೆಂಬ ನಿ–
  ಸ್ತೇಜರನು ನೂಕು,
ಮಡಿದು ಸತ್ಕಾರ್ಯಕ್ಕೆ
  ಜನರ ಸ್ಮರಣೆಯಲಿ
ಉಳಿವ ಕೀರ್ತಿಶರೀರಿ
  ಜಗವ ಬೆಳಗಿಸಲಿ !
ಮಂಜು ಮುಸುಕಿದ ತೆರೆಗೆ

ಚೆಲುವಿಲ್ಲ ಬಾನು,
ಬೆಳ್ಳಿ ಮೂಡಿದ ಗಳಿಗೆ
ಮೈಮೆರೆಸದೇನು ?
ಜನ್ಮ ದಿನವೇ ಸಾವ
ಜೀವನವು ಬೇಡ;
ಮರಣ ಅಮರತೆ ತರಲಿ
ಅದಕಾಗಿ ಹಾಡ. ॥೮॥

ಮೂವತ್ತು ಮೂರ್ಕೋಟಿ
ಇದ್ದೆವೇನಾಯ್ತು ?
ದೈನ್ಯ ದೌರ್ಬಲ್ಯದಿಂ
ನಮಗಡಿಮೆ ಬಂತು.
ಮೊಗಲರೋ ಬ್ರಿಟಿಷರೋ
ಬಂದಾಗ ಹೊತ್ತು
ಹೂಮಾಲೆ ಹಾಕಿದೆವು
ನೊಗ ಕೊರಳ್ಗೆ ಬಿತ್ತು !
ಕಳೆದ ದುಃಸ್ವಪ್ನಗಳು
ಮರುಕೊಳಿಸದಿರಲಿ;
ಗಳಿಸಿ ಶಕ್ತಿಯ, ನೆಲವ
ಉಳಿಸೆ ಹಾಡಿರಲಿ ! ॥೯॥

ಒಬ್ಬ ಗಾಂಧಿಯ ಹೃದಯ
ದಿವ್ಯಾತ್ಮಶಕ್ತಿ
ನಾಡಿನುದ್ದಗಲದಲಿ
ದೀವಿಟಿಗೆಯೆತ್ತಿ;
ಎಂಥ ವೀರಾವೇಶ
ಮಾಡಿ ಮಡಿವಾಗ,
ಯಜ್ಞಕುಂಡದೊಳುದಿಸೆ
ಸ್ವಾತಂತ್ರ್ಯಭೋಗ.



ವಜ್ರದ ಕಠೋರತೆಯು
ಕುಸುಮ ಕೋಮಲತೆ.
ನವಿರೇಳಿಸಲಿ ಲಹರಿ
ಕವಿತೆಗಿದೆ ಘನತೆ. ॥೧೦॥
ಹೇಡಿತನದ ಪಿಶಾಚಿ
ಓಡುತಿದೆ ಬಿಡದೆ,
ಪೌರುಷದ ದೀವಿಟಿಗೆ
ನೀನೆತ್ತಿ ಹಿಡಿದೆ.
ರಂಗಮಂಟಪದಲ್ಲಿ
ವೇಷಗಳು ಕುಣಿಯೆ,
ದಾನವರು ಉರುಳಿದರು
ದೇವತೆಗಳುಳಿಯೆ,
ಚೆಂಡೆಮದ್ದಳೆ ಹೊಡೆದು
ಜಾಗಟೆಯನೆತ್ತು,
ಹಾಡು ಭಾಗವತ ಹೊಸ
ಹಾಡನೀಹೊತ್ತು, ॥೧೧॥

ತಿಂಗಳನ ತಲೆ ಮೆಟ್ಟಿ
ಮಂಗಳನ ಮುಟ್ಟಿ,
ಲೋಕನಾಕವ ಗೈವ
ಬಯಕೆ ಜಗಕೆ;
ಸಿಡಿಲ ಮರಿಗಳೆ ಬೆಳಗಿ
ಬರಲಿಹರು ಮುಂದೆ,
ಅಂತ ತೇಜಸ್ವಿಗಳು
ಸಂತಾನವೆಂದೆ,
ಹಾಡು ಕವಿಯೇ ಹಾಡು
ಹೊಸ ಯುಗದ ಹಾಡು;
ಜಗ ಜನದ ಮನದ
ಕಲ್ಯಾಣಕ್ಕೆ ಹಾಡು.

* * * *

## ತುಮುಲ

ಮನವಿಯೊಪ್ಪಿಸುವೆ; ನೀ ಕೊಳ್ಳು ಅಥವಾ ತಳ್ಳು;
ಬತ್ತ ಭೂಮಿಗೆ ಬಿತ್ತು; ಕಾಳೊ ಮೇಣ್ ಜಳ್ಳು ?

ಕೇಳುವೆನು ನಿನ್ನೊಳಿದ : ಬಂದೆ ನಾನೆಲ್ಲಿಂದ
ಪೋಪೆನೆಲ್ಲಿಗೆಯೆಂದು ಬಲ್ಲೆಯಾ? ತಿಳಿಸು;
ತಿಳುಹಲಾರೆಯ? ಮತ್ತೆ ಪುಣ್ಯಪಾಪಗಳಿಂದ
ಮರಳಿ ಬಂಧಿಸಬೇಡ; ಸ್ವಾತಂತ್ರ್ಯವುಳಿಸು. ॥೧॥

ಜಗದ ಬೆಳಕಿಗೆ ಕಣ್ಣುಬಿಡುತ ಬೆರಗಾದೆನೆ ?
ಅತ್ತೆನೇ ನಕ್ಕೆನೆ ? ಮರವೆ ಮುಸುಕಿಹುದು ;
ಕೊನೆಯ ವಂದನೆ ಸಲಿಸಿ ಪೋಪಂದು ಮರುಗುವೆನೆ ?
ಮತ್ತೆ ಅಳುವೊ ನಗುವೊ ಯಾರು ತಿಳಿಸುವುದು? ॥೨॥

ಆದ್ಯಂತಗಳ ನೆಲೆಯನರಿಯೆ ನೀಬಲ್ಲೆಯಾ
ನಡುನೀರಿನೊಳು ಬಿಡದೆ ಈಸುತಿಹೆನು ;
ಇಷ್ಟಕಷ್ಟಗಳ ಮಿಶ್ರಣ ಕುಡಿದೆ; ಭವರೋಗ
ನೀಗಲೊಲ್ಲದು ! ಮೂಲಿಕೆಯ ಕೊಡುವೆಯೇನು? ॥೩॥

ಕೇಳಿದೊಡೆ ಕೊಡುವೆಯೆಂಬರು ಕೆಲರು, ಕೇಳೆನೈ,
ತಾಯ್ ಪಯಸ್ವಿನಿ ಕೊಡಳೆ ಮಗುಗೆ ಮೊಲೆಹಾಲು?
ಬೇಡುವುದು ಹೀನವೆಂಬುದ ಬಲ್ಲೆ, ಬೇಡನೈ,
ಹಿರಿಮೆಯುಳಿಸಿಕೊ ನೀಡಿ ಸಲುವ ಸಮಪಾಲು. ॥೪॥

ಬೇಡೆನು– ವಿಶಾಲ ಸಾಮ್ರಾಜ್ಯದೊಡೆತನವನ್ನು,
ಬೇಡನೈ– ಪುತ್ರಮಿತ್ರಕಳತ್ರ ಸುಖವ,
ಬೇಡನಾ– ಜಗದಗಲ ಪಸರಿಸುವ ಜಸವನ್ನು,
ಕರುಣಿಸೆರೆಯಾ– ದೈನ್ಯರಹಿತ ಜೀವನವ. ॥೫॥



ಎತ್ತರದ ಬಾನಗಲ ಬಿತ್ತರದಿ ಮಿನುಗುತಿಹ
ಲಕ್ಷೋಪಲಕ್ಷ ನಕ್ಷತ್ರಗಳ ಕಾಂತಿ
ಮುತ್ತಿಡುತಿರಲಿ ಜಗವ ಎನ್ನ ಗುಡಿಸಲಿನಲ್ಲಿ
ಒಂದೆ ನಂದಾದೀಪ ಬೆಳಗೆ ಶಾಂತಿ. ॥೬॥

ನೂರು ಯೋಜನ ದೂರ ಹಾರುತಿರಲಿ ವಿಮಾನ,
ಅದರ ಭೀಕರತೆ ಚಂಚಲತೆಗಳ ಬಲ್ಲೆ;
ಒಂದು ದಿನಕೊಂದೆ ಹೆಜ್ಜೆಯನಿಡೆ ಸಮಾಧಾನ,
ಇಟ್ಟಡಿಯ ದೃಢವಿರಲಿ– ಹಿಮ್ಮಟ್ಟಲೊಲ್ಲೆ. ॥೭॥

ಪಡುಗಡಲ ಲಾವಣ್ಯವನು ಕಂಡು ಮೈಮರೆಯೆ
ನೀರಡಿಕೆ ನೀಗಲುಂಟೆ?ಉಪ್ಪೆ ತೃಷೆಗೆ?
ಎಲೆಮನೆಯ ಬಾವಿ ಬಳಿಯಲಿ ನೀರೆ ನೀರೆರೆಯೆ
ಸವಿದೀಂಟಿದನೊ ಭಿಕ್ಷು– ಆನಂದ, ಹಾಗೆ? ॥೮॥

ಆವ ಶ್ರೀಮಂತನೋ, ಆವ ಸಾಮಂತನೋ
ನೀಡಲೂ ಬಹುದು ಮೃಷ್ಟಾನ್ನ ಭೋಜನವ;
ಎನ್ನ ಕಿರುಮನೆಯೊಳೆಮ್ಮೊಂದಿಗರ ಸಹಪಂಕ್ತಿ
ಕುಡಿವಪ್ಪುಗಂಜಿತಿಳಿ ಕೊಡದೆ ಸಾಂತ್ವನವ ? ॥೯॥

ಎಷ್ಟೊಂದು ಬಿನ್ನವಿಸಿದರು ನಿನಗೆ ನಿನ್ನಿಷ್ಟ,
ಎನ್ನ ಪಾಡಿಗೆ ಬದುಕಬಿಡುವೆಯೇನು ?
ಏಕೆ ನಿನ್ನಲಿ ಹರಕೆ ? ಎನಗುಂಟು ಎನ್ನಿಷ್ಟ,
ಎನ್ನ ಬಾಳನು ಬೆಳಗಬಹುದು– ನಾನು. ॥೧೦॥

* * * *

## ಬೆರೆವೆ ನಾನು ನನ್ನ ಜಗದಿ

ಬರವು ಬಾಳುವೆಯನು ನೀನು
ಗುರುತಿಸಯ್ಯ ನಿನ್ನ ಪಟದಿ;
ಇರವನರಿತು ಪ್ರಕೃತಿಯೊಡನೆ
ಬೆರೆವೆ ನಾನು ನನ್ನ ಜಗದಿ,

ಇದುಯೆಂಬುದೆನ್ನಧೀನ
ನಾಳೆ ನಿನ್ನದಾಗಲೇನು ?
ಇಂದು ದೊರೆತ ಸುದಿನವನ್ನು
ವ್ಯರ್ಥ ಕಳೆವೆನೆ ?

ಪ್ರಕೃತಿಯಮ್ಮನಡಿಯ ಬುಡದಿ
ಬೊಂಬೆಯಾದೆನು;
ಬೊಂಬೆಯಾಟದಂತ್ಯದಲ್ಲಿ
ಬಿಂಬವಿರ್ಪೆನು;
ಬಿಂಬವಾಗಿ ಕಡೆಗೆ ತಾನೆ
ಶೂನ್ಯನಪ್ಪೆನು;
ಶೂನ್ಯತೆಯಲಿ ಕೊನೆಗೆ ಜಗದ
ಸಾರ ತೋರ್ಪೆನು.

* * * *

## ಅತಿಥಿ

ನಾ ಬಯಸದಿದ್ದರೂ ನೀನು ಬಂದೇ ಬರುವೆ
ಅದಕಾಗಿ ಬಾರೆಂದು ಕರೆಯದಿರುವೆ;
ಹಾಡೆಂದು ಹೇಳದಿದ್ದರು, ಸುಗ್ಗಿ ಹಿಗ್ಗಿ ಬರೆ,
ಕೋಗಿಲೆಯ ಕಲಕಂಠ ಕೇಳುತಿರುವೆ ! ॥೧॥



ನಿನ್ನ ಕರೆವುದೆ ಬೇಡವೆಂದು ಜನರಾಡುವರು,
ಹೇಳದೆಯೆ ನೀ ಬರುವ ಪುಣ್ಯ ಪುರುಷ;
ಕೀರ್ತಿಯನು ಶನಿಯೆಂದು ಛೀತ್ಕರಿಸಿ ದೂಡಿದರು.
ಒಲ್ಲದವರಿಂಗದರ ಧವಳ ಸ್ಪರ್ಶ. ॥೨॥

ಎಂದಾದರೂ ಬಂದುಕೊ; ನಿನ್ನದೀ ಗೇಹ
ಇದರ ಒಡೆನತವೆಲ್ಲ ನಿನಗೆ ಇಹುದು !
ಅಂದು ತನಕವು ಬಿಡದೆ ದುಡಿವುದೆನ್ನೀ ದೇಹ,
ಎತ್ತಿಕೋ ನಿನ್ನ ಬಳಿ ಮುತ್ತಿಡುವುದು. ॥೩॥

ದುಡಿತವಿಲ್ಲದೆ ಬದುಕೆಯಿಲ್ಲ, ಕೈಗೆತ್ತಿರುವ
ಕರ್ತವ್ಯ ಕೆಲವುಂಟು– ಶ್ರಮಿಸುತಿಹೆನು:
ನೀ ಬರುವುದಕೆ ಮುನ್ನ ಪೂರೈಸುವೆನು ಎನ್ನ
ಕೆಲಸಗಳನ್ನೆಲ್ಲ ನಾ ಸಿದ್ಧನಹೆನು. ॥೪॥

ನಿನ್ನ ಕರೆ ಬಂದಾಗ ಓಗೊಟ್ಟು ಓಡಿಬಹೆ,
ಸವಿದನಿಯ ಕೇಳೀ ಮೈಮರೆಯಲುಂಟು;
ನಿನ್ನ ಮಧುರಾಲಿಂಗನಕೆ ನಾನು ಹಾತೊರೆವೆ,
ಮಡಿಲಲ್ಲಿ ಹಾಯಾಗಿ ಮಲಗಲುಂಟು. ॥೫॥

ನಿನ್ನಂಥ ಬಂಧು ಬೇರಾರನೂ ನಾ ಕಾಣೆ,
ಸಖನು ಸಖಿಯೂ ಸುಖದ ಸರ್ವಸ್ವ ನೀನೆ;
ಬೇನೆ ಬೇಸರ ಹೋಗೆ, ಬನ್ನಬವಣೆಯು ನೀಗೆ,
ನಿನ್ನ ಸಾಮೀಪ್ಯದೊಳೆ ಮೈಮರೆವೆನೆ ? ॥೬॥

ಬಾಗಿಲನು ತಟ್ಟಿ ಬರಲಿರುವೆ, ನಾ ಕಾದಿರುವೆ
ಆ ರಸದ ನಿಮಿಷವನೆ ನೆನೆಯುತಿರುವೆ,
ಎಂದಾದರೊಮ್ಮೆ ಬಂದೇ ಬರುವೆ ನಂಬಿರುವೆ,
ಇಂದೆ ಬಂದರು ಬಿಡದೆ ಸ್ವಾಗತಿಸುವೆ ! ॥೭॥

## ಪಾಲ್ಗಡಲಿನ ತಡಿಗೆ

ಸೌಂದರ್ಯದ ಮಣಿಮಂದಿರ
ಜ್ಯೋತಿರ್ಮಯ ಜೀವನವೆ,
ಮಾಧುರ್ಯದ ಕ್ಷೀರೋದಧಿ
ಸುಧಾಕಲಶ ಪಾವನವೆ
ಚಂದದಿ ಕಣ್ ಮಿಂದಿಹುದು,
ರಸನೆಗೆ ರುಚಿಯೇರಿಹುದು,
ಗಂಧದಿ ಮೂಗರಳಿಹುದು,
ಗೀತಕೆ ಮನ ಸೋತಿಹುದು,
ಚೆಲುವೋ ಚೆಲು ಸವಿಯೋ ಸವಿ
ತುಂಬಿದೆ ಜಗದಗಲ;
ಅದು ಪೂರ್ಣವು ಇದು ಪೂರ್ಣವು
ಪೂರ್ಣತೆ ಜನುಮಫಲ. ॥೧॥

ತಾಯ್ತಂದೆಯರೆದೆಯೊಲವಿನ
ಸುಖಸಂಗಮಬೀಜ.
ಪುಣ್ಯೋದರ ಮೃದುತಲ್ಪದಿ
ಬಳೆಯುತ್ತಿಹ ತೇಜ,
ಇಳಾನಿಳಯಕಿಳಿದು ಬರೆ,
ಮಗುಮೊಗದಲಿ ಮುದ್ದುಸೆರೆ,
ಬಂಧುಬಳಗ ಹಿಗ್ಗುತಿರೆ,
ಸಗ್ಗತಿರೆಗೆ ತಗ್ಗುತಿರೆ,
ಮನ ನಿರ್ಮಲ ಜನ ನಿರ್ಮಲ
ನಿರ್ಮಲವೀಲೋಕ;
ಎದೆಗೊಡದಲಿ ಅದೆ ತುಂಬಿದೆ
ವಾತ್ಸಲ್ಯದ ಪಾಕ. ॥೨॥

ಪ್ರಕೃತಿಯೊಡನೆ ಪುರುಷ ಮಿಳನ



ಅನಂತ ಜೀವರೂಪ
ಕತ್ತಲೆಯೋ ಬತ್ತಲೆಯೋ
ಒಳಗೆ ಸ್ನೇಹದೀಪ !
ಶಕ್ತಿಗೊಲಿದು ಶಿವ ಬೆರೆಯೆ,
ಹೆಣ್ಣು ಗಂಡು ಮೈ ಮರೆಯೆ,
ಕುಣಿತಮಣಿತ ಧಿಮಿಧಿಮಿತ,
ಜೀವಭಾವ ಸುಖಮಿಳಿತ !
ಚಿರನೂತನ ಈ ಚೇತನ
ಆನಂದದ ಬುಗ್ಗೆ;
ಸೌಂದರ್ಯವ ಮಾಧುರ್ಯವ
ಹೀರ್ದನಿತೊ ಹಿಗ್ಗೆ. ॥೩॥

ಬಾಂದಳದಲಿ ಮೇಘದೂತ
ಮೆಲ್ಲ ತೇಲಿ ಬಹನು,
ಸಂದೇಶದ ಪ್ರಣಯಗೀತ
ಎಲ್ಲ ಸೊಲ್ಲಿಸಿಹನು.
ಸಪ್ತವರ್ಣದಿಂದ್ರಚಾಪ,
ಪೂತಚೂತರಥದ ರೂಪ,
ಹಾಸಿರುವುದು ಹಸಿರು ಹುಲ್ಲು
ಕೋಗಿಲೆಯಿನಿದನಿಯ ಕೇಳು !
ಮುಗಿಲ ದುಡಿತ ನವಿಲ ನೃತ್ಯ
ರಮ್ಯತೆ ರೂಪಾಂತಿದೆ;
ಅಪ್ಸರೆಯರು ಭೂಮಿಗಿಳಿವ
ಉತ್ಸಾಹವು ತುಂಬಿದೆ. ॥೪॥

ಮರಮರದಲಿ ಅದೊ ಮರ್ಮರ
ನದಿ ಕಲರವ ಗೀತ,
ಗಿಳಿವಿಂಡಿನ ಕೊರಳಿಂಚರ
ಮಿಗ ರಿಂಗಣ ಕುಣಿತ,

ಉಷಾನಟಿಯ ಮಿನುಗುಮೊಗ,
ನಿಶಾಚಂದ್ರ ಕಲೆಯ ಸೊಗ.
ತಾರಾಳಿಯ ದೀಪಾವಳಿ,
ಅಗಲ ಗಗನ ಬಟ್ಟೆ ನೀಲಿ,
ಎತ್ತರ ಬಾನ್ ಬಿತ್ತರ ಬುವಿ
ಭವ್ಯ ರಂಗಭವನ;
ರಸ ಸಿಂಚನ ರೋಮಾಂಚನ
ತನ್ಮಯ ಭುವನ ಜನ. ॥೫॥

ಸೂರ್ಯೋದಯವೆಂತಂತೆಯೆ
ಸೂರ್ಯಾಸ್ತವು ಚೆಲುವು
ಮೊಮ್ಮಗುವಿಗೆ ಮುದಿಯಜ್ಜನು
ಮುತ್ತಿಡುವೆದೆಯೊಲವು,
ಚಿಗುರೆಲೆ ನಳನಳಿಸುತಿದೆ
ಹಣ್ಣೆಲೆಗೂ ಬಣ್ಣವಿದೆ,
ಮಿಡಿಯೇ ಪಣ್ಣಪ್ಪಂತು,
ಆದ್ಯಂತವು ಸರಿಬಂತು:
ಶೈಶವವೋ ವಾರ್ಧಕ್ಯವೊ
ಸೊಗಸಿನ ಹೊಂಗನಸು;
ಕೆಸರಿಲ್ಲವು ಒಸರೆಲ್ಲವು
ಅಚ್ಛೋದಕ ಸರಸು. ॥೬॥

ಮಳೆ ಜೇನಿನ ಹೊಳೆ ಹಾಲಿನ
ಬೆಳೆ ಭಾಗ್ಯದ ನೆಲವೆ,
ಗಂಧವತೀಪೃಥ್ವಿಮಾತೆ
ಸ್ತನ್ಯಪಾನಕೊಲಿವೆ,
ಸೂರ್ಯಚಂದ್ರ ದೀಪವಿರಿಸಿ
ಸಾವಿರ ಗೋಲಗಳ ಬಳಸಿ
ಯುಗಯುಗಗಳ ಮೇರೆ ಮೀರಿ



ದಾಂಟಲುಂಟು ದೂರ ದಾರಿ.
ಹಾಯಿ ಬಿಚ್ಚಿ, ಜಳ್ಳವೊಚ್ಚಿ,
ವೇಗ ಹೆಚ್ಚಿ, ಕಡೆಗೆ–
ಜೀವನೌಕೆ ತೇಲುತಿರಲಿ
ಪಾಲ್ಗುಡಲಿನ ತಡಿಗೆ ! ॥೭॥

* * * *

# ಪ್ರಕೃತಿ ಪ್ರೀತಿ

"ಜೀವ ಮಧುರಂ, ಬೆರೆತಭಾವ ಮಧುರಂ, ಮಿಳಿತ
ಮೇಳ ಮಧುರಂ, ನಿರಂತರ ನೂತನಂ;
ಮಗು ನಗುತ ಬಂತು! ಗಗನದಿತಾರೆ ಮಿನುಗಿತ್ತು
ಜನ್ಮಜನ್ಮಕ್ಕೆ ನವ್ಯವೀಚೇತನಂ"



## ನಾದ : ಎರಡು – ಪ್ರಕೃತಿ ಪ್ರೀತಿ

## ಚೇತನ

ದಿಶಿ ನಿಶಿ ನಿತಾಂತ ಹಬ್ಬಿದ ಮಬ್ಬುತೆರೆಯೆತ್ತಿ
ಉಷೆನಟಿಯ ನಲಿದುಬರಲು,
ಏಳಶ್ವಗಳ ಮೇಳವಿಸಿ ತೇರನೇರಿದನು
ಅರುಣ ಹರಿಕಾರನಿರಲು.
ಮೂಡುಬೆಟ್ಟದ ಮೇಗೆ ಮೆರೆಯುತಿಹೆ ದೇಗುಲಕೆ
ಹೊಳೆವ ಹೊಂಗಳಸವಿರಿಸಿ,
ಸೃಷ್ಟಿಗೆ ಸುವರ್ಣವೃಷ್ಟಿಯ ಸುರಿಸಿ ರವಿರಾಜ
ಕಾಂಚನಕಿರೀಟ ಧರಿಸಿ,
ಬಂದು ಬಾಂದಳಕೆ– ಮಕುಟವನೆತ್ತಿ ನಿಂದಿಹನು;
ಜಾಡ್ಯ ಹರಿದೋಡಿತ್ತು, ಜನಮನದಲಿ
ಹೊಸಹುರುಪು ಬಂತು; ದಿನದಿನ ನವೋದಯವಿಂತು,
ಯುಗಯುಗಕೆ ಮರಳಿ ಮರಳಿ. ॥೧॥

ಇರುಳುರುಳಿ ಬೆಳಕು ಬೆಳಗಿತು ಬಾಳದೇಗುಲದಿ
ನಲ್ಮೆನಂದಾದೀಪ ನಲಿಯುತ್ತಿರೆ;
ಪೌರುಷದ ರಾಜತೇಜದ ಮಾಮರವ ಮೆಚ್ಚಿ
ಹೆಣ್ಣೆದೆಯ ಮೋಹಮಲ್ಲಿಗೆಯಪ್ಪಿರೆ !
ಬಂದನು ವಸಂತ, –ರತಿಮನ್ಮಥರ ದಿಬ್ಬಣದ
ಸಂಭ್ರಮದ ಮೆರವಣಿಗೆ ಸೊಗದ ಸುಗ್ಗಿ,
ಬಣ್ಣಬಣ್ಣದ ನುಣ್ಣನೆಯ ತಳಿರುಹೂಹಣ್ಣು
ಗಂಧಮಂದಾನಿಲಂ ತೀಡೆ ಹಿಗ್ಗಿ,
ಜೀವ ಮಧುರಂ, ಬೆರೆತ ಭಾವ ಮಧುರಂ, ಮಿಳಿತ
ಮೇಳ ಮಧುರಂ– ನಿರಂತರ ನೂತನಂ !
ಮಗು ನಗುತ ಬಂತು ! ಗಗನದಿ ತಾರೆ ಮಿನುಗಿತ್ತು !
ಜನ್ಮ ಜನ್ಮಕೆ ನವ್ಯವೀ ಚೇತನಂ. ॥೨॥

ಕಾರ್ಮೋಡಗಳು ಗುಡುಗಿ ಸಿಡಿಲುಮಿಂಚುಗಳೆರಗಿ
ಮುಸಲಧಾರೆಯ ಸರಿಯು ಸುರಿದ ಮೇಲೆ;
ಗಗನಮಂಡಲದ ಮಂಟಪದಿ ಮೆರೆದಾಡುತಿಹ
ರವಿಶಶಿಗೆ ಲಕ್ಷ ನಕ್ಷತ್ರಮಾಲೆ !
ಬೆಳ್ಳಿದೇವರ ಕಣ್ಣು ಧಾರಾಳ ದಯೆಯನ್ನು
ಚೆಲ್ಲಿ, ಬಾನ್‌ತಿರೆಯನ್ನು ಹರಸುತಿರಲು;
ಋತುರಾಜ ಬರುತಿಹನು– ತಳಿರುತೋರಣವೇನು,
ನಿರ್ಮಲಂ ನೆಲಜಲಂ ಶರದಾಗಮಿಸಲು,
ಹಚ್ಚನೆಯ ಹಸಿರು ಸೀರೆಯನುಟ್ಟ ಹೊಲತಾಯ–
ಗರ್ಭದಿಂದುದಿಸಿ ಬಂದಿತೊ ತೆನೆಯ ರಾಶಿ;
ನೀರೆರೆದ ದೇವಗರ್ಪಿತವಿಂತು ! ಬೇರ್ಬಿಟ್ಟ
ಬುವಿಗೆ ಕಾಣಿಗೆ ಬಿತ್ತು, ಚೈತನ್ಯ ಸಾಕ್ಷಿ. ॥೩॥

ಶ್ರೀಪರಂಜ್ಯೋತಿ ಪರಮಾತ್ಮನಂಶದ್ಯುತಿಯು
ಜೀವಾತ್ಮನಂ ಬಿಡದೆ ಸ್ಪರ್ಶಿಪಂತೆ,
ಸೃಷ್ಟಿರಾಶಿಗೆ ದೃಷ್ಟಿಯಿತ್ತ ದಿನಮಣಿತೇಜ
ದೀಪದೀಪ್ತಿಯೊಳಡಗಿ ದರ್ಶಿಪಂತೆ,
ಕೆರೆಯ ತೋಡಿಸಿ ಸಸಿಯ ನಟ್ಟು ಮನೆ ಕಟ್ಟಿಸಿದ
ಪಿತನು ಪುಣ್ಯವ ಪುತ್ರನಲಿ ತುಂಬಿಪಂತೆ,

ಶೀಲ–ಸೌಭಾಗ್ಯ–ವಿನಯ ವಿವೇಕವತಿ ಸತಿಯು
ಮಗಳಲ್ಲಿ ಮಾತೃತ್ವ ಬಿಂಬಿಪಂತೆ,
ಶಾಖೋಪಶಾಖಪ್ರಕಾಂಡದ ಮಹಾವೃಕ್ಷ
ಬೀಜದಲಿ ಸಾಜವಂ ಸೇರಿಪಂತೆ,
ವಿಶ್ವ–ವಿಜಯೀ ಸಾಹಸದ ಕೇತು ಚೇತನಂ
ನವನವೋನ್ಮೇಷದಿಂದವತರಿಸಿದೆ ! ॥೪॥

* * * *



## ಪ್ರಕೃತಿ

ಅಂಬರ ಕನ್ಯೆಯ ತುಂಬಿದ ಮುಖದಿ,
ಉಷಃಕಿರಣದರಸಿನ ಲೇಪನದಿ,
ಬೆಳ್ಳಿಬೊಟ್ಟು ಮಿನುಗಿರೆ ಶೋಭನದಿ
ಮಂದಹಾಸದರುಣೊದಯ ಜಗದಿ.
ಪ್ರಕೃತಿಯೆ ಪರಿಮಳ ಪುಷ್ಪವತಿ :
ಪೃಥ್ವಿಯು ಬಂಧುರ ಗಂಧವತಿ ॥೧॥

ಮಲ್ಲಿಗೆ ಸಂಪಗೆ ಕೇದಗೆ ಜಾಜಿ
ಅರಳುತ ನಿಂತಿವೆ ಪರಿಮಳ ಸೂಸಿ
ಬಳಲುತ ಬಂದನು ಮಲಯ ಮಾರುತ
ಗಂಧವ ಹೊತ್ತಿರೆ ಮಂದದಿ ಬೀಸಿ,
ಪದ್ಮಿನಿಯರ ಗಜಗಮನದ ಪೆಂಪು
ಕೇಶರಾಶಿಯಿಂ ಸುರಿವುದು ಕಂಪು. ॥೨॥

ಸುಂದರ ಶಾದ್ವಲ ಸಿರಿತೊಟ್ಟಿಲಲಿ
ಶುಕಪಿಕ ಸಂಕುಲವನು ತೂಗುತಲಿ
ಹಾಡಿರೆ ವನದೇವಿಯು ಶ್ರಾವ್ಯದಲಿ
ನೋಡದೊ– ಕುಣಿದಿವೆ ರಿಂರಿಂಗಣದಲಿ
ಜಿಂಕೆಮರಿಗಳೋ ಮೈಮರೆತು
ನಿಸರ್ಗಗಾನಕೆ ಮನಸೋತು. ॥೩॥

ಬೆಟ್ಟವು ಬಯಲು ಕಾನನ ಕಡಲು
ಸಂಜೆಯ ಮುಂಜಾನೆಯು ಹಗಲಿರುಳು
ಆ ಹೇಮಂತ ಶರದ ವಸಂತ
ಸೂರ್ಯ ಚಂದ್ರ ತಾರಾಳಿಯನಂತ
ದಿವ್ಯವೆ ತುಂಬಿದೆ ಈ ಜಗದಿ
ಅಮರತೆ ಪ್ರಕೃತಿ ಸುಧಾರಸದಿ. ॥೪॥

## ನೇತ್ರಾವತಿ

ಪಡುವಣ ಬೆಟ್ಟದ ಬುಡದಲಿ ಹುಟ್ಟಿ,
ಕುದುರೆಮುಖದ ಬಂಡೆಯ ತಲೆ ಮೆಟ್ಟಿ,
ಹಾರುತ, ಬೀಳುತ, ಕುಣಿಯುತ, ಮಣಿಯುತ
ಹರಿವಳು ನದಿ ನೇತ್ರಾವತಿಯು;
ಸಮುದ್ರರಾಜನ ಪ್ರಿಯಸತಿಯು. ॥೧॥

ಎಡಬಲ ದಂಡೆಯ ಕೊರೆಯುತ ತಾಗಿ,
ಕಲ್ಲನು ಮಣ್ಣನು ಕೊಚ್ಚುತ ಸಾಗಿ,
ಎಲ್ಲಿಯು ನಿಲ್ಲದೆ, ಯಾರನು ಕೇಳದೆ,
ಹರಿವಳು ನದಿ ನೇತ್ರಾವತಿಯು;
ಸಮುದ್ರರಾಜನ ಪ್ರಿಯಸತಿಯು. ॥೨॥

ಹೊಂಬಣ್ಣದ ಹೊಸ ಕಿರಣವ ಬೀರಿ,
ಬಂದಿರೆ ರವಿ ಮೂಡಣ ಗಿರಿಯೇರಿ,
ಸೂರ್ಯನ ಮುಂಗಡೆ ಕನ್ನಡಿ ಹಿಡಿದು,
ಹರಿವಳು ನದಿ ನೇತ್ರಾವತಿಯು;
ಸಮುದ್ರರಾಜನ ಪ್ರಿಯಸತಿಯು. ॥೩॥

ಸುತ್ತಲು ತುಂಬಿದ ಹೊಲಗಳಿಗೆಲ್ಲ
ನೀರೆರೆಯುತ, ಫಲ ಬರಿಸುವಳಲ್ಲ,
ಬೆಳೆಗಳ ಬೆಳೆಸಿ, ತೋಟವನುಳಿಸಿ,
ಹರಿವಳು ನದಿ ನೇತ್ರಾವತಿಯು;
ಸಮುದ್ರರಾಜನ ಪ್ರಿಯಸತಿಯು. ॥೪॥

ಜಳ್ಳವನಿಳಿಸುತ ಹಾಕಲು ಹುಟ್ಟು,
ದೋಣಿಯ ದೂಡಿರೆ ಹಾಯಿಯ ಬಿಟ್ಟು,
ಜನರನು ದಾಟಿಸಿ ದಡದಿಂ ದಡಕ್ಕೆ,



ಹರಿವಳು ನದಿ ನೇತ್ರಾವತಿಯು;
ಸಮುದ್ರರಾಜನ ಪ್ರಿಯಸತಿಯು. ॥೫॥

ತೆರೆಗಳ ನೊರೆಗಳ ಮಾಲೆಯನೆತ್ತಿ,
ಒಲಿಯುತ ನಲಿಯುತ ಬಂದಳು ಸುತ್ತಿ,
ಕಲಕಲನಾದದಿ ಹಾಡಿ ವಿನೋದದಿ
ಹರಿವಳು ನದಿ ನೇತ್ರಾವತಿಯು;
ಸಮುದ್ರರಾಜನ ಪ್ರಿಯಸತಿಯು. ॥೬॥

ನವರತ್ನದ ನಿಧಿಯಲ್ಲವೆ ಕಡಲು ?
ಪಡೆಯುವಳೇನನೊ ರಭಸದಿ ಸಾಗಲು,
ಸಾಗರಸಂಗಮಕೆನಿತಿದೆ ಸಂಭ್ರಮ ?
ಹರಿವಳು ನದಿ ನೇತ್ರಾವತಿಯು;
ಸಮುದ್ರರಾಜನ ಪ್ರಿಯಸತಿಯು. ॥೭॥

ಒಳಗಡೆಯೇನೊ? ಮೊಸಳೆಯೊ? ಮೀನೊ?
ತಳದಲಿ ಸೆಳೆಯುವ ಸುಳಿಯಿಹುದೇನೊ ?
ನಿರ್ಮಲ ನೀರೇ ಮೇಲ್ಗಡೆ ತೋರೆ !
ಹರಿವಳು ನದಿ ನೇತ್ರಾವತಿಯು;
ಸಮುದ್ರರಾಜನ ಪ್ರಿಯಸತಿಯು. ॥೮॥

ಮಳೆಗಾಲದ ನೆರೆಯುಬ್ಬರವೆಲ್ಲ,
ಬಿಸಿಲಿನ ಬೇಗೆಗೆ ಬತ್ತುವುದಿಲ್ಲ !
ಹಿಗ್ಗಿದವರು ತಗ್ಗಲೆಬೇಕೆಂದೊ ?
ಹರಿವಳು ನದಿ ನೇತ್ರಾವತಿಯು;
ಸಮುದ್ರರಾಜನ ಪ್ರಿಯಸತಿಯು. ॥೯॥

* * * *

## ವಿರಹಿಣಿ

ವಿಶ್ವದೊಂದು ನಿಯಮವೆಂದು ಹೃದಯವರಳಿತು;
ಪುಣ್ಯಪ್ರಕೃತಿಪಾತವೆಂದು ನಲ್ಮೆ ನಲಿಯಿತು;
ಎದೆಯ ಕದವ ಬಿರಿದು ಬಿಚ್ಚಿ
ಮೋಹ ಮಂತ್ರದಿಂದ ಮೆಚ್ಚಿ
ಪ್ರೇಮದೊಂದು ಹಣತೆ ಹಚ್ಚಿ ಬೆಳಗಿ ನೋಡಿದೆ;
ಭಾಗ್ಯದೊಂದು ಬೆಳಕದೆಂದು ಹಿಗ್ಗಿ ಹಾಡಿದೆ. ॥೧॥

ಬೆಳಕ ಕಂಡು ತವಕಗೊಂಡು ಎದೆಯ ಹೊಕ್ಕನು;
ಸ್ನೇಹವೆರೆದು ಮೋಹ ಮೆರೆದು ನಗಿಸಿ ನಕ್ಕನು ;
ತಿಳಿದು ತಿಳಿಯದಂತಿದೆಲ್ಲ
ಬಲಿತು ಬೇನೆ ಬಿಗಿದನಲ್ಲ;
ಅಂದಿದೊಂದು ತಿಳಿದುದಿಲ್ಲ ಲೇಸದೆನಿಸಿತು ;
ಹರೆಯದೊಂದು ಹುರುಪಿನಿಂದ ಮೋಸವಾಯಿತು. ॥೨॥

ಕಾಣುತಿಹುದು ಕುರುಡಳಿಹೆನು ಕಣ್ಣು ಕಟ್ಟಿದೆ ;
ಸಿಲುಕಿ ಸೋತೆ ಸೆಳೆತದಂತೆ ಕೆಲಸ ಕೆಟ್ಟಿದೆ.
ಹುಚ್ಚದೆಂದು ತಿಳಿಯದಿದ್ದೆ
ಎಚ್ಚರೊಂದುವಂದು ನಿದ್ದೆ
ನಿತ್ಯನಿಬಿಡನಿಶಿಯೊಳಿದ್ದೆ ಎಲ್ಲು ನಿರ್ಜನ.
ಎದೆಯ ಬಡಿದು ಮೊರೆಯನಿಡಲು ಕಂಠಶೋಷಣ. ॥೩॥

ಮನವನೆಲ್ಲ ಮಥಿಪೆಯಲ್ಲ ಮಾರಿ ಮನ್ಮಥ;
ಎದೆಯಗೂಡ ಕಡೆಯಬೇಡ ವಂದನಾರ್ಪಿತ.
ಸತ್ಯವಾಗಿ ಸದಯನಲ್ಲ
ಹಂತ ! ಹೃದಯವೆಂಬುದಿಲ್ಲ
ಮತ್ಸರಿಸುತ ಮನವನೆಲ್ಲ ಮಥಿಸುತಿರುವೆಯಾ?
ಜಗದ ಜೀವ ಜಾಲದೆದೆಯ ಕುದಿಸುತಿರುವೆಯಾ ॥೪॥



ನಂಬಿ ನಿನ್ನ ಹಿಗ್ಗಿದೆನ್ನ ಹಿಂಡಿ ಹಿಸುಕಿದೆ ;
ಅಯ್ಯೋ! ನೋವು, ಸತ್ಯ ಸಾವು, ಮಂಜು ಮುಸುಕಿದೆ.
ಸುತ್ತಿ ಸುಳಿದು ಬಂದ ಜೀವ
ಪಡೆಯುತ್ತಿತ್ತು. ಶಾಂತ ಭಾವ,
ಸ್ವಸ್ಥ ರೀತಿಯಿಂದಲಿರುವ ಎದೆಯನೊತ್ತಿದೆ;
ವ್ಯರ್ಥ ನೀ ನಿರಾಸೆಯುಣಿಸಿ ಮನಸಿ ಮೆತ್ತಿದೆ. ॥೫॥

* * * *

## ಭ್ರಮರಗೀತೆ

ಇನಿತು ಸುಮಂಗಳರಳುತಿಹವು ಆರಿಗಾಗಿಯೊ?
ಪುಣ್ಯಫಲವು ಪೂರ್ತಿಗೊಂಡ ಧನ್ಯಗಾಗಿಯೊ? ॥೧॥

ಗಮಗಮಿಸುವ ಅಲರನೆಲ್ಲ ಮೂಸುವಾಸೆಯು
ಒಲಿದು ನಲಿದು ಸವಿಯ ಸೆಳೆದು ನೋಡಲಿಷ್ಟವು. ॥೨॥

ಎತ್ತಿಯೊತ್ತಿ ಮುತ್ತಿಡುತಿರೆ ಎನ್ನದಾಗಲು;
ಸಾರಿ ಹಾರಿ ಮಧುವ ಹೀರೆ ಆಗದೆ ಚೆಲು ? ॥೩॥

ಆಗದೇನೊ? ಸಾಗದೇನೊ? ಮನಸು ಕೇಳದು;
ಸರ್ವಸುಖದ ಸ್ವಪ್ನವರಿವ ಮರುಳುಮತಿಯಿದು. ॥೪॥

ಪರಿಮಳಿಸುತ ನಗುತಲಿಹವು ಎನ್ನ ಮುಂಗಡೆ,
ಅದರೇಕೊ – ಸೊನ್ನೆ ಸಾಕೊ? ಎಂಬವೀ ಪಡೆ ! ॥೫॥

ಮನಸಿಗಿಂತು ಮರುಳು ಬಂತು ಈಗಲೀಗಲೆ
ಮುತ್ತಿ ಸುತ್ತಿ ಮೂಸಿ ಮೂಸಿ ಗಾಸಿಗೈಯ್ಯಲೇ? ॥೬॥

ಆದರೇಕೊ ಸದಯ ಹೃದಯ ಆಗದೆಂಬುದು;
ಅಲರಿವೆಲ್ಲ ನಿನ್ನದಲ್ಲ ಎಂದು ನುಡಿವುದು. ॥೭॥

“ಒಂದೆ ಸುಮವು ನಿನ್ನದಿಹುದು ಅದನೆ ಆಯ್ದುಕೊ;
ಬಂದ ಭಾಗ್ಯ ಸವಿದು ನೋಡು ತೃಪ್ತಿಗೆಯ್ದುಕೊ. ॥೮॥

ಮರುಳು ಮನಸು ಕನಸಿನುಣಿಸು ಗಟ್ಟಿಮಾಡಿಕೊ;
ಮಿಕ್ಕ ಸುಮವ ಮುಟ್ಟೆ ನೀನು ಕೆಟ್ಟೆ ನೋಡಿಕೊ! ॥೯॥

ಆಜ್ಞೆಯಿಂತು ಆಗಲೆಂತು ಮಿಕ್ಕಿ ನಡೆವೆನೊ ?
ನಕ್ಕು ನುಡಿದ ಸಮವನೆಂತು ಸೊಕ್ಕ ಮುರಿವೆನೊ ॥೧೦॥

ಪುಷ್ಪಕಿನಿತು–ದರ್ಪವೇನು ಮಾಟ ಮಾಡಲು ?
ಏತಕಿಂತು ಆಜ್ಞೆ ಬಂತು? ಮೋಸ ನೋಡಲು! ॥೧೧॥

ಎಂಥ ವೇಷ, ಅಯ್ಯೊ ಮೋಸ, ಎದೆಯು ಕುದಿವುದು;
ಮರುಳು ಮನಸು ಮಂಕು ಹಿಡಿದು ಮರುಗುತಿರುವುದು. ॥೧೨॥

ಸುಮವನೊಂದನಾಯ್ದ ಕೆಲಸ ಕಷ್ಟವಾಗಿದೆ;
ಎದೆಯಿದಿಂತು ಸುಖಕೆ ಸೋತು ಭ್ರಷ್ಟವಾಗಿದೆ. ॥೧೩॥

* * * *

## ಸುಂಟರಗಾಳಿ

ಏನಿದು ದೂಳಿ? ಓಹೋ ಗಾಳಿ!
ಸುಳಿಯುತ ಬಂತೈ ಸುಂಟರಗಾಳಿ !

ತೆಂಗಿನ ಮರಗಳು, ಕಂಗಿನ ಮರಗಳು,



ಬಾಳೆಯು, ತಾಳೆಯು, ಮಾವು ಹಲಸುಗಳು,
ಎಲ್ಲಾ ತೂಗಿವೆ ! ತಲೆಗಳ ಬಾಗಿವೆ
ಏನಿದು ದೂಳಿ? ಓಹೋ ಗಾಳಿ !
ಸುಳಿಯುತ ಬಂತೈ ಸುಂಟರಗಾಳಿ ! ॥೧॥

ಕಣ್ಣನು ಮುಚ್ಚುತ ಬಾಲವನೆತ್ತಿ,
ದನ ಓಡುತ್ತಿದೆ, ಎತ್ತಲೊ ಸುತ್ತಿ,
‘ಅಂಬಾ’ ಎನುತಿದೆ ಕರು ಬೆಂಬತ್ತಿ,
ಏನಿದು ದೂಳಿ? ಓಹೋ ಗಾಳಿ !
ಸುಳಿಯುತ ಬಂತೈ ಸುಂಟರಗಾಳಿ ! ॥೨॥

ಹೋಯಿತು ಹಂಚು, ಹಾರಿತು ಹುಲ್ಲು
ಬೊಬ್ಬೆಯೆ ಬೊಬ್ಬೆಯು, ಭಯವೆಲ್ಲೆಲ್ಲು !
ಕೇಳುವರಾರೀ ಮಂದಿಯ ಗುಲ್ಲು ?
ಏನಿದು ದೂಳಿ? ಓಹೋ ಗಾಳಿ !
ಸುಳಿಯುತ ಬಂತೈ ಸುಂಟರಗಾಳಿ ! ॥೩॥

ಗಾಳಿಗೆ ಸಿಲುಕಿದನಾವನೊ ಮುದುಕ,
ಕೊಡೆ ಹಾರಿತು, ಮೈ ಥರಥರ ನಡುಕ;
ಕಣ್ಣೇ ಕಾಣದು, ಹುಟ್ಟದೆ ಮರುಕ?
ಏನಿದು ದೂಳಿ? ಓಹೋ ಗಾಳಿ !
ಸುಳಿಯುತ ಬಂತೈ ಸುಂಟರಗಾಳಿ ! ॥೪॥

ಗರ್ವದಿ ನಿಂದಿಹ ಮನೆಯನು ಮರವನು
ಮುರಿಯುತಲಿದ್ದರು, ಬಾಗಿದ ಹುಲ್ಲನು
ಮುಟ್ಟದೆ ಬಿಟ್ಟಿತು, ಹೇಳೈ ಗುಟ್ಟನು?
ಏನಿದು ದೂಳಿ? ಓಹೋ ಗಾಳಿ !
ಸುಳಿಯುತ ಬಂತೈ ಸುಂಟರಗಾಳಿ ! ॥೫॥

ಯಾರಲಿ ಕೋಪ? ಯಾರದು ಶಾಪ?
ಅಥವಾ ಹೆಚ್ಚಿತೆ ಭೂಮಿಯ ತಾಪ?
ತಡೆಯುವರುಂಟೆ? ಅಯ್ಯೊ ಪಾಪ!
        ಏನಿದು ದೂಳಿ? ಓಹೋ ಗಾಳಿ !
        ಸುಳಿಯುತ ಬಂತೈ ಸುಂಟರಗಾಳಿ ! ॥೬॥

ಬಾನಿನ ಬಯಲಿಂದಿಳಿಯುತ ಬಂತೊ?
ಪಾತಾಳದ ಹೊಟ್ಟೆಯೊಳಡಗಿತ್ತೊ ?
ಕಡಲನು ಕಡೆಯುತಲಿರೆ ಹುಟ್ಟಿತ್ತೊ ?
        ಏನಿದು ದೂಳಿ? ಓಹೋ ಗಾಳಿ !
        ಸುಳಿಯುತ ಬಂತೈ ಸುಂಟರಗಾಳಿ ! ॥೭॥

* * * *

## ಪೊಸಡಿ ಗುಂಪೆ

ಎಸೆವ ಶುಭ್ರ ಶಿಖರವೆತ್ತಿ
ಮಸಗಿ ನಿಂತ ಧೀರ ಮೂರ್ತಿ
ಪೊಸಡಿಗುಂಪೆ ಬೆಟ್ಟ ನೋಡು,
ಹೊಸತು ಕಣ್ಗೆ ಹಬ್ಬ ಮಾಡು,
        ಸ್ಫೂರ್ತಿ ಧಾರೆಯೆರೆದಿದೆ;
        ಶಕ್ತಿ ನೀಡಿ ನಿಂತಿದೆ. ॥೧॥

ಕಾಡ ಕೇಡು ನಿನ್ನೊಳುಂಟೆ ?
ನೋಡೆ ದೃಷ್ಟಿ ಮರಳಲುಂಟೆ ?
ಬೇಡವೆಮಗೆ ಹಾವು ಹುಲಿಯ
ಬೀಡು, ನೀನೆ ಬಿಟ್ಟದೊಡೆಯ,
        ಅಸಮ ಕೀರ್ತಿತೇಜನೆ,
        ಹೊಸ ನಗಾಧಿರಾಜನೆ. ॥೨॥



ದೂರವಿರುವ ಬೆಟ್ಟವೆಲ್ಲ
ತೋರುತಿಹವು ನುಣ್ಣಗೆಂದು,
ಮೇರುಹಿಮಾಲಯಗಳನ್ನು
ಏರ ಹೋಗಿ ಮಡಿದರಿಂದು,
        ಅದರೊಳಲ್ಲಿ ಕ್ರಾಂತಿಯು;
        ಒದವುದಿಲ್ಲಿ ಶಾಂತಿಯು. ॥೩॥

ಗುಂಪೆ, ನಿನ್ನ ಶಿಖರವೇರೆ
ತಂಪು ನಯನ ಮನದೊಳೂರೆ
ಪೆಂಪ ತೋರ್ಪ ಕಡಲ ನೋಟ
ಕಂಪ ತರುವ ಗಾಳಿಯೋಟ
        ರಸಿಕಗಿದೆ ರಸಾಯನ,
        ಹೊಸ ನಿಸರ್ಗಭೋಜನ. ॥೪॥

ಕೊಡಲಿ ಕಡಿತದಿಂದ ಪಡೆದ
ಪೊಡವಿಯಿಂದು ಸಾಲದೆಂದು
ನುಡಿಯತಿರುವೆಯೇನು, ಪಡುವ
ಕಡಲನೋಳ್ಪ ಬೆಡಗಿನಿಂದ ?
        ಆಶೆ ಭಾಷೆ ಫಲಿಸಲಿ,
        ದೇಶ ಕೋಶ ಬೆಳಗಲಿ. ॥೫॥

ಮೂಡ ಪಡುವ ತೆಂಗಕ ಬಡಗ
ನಾಡ ನೋಡುತಿರುವ ಬೆಡಗ,
ಹಾಡಲೆಂದೆ ಮನದ ಬಯಕೆ
ಮಾಡಲೇನು ಮಾತು ಸಾಕೆ ?
        ಅಂತು ವಿಪುಲ ನೀನೆಹ ;
        ಇಂತು ವಿಫಲ ನಾನಿಹೆ. ॥೬॥

ಜಗವ ಮೆಟ್ಟಿ ಘನತೆಯಿಂದ
ಮುಗಿಲ ಮುಟ್ಟಿ ಸೊಗಸಿನಿಂದ
ದಿಗಿಲುಗೊಳಿಸಿ ಮಿಗಿಸಿ ನಿಂದ
ನಗವೆ, ನಿನ್ನ ಬಗೆಯ ಚಂದ.
ಚೆಲುವ ರೂಪನಾಂತಿಹೆ;
ಒಲಿದು ಮುಂದೆ ನಿಂತಿಹೆ. ॥೭॥

ಎನ್ನ ತುಳುವ ನಾಡ ಜಸದ
ಉನ್ನತಿಯನು ತೋರುತೆಸೆದ
ನಿನ್ನ ಶುಭ್ರ ಶಿಖರಕಿಂದು
ಸನ್ನುತಿಯನು ಸಲಿಸಲೆಂದು
ಅವಸರದಲಿ ಹಾಡಿದೆ;
ಕವನ ಕಟ್ಟಿ ನೋಡಿದೆ. ॥೮॥

* * * *

## ತುಳುನಾಡಿತಿ

ಹೊಳೆವುದು ಹೊಳೆ ಬೆಳೆ ತೋಟ
ನಾಡ ನಡತೆಗಿದೆ ನೋಟ,
ಕಣ್ ಬಗೆಗಳ ನಲಿದಾಟ
ನಿಜ ನಿಸರ್ಗದಲಿ ಮಾಟ. ॥೧॥

ನಿತ್ಯ ಶಾಂತಿಮಯ ಶಿಬಿರ
ನೋಡ, ನಾಡು ತುಳುಜನರ;
ಸುಗ್ಗಿ ಸಂತಸವ ಚೆಲ್ಲಿ
ನೆಲವೆ ನಲಿಯುತಿಹುದಿಲ್ಲಿ. ॥೨॥



ಚೈತನ್ಯದ ಚೆಲು ಚವರಿ
ಸಿರಿ ತುಳುನಾಡಿನ ಕುವರಿ;
ಗೌರವ ಗುಣ ಗಂಭೀರೆ
ಸುರ ಸೌಂದರ್ಯವೆ ಸೂರೆ. ॥೩॥

ಅರಳಿರುವಲರೆವೆ ನಿನ್ನ
ಪುಷ್ಪಿತ ಸೌರಭವನ್ನ
ಸುತ್ತಲು ಸುರಿದಿದೆ ಚೆನ್ನ,
ಎತ್ತಲು ಗಮಗಮವನ್ನ, ॥೪॥

ದಂತ ಪಂಕ್ತಿ ಹಿರಿ ಹಿಗ್ಗೆ–
ದುಂಡುಮಲ್ಲಿಗೆಯ ಮೊಗ್ಗೆ,
ಪೂರ್ಣಚಂದ್ರಗಿದೆ ಬುಗ್ಗೆ,
ಹರೆಯವೆತ್ತ ತುಳು ಹುಡಿಗೆ. ॥೫॥

ಸಿರಿ ತುಳುನಾಡಿನ ಬಾಲೆ,
ಕಣ್ಣಕಾಂತಿಯನೆ ಪೋಲೆ,
ಜಿಂಕೆಮರಿಯ ತಾನತ್ತು
ಬೇಡಿತೆ ನಿನ್ನೊಳು ಸೊತ್ತು ? ॥೬॥

ಚೆಲುವ ಚೆಂದುಟಿಯು ಚೆಲ್ಲೆ
ರಾಗರಂಜನವ ನಲ್ಲೆ,
ತೊಂಡೆಹಣ್ಣದೆನಲೊಲ್ಲೆ
ಪಲ್ಲವೋಲ್ಲಸಿತ ಬಲ್ಲೆ. ॥೭॥

ಸರಸಿಜಮುಖಿಯೆಂದೇಕೆ
ಬಣ್ಣಿಪೆಯೇ ಕವಿ ? ಜೋಕೆ,
ಕನಸು ಮನಸಿಗದು ಬಯಕೆ
ಸುಂದರ ಸಂಗ್ರಹ ಸಾಕೆ? ॥೮॥

ಕೆಸರಿನ ಬಸುರಿಂದೆದ್ದು
ಕಂಟಕ ಕಾಯದೊಳಿದ್ದು
ಹೂವದಿರುಳು ಹುದುಗಿರದೆ ?
ನಿನಗೆ ನೀನೆ ಸರಿ ಮುಗುದೆ. ॥೯॥

ಸತ್ಯ ಸುಂದರತೆ ಬೆರೆತ
ನಿತ್ಯ ನಿರ್ಮಲತೆಯರಿತ
ಪ್ರೇಮ ಪೂರ್ಣಿಮೆಗೆ ಒಲಿದ
ಮೈಯ ಕಟ್ಟು ಬಿಗಿ ಬಿನದ. ॥೧೦॥

ಶಾಂತಿ ನೀತಿ ನಯಲೋಕ
ದಲ್ಲಿ ನೀನೆಯಧಿರಾಣಿ,
ಕಾಂತಿಕಲೆಯ ಕಟ್ಟೆರಕ
ಸೊಲ್ಲಿಸುತಿಹೆ ರಸರಾಣಿ, ॥೧೧॥

ಕುದುರೆಮುಖದ ತುದಿಯೇರಿ
ಇಳಿದು ಬಯಲ ಬಳಿ ಹಾರಿ
ನೇತ್ರಾವತಿಯಲಿ ಮಿಂದು
ಮಂಗಳೂರಿನಲಿ ನಿಂದು– ॥೧೨॥

ಸಾಗರಸಂಭವಶ್ರುತಿಗೆ
ರಾಗವ ಜೋಡಿಸು ಜತೆಗೆ;
ನೆಲ ನಲಿಯಲಿ ತನತಾನ !
ಗಾನ ನಿನಗೆ ವರದಾನ. ॥೧೩॥

ಮಕ್ಕಳ ಮುದ್ದಿಸುವಂದು
ಜೋ–ಜೋ–ಜೋಗುಳವೆಂದು.
ಕನ್ನಡ ಕವಿಗಳಗಂದು
ನೀ ಕಲಿಸಿಹುದಹುದೆಂದು– ॥೧೪॥



ಕವಿವರ ಮುದ್ದಣ ಪೇಳ್ದ
ತಾಯ್ನುಡಿ ತಿರುಳರಿತಿದ್ದ
ಮುದ್ದು ಮುದ್ದು ಜಗವಾಳ್ದ
ಮುದ್ದಣ ಸವಿ ಸವಿದೆದ್ದ ! ॥೧೫॥

ಪಚ್ಚೆ ಪೈರುಗಳ ನೋಡು
ಹೊಲ ನೆಲದಲಿ ನೀನಾಡು
ಕಟ್ಟಳೆಯನು ಕಾಪಾಡು
ತುಳುಪಾಡ್ದನ ಪದ ಹಾಡು ॥೧೬॥

ನಟ್ಟಿ ನೇಜಿಯೊಳೆ ನಿರತೆ
ರಾಗಲಹರಿಗೇಂ ಕೊರತೆ ?
ಮನೋಮಂದಿರದೊಳರಿತೆ
ಪುಣ್ಯಪಾಡ್ದನದ ಚರಿತೆ. ॥೧೭॥

ದಾನಧರ್ಮದಲಿ ನಿರತ
ಕಟ್ಟು ಕಟ್ಟಳೆಯೊಳಿರುತ
ಕೀರ್ತಿವೆತ್ತ ತುಳುಜನರ,
ಹಾಡು, ಪಾಡ್ದನದೊಳದರ, ॥೧೮॥

ಶಿಲ್ಪ ಶಾಸ್ತ್ರಗಳ ರಚನೆ,
ಕಲಾ ಧರ್ಮಗಳ ಘಟನೆ,
ಸಾವಿರ ಕಂಬದ ಬಸದಿ–
ಶಾಸನ– ಶಾಶ್ವತ ಕೀರ್ತಿ. ॥೧೯॥

ಕಾಲನು ಕುಣಿತದಿ ಕೆದರೆ
ಹಾ ! ಹಾಳಾಯಿತೆ ಬಿದಿರೆ ?
ಬಾರ್ಕೂರಿನ ರಸಕಥೆಯ,
ಗತ ವೈಭವದುರುವ್ಯಥೆಯ ॥೨೦॥

ಚೌಟ ಬಂಗರೊಡೆತನದಿ,
ಬಂಟರಾಳ್ದ ಮನೆತನದಿ,
ನಡೆದ ನಡಾವಳಿ ನೇಮ
ಹಾಡು ಪಾಡ್ದನದಿ ನಮ್ಮ. ॥೨೧॥

ಕೋಟೆ ಕೊತ್ತಳಗಳೊಡೆದು,
ಮಂದಿ ಮಾರ್ಬಲದ ಕಡೆದು,
ಅರಿಶಿರ ಚೆಂಡಾಡಿದನು,
ವೀರನಾರು ಹೇಳಿದನು ? ॥೨೨॥

ಹಾಡು ಪಾಡ್ದನವ ಹಾಡು,
ಹ ಹಾ ! ವೀರಕೃತಿಹಾಡು,
ವೀರವನಿತೆಯೆನೆ ಹಾಡು,
ಎದೆಯನರಳಿಸಲಿ ಹಾಡು. ॥೨೩॥

ಸ್ವರ್ಣ ಭೂಮಿಯಲಿ ಹರಳು
ಧನ್ಯ ಜನ್ಮಕಿದೆ ಹುರುಳು,
ತೌಳವಾನ್ವಯದ ತಿರುಳು,
ನಿನ್ನ ಕಾಂತಿಮಯ ಕರುಳು. ॥೨೪॥

ಸತ್ಯ ಸಂಗರದ ಭಟರು,
ಧೀರಶೂರ ತುಳುಜನರು
ನಿನ್ನ ಕರುಳೊಳಿಡಿದಿಹರು,
ವೀರ ಘೋಷ ಮೊಳಗುವರು.

ತುಳುವ ಜವ್ವನಿಗನೊಲಿಯೆ,
ಹೆಮ್ಮೆ ಹುಮ್ಮಸದಿ ನಲಿಯೆ,
ಪ್ರೇಮಪುತ್ಥಳಿಯ ಪಡೆದು.
ಹಿಗ್ಗಿ ಹಿಗ್ಗಿ ಸುಖ ಸವಿದು ॥೨೬॥



ವರ್ಷ ನಿಮಿಸದಂತಿರಲು,
ಅಯ್ಯೊ ! ಜೋಡಿ ಬೇರ್ಪಡಲು,
ನೊಂದು ಬೆಂದೊಡಲ ಬೆತೆಯ
ಹಾಡ, ಪಾಡ್ದನವ ಕತೆಯೆ ! ॥೨೭॥

ಹಾಡು, ಪಾಡ್ದನವ ಹಾಡು,
ಮೈಯ ಮರೆತಯದೊ ನೋಡು;
ಕಣ್ಣನೀರನದನೊರಸು,
ಕರುಣ ಕಥೆಯನಿದೊ ನಿಲಿಸು. ॥೨೮॥

ನೀನೋರ್ವನೊಳೊಡನಾಡಿ,
ಸವಿ ಸವಿಯುವೆ ಸಿಂಗಾಡಿ;
ಜನ್ಮ ಜತನದಲಿ ಜೋಡಿ
ಮಾಡಿಕೊಂಡಿರೊಡಗೂಡಿ. ॥೨೯॥

ಮುಗ್ಧ ಮನೋಹರ ಮಿಲನ.
ಸತ್ಯ ಸುಖದ ಸಂಕಲನ,
ಚಿತ್ತ ಚೇತನದ ಚಲನ,
ವಿಶ್ವವೈಭವ ವಲನ. ॥೩೦॥

* * * *

## ಶರದ್ಗಾನ

ಶರ ಶರತ್ಕಾಲ ಶುಭವ ಕಾಂಬುದು,
ಶರ ಶರತ್ಕಾಲ ಬದುಕಿಕೊಂಬುದು,
ಶರ ಶರತ್ಕಾಲ ಸುಖವನುಂಬುದು,
ಶರ ಶರತ್ಕಾಲ ಮೋದಗೊಂಬುದು;

ನೂರು ವರ್ಷ ಬಲದಿಂದ ಬಾಳ್ವುದು
ನೂರು ವರ್ಷ ಕಿವಿತುಂಬ ಕೇಳ್ವುದು
ನೂರು ವರ್ಷ ಮಾತೆಲ್ಲ ಪೇಳ್ವುದು
ನೂರು ವರ್ಷ ಸೋಲಿಲ್ಲದಾಳ್ವುದು.
ಶ್ರುತಿಯು ಸಾರಿತೀ ಮಾತು
ಹಿರಿದ ಋತುಗಳಲಿ ಶರತು.
ಮರಳಿ ಬಂದಿಹುದು ಕಾಲ
ನಲವು ಗೆಲವು ಜಗಕೆಲ್ಲ
ಸತ್ಯ ಶಿವವು ಸುಂದರವು
ಶರತ್ ದೇವಮಂದಿರವು
ಗಗನ–ನೀಲಿಮ–ವಿಶಾಲ ವೀಥಿಯಲಿ,
ಜಲದರಜತರಥವೇರಿ ಮೋದದಲಿ,
ಧವಳದಿಗಂತದಿ ಬೆಳ್ಗೊಡೆ ಬಿಡಿಸೆ,
ಪಕ್ಷಿಕೂಜನದ ವಾದನ ನುಡಿಸೆ,
ಪಶುಪುಚ್ಛದ ಸಿರಿಗೊಂಡೆಯೆ ವ್ಯಜನ,
ಶಾದ್ವಲ ಕಾನನ ಸುಂದರ ತೋರಣ,
ಋತು ಸಮ್ರಾಟನ ಮೆರವಣಿಗೆ
ಸ್ವಾಗತ ಶುಭ ಶರದಾಗಮಕೆ !
ಹಸಿರು ಸೀರೆ ಧರಿಸಿರೆ ನೆಲ ನೀರೆ,
ತಾವರೆಮೊಗದಲಿ ತೆಲ್ನಗೆ ತೋರೆ,
ಹರಿಯುತಿರುವ ಹೊಳೆ ಕೊರಳಿಗೆ ಹಾರ,
ತೃಣಸುಂದರಿಗಿರಿ ಸ್ತನಘನಭಾರ,
ತುಂಬುತೆನೆಯು ತೂಗಿದ ನತಗಾತ್ರ,
ಅಂಚೆಗಳಿರಂಚರ ಮೇಲ್ನಡೆ ನೂಪುರ;
ನಿಸರ್ಗದೇವಿಯ ನಿಜನಾಟ್ಯ
ದಿವ್ಯದರ್ಶನಕೆ ಶುಭಲಾಸ್ಯ.
ದೇವದೂತ ತಂದಿಹನೀ ವಾರ್ತೆ;
ಭಗವಂತನು ಬುವಿಗಿಳಿತಹನಂತೆ !
ನಿರ್ಮಲ ನದಿಜಲ ಪಾದ್ಯಕೆ ಸಿದ್ಧ



ಹಸಿರು ಹಾಸುಗೆಯು ಹಾಸಿದೆ ಸುತ್ತ
ಶೀತಲಮಂದಸವರಣ ಬೀಸೆ
ಭೂತಲ ಪುಲಕಿತ ಪುಣ್ಯಪಿಪಾಸೆ
ಶಾರದ ಬೀರಿದ ಕಾಂತಿ
ಲೋಕಕೆ ನಾಕದ ಶಾಂತಿ. ॥೨॥
ಹಸಿದು ಕಂಗೆಟ್ಟ ಬಡಜನತೆಗಶನವನೆರೆದು
ಕಣಜ ಬರಿಗೈದ ಕೃಷಿಕನ ಕೀರ್ತಿಯಂತೆ,
ಬೆಂದ ಭೂಮಿಗೆ ಬಿಡದೆ ಧಾರಾಳ ಮಳೆಗರೆದು
ಬೆಳಗುತಿದೆ ಬೆಳ್ಮುಗಿಲ್ ಬಾನ ಮುಂತೆ.
ಶೀಲವಿಲ್ಲದೆ ಪಡೆದ ಕಾಳಸಂತೆಯ ಧನವು
ಹಾಳಾಗೆ ಪಾಪಭಾರಂ ತಗ್ಗುವಂತೆ,
ಕದಡು ನೀರೇರಿ ದಡಮೀರಿ ಬಯಲಿಗೆ ಹಾರಿ
ನೆರೆ ನಿಂತ ಹುಚ್ಚುಹೊಳೆ ಸ್ವಚ್ಛವಂತೆ,
ಯಶವ ವಿಶ್ವವಿಶಾಲ ಮೆರೆಸಿದ ಮಹಾತ್ಮಾಜಿ
ಹರಿಜನರ ಹಸುಳೆಯನೆತ್ತಿ ಹಿಡಿದಂತೆ
ಪಶ್ಚಿಮಾದ್ರಿಯ ಶಿಖರ ಕುದುರೆಮುಖ, ಶಿರದಲ್ಲಿ
ಹಚ್ಚನೆಯ ಹುಲ್ಲು ತಳೆದಿದೆ ತಾಳ್ಮೆಯಿಂದ. ॥೩॥

ಪಚ್ಚೆಹರಳುಗಳ ಕಂಠಮಾಲೆಯಲಿ
ಕೆಂಪುಹವಳ ಪೋಣಿಸಿದ ಲೀಲೆಯಲಿ
ತೆಂಗುಕಂಗು ತಲೆಯೆತ್ತಿ ತೂಗುತಿದೆ
ಎತ್ತರೆತ್ತರಕೆ ಹೊತ್ತು ಸಾಗುತಿದೆ
ಫಲವೊ ಪುಷ್ಪವೋ ಕೊಡುವ ಕಾಣ್ಕೆಯಿದು,
ನೀರನೆರೆದ ನೀರದಗೆ ನೀಡುವುದು;
ಸಾಲು ಸಾಲಾಗಿ ನಿಂದು;
ತಾನು ಮುಂದೆಂದು ಬಂದು.
ಹಿಂದೆವುಳಿವುದೆಮಗೆಂದು ಸಲ್ಲದು
ಅಡಿಯ ಮುಂದೆಯಿಡೆ ಸಾಗಬಲ್ಲುದು
ಬನ್ನಿ, ಬನ್ನಿಯೆಡೆ ನಮಗೆ ಮೋದವು

ನಾಡ ನುಡಿಯ ದಿಗ್ವಿಜಯನಾದವು
ಮನವು ತನುವು ಜನವೆಲ್ಲ ನುಗ್ಗಿದೆ
ಊರುಕೇರಿ ಮನೆಮಠವು ಹಿಗ್ಗಿದೆ
ಪಂಥಕಿಂಥದಿನವಿರದು
ಗೆಲುವ ಕಾಲವೀ ಶರದು.
ಆಶೆ–ಅಮಿಷದ ಕೊಳೆಯ ತೊಳೆಯಲು
ದ್ವೇಷ–ಮತ್ಸರದ ಕಿಲುಬು ಕಳೆಯಲು
ಸರ್ವರುದಯ ಸಮದೃಷ್ಟಿ ಸಾಧಿಸೆ
ದುಡಿಮೆಯಲ್ಲಿ ದೇವತ್ವ ಶೋಧಿಸೆ
ಅಂತರಂ ಬಹಿರಂಗ ಶುದ್ಧವು
ನಮ್ಮ ಹೃದಯಗಳ ನಾವೆ ಗೆದ್ದೆವು;
ಶರತ್ಕಾಲವಿದು ಶುಭವು.
ಜೀವಜೀವನಕೆ ಸುಖವು.

* * * *

## ಯುಗಾದಿ

ಅನಾದಿಯುಗಾದಿಯ ಚೇತನವೆ,
ವಿಜಯಜೀವನ ನಿಕೇತನವೆ,
ಅನಂತನ ವೀನಚಿರಂತನವೆ,
ಮಣಿವೆನಿನಗೆ ಮಂಗಲ ದಿನವೆ.

ಬಂಗಾರದ ಜಿಂಕೆಯ ಮರಿಯೆ,
ಕಹಿಬಾಳಿಗೆ ಸವಿಸವರಿರುವೆ;
ಅಶೋಕದಿ ಶೋಕಿಪ ಸಿರಿಯೆ,
ವರುಷಕೊಮ್ಮೆ ಹರುಷವ ತರುವೆ. ॥೧॥



ನಿಶಾಪಟದ ಮುಸುಕು ತೆರೆದು
ಉಷಾನಟಿಯು ಬಂದಳು;
ಬೆಳ್ಳಿತಾರೆ ಮಿನುಗೆ ಮೋರೆ
ಉಲ್ಲಸದಲಿ ನಿಂದಳು.
ಕಂಪಿತ ಕಲಕಂಠದಿಂದ
ಪಕ್ಷಿಲಕ್ಷ ಕೂಜನ.
ಮಂದಗಂಧ ಶೀತವಾತ
ರಮ್ಯಕೆ ರೋಮಾಂಚನ !
ಪೂರ್ವಗಿರಿಯ ಕೋಡು ನೋಡು
ಅರುಣಕಿರಣ ತಬ್ಬಿದೆ !

ಮಣ್ಣು ಕಲ್ಲು ಮರದ ಗೆಲ್ಲು
ಹೊನ್ನಬಣ್ಣವಾಗಿದೆ !
ಬಾನು ಬಯಲು ಕಾನು ಕಡಲು
ಸೌಂದರ್ಯದಿ ಮಿಂದಿದೆ;
ಸಗ್ಗ ಬುವಿಗೆ ತಗ್ಗಿ ಬರಲು
ಸುಗ್ಗಿ ಹಿಗ್ಗಿ ನಿಂದಿದೆ.
ಎದೆಯ ಕದವ ತೆರೆಯುತಿರೆ
ಒಳಗೆ ಬೆಳಕು ಹರಿಯಿತು.
ಹೂಗಳೆಸಳು ಬಿರಿಯುತಿರೆ
ತುಂಬಿ ಹಾಡು ಮೊರೆಯಿತು,
ಎಂಥ ದಿವ್ಯ ಸುಪ್ರಭಾತ !
ಇದು ಯುಗಾದಿಗಾದಿಯು;
ಹೊಸತು ವರ್ಷಕೆನಿತು ಹರ್ಷ
ನವ್ಯತೆಗೆ ಬುನಾದಿಯು. ॥೨॥

ಮುಂಜಾವದಿ ಮಿಂದು ಬನ್ನಿ
ಹಣ್ಣುಕಾಯಿ ಹೊನ್ನು ತನ್ನಿ,
ಭಕ್ತಿಯಿಂದ ಬಂದು ಸುತ್ತು,

ಒಡೆಯನಡಿಗೆ ಕಾಣ್ಕೆಯಿತ್ತು,
ಶಿರವ ಬಾಗಿ ನಿಲುವುದು
ವರವು ನಿಮಗೆ ಸಲುವುದು,

ಹಿರಿಯರವರು ಪಾದ ಹಿಡಿ
ಕಿರಿಯರವರು ಹರಕೆ ಕೊಡಿ
ಬಂಧುಬಳಗ ಒಂದೆ ನುಡಿ
ಮನೆಯ ಮನವ ಬೆಳಗಿ ಬಿಡಿ
ಯುಗಾದಿಯಂದು ಎಲ್ಲರು
ಕೂಡು ಬಾಳಬಲ್ಲರು.

ವೀಳ್ಯದೆಲೆಯು ನೂರು ಸೂಡಿ
ರಸಬಾಳೆಯ ಹೇರು ನೋಡಿ
ತೆಂಗು ಕಂಗು ತುಂಬುಗೊನೆಯು
ಹಣ್ಣು ಹಲಸು ತಿಣ್ಣ ಹೊರೆಯು
ಹೊತ್ತು ತಂದರಿಂದಿಗೆ
ಕಾಣ್ಕೆಯೀಯುಗಾದಿಗೆ.

ತಂದೆ ತಾಯಿ ತವರು ನೆನೆದು
ಮಗಳು ಮುದ್ದು ಬಂದಳಿಂದು,
ಅಳಿಯ ಬಳಿಯೊಳಿಹನು ನಿಂದು
ಮದುವೆಯಾಗಿ ವರುಷವೊಂದು
ಸಂದಿತೀ ಯುಗಾದಿಗೆ
ಬಸಿರಿಯೀಕೆ ನಾಚಿಕೆ !

ಬಂದರಿವರು ಬಂದರವರು
ಬಂದಿರುವರು ಭರದಲಿ,
ನದಿಗಳಿಂದ ನದಗಳಿಂದ



ಹರಿದ ನೀರು ಕಡಲಲಿ,
ಎಲ್ಲ ಒಂದು ಕೂಡಲಿ
ಇಲ್ಲಿ ಹಬ್ಬ ಮಾಡಲಿ.

ಉಪ್ಪು ಮೆಣಸು ಸಿಹಿಯ ಕಹಿಯು
ಚೊಗರುಕಾರ ಎಲ್ಲ ರುಚಿಯು
ಕೂಡಿ ಮಾಡಿದಡುಗೆ ಬಡಿಸಿ
ಬಂದವರಿಗೆ ಮೊದಲು ತಿನಿಸಿ
ಭಕ್ಷ್ಯಭೋಜ್ಯ ಬಿತ್ತರ
ಬದುಕಿನೊಂದು ಚಿತ್ತರ.

ಹರಕುಚಿಂದಿ ಹರಿದು ಬಿಟ್ಟು
ಹೊಸತು ಪಟ್ಟೆಬಟ್ಟೆಯುಟ್ಟು
ಸಂಕಟಗಳ ಸಾಯೆ ಸುಟ್ಟು
ಬಾಳ ಬೆಳಗೆ ಪಣವ ತೊಟ್ಟು
ನುಗ್ಗಿ ಮುಂದೆ ಹೋಗಿರಿ.
ಹಿಗ್ಗಿ ಹಜ್ಜೆ ಹಾಕಿರಿ.

ಮನಕೆ ಸುಖವ ತಂದಿಹುದು
ಬುವಿಗೆಭಾಗ್ಯ ಬಂದಿಹುದು
ಚಿಂತೆ ಸಂತೆ ಸಂದಿಹುದು
ನಮ್ಮಯೇಳ್ಗೆ ಮುಂದಿಹುದು
ಈ ಯುಗಾದಿ ದಿನದಲಿ
ನೆನವುದಿದನು ಮನದಲಿ.

ಬೆಳಕಿನಲಿ ಮಿಂದವರೆ
ಕೊಳಕನೆಲ್ಲ ತೊಳೆದವರೆ
ಬದುಕಿನಲ್ಲಿ ಬೆಂದವರೆ
ಸಾವು ನೋವು ಕಳೆದವರೆ

ಇದೊ ಯುಗಾದಿ ಬಂದಿದೆ
ಹೊಸ ಹುರುಪನು ತಂದಿದೆ ! ॥೩॥

ವಿಕ್ರಮಾಂಕ ದೊರೆಗು ಮಿಗಿಲು
ಶಾತವಾಹನಾಂಕನೆನಲು,
ಯುಗಪುರುಷನ ಕೀರ್ತಿಯಿಂದೆ
ನವರತ್ನದ ಕಾಂತಿ ಕುಂದೆ
ತೊಡಗಿತಾ ಯುಗಾದಿಯು
ಶಕವರುಷಕೆ ಆದಿಯು.

ರೋಗ ಶೋಕ ಮುಪ್ಪು ಮರಣ
ಕರುಣೆ–ಕರುಳ ಕೊರೆಯುತಿರೆ,
ಧರೆಯ ಸಿರಿಯ ಮಡದಿ ಮಗನ
ಮೋಹ ಮಮತೆ ಮರೆಯುತಿರೆ
ಬುದ್ಧ ಬೆಳಕ ಬೀರಿದ;
ಹೊಸ ಯುಗವನೆ ಸಾರಿದ.

ಕೈಗೆ ಕಾಲ್ಗೆ ಮೊಳೆಯ ಜಡಿಯೆ
ಶಿಲುಬೆಗಿಕ್ಕಿ ಸಾಯೆ ಬಡಿಯೆ
ಅವರ ತಪ್ಪ ಕ್ಷಮಿಸುಯೆಂದು
ಮೊರೆಯನಿಟ್ಟ ತಂದೆಗಂದು
ಕ್ರಿಸ್ತ ಸತ್ತು ಬದುಕಿದ.
ಯುಗವೊಂದನು ತೊಡಗಿದ.

ಅರೇಬಿಯದ ಮರಳು ಧರೆಗೆ
ಧರ್ಮಾಮೃತ ಧಾರೆ ಸುರಿಸೆ,
ಹಚ್ಚೆ ಹಸಿರು ಹೆಚ್ಚೆ ನೆಲಕೆ
ಶಾಂತಿ ಸೋದರತೆಯ ಮೆರೆಸೆ



ನಬಿಯ ನುಡಿಯು ದನಿಸಿತು,
ಯುಗ ನವೀನವೆನಿಸಿತು.

ದ್ವೇಷದಲ್ಲಿ ಪ್ರೀತಿಯನ್ನು
ಮೋಸದಲ್ಲಿ ನೀತಿಯನ್ನು
ಭೀರುವಿನಲ್ಲಿ ಶೂರತೆಯನು
ಅಡಿಮೆಯಲ್ಲಿ ಬಿಡುಗಡೆಯನು
ತಂದ ತಾತ ಗಾಂಧಿಯು;
ನವಯುಗಕವ ನಾಂದಿಯು.

ಆನೆ ಕುದುರೆ ತೇರು ಜೋಡಿ
ಸಾವರ ಕಾಲಾಳು ಕೂಡಿ
ಯಾರ ಮನೆಯೊ ಸೂರೆಗೈದ
ಯಾವನೊಬ್ಬ ಶೂರನಿದ್ದ
ಪಟ್ಟವಣೆಯನೇರಿದ;
ಯುಗಾದಿ ಹಬ್ಬ ಸಾರಿದ.

ಸಿಂಹಾಸನ ನಡುಗುತ್ತಿತ್ತು,
ರಾಜಮಕುಟ ಕಳಚಿ ಬಿತ್ತು
ಕ್ರಾಂತಿಗರ್ಭದಾಳ ಸೀಳಿ !
ಚೆಮ್ಮಗು ಮೊರೆಯುತಿದೆ ಕೇಳಿ :
ಸಮತೆಗಿಹುದೆ ಹಾದಿಯು ?
ಜನತೆಗದೆ ಯುಗಾದಿಯು

ನೋಯುವಂತೆ ಹೊಡೆದವರು
ನೋಯದಂತೆ ತಡೆದವರು
ಸ್ವರ್ಗದಲ್ಲಿ ಬಿದ್ದವರು
ನರಕದಿಂದ ಎದ್ದವರು

ಅವರು ನಡೆದ ದಾರಿ.
ಯುಗಾದಿಯೆಂದು ಸಾರಿ.

ನಿನ್ನೆಯ ಕಣ್ಣೀರ ಕುಡಿದು
ನೋವ ನೆನೆದು ಮರುಗದಿರಿ;
ನಾಳೆಯೊಂದು ಬಾಳಿಗೆಂದು
ಬುತ್ತಿ ಹೊತ್ತು ತಿರುಗದಿರಿ,
ಇಂದು ಸುದಿನ ಬಂದಿದೆ;
ಹೊಸತು ಸುಖವ ತಂದಿದೆ.

ಬೇವು ಬೆಲ್ಲ ಬೆರೆಸಿ ತಿಂದು
ಬದುಕಿಗೆ ಭರವಸೆಯ ತಂದು
ಆಳದ ಪಾತಾಳ ಸಿಗಿದು
ಅಗಲದ ಗಗನಕ್ಕೆ ನೆಗೆದು
ಜೀವಧ್ವಜವು ಹಾರಲಿ !
ಶ್ರೀ ಯುಗಾದಿಗೇರಲಿ !

* * * *

## ಕನಸು

ಎಲ್ಲಿಯಡಗಿದನಿನ್ನು ಬಾರನೇ ಹೇಳಮ್ಮ ?
ಬಲು ದೂರ ಕರೆದೊಯ್ದು ಮರೆಯಾದನಲ್ಲಮ್ಮ !
ಚೆಂದುಟಿಯು, ಮುಂಗುರುಳು ದುಂಡುಮಲ್ಲಿಗೆ ಹಲ್ಲು !
ಅಪ್ಪನಂತೆಯ ಮುಖವು ! ನಿನ್ನವೇ ಕಣ್ಣುಗಳು ! ॥೧॥

ಬಾನಿನೋಡವನೇರಿ ಚಂದಿರನು ತೇಲಿಬರೆ,
ನಕ್ಷತ್ರ ಮಿನುಗುತಿರೆ, ನಾ ಚೆಲುವ ನೋಡುತಿರೆ;
ಬಂಗಾರದೊಂದು ಹಕ್ಕಿಯನೇರಿ, ಬಾನಿಂದ
ಬಂದಿಳಿದು, ತಮ್ಮ ಬಾರೆಂದೆನ್ನ ಕರೆದೊಯ್ದ ! ॥೨॥



ಚಿನ್ನ ಬಣ್ಣದ ಹಕ್ಕಿ ಬಾನಿನಗಲದಿ ಹಾರೆ,
ಅದರ ಮೇಲೇರಿ ನಾವಿಬ್ಬರೂ ನಲಿಯುತಿರೆ,
ಕಡಲು ನೆಲ ಮುಗಿಲುಗಳನೆಲ್ಲವನು ದಾಟಿದೆವು,
ಆಕಾಶದೆತ್ತರದೊಳೆಲ್ಲೆಲ್ಲು ಹಾರಿದೆವು ! ॥೩॥
ಎನ್ನ ಮುದ್ದಾಡಿದನು ! ಬಹಳ ಕೊಂಡಾಡಿದನು,
ಎನ್ನ ಬಿಗಿದಪ್ಪಿದನು, ಸವಿ ಮಾತನಾಡಿದನು;
ಎಲ್ಲಿಯಡಗಿದನಿನ್ನು ಬಾರನೇ ಹೇಳಮ್ಮ ?
ಬಲು ದೂರ ಕರೆದೊಯ್ದು ಮರೆಯಾದನಲ್ಲಮ್ಮ ! ॥೪॥

ರಾತ್ರಿಯೆರಡನೆ ಜಾವದಲಿ, ಕಂದನಳುತಿಂತು
ತಾಯೊಡನೆ ಕೇಳುತಿರೆ, ಕನಸಿನಿಂದೆಚ್ಚತ್ತು;
ಅಳಿದ ಹಿರಿಮಗನ ನೆನಪಾಗಿ, ಕಂಬನಿ ಸುರಿಸಿ,
'ಕನಸು ಕಂದಾ' ಎಂದು ಸಂತೈಸಿದಳು ಹರಿಸಿ ! ॥೫॥

* * * *

## ಭಾಗವತ

ಸ್ವರ್ಗಮರ್ತ್ಯಗಳ ನಡುವೆ ನೆಲೆಸಿಹುದು
ಯಕ್ಷಗಂಧರ್ವಲೋಕ ;
ದಿವ್ಯನವ್ಯತೆಯ ಶಿವದ ಸುಂದರದ
ಶ್ರೇಯಪ್ರೇಯಸಿನ ಪಾಕ.

ಭೂಮಿಯೆತ್ತರದಿ ಬಾನ ಬಿತ್ತರದಿ
ಎಲ್ಲಿಯಿಲ್ಲವಾತಂಕ ;
ಅವರು ಕಿಂಪುರುಷರವರು ಕಿನ್ನರರು
ಗಾನಲಹರಿ ನಿಶ್ಶಂಕ. ॥೧॥

ಜೀವ–ಭಾವ ನರ್ತಿಸಿತು, ರೂಪರಸ
ಮಿಂಚುತಿರಲು ಮುದವೇರಿ,
ಪೃಥ್ವಿಶ್ಯಾಮಲೆಯ ಮೈಗೆ ರೋಮಾಂಚ
ಚೆಂಡೆಮದ್ದಳೆಯ ಮೀರಿ–

ಮೇಘನಿರ್ಘೋಷ, ಶ್ರುತಿಯ ಜೋಡಿಸಿತು
ಕಡಲು ಗರ್ಜನೆಯ ತೋರಿ;
ಅಟ್ಟಹಾಸ ಮುಗಿಲಟ್ಟವೇರಿತು !
ದೇವದಾನವರು ಸೇರಿ. ॥೨॥

ತೆಂಗುಕಂಗುಗಳು ತಾಳೆಬಾಳೆಗಳು
ಗೊನೆಯು ತೆನೆಯು ತೂಗುತಿರೆ,
ತೆರೆಯ ಕುಣಿತದಲಿ ಹರಿವ ಮಣಿತದಲಿ
ನದಿಯು ನಾಟ್ಯವಾಡುತಿರೆ,

ಪಕ್ಷಿಕೂಜನದ ವಾದ್ಯ ವಾದನದ
ತಾಳ ಹಿಮ್ಮೇಳ ಸೇರೆ
ಬಂತು ಆವೇಶ ! ನೋಡು ಈ ವೇಷ !
ಸುತ್ತು ಸಂತೋಷ ಸೂರೆ ! ॥೩॥

ಸೃಷ್ಟಿರೂಪಕದ ಸೂತ್ರಪಾತ್ರಗಳ
ಜೋಡಿಸುವನು ಭಗವಂತ;
ಅದರ ಪ್ರತಿಬಿಂಬ ಬಿದ್ದ ಬಯಲಾಟ
ಆಡಿಸುವನು ಭಾಗವತ.

ತಾನು ಮೈಮರೆತು ಜಗವ ಮೈಮರೆಸಿ
ಕುಣಿಸುತ್ತಿದ್ದ ಜೋರಾಗಿ,
ಹಿಗ್ಗಿ ಹಾಡಿದನು, ಹಾಡಿ ಹಿಗ್ಗಿದನು,
ಗಾನಗಂಧರ್ವಯೋಗಿ. ॥೪॥



ನಾಡಿನುದ್ದಗಲ ಹಾಡುತಿದ್ದನು
ಹಗಲು ಕತ್ತಲೆಯು ಕೂಡಿ,
ಹಿಡಿದ ಜಾಗಟೆಯ ಬಡಿದ ತಾಳಕೆ
ಚೆಂಡೆ– ಮದ್ದಳೆಯು ಜೋಡಿ.

ಹತ್ತು ಶಿರಗಳನು ಹೊತ್ತ ದೈತ್ಯನು
ಸತ್ತ ಧರ್ಮವನು ದೂಡಿ.
ಧರ್ಮಕಲ್ತೆ ಜಯ ! ಮಹಾಭಾರತದ
ಕುರುಕ್ಷೇತ್ರರಣ ನೋಡಿ ! ॥೫॥

ಇಂದು ‘ಕಲ್ಯಾಣ’ ನಾಳೆ ‘ಕಾಳಗ’ವು.
ಈ ‘ಪ್ರಸಂಗ’ಗಳೆ ಮರಳಿ,
ಅದನೆವುಚ್ಚರಿಸಿ ನಾಡನೆಚ್ಚರಿಸಿ
ಬಾಳಗರ್ಥವನು ಹೇಳಿ ;

ಜೀವ ಚೈತನ್ಯ ಚಿಮ್ಮಿ ಹೊಮ್ಮಿಸಿದೆ
ಧಿಮ್ಮಿ ಧೀಂಕಿಟಂ ನೃತ್ಯ;
ಬಿಂಬಂವೆಂತೊ ಪ್ರತಿಬಿಂಬವಂತೆಯೆ
ನೀನೆ ಭಾಗವತ ಸತ್ಯ. ॥೬॥

* * * *

## ಕಥನ ಕವನ

"ಆತ್ಮಶಕ್ತಿಯ ತೇಜ ಪ್ರಜ್ವಲಿಸಿ ಚಲಿಸುತಿಹ
ವಜ್ರವೀರ್ಯದ ಕ್ಷೀಣದೇಹಿಯನು ನೀನೋಡು !
ಇರುಳೆದೆಯ ಸೀಳಿ ನಡೆಯುವ ಸೊಡರ ಕುಡಿಯಂತೆ,
ಊರುಗೋಲಾಧಾರವಾಗಿ ಸಾಗುವ ಮುಂತೆ–
ಮುನ್ನಡೆಸುತಿಹನು ಜನಗಣವ ಮಾಂತ್ರಿಕನಂತೆ !"



## ನಾದ : ಮೂರು – ಕಥನ ಕವನ

# ಊರ್ಮಿಳಾ

ಸಾಗರದಿ ಮುಳುಮುಳುಗಿ ರತ್ನಗಳ ತೆಗೆತೆಗೆದು
ತಿಕ್ಕಿತೋರಿಸಬೇಕು, ಚೆಲುವ ಚೆಲ್ಲಿಸಬೇಕು;
ರನ್ನಕಂಟಿಯ ಮಾಡಿ, ನಲ್ಮೆ ನೀತಿಯ ನೋಡಿ,
ಪ್ರೀತಿಗೀತೆಯ ಹಾಡಿ ಕೊರಳಿಗರ್ಪಿಸಬೇಕು ;
ಜಗದ ಜೀವನದೊಳಿದು ಪುಣ್ಯಪೌರುಷದ ಪಥ,
ಅಹುದಯ್ಯ, ಇಷ್ಟೆಲ್ಲ ರಸಿಕ ರಾಜ್ಯದ ಮಾತು–
ಈ ನುಡಿಯ ಕನ್ನಡಿಯೊಳೆನ್ನಮುಖ ಕಾಣುವುದೆ ?
ನಾನೋರ್ವನರಸಿಕನು; ಸಾಗರದಿ ಮುಳುಗಿರಲು
ಕಸಕಡ್ಡಿಯನು ತಿಳಿದು ತೆಗೆದು ನಾ ತೋರಿದೆನು,
ಅಂತಿರಲಿ, ಈ ಕವಿಯ– ಆ– ಆದಿಕಾವ್ಯವಹ
ರಮ್ಯರಾಮಾಯಣವ ನೀವೆಲ್ಲರೋದಿಹಿರಿ,
ಪದದರ್ಥಭಾವನೆಯ ಸವಿಯ ಬಲು ಸವಿದಿಹಿರಿ,
ಆದರವನಕ್ಷಮ್ಯದಪರಾಧ ತಿಳಿದಿದೆಯೇ ?
ಇರಬಹುದು – ನಿಮಗೆಲ್ಲ ತಿಳಿದು ಮರೆತಿರಬಹುದು;

ನಮಗರಿಯದಿಹ ವಸ್ತು ಇವಗೆಂತು ಹೊಳೆದತ್ತು;
ಎಂದೆನ್ನ ಕೆಣಕುವಿರಿ. ಅದಕಾಗಿ ಬೇಡುತಿಹೆ,
ನಿಮಗೆಲ್ಲ ತಿಳಿದಿತ್ತು – ತಿಳಿದು ಮರೆತೇ ಹೋಯ್ತು;
ಎನಗೆಂದು ಮರೆಯದಿದೆ, ಮನವೆಲ್ಲ ಮರುಗುತಿದೆ;
ಕಡು ಕಠಿಣಹೃದಯನಾ ಕವಿಯೆಂದು ತೋರುತಿದೆ !
"ಭಾವನೆಯ ಬಿಂಬದಲಿ, ಬಣ್ಣನೆಯ ಬೆಡಗಿನಲಿ,
ಪಾತ್ರ ಪೋಷಣೆಯಲ್ಲಿ, ಕೃತಿ ಚಮತ್ಕೃತಿಯಲ್ಲಿ,
ರಂಜನೆಯ ರಾಗ ರಸ ರಮಣೀಯ ರೀತಿಯಲಿ
ಅದ್ವಿತೀಯನು ಕವಿಯುವ – ವಲ್ಮೀಕತನುಭವನು,

ಕ್ರೌಂಚ ಮಿಥುನದ ಮೇಳನವು ಮುರಿಯೆ, ಬಲುನೊಂದ
ಸದಯಹೃದಯನ– ಋಷಿಯ– ಕಠಿಣಕವಿಯೆನಬಹುದೆ ?
ನಿನ್ನ ಮಾತಿದು ಕಠಿಣ; ಅವನ ಕೃತಿಯಲಿ ಕರುಣ
ರಸವೆ ರೂಪಾಂತಿಹುದ ಕಾಣಲಾರೆಯ ಮರುಳ ?...."

* * * *

ಪಿತೃವಾಕ್ಯ ಪಾಲನೆಗೆ ಶ್ರೀರಾಮ ಸತಿಸಹಿತ
ಕಾನನವನೈದಲ್ಕೆ, ಅಗ್ರಜನನನುಸರಿಸಿ
ಹಸಿವು ತೃಷೆ ನಿದ್ರೆಯಾಹಾರಗಳ ದೂರಿರಿಸಿ
ಹಗಲಿರುಳು ಸೋದರನ ಸತ್ಯಸೇವೆಗೆ ತನುವ
ಸವೆದ ತರುಣನ, ಯೋಧವರ ವೀರಲಕ್ಷ್ಮಣನ
ಅರಿಯದವರಾರುಂಟು? ಧನ್ಯ ರಾಮಾನುಜನೆ !
ನೈಷ್ಠಿಕ ಬ್ರಹ್ಮಚರ್ಯದಿ ಬೆಂದ ನಿನ್ನೊಡಲ
ಬಿಸಿಯುಸಿರು– ವೀರವಿರಹದ ಕಳೆಯೂದುತ್ತ
ಅಂತಃಪುರದ ದೃಢಕವಾಟವನ್ನೊಡೆಯುತ್ತ
ಸಾಕೇತನಗರದಲಿ ಆ ಸತಿ ವಿಯೋಗಿನಿಯ
ಆ ಚಿರಂತನ ಸಹ್ಯವಿರಹಿಣಿ ತಪಸ್ವಿನಿಯ
ಬಳಿ ಸೇರಿ, ನೆಲೆಯೂರಿ ಮೌನ ಮಂತ್ರಿಸುವಂದು–
ವಿರಹದುರುವೇದನೆಯು ಹೆಂಗರುಳ ಕೊರೆಯುವುದ
ನೀನಲ್ಲದನ್ಯರಾರ್ ತಿಳಿದಹರು ? ಬ್ರಹ್ಮಚಾರಿನ್.

ಕರುಳ ಕೊರೆಯುವ ವಿರಹದುರಿಯ ಬರೆದುಬ್ಬಿಸುವ
ಕವಿಯಹುದು ವಾಲ್ಮೀಕಿ; ಜಾನಕಿಯು ಜಾನಿಸುತ
ರಾಮಗುಣನಾಮದಲಿ ಬಲು ಬೆಂದು ಬಡವಾಗಿ
ಬಸವಳಿದ ಬವಣೆಗಳನೆನಿತು ಬಣ್ಣಿಸಲಿಲ್ಲ ?
ಹದಿನಾಲ್ಕುವರುಷಗಳ ಬಲುದೂರ ಕಾಡಿನಲಿ
ಕಳೆಯಲ್ಕೆ ಹೊರಹೊರಟ ಸಿರಿಮೊಗದ ನೀರನನು.
ಭೋಗಭಾಗ್ಯದ ಬಂಧನವ ಬಿಸುಟ ಬಂಧುವನು,



ತನ್ನ ಪತಿಯನು. ತರುಣ ಸುಂದರ ಸ್ವರೂಪನನು,
ನಯನಮನಮೋಹನ ಮನೋಹರ ಮನೋಜನನು –
ಕಾಡಿಗೋಡುವ ಕಾಲದಲಿ ಕಂಡು ಮನನೊಂದ
ಆ ಊರ್ಮಿಳಾದೇವಿಯೊಂದುವೊಂದೇ ಮಾತು !
ಸಹ್ಯವೇದನೆಗಾಗಿ ಸಾಂತ್ವನದ ಸವಿಮಾತು !
ಒಮ್ಮೆ ಕರುಣಾದೃಷ್ಟಿ, ಅಶ್ರುಧಾರಾವೃಷ್ಟಿ,
ಕರೆಸಲಿಲ್ಲಾ? ಕವಿಯು– ಕಠಿಣನಲ್ಲಾ ?

ಎಣೆವಕ್ಕಿ ಬೇರಾಗೆ ಅದಕಾಗಿ ಮರುಗಿಹನು,
ಪಕ್ಷಿಹೃದಯದ ಬೇನೆಯರಿತು ಬಲು ಬರೆದವನು,
ಮೂಕ ಸೃಷ್ಟಿಯೊಳಾದರನಿತು ಕರುಣಿಪ ಕವಿಯು,
ಪ್ರೇಮಪಿಂಡದೊಳಿಂತು ಪ್ರೀತಿದೋರುವ ಋಷಿಯು,
ಹಾ ಹಂತ ! ಇದನೆಂತು ಮರೆಯಬಹುದು ಮಹಾಂತ ?
ಕವಿಯು ಋಷಿಯಹುದಯ್ಯ ಬ್ರಹ್ಮರ್ಷಿ ಇರಬಹುದು,
ಒಳಿತಾಯ್ತು ಆ ಸಿದ್ಧಿ– ಕಂಡ ಕಾವ್ಯ ಸಮಾಧಿ;
ಅವರವನಲಿ ಮನುಷ್ಯನ ಹೃದಯವಿಲ್ಲೇನು ?
ಮಾನವನೆ ತಾನಾಗಿ, ಮನುಜರೆದೆ ಬಿರಿದೆದ್ದ
ಸ್ವರ್ಣಸುಂದರಪ್ರೇಮದಾ ಪ್ರವಾಹವ ಮರೆತ !
"ಹದಿನಾಲ್ಕು ವರುಷಗಳು ಆ ಊರ್ಮಿಳೆಯ ಮುಖವ,
ದೀನದಿವ್ಯ ಜ್ಯೋತಿ ಜಗಜಗಿಸುತಿಹ ಪರಿಯ
ಕಾಣಿವುದೆ ಅಳವಲ್ಲ ! ರವಿಯೇನು ? ಕವಿಯೇನು ?"
ಓ ಮಾತೆ, ಚಿರತಪಸ್ವಿನಿ ಭಾಗ್ಯಭಾರತಿಯೆ,

ನಿನಗಂದು ನೀರನಿಗೆ ಆ ವೀರವರ್ಯನಿಗೆ
ವನವಾಸದಾಯಾಸ ಸಂಪೂರ್ಣ ಪರಿಹರಿಸೆ
ಮಂಗಳಾರತಿಯೆತ್ತಿ ಸುಮಹೋತ್ಸವದಿ ನಲಿಯೆ
ಚೇತನವದೆಲ್ಲಿಂದ ಬಂತವ್ವ ? ಆ ಚೆಲುವ
ಚೆನ್ನಿಗನ ಕಂಡೆಯಾ? ವಿದ್ಯುದ್ವಿಲಾಸದಲಿ
ಚೈತನ್ಯವಾಕ್ಷಣದಿ ಚೆಲ್ಲಿ ಚೇತರಿಸಿತೆ ?

ಇರಬೇಕು, ಇಂತಲ್ಲದಿನ್ನೆಂತು ಬರಬೇಕು
ಹೇಳಮ್ಮ ? ಅಜ್ಞಾತವಾಸದಲಿ ನೀನಿಂತ
ನಿಶ್ಚಲ ನಿರಾತಂಕನಿಷ್ಠೆ ನೆನಪಾಗುತಿದೆ ;
ಒಂದೊಂದು ದಿನದಿನವು, ಮುಂದೊಂದು ಕ್ಷಣ ಕ್ಷಣವು
ನಿನಗೆಷ್ಟು ಕಷ್ಟ ಯುಗಯುಗವಾಗಿ ಸಾಗಿಲ್ಲ ?
ರಸಿಕರಾಜ್ಯದ ರಮಣರಿದಕೆ ಮಂಕಾಗರೆ ?
ಅರಸಿಕನು– ನಾನೆಂತು ಬರೆವೆ, ಕ್ಷಮಿಸೌ–ತಾಯೆ,

* * * *

## 'ಬೇಡುವೆಂ: ಚಂದ್ರವಂಶದ ಕುಡಿಯ ಕಾಪಾಡು'

ನೋಡಯ್ಯ, ಲೋಕವಂ ಬೆಳಗಿ ಬಹ ಉದಯರವಿ–
ಯಂದದಲಿ, ಅರುಣ ಕಿರಣದ ಕಾಂತಿ ಪಸರಿಸುತ
ತೆರೆಮೇಲೆ ಹೊಳೆಹೊಳೆದು ನಲಿಯುತಿಹ ಬಾಲನನು !
ಮುದ್ದು ಮೊಗದಿಂ ಹೃದಯದಲಿ ನಿಂದ ನಿತ್ಯ ನೈ–
ರ್ಮಲ್ಯವಂ ಮೇಣ್ಸವಿಯ ಸೂಸುತೆ ಶುಚಿಸ್ಮಿತದಿ
ಹರಿವ ಹೊನಲಿಗೆ ತನ್ನ ಮೈವೆಳಗನೊಲಿದಿತ್ತ
ಮಾತೆ ಮಂದಾಕಿನಿಯ ಮಡಿಲ ಮೇಲ್ಪವಡಿಸಿದ
ಸೌಂದರ್ಯಮೂರ್ತಿಯನು, ಸೂರ್ಯ ಸುಕುಮಾರನನು !

ಅರಲ್ಲಿ ದಡದಮೇಲ್ನಿಂತಿಹಳು ?
ಸಂಭ್ರಮದಿ
ವಿಭ್ರಾಂತಳಾಗಿಹಳು, ಅವಿಚಾರವರ್ತನೆಗೆ
ನಾಚಿ ನಡುಗುವಳೇನೊ? ಕನ್ನಿಕೆಯು– ಕುಂತಿಯೆ ?
ಸುಂದರ ಸುಪುತ್ರನನು ಪಡೆದರೂ, ಮುದ್ದಾಡಿ
ಮೊಲೆಯೂಡಲಾರದಿಹ ನಿರ್ಭಾಗ್ಯೆ, ತಿಳಿತಾಯೆ,



ವಿಶ್ವ ಸೋದರರನಿವನು– ವಿಶ್ವಾತ್ಮ ಸಲಹುವನು,
ಮಾತೆ, ಮನಮರುಗದಿರು,
ವಿಶ್ವದ ವಿಶಾಲತೆಯ
ಕಡೆಗಾಗಿ ಸಾಗುವನು, ತಡೆಯಲಾರಳವುಂಟೆ?
ಬಲವಂತವೈ ಸೆಳೆತ, ಎನಿತೆನಿತೊ ದೀನಜನ
ರಿವನು ಬರಲಿಹನೆಂದು ಹಗಲಿರುಳು ಹಾರೈಸಿ
ಹರಕೆಹೊತ್ತಿಹರವ್ವ ತ್ಯಾಗಮೂರ್ತಿಯು, ದಾನ
ಶೂರನಿವ ಬಂದೊಮ್ಮೆ ಬೆಂದೊಡಲ ತಣಿಸುವನೆ
ಎಂದೆನುತ ಹಾತೊರೆದು ಕಾದಿರಲು, ನಿನ್ನದೀ
ಸ್ವಾರ್ಥಸಂಕುಚಿತ ಪ್ರೇಮದ ಸೆರೆಗೆ ಸಿಲುಕುವನೆ ?
ನೀಂ ಪಡೆವೆ ವೀರರನು,
ರಣಮತ್ತಧೀರರನು;
ರಾಜಾಧಿರಾಜರನು – ಆದರದೊ, ಬಾಯ್ಬಿಟ್ಟು
ಬೊಬ್ಬಿಡುವ ಬಡಮಂದಿಗಾರು ಗತಿ ಹೇಳವ್ವ ?
ಪುಣ್ಯಪಾವನ ಜಲತರಂಗೆ ಗಂಗೆಯ ದಿವ್ಯ
ಕರಕಮಲವರಳಿಸುತ ಸಾಗಲೈ ಸೂರ್ಯಸುತ!
ಸಾಗಲೈ, ವಿಶ್ವದ ವಿಶಾಲತೆಯ ಕಡೆಯತ್ತ– ದೃಢಚಿತ್ತ !....

ರಾಜಕುಲದಲಿ ಹುಟ್ಟಿ, ಚತುರಂಗ ಬಲಕಟ್ಟಿ,
ಧನದರ್ಪದಿಂ ಮೆಟ್ಟಿ ಒಡೆತನವ ಪಡೆದವರು
ಹಲವರೈ, ರಾಜೇಂದ್ರ ದೇವೇಂದ್ರರೆಂದಿತು
ವಂದಿಮಾಗಧರಿಂದ ತಮ್ಮ ಬಿರುದಿನ ಪಾಡ
ಹಾಡಿಸುತ, ಕೇಳಿ, ತಲೆದೂಗಿ, ಸುಖಸಾಮ್ರಾಜ್ಯ
ಆಳಿದವರೈ ಕೆಲರು;

ಹೋದದಂದು, ಚಿತ್ರಸಿಂ–
ಹಾಸನವು ನೆಲದಡಿಗೆ, ಛತ್ರಚಾಮರವಾಗ–
ಸದ ಕಡೆಗೆ, ರತ್ನಮುಕುಟವು ಹಗೆಯ ಕಾಲಡಿಗೆ,
ಉಳಿಯಿತೇ ಹಿರಿಹೆಮ್ಮೆ? ನಿರ್ನಾಮವಾಯ್ತೊಮ್ಮೆ !

ಮೇಣವರ ಕಿರಿಕೂಗ ಕನಸಿನಲ್ಲಾದರೂ
ಕೇಳಿ, ಕಳವಳಗೊಂಡು ಕತೆಯ ಕಟ್ಟಿದರಿಲ್ಲ!
ಮುಂದೆ ಹೊಗಳಿದ ಮಂದಿ ಹಿಂದೆ ತೆಗಳುವರೆಲ್ಲ !
ಸಂದವರ ಸಂಗಡದೆ ಸಂದು ಪೋಪುದು ಹೆಸರು;
ಬೆಂದವರ ಬೆಂಬಳಿಯೆ ಬೆಂದು ಹೋಗರು ಜನರು.

ಎಲ್ಲೆಲ್ಲು ಕಲಿಕರ್ಣನಂ ಹೊಗಳದವರಿಲ್ಲ;
ಚಂದ್ರಾರ್ಕರಿರುವನ್ನ ಕರ್ಣಕರ್ಣದೊಳವನ
ಗಂಭೀರ ಗುಣಗಣರವಂ ಗುಣಿಸಿ ಗುಡುಗುವುದು,
ಅಜ್ಞಾತಕುಲಗೋತ್ರನೆನೆ ಜಗದ ಮರೆಯಲ್ಲಿ
ಬಡಬೆಸ್ತ ಗುಡಿಸಲಲಿ ಬೆಳಗಿದನು ಬಾಲ್ಯದಲಿ.
ಸುಡುವ ಕೆಂಡವ ಬೂದಿ ಮುಚ್ಚಿದ್ದೊಡೇನಂತೆ ?
ಸ್ವಾತಂತ್ರ್ಯ ಶಕ್ತಿಯಿಂ ಪೌರುಷದ ಪಥವಿಡಿದ
ಕೆಚ್ಚೆದೆಯ ಕಲಿಯುವಗೆ ತಡೆಯುಂಟೆ ನಡೆವಲ್ಲಿ ?

ರಾಧೇಯನೆಂದಿಂತು–
ಹೀನೈಸಿ ಹೇಳುವಿರೆ ?
ಕೀರ್ತಿಕೌಮುದಿಗೇನು ಕೊರತೆ ಕಂಡಿರೆ ಜನರೆ ?
ಚಂಡಕಿರಣವ ಕಂಡು ಕಣ್ಣುಕ್ಕಿ ಗೂಗೆಗಳು
ಬೆಳಗುತಿಹ ಭಾಸ್ಕರನ ಪಳಿದರೇಂ ಫಲವುಂಟೆ?
ತನ್ನೆದೆಯ ವೀರ ಪೌರುಷ ಬೀರಿ, ಹೆಸರಾಂತು
ಸಾಕಿ ಸಲಹಿದ ಮಾತೆಯೊಡಲ ತಣಿಸಿದನಲ್ತೆ.

ಏಂ ಸಾಹಸವೊ ?
ರುದ್ರಶಿಷ್ಯ – ಭಾರ್ಗವ – ಪರಶು
ಧರ ರಾಮನೊಳೆ ಧನುರ್ವಿದ್ಯೆಯಂ ಪಡೆದನೈ;
ಮಾನಧನ ಫಣಿರಾಜಕೇತನನ ಕುರುವಂಶ
ಕೇತು ಕೌರವ ಭೂಮಿಪನ ಕೆಳೆಯ ಕೊಂಡನೈ.
ಗುಣಕೆ ಮತ್ಸರವುಂಟೆ ಗುಣಿ ಕೌರವೇಂದ್ರನಲಿ ?



ಹೃದಯಹೃದಯಗಳೊಂದೆ ಬೆಸುಗೆಗೊಂಡುವು;
ಅಂಗರಾಜ್ಯದಿ ಮಕುಟಧರನಾಗಿ ಧೀರ ದು–
ರ್ಯೋಧನಗೆ ಬಲಿತ ಬಲಗೈಯ್ಯಾಗಿ ಮೆರೆದನೈ
ಅಂಗರಾಜಾ,
ನೀನು ಬುವಿ ಬೆಳಕನೋಡಲ್ಕೆ
ಕವಚಕುಂಡಲ ಧರಿಸಿ ಬಂದುದಲ್ಲದೆ, ಅಮೃತ
ಹಸ್ತವಂ ಹಿಡಿದೆತ್ತಿ ಹೊರಟೆಯಾ? ಕೊಟ್ಟನಿತು
ಕೋಶವಿಮ್ಮಡಿಸಿತಲ ! ಮುಮ್ಮಡಿಯ ನಾಲ್ಮಡಿಯ
ನೀನೀವ ನೀಃಸ್ವಾರ್ಥಿಯೆಂದರಿತೆ ?
ನಿಜವಾಗಿ
ಜಗಜೀವ ತಣಿದತ್ತು, ನಿಜನಾಮ ನೆಲೆಯಾಯ್ತು,

* * * *

ಇವನಾರ್ಗೆಬುದವಂ?
ಬಡ ಬರಡ ಹಾರುವಂ;
ಕಣ್ಣೆವೆಯನಿಕ್ಕದಿಹ, ಮನುಜನಲ್ಲೈ ದೇವ!
ರೂಪ ಮರೆಸುತ ಬಂದೆ ಮಾಯಾವಿ ! ನಿನಗಿಂತು
ದುರ್ವಿಧಿಯೇ ? ದೇವೇಂದ್ರನೆಂಬವಂ ನೀನಲ್ತೆ ?
ಹೆಂಬೇಡಿ,
ನಿಜಸುತಗೆ ! ಪಾರ್ಥಂಗೆ ಕಲಿಕರ್ಣ
ನೀಂ ಕೆಡುಕ ಶಂಕಿಸುತ ವಂಚಿಸಲ್ಬಂದಿಹೆಯ ?
ಸತ್ಯಹೃದಯನ ಹೃದಯಕಂಟಿರುವ ಕವಚವಂ
ಕೇಳುವೆಯ ? ಕಲಿತನವ ಕಳುವೆಯಾ? ನಿಷ್ಕರುಣಿ.
ಹುಟ್ಟಿದಂದೇ ತನಗೆ ತೊಟ್ಟು ಕಳುಹಿದ ಕವಚ
ಬಿಗಿಯಾಗಿ ಬಿಗಿದಿತ್ತು; ಬಳೆದಂತೆ ಬೆಳೆದಿತ್ತು.
ಬಗೆದನೇ ಕಲಿಕರ್ಣ ?
ಕೊಡಲಾರನೆಂದನೆ ?
ಚರ್ಮಕಂಟಿರುವ ಕವಚವ ಸುಲಿದು ಸೆಳೆದೀಯೆ,
ರಕುತ ಚಿರಿಚೆಲ್ಲುತಿರೆ, ನೊಂದಿಲ್ಲ, ನವೆದಿಲ್ಲ,
ತಾನಮೃತವರ್ಷದೊಳೆ ನಾಂದಂತೆ ನಲಿದನೈ !

* * * *

ಸತ್ಯಬಂಧವ ಕಡಿದು, ಛಲ ದುರಾಗ್ರಹ ಹಿಡಿಯೆ,
ಕ್ರಾಂತಿಕಾಳಿಯು ಕದನ ಕೋಲಾಹಲಕೆ ಕೂಗಿ
ಕರೆದಳೈ ಪಶುಗಳಂ ಯುದ್ಧಯಜ್ಞದ ಬಲಿಗೆ;
ಪಾರ್ಥಿವರ ಪಂಥವೋ ? ರಸೆಯ ಮೇಲಾಸೆಯೊ ?
ಕೌರವರ ಪಾಂಡವರ ಹೋರಾಟ ಹಿರಿದಾಗೆ,
ಮತ್ಸರವೆ ಮರವಾಯ್ತು, ವೈರಶಾಖೆಗಳಾಯ್ತು,
ವಿಷಮ ವಿಷಫಲವುಣ್ಣಲಷ್ಟಾದಶಾಕ್ಷೌಹಿ
ಣೀ ಸೈನವಾದರದಿ ಬಾಯ್ದೆರದು ನಿಂದಿತ್ತು.

ಮೃತ್ಯು ಮುಂದಡಿಯಿಡುತೆ, ತುತ್ತು ಗೊಂಬವಸರದಿ
ಕಿತ್ತುಕೊಳಲಾರಳವು ಕವಳವನು? ಕೌರವನು,
ಕಾದುವುದೆ ಕಡೆಯೆಂದು, ಗೆಲವಾಗೆ ಜಯಭೂಮಿ
ಸೋತೊಡೇಂ ಸುರಪದವಿಯೆಂಬ ಹಠ ಹಿಡಿದಿರಲು,
ಭೀಮ ಭೀಮಾರ್ಜುನರು ಭಾಷೆಯಂ ಬಿಗಿದಿರಲು ;
ಮಿತ್ರಕಾರ್ಯಕೆ –
ಶಸ್ತ್ರವೆತ್ತಿ ನಿಂದಂ ವೀರ.

ಸಂಧಿಯೇಂ ?
ಸಮರ ಸಂಬಂಧವನೆ ಸರಿಗೊಳಿಸೆ
ಬಂದನಲ್ಲಾ ಕೃಷ್ಣ, ಕುಟಿಲನೀತಿಯ ನಿಪುಣ,
ಏಕಾಂತಕೇಕಾಂಗವೀರ ಕರ್ಣನ ಕರೆದು
ಕಿವಿಯೊಳೂದಿದನಿಂತು ಮಂತ್ರಮಂ : "ಹೇ ವೀರ,
ನೀನಲ್ತೆ ಮಾತೆ ಕುಂತಿಯ ಹಿರಿಯ ಸುಕುಮಾರ!
ಕುರುಕುಲದ ಪೀಳಿಗೆಯ ಪುಣ್ಯಪಟ್ಟವನೇರೆ
ನೀನೊಡಂಬಡ ಬಾರ, ಬಳಿನಿಂತು ಬರಿದಿಂತು
ಕೌರವನ ಬಾಯ್ದಂಬುಲವ ಬಯಸುವೆಯ ? ಬಗೆಯ !"

ಕೊಂದನೆನ್ನಯ ದೊರೆಯ–
ಕೌರವೇಂದ್ರನನೆಂದು.



ನೊಂದನಲ್ಲದೆ ತಲೆಯ ತೂಗಿದನೆ ? ಸೂತಸುತ–
ನಲ್ಲ ತಾಂ, ರಾಜವಂಶದ ಪುಣ್ಯಪಾರ್ಥಿವಂ
ನಿಜವೆಂಬ ನುಡಿಗೇಳಿ, ಸ್ವಾರ್ಥಸಂಭ್ರಮ ತಾಳಿ
ಸಾರ್ವಭೌಮತ್ವವಂ ಬಯಸಿದನೆ? ಸಿಡಿಲು ಬಡಿ–
ದಂತಾಗೆ ಸಖನ ನಲ್ಮೆಯ ನೆನೆದು ಮರುಗಿದಂ!

"ಶ್ರೀ ಕೃಷ್ಣ, ಪರಿಪೂರ್ಣ ಪರಮಾತ್ಮ ನೀನೆಂದು
ನಂಬದಿಹುದೆನ್ನಳವೆ? ನೀನೆಂದ ನುಡಿಯೊಂದೂ
ಸಟೆಯೆನುವ ಹಟವಿಲ್ಲ, ಆದೊಡೇಂ ತಿಳದಿಂತು
ಜೀವನ್ಮೃತನ ಮಾಡಿ ಕೆಡಿಸದೈ? ಪಟ್ಟವನೆ
ಕಟ್ಟುವೆಯ? ರಾಜ್ಯಗೀಜನಳೆಗಲು, ಬಯಸಿ, ಬಾ
ಯ್ಬಿಡುವಂತು ಹೀನ ಹೃದಯನ? ತಿರುಳ ತಿಳಿದಿರೆಯ ?
ಜೀವಮಿತ್ರಂ ಕರ್ಣನೆಂದು–
ನಂಬಿದನಯ್ಯೊ,
ಕುರುಕುಲಾಗ್ರಣಿಯೆನ್ನ, ನೀ ಕೃತಘ್ನನ ಗೈದೆ !

ಶ್ರೀ ಲೋಲ, ನೀಂ ಜಗದ್ರಕ್ಷಕಂ ನಿಂದಿಂತು
ಜೀವಪಾಂಡವರೆಂದು ಪರಿಪಾಲಿಸುತ್ತಿರಲು
ಸೋದರರ ಸಂರಕ್ಷಿಸುವ ಭಾರವೆನಗುಂಟೆ ?
ಖಣವೊಂದು–
ಕೌರವಂ ಸಾಕಿಸಲಹಿದನನಾ–
ಥನನೆನ್ನದರಿನಾಂ ಸ್ವಾಮಿಕಾರ್ಯದೆ ಮಡಿವೆ.
ನೋಯಿಸೆಂ– ನಂಬಿದರ
ನಿನ್ನವರ ಪಾಂಡವರ."
ಎದೆಗೆ ಶೂಲವನಿಕ್ಕಿ ಕೊರಳ ಮುರಿದಂತಾಗೆ,
ಕಂಠ ಗದ್ಗದಿಸುತಿರೆ ಮುಮ್ಮಾತು ಬರದಾಯ್ತು.
ಕಂಬನಿಯ ಕಿಡಿಯುದುರೆ ! ನೋಡಿ ಮುರಹರಿ ಬೆದರೆ,
ಬೆಂದ ಮೈ ಬಸವಳಿದು ಬಾಡಿ ಬುವಿಗಿಂಬಾಯ್ತು,
ಧೀರವರಗಂಭೀರ ಸತ್ಯಸುಂದರ ರವಿಜ–

ನೀ ವೀರವಿಲಸಿತ ವಚೋನಿಶಿತಶರಹತಿಗೆ
ಒಡಲಹಹ ಸುಡುತಲಿರೆ, ಕೃಷ್ಣನೆದೆತಣಿಸೆ, ಹಿಡಿ–
ದೆತ್ತಿ, ಬಿಗಿದಪ್ಪಿ ಮುಂಡಾಡಿ ಕೊಂಡಾಡಿದಂ;

"ಪೌರುಷದ ಪಥವಿಡಿದು, ವೀರಧರ್ಮದಿ ನಡೆದು,
ಕರ್ಮವಂ ಕೈಕೊಂಡು ಕಲಿತನದಿ ಕಾದಾಡು;
ಫಲವೇಕೆ ? ಗೆಲವೇಕೆ ? ಸೋತೊಡದು ಸೋಲಲ್ಲ,
ನಿನ್ನಂತಹಗೆ ಸಲ್ಲ; ಮುನ್ನುಂಟೆ? ಇನ್ನುಂಟೆ?
ಹೇ ಕರ್ಮವೀರ ಕಲಿಕರ್ಣ ತವನಾಮವಜ
ರಾಮರಂ ಸತ್ಯಸುಂದರ ಮಂಗಳಂ ಮೆರೆಗೆ!"

* * * *

ಬೆಳ್ಳಿ ಬೆಳಗುವ ಹೊತ್ತು–
ಕೋಳಿ ಕೂಗುತಲಿತ್ತು.
ಚೆಲುವು ಚೆಲ್ಲುತ ಬರಲು, ಜೀವನೋಲ್ಲಸವಿರಲು,
ಜಡನಿದ್ರೆಯಂ ಮರೆದು, ನವಜೀನವನವನೆರೆದು,
ಶ್ರೀ ಉಷಾಸುಂದರಿಯು ಚೈತನ್ಯಮಯಿಯಾಗಿ,
ಚಿರಮನೋರಮೆಯಾಗಿ, ರುಚಿರಸೋದರೆಯಾಗಿ,
ಸಸ್ಯಶ್ಯಾಮಲೆಯಾಗಿ, ನಿತ್ಯ ನಿರ್ಮಲೆಯಾಗಿ,
ಬಾನ ಹರಿವಾಣದಲ್ಲಿ ಕುಂಕುಮವ ಕೂಡಿಟ್ಟು
ಸಂಭ್ರಮೋಲ್ಲಸದಿಂದ ಸ್ವಾಗತಕ್ಕೆ ನಿಂದಿಗಳು
ಗಂಭೀರ ಮುಖಮುದ್ರೆ ಮೆರೆಯುತಿರೆ–
ನಲವಿಲ್ಲ,
ಗೆಲವಿಲ್ಲ, ಶ್ರೀಮುಖದಿ ಛಲವಿಷಾದದ ರೇಖೆ
ರೂಪಿಸಿರೆ, ಮುನ್ನಡೆವನ್ನೈ ಮೂಡುದಿಸೆವಿಡಿದು;
ಆರಿವಂ?
ಸೂತಸುತ ಮೇಣ್ ರಾಧೆಯಣುಗ ನೆಂ–
ದೆನ್ನುವಿರೆ? ಲೋಕನಾಟಕ ಸೂತ್ರಧಾರ ನಂ–



ದೆಳೆದನಲ ತೆರೆಮರೆಯ, ಪಾರ್ಥ ಪಾರ್ಥಿವನೀತ.

ಅರುಣೋದಯದೊಳಿಂತು, ರವಿಸೂನುವೆಚ್ಚತ್ತು,
ಪೆತ್ತಯ್ಯಗರ್ಘ್ಯವಂ ಕೊಡಲೆಂದು– ತನ್ನೆದೆಯ
ಕಿರುಬೆಳಗನಾ ಜಗಜ್ಜ್ಯೋತಿಯಲಿ ಪರಮೈಕ್ಯ
ಗೊಳಿಸಲಿಹ ಯೋಗಸಾಧನೆಗೆಂದು, ಮಾತೆಮಂ–
ದಾಕಿನಿಯ ತಡಿವಿಡಿದು ಸಾಗಿರಲು– ಹೃದಯದಲಿ
ದಿವ್ಯದರ್ಶನವೆಂದೋ? ಸಂತಸದ ಸುಳಿವೊಮ್ಮೆ.
ಕಠಿಣವೊದಗುವುದೆಂದೊ? ಏನೋ ಕಳವಳವೊಮ್ಮೆ
ಮೂಡುತಿರೆ ಬಾಡುತಿರೆ ತನುವ ಮುನ್ನೊಂಕಿದಂ !

ಶುದ್ಧಹೃದಯಂ ಬಂದು, ಶುರ್ದದಜಲದೊಳ್ನಿಂದು
ಶುದ್ಧಾಂತರಂಗದಲಿ ಶುದ್ಧ ಮೂರ್ತಿಯ ಜಪಿಸಿ,
ಬಾಹ್ಯ ಭಾವದ ಮುಚ್ಚಿ, ಸುಖಸಮಾಧಿಗೆ ಮೆಚ್ಚಿ,
ಕೈನೀಡಿ ಮೈಗೂಡಿ ನಿಂದಿರಲು–
ಸೂರ್ಯ ಸಿಂ–
ಹಾಸನದಿನಿಳಿದೊಂದು ದಿವ್ಯದೇವತೆ ಬಂದು
ಮಸ್ತಕದಿ ಹಸ್ತವಿಟ್ಟೆಚ್ಚರಿಸಿದಂತಾಯ್ತು !

"ಜಯ ಜನನಿ,
ಸ್ವರ್ಗದಿಂದಿಳಿತಂದೆ ಹೇ ದೇವಿ,
ಬೆಂದು ಬೇಗುದಿಗೊಂಡ ಕಂದನಂ ಕಾಪಿಡಲು
ಬಂದಿಹೆಯೆ ? ವರದೆ ! ವರಗಳನೀಯೆ ಕಯ್ಯೆತ್ತಿ
ಕಣ್ಮುಂದೆ ನಿಂದಿಹೆಯೆ? ಬೇಡಲೇಂ ? ಕಲಿಯಂತೆ
ಕಾದಾಡಿ ವೀರಸ್ವರ್ಗವ ಪಡೆವೆ ! ನಿಜವಿದಕೆ–
ವರವೇಕೆ ? ಶ್ರೀ ಕುರುಕ್ಷೇತ್ರ ರಣರಂಗದಲಿ
ಗಾಂಡೀವಿ ಮುಂಬಂದು ಭುಜಹೊಯ್ದು ನಿಂದಿರಲಿ !
ಶುಭಮುಹೂರ್ತದೊಳಿಂತು ಬಂದೆ ನೀನಾರವ್ವ ?"

ಕರುಳು ಕೊರೆಯುತಲಿರಲು–
ಕುಂತಿ ಕೇಳುತಲಿಹಳು!
ಕೊರಳ ಸೆರೆ ಬಿಗಿವಡೆಯೆ, ಕಣ್ಣೀರ ಹೊನಲೊಡೆಯೆ
ಮರುಕವಂ ಮರೆಮಾಡಿ ಹೇಳಿದಳು: "ಹೇ ಚಿನ್ನ,
ಪಾಪಿ ಪಾತಕಿಯೆನ್ನ ದೇವಿಯೆನ್ನದಿರಣ್ಣ,
ಈ ಜಗಜ್ಜೀವ ತವತಾತ ಸೂರ್ಯನೊಳಂದು
ಮೊದಲ ಪರಿಚಯವೊಂದು ಗೈಸದಿವಳಾಂ ಕಂದ!"
ಮಮಮಾತೆ,.
ತಿಳಿವಾಯ್ತು, ಹೆತ್ತಕುವರಂ ತಾನು
ಸೇವೆ ಸಲಿಸಿಲ್ಲೆಂದು ಮರುಕವೇ ನಿನಗಿಂದು ?
ತಾಯೆ, ತಿಳಿದಿರಲಿಲ್ಲ !
ವಾಸುದೇವಂ ಬಂದು
ಪೇಳ್ದ ಬಳಿಕಿದನರಿತೆ ; ನಿಜ ಕೃತಘ್ನಂ ತಿಳಿದೆ ;
ಕಟ್ಟೆ ಜೀವವ ವಿಧಿಯು ಬಡಿದಟ್ಟುತಿರೆ, ಜನನಿ,
ಪುಣ್ಯ ಗರ್ಭದೊಳೆನಗೆ ಮಂಗಳಾಶ್ರಯವಿತ್ತೆ !
ಋಣವನ್ನಿನ್ನೆಂದು ನಾಂ ಕೊನೆಗಾಣಿಸಲಿ? ನಿನ್ನ
ಬರವೇನು? ಬಯಕೆಯೇಂ ? ಸಲಿಸುವೆಂ ನುಡಿ ತಾಯೆ"
"ಬಾ ಕಂದ, ಹಿರಿ ಕುವರ
ಬಾರೆನ್ನ ಬಿಗಿದಪ್ಪು;
ಉಪ್ಪನ್ನವಿತ್ತವಗೆ ತಪ್ಪೆಣಿಸದಿರು ಮಗನೆ,
ಹೇಡಿಯೆನೆ ಹಿಂದುಳಿಯದಿರು ರಣದಿ, ಬೇಡುವೆಂ :
ಚಂದ್ರವಂಶದ ಕುಡಿಯ ಕಾಪಾಡು : ತೊಟ್ಟ ಶರ–
ವಂಮರಳಿ ಮರೆತುಬಿಡು. ನಿನಗಕ್ಕೆ ಮಂಗಳಂ
ಶುಭಂ, ಸುಖಂ ಪ್ರೀತಿ ಕೀರ್ತಿ ಕಲ್ಯಾಣಂ!"

* * *

ಶ್ರೀ ಮಹಾಭಾರತವನೋದಲ್ಕೆ–
ಹಿಡಿದೆತ್ತಿ
ಕೆಳಗಿಡುವುದಕ್ಕೆ ಮುನ್ನ ನಾನೊಂದು ವೀರರಸ



ಸೃಷ್ಟಿಯೊಳೆ ಸಮರಸಂಚಾವನ್ನೆಸಗಿದೆನು;
ಕಂಡೆನೈ :

ಹಳೆಯ ಮೂರ್ತಿಗಳೆಲ್ಲ ಹುರಿಗೊಂಡು
ದ್ವಾಪರದ ತೆರೆಯ ಮರೆಯನ್ನೊದೆದು ಹೊರವಂದು,
ಕೆರಳ ಕುಣಿಯುತಲಿರುವ ಮತ್ತನೃತ್ಯವನೊಂದ !
ಮನವು ಮರುಳಾದತ್ತು ; ಗಂಡೆದೆಯು ಗುಡುಗಿತ್ತು;
ಹಂತ ಹಾ ! ವಿಷಮವಿಪ್ಲವದೊಳೆದೆ ಕುದಿದತ್ತು !
ಆ ರಾಜಕೀಯ ನಾಯಕರಲ್ಲಿ–
ಎದೆಗೊಟ್ಟು
ಇದಿರಾಡಿ ಕಾದಿ ಗೆಲಿದವರುಂಟು. ಹಠತೊಟ್ಟು
ಪಂಥ ಪೌರುಷ ಮೆರೆಸಿ ಹೊಡೆದು ಮಡಿದವರುಂಟು,
ತಂತ್ರ ನೀತಿಯ ನಡೆಸಿ ಹೆಸರ ಹೊತ್ತವರುಂಟು,
ಆದರವರನು ಹೊಗಳಿ ಹಾಡುವೆನೆ? ಛೀ ಸಲ್ಲ,
ನಿಃಸ್ವಾರ್ಥವೀರ ಕಲಿಕರ್ಣ ನಿನಗೆಣೆಯಿಲ್ಲ !

ನಿನ್ನ ಕಲಿತನಕೆ ತಲೆದೂಗಿರುವ ಕವಿಕುಲವು
ಕನ್ನಡದಿ ಕೆಲವುಂಟು, ನೀಂ ಚಿರವಿಭೂತಿಯೈ ;
ವೀರರಸ ಗಟ್ಟಿಯನು ವೀರವಾಣಿಯೊಳೊಡೆದ
ಕನ್ನಡದ ಕವಿಚಕ್ರವರ್ತಿ ರನ್ನನೆ ತಾನು
ಕಲ್ಲೆದೆಯ ಕರಗಿಸುವ ಕರುಣೆಯಲಿ. ನಿನಗಾಗಿ
ಮರುಗಿರನೆ ಪಂಪನಧಿಕಾರವಚನದೊಳಿಂತು
ಬೆಸಸಿರನೆ ? ನೆನೆಯುವೊಡೆ ಕಲಿಕರ್ಣನೆ ನೆನೆಯ
ಬೇಕೆಂದು, ನಿನಗೆ ಸರಿದೂರೆಯ ಕಾಣದೆ ಮಹಾ–
ಭಾರತ ಬೆಳಗಿರ್ದ ವೀರಾಧಿವೀರರಲಿ,.

ಪಂಪರನ್ನರು ತಮ್ಮ ವಿಜಯವಾದ್ಯವ ಮೊಳಗಿ
ಭಾರತದ ವೀರವರ ವಿಕ್ರಮಾರ್ಜುನ ಸಾಹ–
ಸಿಕ ಭೀಮರಧಿಕ ಕಲಿತನವ ಕೊಂಡಾಡಿದರು;

ಕವಿದಿದ್ದ ಕತ್ತಲೆಯ ಕೊಳೆ ತೊಳೆಯಲೆಂದಲ್ತೆ
ದೀಪವಂ ಪಿಡಿದೆತ್ತಿ ತೋರುವುದು ? ಸೂರ್ಯ ಸಮ
ಸ್ವಪ್ರಕಾಶಂಗಿದರು ಕೈವೆಳಗ ಕಾಣಿಪರೆ ?

* * * *

## ಕಾಗಿನೆಲೆಯಲ್ಲಿ ಕೋಗಿಲೆಯ ಕುಹೂ

ನಾಲ್ಕು– ನೂರು ವರ್ಷಗಳ ತೆರೆ ಸರಿಸು
ಎಂಥ ದೃಶ್ಯ ನೋಡು :
ಕಾಗಿನೆಲೆಯಲ್ಲಿ ಕೋಗಿಲೆಯ ಕುಹೂ
ಕೇಳು ಕವಿಯ ಹಾಡು.

* * * *

ದೇವಲೋಕದಲಿ ವಾದ ಮಸಗಲು
ನಾರದ ಪರ್ವತರೊಳಗೆ :
'ಶ್ರೀ ಹರಿಭಕ್ತಿಯೊಳಾನೇ ಮೇಲು
ನೀನೋಯೆನ್ನಿಂ ಕೆಳಗೆ'

ಅಗ್ನಿಗೆ ವರುಣಗೆ ರುದ್ರಗೆ ಯಮಗೆ
ಎಂಟೆರ್ದೆಯುಂಟೇ ನಿಲ್ಲಿಸಲು;
ಇಂದ್ರಗುಚಂದ್ರಗುಪೇಂದ್ರಗು ಕೂಡ
ಗಂಟಲು ಬಿಗಿಯಿತು ಸೊಲ್ಲಿಸಲು.

ಇಂತಿರೆ ಕೈಮುಗಿದೆದ್ದು ಬೃಹಸ್ಪತಿ
ಅರಿಕೆಯನೊಂದನು ಮಾಡಿದನು;
'ದೇವರ್ಷಿಗಳೇ ಬಿನ್ನಹ ಲಾಲಿಸಿ
ಹರಿಯೇ ನಿರ್ಣಯ ಹೇಳುವನು'



ಮನೋವೇಗದಿಂ ಬಿಡದೆ ಸಾಗಿದರು
ಕ್ಷೀರಸಾಗರದ ಕಡೆಗೆ,
ಶೇಷಶಾಯಿಯೆಚ್ಚರಿರೆ ಕಂಡರು
ದೂರ ಹೇಳಿದರು ಕೊನಗೆ;

"ಹಗಲಿರುಳು ಕೂಡಿ, ಜಗದಗಲ ಹಾಡಿ
ಯುಗ–ಯುಗದಿ ಬೇಡಿ ಬೇಡಿ;
ಗಳಿಸಿಹೆನು ಪುಣ್ಯ, ಹರಿಭಕ್ತ ಗಣ್ಯ
ನಾನಲ್ಲದಾರು ಅನ್ಯ ?"

ಮುನಿಗಳೀ ನುಡಿಗೆ ಹರಿಗೆ ಮುಗುಳುನಗೆ,
'ಹೋಗಿ ಕಾಗಿನೆಲೆಗೆ.
ಆತನೋ ಕುರುಬ ! ಮಂದೆ ಬೇಕವಗೆ
ದಾರಿ ತೋರ್ಪ ನಿಮಗೆ !"

ನಾಲ್ಕು– ನೂರು ವರ್ಷಗಳ ತೆರೆ ಸರಿಸು
ಎಂಥ ದೃಶ್ಯ ನೋಡು !
ಕಾಗಿನೆಲೆಯಲ್ಲಿ ಕೋಗಿಲೆಯ ಕುಹೂ
ಕೇಳು ಕವಿಯ ಹಾಡು !

* * * *

ದೂರ ಬಾಡದಲಿ ಧಾರವಾಡದಲಿ
ತಂದೆ ಬೀರಪ್ಪನಿಂದೆ,
ತಾಯಿ ಬಾಚವ್ವ ಪಡೆದ ಪುಣ್ಯವೇ
ಕಂದ ತಿಮ್ಮಪ್ಪನೆಂದೆ.

ಕುರುಬನೆಂದರು ಬೇಡನೆಂದರು
ಕಾಕವರ್ಣ ಹೊರಗೆ ;
ಕಾಡು ಹೆಚ್ಚಿತು ನಾಡು ಮೆಚ್ಚಿತು
ಒಳಗಿನಿಂಚರಕ್ಕೆ,

ಬೇರು ಕೆಸರಲ್ಲಿ ಬೀರುತಿಹುದಲ್ಲಿ
ನೂರುದಳದ ಕಂಪು ;
ಹುಟ್ಟುವೆಲ್ಲಿದೆ? ಗುಟ್ಟಯಿಲ್ಲಿದೆ
ದೇವರೊಲುಮೆಯ ಪೆಂಪು !

ಬೆಳೆದು ಬಂದಂತೆ ಭಾಗ್ಯವುಕ್ಕಿತು
ಶುಕ್ಲಚಂದ್ರನಂತೆ ;
ಮಣ್ಣು ಹೆಣ್ಣು ಮೇಣ್ ಹೊನ್ನು ಸಿಕ್ಕಿತು.
ಕನಕನೆಂದರಂತೆ !

ಮರೆಯುತಿದ್ದನು ರಾಜತೇಜನು
ದಂಡಧಾರ ಕನಕ,
ನೂರ ಕಾಳಗದ ವೀರಯೋಧನು
ಕನಕರಾಜ ಧನಿಕ.

ಆದಿಕೇಶವನ ಬೋಧೆಯಾಯಿತು
ಕನಸಿನಲ್ಲಿ ಬಂದು:
ಭವಸಮುದ್ರವನು ದಾಂಟಿ ಬಾ ಇಲ್ಲಿ
ಪಾರ ಸೇರುಯೆಂದು !

'ತಂದೆವೊಲ್ಲೆನು ಸವಿಯಬಲ್ಲೆನು
ಭೋಗಭಾಗ್ಯ ಬೇಕು ;
ಸುತ್ತು ಸುಖವಿದೆ ಚೆಲುವೆ ಚೆಲ್ಲಿದೆ
ಬಂಧುಬಳಗ ಸಾಕು !'



ಮೋಹ ಮುಸುಕಿರೆ ಬಂತದೋ ಕರೆ
ಸಿಡಿಲ ಹೊಡೆತದಂತೆ !
ಅವರು ಇವರು ಮೇಣ್ ಉವರು ಮಡಿದರು
ಜಗವು ಮಾಯೆ ಸಂತೆ !

ನಾಲ್ಕು– ನೂರು ವರ್ಷಗಳ ತೆರೆ ಸರಿಸು
ಎಂಥ ದೃಶ್ಯ ನೋಡು:
ಕಾಗಿನೆಲೆಯಲ್ಲಿ ಕೋಗಿಲೆಯ ಕುಹೂ
ಕೇಳು ಕವಿಯ ಹಾಡು ;

* * * *

ಭವದ ಬಂಧನವ ಬಿಡಿಸಿಕೊಂಡನು
ಹರಿಯದಾಸನೆಂದ ;
ಆದಿಕೇಶವನ ಪಾದ ಕಂಡನು
ಭಕ್ತ ಮುಕ್ತನಾಥ

ಪುಣ್ಯಪರ್ವತವೆ ಚಲಿಸಿತೆಂದೆನಿಸೆ
ಕನಕದಾಸ ನಡೆದ.
ನಡತೆಯೆತ್ತರಿಸೆ ನಾಡನುದ್ಧರಿಸೆ
ಹೃದಯಗೀತೆ ನುಡಿದ.

ತಿರುಕದಾಸಯ್ಯ ತಿರುಳುಗನ್ನಡದಿ
ಹರಿಯ ಬೇಡಿ ಹಾಡಿದನು.
ಎದೆಯು ನುಡಿದಂತೆ ಮನವು ಮಿಡಿದಂತೆ
ಕನಕ ಕವನ ಕಟ್ಟಿದನು.

ಬಯಲು ಸೇರಿದನು, ಬೆಟ್ಟವೇರಿದನು,
ಕಾಡು ದಾಟಿದನು ಕಡೆಗೆ,

ಕಡಲತೀರದಲಿ ನಡೆದು ಬಂದನೋ
ಉಡುಪಿ ಕೃಷ್ಣನಡಿಗೆ.

ದೇವದೇವನನು ಕುರುಬ ಕಾಂಬುದೆ ?
ದೂರ ದೂರ ದೂಡಿ !
ಇಲ್ಲ ಕುರಿಮಂದೆ ಎಲ್ಲ ದಿವದಿಂದೆ
ಇಳಿದ ಸುರರು ನೋಡಿ !

ಗೋಡೆಮರೆಯಲ್ಲಿ ಶಿಲೆಯ ಸೆರೆಯಲ್ಲಿ
ಮೂರ್ತಿ ಹಿಡಿದು ನಿಲ್ಲಿಸಿ ;
ಎದೆಯ ಬತ್ತಲೆಗೆ ಗುಡಿಯ ಕತ್ತಲೆಯ
ಪೂರ್ತಿ ಜೋಡಿಯಿರಿಸಿ ;

ಮಂತ್ರ–ಮೋಡಿಯಲಿ, ಧೂಪ–ದೀಪದಲಿ,
ನಡೆಯುತ್ತಿತ್ತು ಪೂಜೆ ;
ಶರಣು ಶರಣೆಂದು ಹರಿಗೆ ಮಣಿದನೋ
ಕುರುಬ ಬಾಗಿಲಾಚೆ !

ಕಲ್ಲೆ ಕರಗುವುದು ಕನಕ ಹಾಡುತಿರೆ,
ಪೀಠಮೂರ್ತಿ ಪಡುವಣಕೆ
ತಿರುಗಿನಿಂತಿತೋ ಗೋಡೆಯೊಡೆದು ಸೆರೆ !
'ಕನಕಕಿಂಡಿ'ಯೀಕಾಣ್ಕೆ !

ಆಕಾಶಮಾರ್ಗದಲಿ ಕಂಡು ಪುಳಕಂಗೊಂಡು
ನಾರದಂ ತುಂಬುರಂ, ಧನ್ಯನೆಂದು
ಹೊಗಳಿದರು ಕನಕನನು, ಭಕ್ತರಲಿ ನೀ ಮೇಲು
ನಿನ್ನ ಹೃದಯವೆ ಹರಿದು ಪೀಠವೆಂದು !



ನೀನು ನಡೆದೀ ಮಣ್ಣು ಕ್ಷೀರಸಾಗರವಿನ್ನು
ನೀನು ಜನಿಸಿದ ನಾಡೆ ವೈಕುಂಠವು !
ನಿನ್ನ ನುಡಿಯೇ ವೇದ ನಿನ್ನೊಳೆ ಹರಿಯೊಲವು
ನೀನೆ ಕುರುಬನು ನಾವೆ ಕುರಿಮಂದೆಯು !

* * * *

ಕನಕನಿಗೆ ಮಂಟಪವ ಕಟ್ಟುತಿಹ ಶಿಲ್ಪಿಗಳೆ !
ದೂರಸರಿದವರನ್ನು ಬಳಿಗೆ ಕರೆಸಿ,
ಕನಕನುತ್ಸವದಲ್ಲಿ ಮೆರೆಯುತಿಹ ಮಂತ್ರಿಗಳೆ !
ಬಡಜನರ ಬೇಡಿಕೆಯ ಮೊದಲು ಸಲಿಸಿ,

ಕನಕನಿಗೆ ಶ್ರದ್ಧಾಂಜಲಿಯ ಬಿಡುವ ಭಾವಿಕರೆ !
ದುಃಖಿಗಳ ಸಂಕಟಕೆ ನೀವು ಮರುಗಿ
ಕನಕರಾಧನೆಯ ಮಾಡುತಿಹ ಪೂಜಕರೆ !
ಹೃದಯಕಲ್ಮಶವನ್ನು ತೊಳೆದು ಸರಿಸಿ.

ಕನಕದಾಸನ ನೆನೆದು ಕವನಿಸುವ ಕವಿವರರೆ !
ದೀನದಲಿತರ ಕಣ್ಣನೀರನೊರೆಸಿ ;
ಕನಕದರ್ಶನದಲ್ಲಿ ಪಾಲ್ಗೊಳುವ ಪ್ರೇಕ್ಷಕರೆ
ಎದೆಯ ಕತ್ತಲೆಯ ಕಳೆಯೆ ತಿಳವನುರಿಸಿ.

* * * *

## ಸಾವಿನಲಿ ಸವಿಯುಂಡನು

ಕಲ್ಲರಳಿ ಪರಿಮಳಿಸಿತು !

ಶಿಲ್ಪಿವರ್ಯನ ಮನಸು
ಕಲ್ಪಿಸಿದ ಹೊಸಗನಸು
ಹಗಲಿರುಳ ಸವಿಯುಣಿಸು ನೆಲೆಸೇರಿತು.

ಪಾಷಾಣ ಪೂವಾಗಿ
ಪರುಷ ಮಾರ್ದವವಾಗಿ
ಶಿಲೆಯಿಂದ ಕಲೆಯಾಗಿ ಬೆಲೆಯೇರಿತು ;

ರಸಿಕಲೋಕಂ ಬಂದು
ಮುಗ್ಧ ಮೋಹದಿ ನಿಂದು
ಚೆಲುವೆ ಚೆಲ್ಲಿಹುದೆಂದು ತಲೆದೂಗಿತು !

ಬಿಳಿಯಾನೆಯಿಂದ್ರಂಗೆ
ಸಿರಿ ತಾನುಪೇಂದ್ರಂಗೆ
ಸೊದೆ– ಸೋನೆ ಸುರರಿಂಗೆ ಹಸುಗೆಯಿಂತು,

ಮಂದರವ ಹೊತ್ತಿರುವ
ವಾಸುಕಿಯ ಸುತ್ತಿರುವ
ಸಾಹಸದಿ ಸತ್ತಿರುವ ವಾರ್ತೆಯಿಲ್ಲ !
ಕೋಲಾಹಲದ ವಿಷದ
ಹಾಲಾಹಲವ ಕುಡಿದ
ಆಳುಗಳ ಬೀಳುಗಳ ಬಾಳ್ತೆಯಿಲ್ಲ !

ಬಲ್ಲಿದರು ಬಡವರು
ಎಲ್ಲವರು ನುಡಿದರು
ಕಲ್ಲೊಜನಿವನಾರು ? ಪೇಳ್ದರಿಲ್ಲ !

ಹಾಲು ಮೊಸರು ಕುಡಿದು
ಬೆಣ್ಣೆ ತುಪ್ಪವ ಸವಿದು
ಪಸುವಿಂಗೆ ಪಸಿವುಂಟೆ ಕೇಳ್ವರಿಲ್ಲ !

ಸಾವಿನಲಿ ಸವಿಯುಂಡನು !



ಅದೊ ! ಅಲ್ಲಿ ತಗ್ಗಿನಲಿ
ನರಿಗಳೂಳಿಡುವಲ್ಲಿ
ಭೀಮಕಾಯದ ತಾಳ್ಮೆ, ಬೆಳೆದು ನಿಂತಲ್ಲಿ.

ಅಲ್ಲಿರುವ ಗುಡಿಸಲಲಿ
ಹುಲ್ಲು ಚಾವಣಿಯಲ್ಲಿ
ಬಿಸಿಲು–ಮಳೆ–ಚಳಿಯೆಲ್ಲ. ಹೊರಹೋಗುದೆಲ್ಲಿ,

ಅವಗೆ ಆಸರೆಯಿತ್ತು !
ಬಂದಡಸಲಾಪತ್ತು
ಹತ್ತು ಮಕ್ಕಳ ಹೆತ್ತು, ಮಡದಿ ಸಾಯೆ !

ಇದ್ದನವನೇಕಾಕಿ
ನಿದ್ದೆಹಸಿವಂ ನೂಕಿ
ಮುದ್ದು ಮಕ್ಕಳ ಸಾಕಿ ದುಡಿದು ನೋಯೆ ;
ಹಸಿವನ್ನೆ ತಿನ್ನುತ್ತ
ದಾಹವನೆ ಕುಡಿಯುತ್ತ
ಬಾಳುವೆಯ ಬೇಳುತ್ತ ತಪದಿ ನಿಂತು,

ಕಠಿಣ ಶಿಲೆಯಂ ಕೆತ್ತಿ
ಬಾಳಿನಾಸೆಯ ಬತ್ತಿ
ಜೀವದೆಣ್ಣೆಯು ಬತ್ತಿ ಆರಿ ಹೋಯ್ತು !

ಅಲ್ಲಿ– ಆ ಗುಡಿಸಲಲಿ
ನೆಲತಾಯ ಮಡಿಲಲ್ಲಿ
ಮಲಗಿದವನಂ ಮರಳಿ
ನೆನೆಯಬೇಡ !

ಇಲ್ಲಿ– ಈ ಶಿಲೆಯಲ್ಲಿ
ಕಲೆಯ ಹೂಯೆಸಳರಳಿ
ಪರಿಮಳಿಸುತಿದೆ ಹೊರಳಿ
ನಿಂತು ನೋಡ !

* * * *

## ಮಲೆಯ ಗಜರಾಜ ಮನೆಗೆ ಬಂದಿತು

ಎಂಟು ಶತಮಾನ ದಾಂಟಿತಿಂದಿಗೆ
ಬಂದು ಬಸವಣ್ಣ ಧರೆಗೆ :
ಕೊರಳು ಕುಗ್ಗಿನೆತೆ ಧರೆಯ ಭಾರಕೆ
ಮರುಗಿ ಭೂರಮೆಯ ಮೊರೆಗೆ.

'ಹೋಗಿ ಬಾ ಮತ್ತೆ ನೆಲವ ನೀನೆತ್ತೆ'
ಎಂದು ಶಿವಶಬ್ದ ಮೊಳಗೆ,
ಕೈಲಾಸ ತೊರೆದು ಹಿಮಹಾದಿ ಹಿಡಿದು
ಇಳಿದ ಬಸವಣ್ಣ ಕೆಳಗೆ,

* * *

ಬಾಗೆವಾಡಿಯಲಿ ಗೌಡ ಮಾದರಸ,
ಪತಿಯ ಪ್ರೇಮವನು ಪಡೆದು
ಅವಗೆ ನೆರಳಾಗೆ ಮನೆಗೆ ಬೆಳಕಾಗಿ
ಮಾದಲಾಂಬಿಕೆಯು ನಡೆದು,

ಮಕ್ಕಳಿಲ್ಲದಿರೆ ಮರುಗಿ ಮಾಸತಿಯು
ಮಿಂದು ವ್ರತದಲ್ಲಿ ನಿಂದು ;
ಮೂರುವರ್ಷ ಮೀರಿದರು ನಂಬಿದಳು ;
ದೇವರೊಲುಮೆಯಹುದೆಂದು !



ಶೂನ್ಯಗರ್ಭದಲಿ ಹೂನ್ಯ ಹೊತ್ತಳು
ನಿಶಾಗಗನ ಪಡೆವಂತೆ
ಶಶಿಕಿಶೋರನನು, ಶಿಶುವ ಹೆತ್ತಳು ;
ಬೇನೆ ಬೆಲ್ಲವಾಯ್ತುಂತೆ !

ಜಗವ ನೋಡುವೊಡೆ ಮಾತನಾಡುವೊಡೆ
ಲಿಂಗದೀಕ್ಷೆ ಬೇಕಣ್ಣ;
ಜಾತವೇದಮುನಿ ಪೂತಕರ್ಮದಲಿ
ಖ್ಯಾತನಾಮ ! ಬಸವಣ್ಣ

ಮುದ್ದುಮುದ್ದಾಗಿ ಬಳೆದ ಬಾಲಕನು
ತಂದೆ ತಾಯಿ ಕಣ್ಗೊಂಬೆ;
ಎಲ್ಲು ಕಣ್ಣಿನಲ್ಲಿ ಕಲ್ಲು ಮಣ್ಣಿನಲಿ
ಶಿವನ ಕಾಂಬನೇನೆಂಬೆ !

ವೇದ–ಬೋಧಗಳ, ಮಂತ್ರ ತಂತ್ರಗಳ
ಸಾರ ಸೂರೆಹೋಗಿರಲು ;
ಒಳಗನಾಚಾರ ಹೊರಗಿನಾಚಾರ
ಕುಲದ ರೂಢಿ ಸಾಗಿರಲು

ಯಜ್ಞೋಪವೀತಸಂಜ್ಞಾಸಮೇತ
ದ್ವಿಜಜಾತನಾಗಲೊಲ್ಲೆ !
ಹರಿವ ಜೀವನದ ಹರಿತ ಹಾದಿಯನು
ಹಿಡಿದು ಸಾಗಬಲ್ಲೆ.

ಅತ್ತಲಿತ್ತಲೂ ಸುತ್ತು ಮುತ್ತಲೂ
ಸುಳ್ಳು ಧಳ್ಳುರಿಯುತಿಹುದು !
ಒಲ್ಲೆನೊಲ್ಲೆನೋ ಇಲ್ಲಿ ನಿಲ್ಲೆನೋ
ಶಿವನ ಕರೆಯು ಕೇಳುವುದು,

ಬಂಧುಬಳಗವನು, ತಂದೆತಾಯಿಯನು,
ಮನೆಯ ಮೋಹವನು ತೊರೆದು;
ನಡೆದ ಕೂಡಲಿಗೆ ಶಿವನ ಕೂಡಲಿಕೆ
ಸಂಗಮೇಶ ಶರಣೆಂದು !

ಸಖನು ಸಂಗಮನು, ಸಖಿಯು ಸಂಗಮನು,
ಸಂಗಮೇಶ ತಾಯ್ತಂದೆ,
ಸುತನು ಹಿತನು ಸಮ್ಮತನು ಸಂಗಮನೆ
ಕನಸಿನೊಳಗು ನೆನಸೊಂದೆ !

ಇಂತು ನೆಲೆನಿಂತ ಭಕ್ತಿಭಾವದಲಿ
ಧ್ಯಾನಮೌನದಲಿ ಮಗ್ನ ;
ಶಿವನೆ ಗತಿಯೆಂಬ ಶರಣಭಾವದಲಿ
ಸೊಗವನುಂಡ ಬಸವಣ್ಣ.

ಬಯ್ವ ಬಾಯೊಳಗೆ ಭಜನೆ ಗೈದರು.
ಪೊಯ್ವ ಕೈಗಳನೆ ಮುಗಿದು,
ಮೆಯ್ಯನಿಕ್ಕಿ ಸಾಷ್ಟಾಂಗವೆಂದರು,
ಬಸವ–ದೇವರೆನೆ ಬಗೆದು !

* * *

ಕಲ್ಯಾಣನಗರದಲಿ ಕಲಚೂರ್ಯಕುಲದೀಪ
ಬಿಜ್ಜಳನು ಪಟ್ಟವಣೆಯೇರ್ದ:
ಹೇಡಿಯಿಮ್ಮಡಿಯ ತೈಲಪನ ತಲೆಯ ಕಿರೀಟ
ಕಳಚಿ ಮಾಂಡಳಿಕ ಮಡಗಿರ್ದ.

ಬಿಜ್ಜಳನ ಮಂತ್ರಿ ಬಲದೇವ ಸೋದರಮಾವ,
ಅವಗೆ ಕನ್ಯಾರತ್ನ ಗಂಗಾಂಬಿಕೆ :



ಒಲ್ಮೆ–ನಲ್ಮೆಗಳೆರಕಗೊಂಡಿರುವ ನವವಧುವ
ಬಸವೇಶ ಪಡೆದ ಪ್ರೇಮದ ಬಿಂದಿಗೆ

ಉರಿ ಬರಲಿ ಸಿರಿ ಬರಲಿ ಬೇಡೆನದೆ ಬೇಕೆನದೆ
ಮದನಾರಿ ಸಂಗಮಗೆ ಬಿನ್ನಪಂ ಗೈದು ;
ಗಂಗಾಂಬಿಕೆಯ ಹೃದಯ ಮೋಹಜಲಧಿಯ ಮುಂದೆ
ಚೆಲುವ ಚಂದ್ರಮನಾಗಿ ಬೆಳಕ ಬೀರ್ದ.

ಒಬ್ಬನೇ ಶಿವನೆನಲು ಶರಣನೊಬ್ಬನೆ ಹೇಳು.
ಬೆನ್ಗೆ ಬಿದ್ದವರ ಭಾರವ ಹೊತ್ತನು ;
ಬೆಳಗಲೊರ್ವನ ಬಾಳು ಸುತ್ತಲೆತ್ತಲು ಗೋಳು
ಸಲ್ಲದೆನೆ ಸಂಸಾರ ಹೂಡಿದ್ದನು.

ಬೊಕ್ಕಸದ ಲೆಕ್ಕ ತಪ್ಪಾಗೆ ಒಪ್ಪಾಗಿಸಿದ
ಹಿರಿಯ ಕರುಣಿಕನೆಂದು ಕೀರ್ತಿ ಪಡೆದ,
ಸದಾಧುಸತ್ಪುರುಷಸಹವಾಸವನೆ ಸಾಧಿಸಿದ
ಸದ್ಧರ್ಮದಲಿ ನಡೆದು ಸಿದ್ಧನಾದ.

ಭಕ್ತಿಭಂಡಾರದೊಂದಿಗೆ ಪೃಥ್ವಿಭಂಡಾರ
ದ್ವಿಗುಣಗೊಂಡಿತು ಬಸವ ಗುಣಿಸುತಿರಲು ;
ದಿವ್ಯ ದ್ರವ್ಯಗಳ ಸಂಗಮವಾಯ್ತು ! ಬಿಜ್ಜಳನ
ಹೃದಯ ತುಂಬಿತು ! ಏಳ್ಗೆಯೆಣಿಸುತಿರಲು !

ಮಾವ ಬಲದೇವ ಸೇರಲು ಮಹಾಬಲದೇವ–
'ಪಾದವನು, ಬುದ್ಧಿವಂತರನಟ್ಟಿ ರಾಯ,
ನೀ ಮಹಾಮಂತ್ರಿಯೆನೆ, ಶಿರದೊಳಾಂತನು ಬಸವ,
ಸರ್ವವು ಶಿವಾರ್ಪಣವು ! ಶರಣಭಾವ.

* * * *

ಸಾಕುತಂಗಿಯು ಬಿಜ್ಜಳಂಗೆ ಮಗಳಾ ಕನ್ನೆ
ದಂಡನಾಯಕ ಸಿದ್ಧರಸಗೆ
ಹೊನ್ನಪುತ್ತಳಿರನ್ನೆ ನೀಲಲೋಚನೆಯನ್ನೆ
ವರಿಸಿದನು ಮಂತ್ರಿಪದದೊಡನೆ.

ಕಮಲದೆಲೆಯಲ್ಲಿ ಹೊಳೆವ ಜಲಬಿಂದು
ಅಂಟಿ ತಾನಂಟದಂತೆ ;
ನಲ್ಲೆಯರ ನಡುವೆ ಲಲ್ಲೆಯಾಡಿದನು
ಅಂಚೆ ಹಾಲು ಕುಡಿದಂತೆ.

ಅಂಗಸಂಗಗಳು ಹರಹಸಾದವೆನೆ
ಲೇಶ ತಾಗದಿಹ ಲೇಪ;
ಕಾಮಪ್ರೇಮಗಳು ರಾಗಭೋಗಗಳು
ಗುಡಿಯ ನಂದದಿಹ ದೀಪ.

ಸತಿಯರಿದ್ದು ವ್ರತಿಯಾದ ಶಿವಶರಣ
ನಾರಿಬಳಿ ಬ್ರಹ್ಮಚಾರಿ;
ಭವದಿ ಬಿದ್ದು ತಾನಭವಸಿರಿಚರಣ
ನೆನೆದು ನಡೆದ ಹೊಸದಾರಿ

ನೀಲಲೋಚನೆಯ ಓಲೆಚೆಲುವನ್ನು
ಸೂಳೆ ಕಂಡು ಮನಸೋಲೆ.
ಕೊಂಡುಹೋಗಲಿಕೆ ಮಿಂಡ ಜಂಗಮನು
ಸಜ್ಜೆ ಹೊಕ್ಕು ಕಿವಿ ಕೀಳೆ;

ಎದ್ದು ಬೊಬ್ಬಿಡಲು ನಿದ್ದೆ ಬಿಟ್ಟನೋ.
ಚೋರನಲ್ಲ, ಕಾಮಹರ !
ಕತ್ತಲಲ್ಲಿ ಶಿವ ಕಷ್ಟಪಟ್ಟನೋ
ಅರ್ಪಿಸಿದನಲಂಕಾರ !



ಕೆರೆಯ ಕಾಲುವೆಯ ನೀರು ಹೆಚ್ಚಿತು,
ಹೊಲದಿ ಸಿರಿಯೆ ಬೆಳೆದಿತ್ತು ;
ದಾನಧರ್ಮದಲಿ ಊರು ಮೆಚ್ಚಿತು,
ಭಾಗ್ಯ ಬಸವನಿಂ ಬಂತು.

ಗಡಿಯ ಗುಡಿಯ ರಕ್ಷಣೆಗೆ ಯೋಧರು
ಕಾದುವವರ ಕೊಲುವವರು ;
ಸಾಧುಸಜ್ಜನರ ಸೇವಗೈವರು
ಬಸವ– ಬಿಜ್ಜಳನ ಭಟರು–

ಕಪ್ಪಕಾಣಿಕೆಗಳೊಪ್ಪಿಸುತ್ತಿರೆ
ಮುಗಿಲುಮಳೆಯಂತೆ ಸುರಿದ ;
ಪಡೆದುದೆಲ್ಲವನು ಪೊಡವಿಗಿತ್ತಿರೆ
ಲೋಕ ಮೆಚ್ಚಿತೆನೆ ನಡೆದ.

ದಾರಿ ಹರದಾರಿ ಕಡಿಸಿ ಬಿಟ್ಟನು
ಸಾಗುತ್ತಿತ್ತು ಜನ ದೂರ;
ಕೊಡುವರಂತೆ ಕೊಳ್ಳುವವರು ಬಂದರು
ಆಗುತಿತ್ತು ವ್ಯಾಪಾರ.

ಹಸಿರು ಹಂದರದ ಸಾಲುಮರಗಳು
ಪಾಂಥಗಂತು ಸಂತೋಷ
ಉರಿವ ಬಿಸಿಲೆಲ್ಲ ಶಿರದಿ ಬೀಳಲು
ನೆರಳಿನೀವುವೀ ವೃಕ್ಷ.

ಅಂತರಂಗ ಬಹಿರಂಗ ಶುದ್ಧಿಯು
ಶಿವವು ಸುಂದರವು ಸತ್ಯ.
ಬಸವನಿಂದ ಕಲ್ಯಾಣವೃದ್ಧಿಯು
ಬಕ್ತಮಂದಿರವೆ ನಿತ್ಯ.

ಅಲ್ಲಮಪ್ರಭು ಬಂದ ಬನವಸೆಯ ಬೀಡಿಂದ,
ಅಕ್ಕನುಡುತಡಿಯಿಂದ ಶಿವನದಾಸಿ.
ಸಿದ್ಧರಾಮನು ಬಂದ ಸೊನ್ನಲಾಪುರದಿಂದ,
ಅನುಭವದ ಮಂಟಪವು ಶರಣಕಾಶಿ.

ಅಂಬಿಗರ ಚೌಡಯ್ಯ ಮಡಿವಾಳಿ ಮಾಚಯ್ಯ
ಹಡಪದಪ್ಪಣ್ಣ ಡೋಹರ ಕಕ್ಕರು,
ಹರಳಯ್ಯ ಮೊಚ್ಚೆಗಾರನ ಕೂಡೆ ಮಧುರರಸ
ಹಾರುವಂ ಸೇರುವಂ, ಶಿವಭಕ್ತರು!

ಕಾಯಕವೆ ಕೈಲಾಸ, ದಯೆಯೆ ಧರ್ಮದ ಮೂಲ,
ಸಕಲಜೀವಾತ್ಮರಿಗೆ ಲೇಸನೇ ಬಯಸು ;
ಕಳವು ಕೊಳೆ ಹುಸಿ ನಿಂದೆ ಹೊಗಳಿಕೆಗಳಿವು ಸಲ್ಲ
ಒಬ್ಬನೇ ದೇವರಾತಗೆ ವಂದಿಸು.

ಯಜ್ಞಯಾಗದಿ ಹಿಂಸೆ ಮೆಚ್ಚನೋ ಪರಶಿವನು,
ಮಡಿಮೈಲಿಗೆಗೆ ದೂರ ಹಾರಬೇಡ;
ಸತ್ಯನುಡಿವುದೆ ಸ್ವರ್ಗ, ಮಿಥ್ಯನುಡಿವುದೆ ನರಕ,
ದೇವರೊಲಿದರೆ ಕೊರಡು ಕೊನರುವುದು ನೋಡು !

ಎನಗಿಂತ ಕಿರಿಯರಿಲ್ಲವು ನಾನೆ ದೀನನಿಹೆ
ಶಿವಶರಣರಿಂ ಹಿರಿಯರಿಲ್ಲ ನಿಜದೆ,
ಎನ್ನವರೆ ಹೊನ್ನಶೂಲದೊಳೆನ್ನನಿಕ್ಕಿದರು
ಬಲ್ಲಿದನು ನಾನೆಂದು ಹೊಗಳಿ ಬರಿದೆ.

ಕನ್ನಡದ ಜೇನ್ನುಡಿಗೆ ಸಕ್ಕರೆಯ ಸೇರಿತೆನೆ
ವಚನಸಾಹಿತ್ಯ ಸಂಪದ ಹೆಚ್ಚಿತು ;
ಚೆಲುಗನ್ನಡದಿ ವೇದವೇದಾಂತ ತಿಳಿಯಿತೆನೆ
ಕೂಡಲದ ಸಂಗಮನ ಮನ ಮೆಚ್ಚಿತು.

* * * *



ವನದ ಕೋಗಿಲೆಯು ಮನೆಗೆ ಬಂದಿತು,
ವನವ ನೆನೆದೇ ಸಂದಿತು ;
ಮಲೆಯ ಗಜರಾಜ ಮನೆಗೆ ಬಂದಿತು
ಮಲೆಯ ನೆನೆದೇ ಸಂದಿತು

ಶಿವನಶರಣರು ಮರ್ತ್ಯಕಿಳಿದರು.
ಶಿವನ ಸೇವೆಗೆ ಸಂದರು.
ಭೂಮಿದೇವಿಯ ಭಾರ ಕಳೆದರು,
ದೇವಲೋಕಕೆ ಬಂದರು.

ಸಂಗಮದಿ ಲಿಂಗೈಕ್ಯನಾದನು
ನಂದಿ, ಬೆಟ್ಟವನೇರಿದ ;
ಎಂಟುಶತಮಾನದ ದಾಂಟಿತಿಂದಿಗೆ,
ಬಸವ ದಾರಿಯ ತೋರಿದ.

* * * *

## ಪಂಜರದ ಪಕ್ಷಿ

ಕೋಳಿ ಕೋ ಕೋಯೆಂದು ಕೂಗೆ ಮುಂಜಾವದಲಿ,
ಕೇಳೀ, ನಿದ್ದೆಯ ಜಾಡ್ಯ ದೂರವಾಗೆ,
"ಏಳಿ ಮರಿಗಳೆ" ಎನುತಲೆಚ್ಚರಿಸಿ ಪ್ರೀತಿಯಲಿ,
ತಾಳಿ ಸಂತಸವೆ. ನಾ ಹೊರಟು ಹೊರಗೆ ; ॥೧॥

ಆಕಾಶ ಮಾರ್ಗದೊಳು ಹಾಡುತಲೆ ಹಾರಾಡಿ
ಬೇಕಾದ ದೇಶಗಳ ಸುತ್ತಿ ನೋಡಿ,
ಸಾಕಾಯಿತೆಂಬನಿತು ಹಣ್ಣು ಹಂಪಲು ಸವಿದು
ನಾ ಕಡೆಗೆ ಸಂಜೆಯಲಿ ಮರವ ಸೇರ್ದು; ॥೨॥

ಮುದ್ದುಮರಿಗಳಿಗೆಲ್ಲ ಸವಿತಿನಿಸನುಣ್ಣಿಸುತ,
ಸುದ್ದಿಗಳನೊಂದೊಂದೆ ಬಿಡದೆ ವಿವರಿಸುತ;
ಬುದ್ಧಿ ವಾದಗಳನ್ನು ಹೇಳುತಕ್ಕರೆಯಿಂದ,
ಇದ್ದೆನೈ ಹಲಕಾಲವಿಂತು ಸುಖದಿಂದ, ॥೩॥

ಅಂದಿನಾ ದಿನವನ್ನು ನೆನೆದರೆಯೆ ನನ್ನೆದೆಯೊ–
ಳಿಂದಿಗೂ ದುಃಖಾಗ್ನಿ ಹೊತ್ತಿಬಹುದು !
ಸಂದ ನಿದ್ದೆಯೊಳೆ ನಾನಿರುವಾಗ, ರಾತ್ರಿಯಲಿ
ಬಂದು ಹಿಡಿದನು ಬೇಡ ! ಕ್ರೂರನಹುದು ! ‘ ॥೪॥

ನನ್ನೊಡಲ ಮರಿಗಳವು ಕೂಗಿದವು ಕೀರಿಡುತ,
ಬನ್ನದಲಿ ಬಾಯ್ಬಿಡುತಲೆನ್ನ ನೋಡಿ !
ಕನ್ನೆಯೊಬ್ಬಳು ಮರಿಗಳನು ಬುಟ್ಟಿಯಲ್ಲಿಡುತ
ಇನ್ನೆಲ್ಲಿಗೊಯ್ದಳೋ ? ಬೇರೆಮ್ಮ ಮಾಡಿ ! ॥೫॥

ನಾ ಬಳಿಕ ಸೇರಿದೆನು ಕಠಿಣ ಪಂಜರವಿದನು !
ಈ ಬವಣೆ ನನಗಾಯ್ತು ! ಬಿಗಿದ ಬಂಧನವು !
ಆ ಭಾಗ್ಯದೆನ್ನ ಸಂತತಿಗಳಿಗೆ ಗತಿಯೇನು ?
ಹಾ ! ಬುವಿಯೊಳೆಮಗಾಯ್ತೆ ಕಷ್ಟಜೀವನವು ? ॥೬॥

ಇಲ್ಲಿ ಪಂಜರದಲ್ಲಿ, ಕಬ್ಬಿಣದ ಸೆರೆಯಲ್ಲಿ,]
ಎಲ್ಲುಂಟು ಜೀವನಾನಂದವೆನಗೆ ?
ಕೊಲ್ಲುವುದೆ ಸರಿಯತ್ತು, ; ಮುಗಿವುದೈ ಮರಣದಲಿ !
ಇಲ್ಲವೀ ದಿನದಿನದಿ ಮರುಕ ಹೀಗೆ ! ॥೭॥



‘ಮಾತಾಡು ಹಕ್ಕಿಯೇ ಮಾತಾಡು ನೀನೆ’ಂದು
ಮಾತುಗಳ ಕಲಿಸುವುದಿದೊಂದು ದಂಡನೆಯು !
ಮಾತನಾಡದೆ ಸುಮ್ಮನಿರೆ, ತಿಂಡಿ ಕೊಡದಿಹುದು
ಪ್ರೀತಿಯೇ ? ಶಿಕ್ಷೆಯೇ ? ಕಷ್ಟ ಸೆರೆಮನೆಯು ! ॥೮॥

ಮುಗಿಲ ಮರೆಯೊಳು ನಿಂತು, ನೀಲದಾಕಾಶದಲಿ
ಬಗೆದಂತೆ ಸವಿಗಾನ ಮಾಡುತ್ತಿದ್ದೆ ;
ಮುಗಿಯಲಾ ಸ್ವಾತಂತ್ರ್ಯ ಸವಿಯಿಲ್ಲ ಕಂಠದಲಿ,
ದುಗುಡವೊಂದೇ ತುಂಬಿ ಹಾಡದಾದೆ ! ॥೯॥

ಎನ್ನನೀ ಸೆರೆಯಲ್ಲಿ, ನಿತ್ಯ ಕೊರಗಿಸುವಲ್ಲಿ,
ಇನ್ನೇನು ಸುಖವುಂಟೊ ನಿನಗೆ ಮಾನವನೆ ?
ಅನ್ಯಾಯವಲ್ಲವೇ ದುರ್ಬಲರ ಪೀಡೆಯಿದು ?
ಚೆನ್ನಾಗಿ ಯೋಚಿಸೈ ! ದೇವ ಮೆಚ್ಚುವನೆ ? ॥೧೦॥

* * * *

## ಎಲ್ಲ ಕಳೆಕೊಂಡು ಎಲ್ಲವನು ಪಡೆದ

ಶಿವನ ಶಯ್ಯೆ ಶ್ರೀ ಚೋಳದೇಶದಲಿ
ಶರಣನಿದ್ದ ಇಳೆಯಾಂಡ.
ಗುಡಿಮಾರನೆಂಬ ಬೇಸಾಯಗಾರ
ಧನಧಾನ್ಯ ತುಳುಕಿ ಭಂಡಾರ;

ಹೆಚ್ಚುತಿರಲು ಸಂಪತ್ತು, ಉಕ್ಕಿತೋ
ಶಿವನ ಭಕ್ತಿ ರಸಭಾಂಡ.
ದೇವನಿತ್ತುದನು ದೇವಗರ್ಪಿಸಿದ
ತೃಪ್ತಿ ಜೀವನದ ಸಾರ.

ಜಂಗಮರಿಗೆ ಶಿವಶರಣರಿಂಗೆ ಸ
ವರ್ಸ್ವ ಧಾರೆಯೆರೆದೆರೆದು
ದಾಸೋಹನಿಂದ ನೆಲೆಯೆನಿತು ಚಂದ
ಭಂಡಾರ ಬರಿದೊ ಬರಿದು ;

ಭೂಮಿ ಹೋಯ್ತು, ಮನೆ ಬಿತ್ತು. ದೇಹವೋ
ಜರಗೆ ಜರ್ಜರಿತವಾಯ್ತು;
ಮಾನ ಮುಚ್ಚಲಿಕೆ ತುಂಡು ಚಿಂದಿ, ಮಗ
ಮಡದಿ ತನಗು ಗತಿ ಬಂತು !

ಭಕ್ತಿಯಾಳವ ಪರೀಕ್ಷಿಸಲ್ಕೆ ಮೇಣ್
ಮುಕ್ತಿನೀಡಲ್ಕೆ ಶಿವನು.
ಬಂದನಹ ! ಜರಾವೃದ್ಧವೇಷದಲಿ
ಶರಣಗುಡಿಗೆ ತಾನು !

ಮನೆಯೊ ಬರಿದು, ಮನ ಹಿರಿದು, ಇಳೆಯಾಂಡ
ಆಯ್ದ ಮೊಳೆಬಿತ್ತಿನಿಂದ
ಅಶನ ಉಣಿಸಿದನು, ಶಿವನ ತಣಿಸಿದನು
ತಾನೊ ನಿರಶನದಿ ನಿಂದ !

ಹಾವು ಕಚ್ಚಿ ಮಗ ಮಡಿದರೂ ಅಭವನ
ಭಕ್ತಿವಾರ್ಧಿಯೊಳೆ ಮಿಂದ !
ಎಲ್ಲ ಕಳಕೊಂಡು ಎಲ್ಲವನು ಪಡೆದ
ಶರಣ ಶಿವಪಾದ ಸೇರ್ದ

* * * *



## ಯೋಧಗಾಥ

ಇದು ಯೋಧರ ಗಾಥ.
ಕಲಿ ಕಲ್ಪಿತಗೀತ,
ಬಾಷ್ಪಾಗ್ನಿಸ್ರೋತ !
ಜಯ ಭಾರತಮಾತ !

* * *

ಹಿಮಗಿರಿಯ ಶಿರದಲ್ಲಿ ಧವಳದೀಧಿತಿ ಚೆಲ್ಲಿ
ತಾಯ ಹರಕೆಯ ಹೊತ್ತು ಹಿಗ್ಗಿ ನಡೆದೆ,
ಉತ್ತರೋತ್ತರ ಹೋಗಿಯೆತ್ತರೆತ್ತರ ಸಾಗಿ
ಬಾನಾಡಿ ಬಾವುಟದ ನೆಗ್ಗಿ ಹಿಡಿದೆ !

ಲಕ್ಷನಕ್ಷತ್ರಾಕ್ಷಿ ಸೂರ್ಯಚಂದ್ರಮ ಸಾಕ್ಷಿ
ಅನಿಮಿಷೋನ್ಮೇಷದಿಂ ವೀಕ್ಷಿಸುತಿರೆ,
ದಿವದಿಂದಿಳಿದ ಗಂಗೆ ಪಾವನ ಜಲತರಂಗೆ
ನಿನ್ನ ಮೈಮನಗಳಂ ಪ್ರೋಕ್ಷಿಸುತಿರೆ,

ಅಂತರಂಗದ ಶಿಖಿಯು ಬಹಿರಂಗ ಹಿಮಸಖಿಯು
ಶೀತೋಷ್ಣ ಸುಖದುಃಖ ಸಮರಸಂಪತ್ತಿ,
‘ಕಾಯಕವೇ ಕೈಲಾಸ ಮರಣವೆ ಮಾನವಮಿ’
ಎಂದು ಗಡಿಗುಡಿ ಕಾದೆ ಶತಪಥಂ ಸುತ್ತಿ;

ಅದೊ ! ಅಲ್ಲಿ ಸನ್ಯಾಸಿ, ಬೌದ್ಧವಸನದ ವೇಷಿ !
ಕೇಳಿಸಿತು ವಾಣಿ: ‘ಬುದ್ಧಂ ಶರಣಂ ಗಚ್ಛಾಮಿ’
ಹೆದೆಗೆ ಬಿಲ್ ಮಣಿವಂತೆ ತಲೆಬಾಗಿ ನೀ ನಿಂತೆ,
ಇರಿದನಹ ಬೆನ್ನಿಂದೆ ವಂಚಕ ಸ್ವಾಮಿ !

‘ಜಯಭಾರತಂ ! ಜಯತು ಜಯಭಾರತಂ’– ಎದ್ದೆ!
ಢಂಢಣಂ ಮೊಳಗಿತ್ತೆ ಕಯ್ಯ ಕೋವಿ !

ಹಗೆಯನ್ನು ದಗೆಯನ್ನು ಸುಟ್ಟುರುಹಿ ನೀ ಬಿದ್ದೆ !
ಘೋಷಿಸುತ ಮಂತ್ರ: ಯುದ್ಧಂ ಶರಣಂ ಗಚ್ಛಾಮಿ
ಬುದ್ಧನಿಗೆ ಶರಣೆಂದು ಧರ್ಮಕ್ಕೆ ಶರಣೆಂದು.
ಭಾರತದ ದನಿಗೆ ಮಾರ್ದನಿಸಿತ್ತು ಚೀನ:
ಯುದ್ಧವೇ ಶರಣೆಂದು, ಮೋಸವೇ ಶರಣೆಂದು
ಶಿಷ್ಯ ಕಲಿಸಿದ ಗುರುಗೆ ತಿರುಗುಬಾಣ !
ಮೋಸ ಕಲಿಸಿದ ಮಂತ್ರ, ವಂಚಕನ ತಿರುತಂತ್ರ !
ವೀರರ್ಗೆ ಶೂರರ್ಗೆ ಇದೆ ರಣಾಹ್ವಾನಂ ;
ನಿನ್ನ ಜೀವಿತಶಿಖಿಯ ಹಿಮವು ತಣಿಸಲು ಸುಖಿಯ
ರಂಭೆ ಕರೆದಳೆ ? ಏರ್ದೆ ಸ್ವಗ ಸೋಪಾನಂ !

ನೀನಾರೆನುತ ಜನರು ಗುರುತಿಸಲರಿಯದಿಹರು
ನಾ ಬಲ್ಲೆ ನಿನ್ನ ಕಥೆ ಮರೆಯಲ್ಲೊಲ್ಲೆ ;
ಎನ್ನ ತುಳುನಾಡಿನಲಿ, ಎನ್ನ ಕನ್ನಡದಲ್ಲಿ
ಎನ್ನ ಕೇರಳದಲ್ಲಿ– ತಾಯ್ನೆಲದೊಳಿಲ್ಲೆ–
ಒಂದು ಹಳೆಗುಡಿಸಲಲಿ– ಹಡೆದಮ್ಮನಿಹಳಿಲ್ಲಿ,
ಗೆದ್ದು ಬರುವನು ಕಂದನೆಂದೆ ನಂಬಿ;
ಕರು ಸತ್ತುಹೋದ ಹಟ್ಟಿಯ ದನದ ಕಣ್ಣೀರ
ಒರೆಸುತಿರುವಳು ಬಾಷ್ಪ ತುಂಬಿತುಂಬಿ !
“ಮೂವತ್ತು– ವರ್ಷಗಳ ಕೆಳಗೆ ಈ ಗುಡಿಸಲಿಗೆ
ಸ್ವಾಮಿ ಸೆರಗಂ ಹಿಡಿದೆ ಬಿಡದೆ ಬಂದೆ;
ಈ ತಂಗೆ ತುಂಗೆಯಾ ತಾಯ್ ಗಂಗೆಯಂ ಕರೆದು
ಹಾಲುಣಿಸಿ ನಾನವರ ತಣಿಸುತ್ತಿದ್ದೆ.
“ಇಳಿದು ಬಂದರೆ ಗಾಂಧೀದೇವರೀ ತಾಯ್ನೆಲಕೆ ?
ನಮ್ಮನೆತ್ತರಿಸೆ ಬಂಧನವೆಲ್ಲ ಬಿಡಿಸೆ ;
ಆದೇವ ಕರೆದಾಗ ಈ ದೇವ ಹೊರಡಲ್ಕೆ
ಕುಂಕುಮವ ತೊಡಿಸಿದೆನು ಸ್ವಾಮಿಹಣೆಗೆ !
“ಬಳಸಿ ಕಾಲ್ವಿಡಿದು ತೊದಲುವ ಕಂದಚಂದ್ರಮನ
ಎತ್ತಿ ತಲೆಮೂಸಿ ಕೊಟ್ಟರು ಎನ್ನ ಕೈಗೆ;



ಎದೆಗೊತ್ತಿ ಹಿಡಿದಪ್ಪಿ ನಾ ಮುತ್ತನಿಕ್ಕಿದೆನು
ಮೊಲೆಹಾಲಿನಿಂದೊದ್ದೆ ರವಕೆ !
ಹೊರಟೆ ಹೋದರು ಸ್ವಾಮಿ! ಕೊರಳುದ್ದ ಮಾಡಿದೆನು.
ಹೊರಳಿನೋಡಲೆಯಿಲ್ಲ ಮರಳಲಿಲ್ಲ !
“ನೇಸರಿಳಿಯುವ ಹೊತ್ತು – ಸಿಡಿಲಸುದ್ದಿಯು ಬಂತು
ಹಿಡಿದ ಬಾವುಟ ಬಿಡದೆ ಮಡಿದರಲ್ಲ !
“ಮಾನಸ ಸರೋವರಕೆ ಮೋಹಸಕ್ಕರೆ ಬೆರೆಸಿ
ಶಿಶುರಾಜಹಂಸನನು ತೇಲಿಸಿದೆನು ;
ಬಳೆದು ನಿಂದನು ಕಂದ, ಅವರದೇ ರೂಪಿಂದ
ಮಗುವೆ ಮೂಜಗವೆಂದು ಮುದ್ದಿಸಿದೆನು
“ತುಂಬು ಹರೆಯದ ತರುಣ, ಮೀಸೆ ಮೂಡಿದ ವದನ,
ಎತ್ತರದಿ ನಿನ್ನನ್ನೆ ಮೀರಿ ನಿಂದ !
ಕರೆ ಬಂತು ಕಾಳಗಕ್ಕೆ, ಹೊತ್ತು ಹೋದನು ಹರಕೆ
ಉತ್ತರದ ಗಡಿಕಾಯೆನಡೆದ ಕಂದ !”
–ಇಂತು ಚಿಂತಿಸಿ, ಮೆಯ್ಯ ಮರೆತು, ನೆಲಕೊರಗಿದಳು !
ನೀಳ್ದ ಮೊಗದಿಂ ಬಾಗಿ ಹಸು ಮೂಸಿತು !
ಬೆಂದೊಡಲು ಬೇಗೆಯನು ತಣಿಸೆ ನಾಲಿಗೆ ಚಾಚಿ
ಅಮೃತರಸದಿಂದವಳ ಮಿದು ನೆಕ್ಕಿತು !
ನಾಲ್ಕು ದಿನಗಳ ಹಿಂದೆ ಗಡಿ ಕಾವ ಯೋಧರಿಗೆ
ನೆರವು ನೀಡಿರಿಯೆಂದು ಕೇಳಿ ಬಂದು,
ಅದೆ ಗುಡಿಸಲು ಸೇರ್ದೆ, ಆ ತಾಯ ಬಳಿ ಸಾರ್ದೆ
ನಮ್ಮ ಯೋಧರ ಸಾಸ ಹೇಳುವಂದು–
ಬೆರಗಾಗಿ ಕೇಳುತ್ತಿದ್ದಳು ತಾಯಿ ! ಕೊನೆಗೊಮ್ಮೆ
ನಿಟ್ಟುಸಿರು ಬಿಟ್ಟು ಒಳಹೋಗಿ ಮರಳಿ,
ಹಳೆಯ ಪಟ್ಟೆಯ ಬಟ್ಟೆಯಲಿ ಸುತ್ತಿ ಕಟ್ಟಿರುವ
ಗಂಟಂ ಬಿಚ್ಚಿದಳಾಕೆ ಸುರುಳಿ ಸುರುಳಿ!
ಗಿಳಿಯೋಲೆ ಮೂಗುತಿಯು ನತ್ತು ತಾಳಿಯು ಇತ್ತು !
ಹಣೆಗೊತ್ತಿ ಮೊಗವೆತ್ತಿ ನುಡಿದಳಿಂತು:
ಪುಣ್ಯವಂತರೆ ! ಎನಗೆ ಮಗುವ ಕಂಡಂತಾಯ್ತು

ಅವನೆನ್ನ ಸಂಪತ್ತು, 'ಕೊಳ್ಳಿರೀ ಸೊತ್ತು',
...ಕೇಳ್ದೆನಾಕೆಯ ಕಥೆಯ; ಶೋಕವೇ ವೀರವೆ ?
ದೇಹ ಪುಲಕಿತವಾಯ್ತು ಕಂಪಿಸಿತ್ತು !
ಆ ತಪಸ್ವಿಗೆ ನಾ ಮಣಿದೆನಾಕೆಯ ಸ್ವಾಮಿ
ಯಂ ನೆನೆದೆ, ಸುತನಿಗಭಿಮನ್ಯುಗತಿಯಾಯ್ತು !...

ಆ ತಂದೆಯ ಆ ತಾಯಿಯ
ಆ ತರುಣನ ತ್ಯಾಗ!
ಕಾಳಗದಲಿ ಕಾಳಿಗೆ ಬಲಿ
ಸ್ವಾತಂತ್ರ್ಯವೆ ಯಾಗ !
ಸ್ವಾತಂತ್ರ್ಯಂ ಮೂರಕ್ಷರ
ಮೂಲೋಕದ ಸಾರ !
ವೈಕುಂಠದ ಕೈಲಾಸದ
ಮುಕ್ತಿಯ ಮಾದ್ವಾರ !
ಇದು ಧರ್ಮವು ಇದು ಕರ್ಮವು
ನಡೆ ಮುಂದಕೆ ಧೀರ–
ಇದೆ ಭೋಗವು ಇದೆ ಯೋಗವು
ದೌರ್ಬಲ್ಯವು ದೂರ,
ನಾಡಿನ ಗಡಿ ಕಾಯಲು ಹಿಡಿ
ನೀ ಕೋವಿಯ ನಿತ್ಯ;
ನಾಡುಳಿದರೆ ನೀನುಳಿಯವೆ
ನಾನುಳಿಯುವೆ ಸತ್ಯ.
ಜಯ ನೋವಿಗೆ ಜಯ ಸಾವಿಗೆ
ಜಯ ದೇವಿಗೆ ಜಯತು;
ಜಯ ದೇಶಕೆ ಜಯ ಕೋಶಕೆ
ಜಯ ಭಾರತ ಜಯತು !
ಓಂ ಯುದ್ಧಕೆ
ಓಂ ಯೋಧಗೆ



ಓಂ ಕ್ರಾಂತಿಯ ಕಿಡಿಗೆ !
ಓಂ ಬುದ್ಧಗೆ
ಓಂ ಬೋಧಕೆ
ಓಂ ಶಾಂತಿಗೆ ಕಡೆಗೆ.

* * * *

## ದಿಗಂತದಾಚೆಗೆ

"ದಿಗಂತದಾಚೆಗೆ– ನದಿವನದಾಕಡೆ
ಆ ಬೆಟ್ಟದ ಮರೆಗಿದೆ– ತಾಯ್ನಾಡು !
ಅವಳು ಪುಣ್ಯಪದರಜದಿ ಜನಿಸಿದೆವು,
ಸೇರುವೆವಾ ಸತ್ಯದ ನೆಲೆವೀಡು." ॥೧॥

"ಕೇಳಿರಿ, ಕೆರಳಿರಿ, ಕಹಳೆ ಮೊಳಗುತಿದೆ !
ಭಾರತ ಬಾರೆಂದೆಮ್ಮ ಕರೆಯುತಿದೆ !
ಕೋಟೆ ಡಿಲ್ಲಿಗಳು, ಕೋಟಿ ಬಾಂಧವರು,
ಸ್ವಾಗತ ನಿಮಗೆಂದೆಲ್ಲ ಕರೆಯುವರು." ॥೨॥

"ಸಿದ್ಧರಾಗಿ, ಹೋ ! ಜೀವದ ಹಿಡಿದು,
ಒಂದಾಗಿರಿ–ಮುಂದಾಗಿರಿ–ಬನ್ನಿ;
ದೇವರ ದಯೆಯಿದೆ, ಹಗೆಯನು ಮುರಿದು,
ಸತ್ಯ ಬಿಡದೆ ಸ್ವಾತಂತ್ರ್ಯವ ತನ್ನಿ." ॥೩॥

"ಡಿಲ್ಲಿಯ ಮಾರ್ಗವು, ಸ್ವತಂತ್ರ ಮಾರ್ಗವು
ಮರಣಗೊಂಡರೂ ಸಾವುಂಟೆ?
ಸ್ವತಂತ್ರಮಾರ್ಗದ ಪಾವನಧೂಳಿಯ
ಚುಂಬಿಸಿ ಸತ್ತರೆ ನೋವುಂಟೆ?" ॥೪॥

“ತೊಲಗಿ ಭಾರತವ ಬಿಟ್ಟು ಬ್ರಿಟಿಷರು
ಒಳಗೆ ವೀರರದೊ, ಬೇರಿ ಹೊಡೆದರು ;
ಹೊರಗೆ, ಹೀಗೆ ನಾವ್ ಕಾದಿ ಪಡೆವೆವು
ರಕ್ತದುರ್ಗವನು ; ಡಿಲ್ಲಿ ಹಿಡಿವೆವು.” ॥೫॥

“ರಕ್ತ ಬೇಕು ! ಬಿಸಿ ರಕ್ತ ಬೇಕೆಮಗೆ,
ರಕ್ತ ಕೊಡುವ ಯುವಶಕ್ತಿ ಬೇಕೆಮಗೆ;
ರಕ್ತ ! ರಾಷ್ಟ್ರಸ್ವಾತಂತ್ರ್ಯ ಸಾಧನೆಗೆ,
ರಕ್ತ ! ರಕ್ತ ! ಬೆನ್ನಟ್ಟಿರಿ ! ದಗೆ ಹಗೆ,” ॥೫॥

ತರುಣ ಧಮನಿಯಲಿ ಸ್ವಾತಂತ್ರ್ಯದ ಬಿಸಿ–
ರಕ್ತ ಕುದಿಸುತಿರೆ;– ನೇತಾಜಿಯ ಕರೆ ;
ಯುವ ಜನರದೊ, ಬರೆದರು ನೆತ್ತರ ಮಸಿ–
ಯಿಂದ ಭಾರತದ ರಣಗಾನದ ಗೆರೆ. ॥೭॥

‘ಕೆಂಪು ಕೋಟೆ ಹಿಡಿ, ಡಿಲ್ಲಿವರೆಗೆ ನಡಿ’
ಪುರುಷಹಿಂಹ ನೇತಾಜಿ ಗುಡುಗಿದು;
ಮುದ್ದುಗುಂಡುಗಳೊ, ಸೈನ್ಯಸರಕುಗಳೊ,
ಸಿದ್ಧವಿಲ್ಲವೆಂದಾರು ಅಂಜಿದಂ? ॥೮॥

ಸಹಸ್ರಸಂಖ್ಯರ್ ಸ್ವತಂತ್ರಯೋಧರ್,
ರಾಷ್ಟ್ರದೇವಿ ಕರೆ ಕೇಳಿ ನುಗ್ಗಿದರ್;
“ಸೋಲೋ, ಗೆಲವೊ, ಸೇನಾನಿಯೆ ಬಲ್ಲರ್,
ಮಾಡುವೆವಥವಾ ಮಡಿಯುವೆವೆಲ್ಲರ್.” ॥೯॥.”

‘ನಮ್ಮಯ ನೇತಾ, ಭಾಗ್ಯವಿಧಾತಾ’
ಜಗ್ಗದೆ ಕುಗ್ಗದೆ ನಡೆಯಿರಿ ನಿರತ;
ಬಾಂಧವರಿರಲಿ, ಸೈಂಧವರಿರಲಿ,
ಸ್ವಾತಂತ್ರ್ಯದ ಹಗೆಯನ್ನು ಕೊಡಿ ಬಲಿ;



“ಸ್ವತಂತ್ರ ಭಾರತ ಸೇನಾಪಥಕಂ,
ಸಾಗಲಿ– ಹೋಗಲಿ– ಡಿಲ್ಲಿಯ ತನಕಂ;
ರಕ್ತ ದುರ್ಗವನು ಸಾಧಿಸಿ, ಹಾರಿಸಿ
ರಾಷ್ಟ್ರಧ್ವಜವನ್ನು, ಜಯಧ್ವನಿ ಬಾರಿಸಿ” ॥೧೧॥

“ಮಾತೃಭೂಮಿ ಸ್ವಾತಂತ್ರ್ಯದಿ ಮೆರೆದಿರೆ,
ಹೆಣ್ಣಿಗು ಗುಂಡಿಗು ಸಮಪಾಲು;
ಮಾತೃಭೂಮಿ ಪರತಂತ್ರದಿ ಕೊಳೆತರೆ,
ಹೆಣ್ಣಿಗು ಗಂಡಿಗು ಸಮಗೋಳು” ॥೧೨॥

ಹೆಣ್ಣು ಹಿಂದೆನದೆ, ಗಂಡು ಮುಂದೆನದೆ,
ಸ್ವತಂತ್ರ ಭಾರತ ಸೇನೆ ಸಾಗಿತು ;
ಝಾಂಸಿ ಪಥಕದಧಿರಾಣಿ, ಸಿಂಹಿಣಿ !
ಲಕ್ಷ್ಮಿ, ಕಾದಿದಳು, ಮುನ್ನಿಂತು. ॥೧೩॥

ಭಾರತ ಬರ್ಮದ ಗಡಿಯಲಿ ಕಾಳಗ
ಕೈ ಕೈ ಮಸಗಿತು;– ಹಗಲಿರುಳು;
ಭಾರತ ಮಾತೆಯ ದಾಸ್ಯದ ಕೆಸರಲಿ
ಒತ್ತುವ ಎತ್ತುವ ಜಗಳಗಳು, ॥೧೪॥

ದುಡ್ಡಿಗಾಗಿಯೇ ದೇಹವ ದೇಶವ
ಮಾರಿದ ಜನ, ಬ್ರಿಟಿಷರ ಘನ ಪಡೆಗೆ;
ನಾಡಿನುನ್ನತಿಗೆ ನೆತ್ತರು ಚೆಲ್ಲುವ
ರಕ್ತಬೀಜದಳ ಜಯ್ ಹಿಂದ್ ಕಡೆಗೆ, ॥೧೫॥

“ಮುಸಲ್ಮಾನ ಸೀಖ್ ಕ್ರಿಶ್ಚನ್ ಹಿಂದು
ಬ್ರಾಹ್ಮಣ ಶೂದ್ರರು ಹರಿಜನರೊಂದು;
ಒಂದೆ ರಕ್ತ, ಸ್ವಾತಂತ್ರ್ಯದ ಬಿಂದು !
ಮಾಡುವೆವಥವಾ ಮಡಿಯುವೆವಿಂದು” ॥೧೬॥

"ಧರ್ಮವೊಂದೆ, ದಾಸ್ಯದ ನೊಗ ಮುರಿವುದೆ,
ಮತವೊಂದೇ, ಕ್ರಾಂತಿಯ ಕೆರಳಿಸುವುದೆ ;
ಪಂಥವೊಂದೆ, ತೊಲಗಿರಿ ಸಾಕೆನುವುದೆ,
ಕುಲವೊಂದೇ, ಕೃತಿಮಾಡಿ ಮಡಿಯುವುದೆ" ॥೧೭॥

"ರಾಜನಿಷ್ಠೆಯೋ, ರಾಷ್ಟ್ರನಿಷ್ಠೆಯೋ,
ದಾಸತ್ವವೊ, ಸ್ವಾತಂತ್ರ್ಯವೊ, ಹೇಗೆ ?
ಗದ್ದುಗೆಯುರುಳಲಿ ಭಾರತ ಬೆಳಗಲಿ !
ಸ್ವಾತಂತ್ರ್ಯದಿ ಸಾವಪ್ಪುದೆ ಮೇಗೆ." ॥೧೮॥

"ನಮ್ಮ ನಾಡಿನೊಳೆ ನಾವ್ ಗುಲಾಮರೊ ?
ನಮ್ಮ ಕಯ್ಯ ಕರವಾಳ ಕಸಿದರೊ;
ನಮ್ಮ ಬಾಯ್ಗೆ ಬಿಗಿ ಬೀಗವಿಕ್ಕಿದರೊ !
ನಮ್ಮ ಬರೆಹ ನಿರ್ಬಂಧಿಸಿರುವರೊ." ॥೧೯॥

"ನಿರ್ಬಂಧದ ಶತಶೃಂಖಲೆ ಕಡಿಯಿರಿ;
ನಿರ್ಬಂಧಿಸುವವರ ಕೊಚ್ಚಿ ಕೆಡಹಿರಿ !
ಕ್ರಾಂತಿಯ ಝುಂಝುವಾತವೆಬ್ಬಿಸಿರಿ !
ಸ್ವಾತಂತ್ರ್ಯಕೆ ಬಲಿದಾನವೊಪ್ಪಿಸಿರಿ." ॥೨೦॥

"ಸ್ವಾತಂತ್ರ್ಯವೆ ಸಿರಿ, ಸ್ವಾತಂತ್ರ್ಯವೆ ಹರಿ,
ಸ್ವಾತಂತ್ರ್ಯವು ಸಿಗದುಂಟೆ ಶಾಂತಿಯು ?
ಸ್ವಾತಂತ್ರ್ಯವೆ ವರ ಸ್ವಾತಂತ್ರ್ಯವೆ ಹರ,
ಸ್ವಾತಂತ್ರ್ಯವೆ ವೀರಗೆ ವಿಶ್ರಾಂತಿಯು." ॥೨೧॥

ಇಂಫಾಲ್ ಕದನದಿ ಸ್ವತಂತ್ರಭಾರತ
ಸೇನೆ ಸಂಕಟದಿ ಸಿಲುಕಿತ್ತು,
ಆಶನ ವಸನ ಧನ ವಾದನ ಸಾಧನ
ಮದ್ದುಗುಂಡುಗಳು ಮುಗಿದಿತ್ತು. ॥೨೨॥



ಸೇನಾನಾಯಕ ಹೇಳಿದ ಗದ್ಗದ;
"ಮೃತ್ಯುಮುಖಕೆ ಮುನ್ನುಗ್ಗುವುದೇ ?"
ಸೈನಿಕರೆಂದರು; "ಪ್ರಾಣವ ತೆತ್ತರು
ಇಂಫಾಲ್ ಹಿಡಿಯದೆ ಹೋಗುವುದೆ ?" ॥೨೩॥

"ಆಡಿಯನೊಂದ ಮುಂದಿಡಲು ಸ್ವರ್ಗವು,
ಹೆಜ್ಜೆಯೊಂದ ಹಿಂದಿಡಲು ನರಕವು;
ಸತ್ತು ಸ್ವರ್ಗವನೆ ಪಡೆಯಲಿರ್ಪೆವು !
ಬದುಕಿ ನರಕದಲಿ ನರಳಲೊಪ್ಪೆವು." ॥೨೪॥

"ಸ್ವಾತಂತ್ರ್ಯಕೆ ಬಲಿದಾನವಾದವಗೆ;
ಸ್ವರ್ಗದಿ ಸಂಭ್ರಮ ಸುಸ್ವಾಗತವು;
ಪರತಂತ್ರದಿ ನರಳುವ ಹೆಂಬೇಡಿಗೆ,
ಬದುಕೆಂಬುದೆ ನಿಜ ರೌರವವು." ॥೨೫॥

"ನೇತಾಜಿಯ ನುಡಿ ನಡೆಸದೆ ಮರಳೆವು
ಬೆಂಕಿಗೆ ಬೆಂದರು ಬೀಳುವೆವು"
ಏನು ಶಕ್ತಿಯೊ ! ರಾಷ್ಟ್ರಭಕ್ತಿಯೊ !
ಕೇಳಿಯೆ ಮೈನವಿರೇಳುವುವು. ॥೨೬॥

ಸೈನಿಕರೀ ವಿಧ, ಸಾಹಸ ಪುಲಕಿತ
ಕ್ರಾಂತಿಕದನಕಥೆ ಕೇಳಿದನು;
ಬಾಷ್ಪಲೋಚನೆ, ಸುಭಾಸ: ಬಾಂಧವರೆ,
ಬನ್ನಿ ಸಾಕೆನುತ ಹೇಳಿದನು ॥೨೭॥

ಅನ್ನ ಮುಗಿದು, ಪಡೆ ಬನ್ನವೊಮ್ಮೆ ಪಡೆ,
ನೆನೆ ನೇತಾಜಿಯ ಕಿಡಿನುಡಿ: "ಮುನ್ನಡೆ,
ದಾಸ್ಯದ ಮಧುಪರಮಾನ್ನವು ವಿಷವು !
ಸ್ವಾತಂತ್ರ್ಯ ವಿಷವಮೃತಸದೃಶವು ॥೨೮॥

ಹಸಿವೆಯ ಬೆಂಕಿಗೆ, ಭಾರತ ಬಳಲಿತು !
ಬಂಗಾಲವು, ಹಾ! ಕಂಗಾಲ;
ಎರಡು ಶತಕದಲಿ, ದಾಸ್ಯ ನರಕದಲಿ,
ಬ್ರಿಟನು ಬರಿಸಿತಾ ಬರಗಾಲ, ॥೨೯॥

ಉಪವಾಸದ ಭುಗಿಲೆದ್ದಿತು, ಬಿದ್ದಿತು
ಬೆಂಕಿಗೆ ನುಸಿವೋಲ್ ಜನರಾಶಿ;
ಕರುಳಿನ ಕರುಣೆಯ ಕೂಗು ಕೇಳುತಲಿ,
ಮರುಗಿದ ಕರಗಿದ ನೇತಾಜಿ, ॥೩೦॥

"ಭಾರತ ಬೆಂದರೆ ಯಾರಿಗೆ ತೊಂದರೆ ?
ಬ್ರಿಟನು ರಾಣಿ ತೆರೆಯಾಳುವಳೈ;
ನಮ್ಮ ಜನರ ನಾವ್ ಬದುಕಿಸಬಲ್ಲೆವು,
ಅಕ್ಕಿ ಕೊಡುವೆವಿದೊ– ಸಾಗಿಸಿರೈ" ॥೩೧॥

ಸ್ವತಂತ್ರ ಭಾರತ ಸೇನೆಯು ನೀಡಿದ
ಸಹಾಯ ಹಸ್ತವ ಹಿಂದೂಡೆ,
ಅತಂತ್ರ ಭಾರತ ! ಸ್ವರಾಜ್ಯ ಕೇಳಿದ
ಮುಂದಾಳುಗಳನು ಮರೆಮಾಡೆ. ॥೩೨॥

"ಬದುಕಿಸಲಾರರು, ಬದುಕಲು ಬಿಡರು,
ಬದುಕೆಂಬುದೆ ಭಾರತ ಜನಕಿಲ್ಲವೆ?
ಪರಕೀಯರ ಬಳಿ ನರಕೀಯತೆಯಲಿ
ಬದುಕಿದ್ದರು ಬಾಳುವೆ ಸಾವಲ್ಲವೆ?" ॥೩೩॥

"ಜಪಾನು ಬಂದರು, ಜರ್ಮನಿ ಬಂದರು,
ಬ್ರಿಟನಿದ್ದರು–ಫಲವೆಮಗೊಂದೆ;
ಜಪಾನು ಜರ್ಮನಿ ಬ್ರಿಟನವು ಬೇಡ,
ತೊಲಗಿರಿ ನಮ್ಮಯ ನೆಲದಿಂದೆ." ॥೩೪।



"ಸ್ವಾತಂತ್ರ್ಯಕೆ, ಜಗಜನತಾರಾಜ್ಯಕೆ,
ಕಾದುವುದೆಂಬುದು ನಿಜವೇನು?
ನಮ್ಮ ತಾಯ್ನೆಲಕೆ ನಿಮ್ಮ ತತ್ವಗಳು
ಹೊಂದದೆ ನಂಬುಗೆ ನಮಗೇನು?" ॥೩೫॥

"ಬಿಳಿಯರಿಗೆಲ್ಲವು ಬೇರೆಯೆ ತತ್ವವು
ಕರಿಯ ಜನರು ಕುರಿಮಂದೆಗಳೇ ?
ಯುರೋಪ್ ಬೆಳಗಲಿ, ಏಷ್ಯವು ಮುಳುಗಲಿ !
ಎಂಬುದು ನವನವತತ್ವಗಳೇ ? ॥೩೬॥

"ತತ್ವಕು ಕೃತ್ಯಕು, ಮಾತಿಗು ಮನಸಿಗು
ಸಂಬಂಧವ ನೀವ್ ತಿಳಿದಿಲ್ಲ;
ತತ್ವ ಮಾತುಗಳ ಹೇಳಿ ವಂಚಿಸಿದ
ನಿಮ್ಮಲಿ ನಂಬುಗೆ ನಮಗಿಲ್ಲ." ॥೩೭॥

"ಮೊದಲಿನ ಯುದ್ಧದಿ ನಿಮ್ಮೊಡಗೂಡಂತೆ
'ಸ್ವಾತಂತ್ರ್ಯಕೆ' ಹೋರಾಡಿದೆವು;
ಎದೆಯಲಿ ಗುಂಡನು, ತಲೆಯಲಿ ಲಾಠಿಯ,
ಸೆರೆಮನೆ ಸುಖವನು ನೋಡಿದೆವು." ॥೩೮॥

"ಹಿಂದಿನ ಕಹಿಯಿಂ, ಮುಂದಿನ ಮಾರ್ಗವ
ಚಂದದಿ ಕಂಡೆವು ನಾವೊಂದು:
ಇಂದಿನ ಯುದ್ಧದಿ ನಿಮ್ಮೊಡಗೂಡೆವು,
ನಿಮಗಿದಿರೆದ್ದೆವು– ನಾವ್ ನೊಂದು" ॥೩೯॥

"ಹಿಂಸ್ರವಿನಾಶದಿ, ಧ್ವಂಸವಿರೂಪದಿ,
ಯುರೋಪ್ ರಾಕ್ಷಸ ಪುರಿಯಾಯ್ತು;
ಶಾಂತಿ ಸಮತೆಯಲಿ, ಕ್ರಾಂತಿ ಕ್ರಮತೆಯಲಿ,
ಏಷ್ಯವು ದೇವನಗರಿಯಿಂತು." ॥೪೦।

"ಸಮ್ರಾಟರ ಘನ ಮಕುಟವನುರುಳಿಸಿ
ಸರ್ವಾಧಿಪರನು ತಲೆಮೆಟ್ಟಿ;
ಸ್ವಾತಂತ್ರ್ಯದ ಸಂದೇಶ ಸಾರುತಲಿ,
ಸಮತೆಯ ರವಿ ಬರುತಿಹನಟ್ಟಿ." ॥೪೧॥

–ಇಂತು ವೀರರನು ಕೂಗಿ ಕರೆದನೊ;
'ಸ್ವಾತಂತ್ರ್ಯಕೆ' ಬಲಿದಾನ ಕೊಡಿ
ಕಹಳೆ ಮೊಳಗುತಿದೆ: 'ಸೈನ್ಯ ಸಾಗುತಿದೆ.
ನೇತಾಜಿಗೆ ನೀವ್ ಕೈ ನೀಡಿ' ॥೪೨॥

ಸ್ವತಂತ್ರ ಭಾರತ ಸೇನಾಗಾನವ
ಹಿಗ್ಗಿ ಹಾಡಿ ನಾವ್ ಸಾಗುವೆವು;
ಸ್ವತಂತ್ರ ಭಾರತ ಸೂರ್ಯೋದಯದಲಿ
ನೇತಾಜಿಗೆ ತಲೆ ಬಾಗುವೆವು. ॥೪೩॥

* * * *

## ನೌಶೇರ ಶೂರ

ಉಸ್ಮಾನ ಉದಿಸಿದನು
ಸ್ವಾತಂತ್ರ್ಯಕಾಗಿ!
ಉದಿಸಿ ಅಸ್ತಮಿಸಿದನು,
ಸ್ವಾತಂತ್ರ್ಯಕಾಗಿ!
ಸ್ವಾತಂತ್ರ್ಯ! ತಾಯ್ನಾಡ
ಸ್ವಾತಂತ್ರ್ಯಕಾಗಿ!
ಸ್ವಾತಂತ್ರ್ಯ! ಸ್ವಾತಂತ್ರ್ಯ
ಸ್ವಾತಂತ್ರ್ಯಕಾಗಿ!



ಕಾಶ್ಮೀರ ಕಣಿವೆಯಲಿ
ಭಾರತದ ಭಟರು,
ಧಾಳಿಗಾರರ ಸೀಳಿ
ಕೆರಳಿ ಕಾದಿದರು !
ಉಸ್ಮಾನ ದಳಪತಿಯ
ಶೂರ ಸೈನಿಕರು !
ಗರ್ಜಿಸುತ ಘೋಷಿಸುತ
ಏರಿ ಸಾಗಿದರು !
ಸಾಗಿದರು ತಾಯ್ನಾಡ
ಸ್ವಾತಂತ್ರ್ಯಕಾಗಿ!

"ಕಾದುವೆವು: ತಾಯ್ನಾಡ
ನೆಲಕಾಯೆ, ಫಲಕಾಯೆ,
ನಾಡ ಗಡಿಗುಡಿಕಾಯೆ,
ಕಾಯದಿದ್ದರೆ ಸಾಯೆ !"
–ಎಂಬ ವೀರಧ್ವನಿಯೆ,
ತುಂಬಿರಲು ಕಣಕಣಿವೆ,
ಜಯ್‌ಹಿಂದ್ ಗುಡುಗಿನಲಿ
ಧಾಳಿಗಾರರ ಸೀಳಿ,
ಬಿಡುಗಡೆಯ ಕದನದಲಿ,
ಸಾವೆ–ಸ್ವರ್ಗವುಯೆಂದು !

ಉಸ್ಮಾನ ದಳಪತಿಯ
ಭಟರು ನುಗ್ಗಿದರು !
ಕಾಶ್ಮೀರ ಕಣಿವೆಯಲಿ
ಹಿಗ್ಗಿ ನುಗ್ಗಿದರು !
ನುಗ್ಗಿದರು ತಾಯ್ನಾಡ
ಸ್ವಾತಂತ್ರ್ಯಕಾಗಿ!

"ಅಡಿಯ ಮುಂದಿಡೆ ಸ್ವರ್ಗ;
ಅಡಿಯ ಹಿಂದಿಡೆ ನರಕ"
ಅವರೊಕ್ಕೊರಲ ಮಂತ್ರ !

ತಮ್ಮ ನಾಡ ಸ್ವತಂತ್ರ,
ತಾವು ರಕ್ಷಿಸುತಿಹೆವು;
ತಮ್ಮ ತಾಯಿಯ ಮಾನ,
ತಾವು ಕಾಯುತಲಿಹೆವು;
–ಇಂತವರದಭಿಮಾನ !

ಬಿಡುಗಡೆಯ ಮೆಚ್ಚಿನಲಿ,
ಕಲಿತನದ ಕೆಚ್ಚಿನಲಿ,
ಉರಿದೆದ್ದ ರೊಚ್ಚಿನಲಿ,
ಹಗೆ ಮೇಲೆ ಕಿಚ್ಚಿನಲಿ,
ಉಸ್ಮಾನ ದಳಪತಿಯ
ನೂರಾರು ಸೈನಿಕರು
ಕಾಶ್ಮೀರ ಕಣಿವೆಯಲಿ
ಕಾದಿದರು ತಾಗಿ;
ಕಾದಿದರು ತಾಯ್ನಾಡ
ಸ್ವಾತಂತ್ರ್ಯಕಾಗಿ!

ನೆಲ ಮಟ್ಟಿರಲು ಬಾಂಬು
ತಲೆಯೆತ್ತಿರಲು ಬಾಂಬು
ಅವರ ಮುಂಗಡೆ ಬಾಂಬು
ಅವರ ಬೆಂಗಡೆ ಬಾಂಬು
ಬಿದ್ದರೂ– ಬೆದರದೆಯೆ
ನುಗ್ಗಿ ಸಾಗಿದರು;
ಉಸ್ಮಾನ ದಳಪತಿಯ
ಭಟರು ಕಾದಿದರು.



ಬಾಂಬು ಹೂಮಳೆಯೆಂದು,
ಗುಂಡು ಬಾಜನೆಯೆಂದು,
ಬೆಂಕಿಯಾರತಿಯೆಂದು,
ಮರಣ ಮಂಗಲವೆಂದು,

ಕಾಶ್ಮೀರ ಕಣಿವೆಯಲಿ
ಕಾದಿದರು ಸಾಗಿ !
ಕಾದಿದರು ತಾಯ್ನಾಡ
ಸ್ವಾತಂತ್ರ್ಯಕಾಗಿ!

ಉಸ್ಮನನು ಮುಸ್ಲಿಮನು,
ದುಷ್ಮನರು ಮುಸ್ಲಿಮರು !
ಧರ್ಮಕಾಗಿಯೆ ಯುದ್ಧ
ಎರಡು ಕಡೆಗು !
ರಾಷ್ಟ್ರಪ್ರೇಮವೆ ಧರ್ಮ ?
ಕಳವು ಸುಲಿಗೆಯೆ ಧರ್ಮ ?
ಉಸ್ಮಾನನರಿತಿದ್ದ
ಸಾವವರೆಗು !

'ಮುಸ್ಲಿಂಮಯಂ ಜಗತ್–
ಮಾಡುವವರಾವೆಂದು,
ಜಗದ ಮುಸ್ಲಿಮರೆಲ್ಲ
ಬೆಂಬಲಕೆ ಬೇಕೆಂದು,
ಉಸ್ಮಾನ, ಧರ್ಮಿಷ್ಠ
ಬೇರಾಗಬೇಡೆಂದು,
ಬಂದಲ್ಲಿ ನಿನಗಿಲ್ಲಿ
ಪಟ್ಟ ಕಟ್ಟುವೆವೆಂದು !

ಮಂಕು ಮಾಯೆಯ ತಿಳಿಸೆ
ಮರುಳಾದನಿಲ್ಲ;
ಸುಲಿಗೆ ಸೂರೆಯ ಬಳಸೆ
ತಾಂ ತೆರಳಲಿಲ್ಲ;
ಮಾತೃಭೂಮಿಯನುಳಿಸೆ
ಉಸ್ಮಾನ ಬಲ್ಲ;
ಉಸ್ಮಾನ ಕಾದಿದನು
ಸ್ವಾತಂತ್ರ್ಯಕಾಗಿ!

ಕರೆದರೂ ಬರೆದರೂ
ಓಗೊಡುವುದಿಲ್ಲ;
ಜರೆದರೂ ಇರಿದರೂ
ಹಾ ! ಬಿಡುವುದಿಲ್ಲ;
ಹಗಲಿನಲಿ, ರಾತ್ರಿಯಲಿ,
ಅಲ್ಲಲ್ಲಿ ಎಲ್ಲೆಲ್ಲಿ
ವೈರಿಗಳ ಹೃದಯದಲಿ,
ಉಸ್ಮಾನ ವೀರಮೂರ್ತಿ
ನೆಲಸಿತ್ತು,
ವಿಸ್ಮಯದ ಬೀಜ ಬಿತ್ತಿ !

“ಅವನ ಹಿಡಿತಂದೆಮಗೆ
(ಬದುಕಿರಲಿ ಸತ್ತಿರಲಿ)
ಒಪ್ಪಿಸಿದ ಸಾಹಸಿಗೆ,
ಲಕ್ಷಾರ್ಧ ಹಣ ಸಲಲಿ”
–ಎಂದು ಸಾರಿತು ಸುದ್ದಿ;
ಹಗೆತನದ ದುರ್ಬುದ್ಧಿ.
ಪುಂಡರನು ಬೆನ್ನಟ್ಟಿ
ಮುನ್ನುಗ್ಗಿ ಹೋಗಿ,



ಉಸ್ಮಾನ ಕಾದಿದನು
ಸ್ವಾತಂತ್ರ್ಯಕಾಗಿ.

‘ಮುಸ್ಲಿಂಮಯಂ ಜಗತ್’
ಬಯಸಿದಾ ಮರುಳಗಳ್
ಬಾಂಬುಗಳ
ಒದಗಿಸಿದರು !
ಉಸ್ಮಾನನನು ಕೊಂದೆ,
ಇಸ್ಲಾಮಿನುಳಿವೆಂದೆ
ಬಾಂಬುಗಳ
ಒದಗಿಸಿದರು !

ಕಾಶ್ಮೀರ ರಣದಲ್ಲಿ
ನೌಶೇರ ನೆಲದಲ್ಲಿ
ಕಾದುತಿರೆ
ಒಂದು ದಿನದಿ–
ಸಿಡಿದುದೋ–
ಬಾಂಬು ಹಾ ! ನಿಂತ ನೆಲದಿ ;
ಅಕಟಕಟ !
ಹೋರಾಡಿ ದಣಿದ ಧೀರ–
ಒರಗಿದನು,
ನೌಶೇರ ಕದನ ಶೂರ !
ನೌಶೇರ ಕಡುಗಲಿಯು
ಉಸ್ಮಾನದ ದಳಪತಿಯು
ವೀರಮರಣವ ಪಡೆದನು !
ತಾಯ್ನಾಡ ನೆಲಕಾಯೆ,
ಗಡಿಕಾಯೆ, ಗುಡಿಕಾಯೆ,
ಕಾಯದಿದ್ದರೆ ಸಾಯೆ,
–ಎಂಬ ಪಂಥದಿ ದುಡಿಯೆ

ಕಾಶ್ಮೀರ ಕಣಿವೆಯಲಿ
ಉಸ್ಮಾನ ಮಲಗಿರುವನು !

‘ಭಾರತದಿ ಮಮಜನ್ಮ
ಸ್ವಾತಂತ್ರ್ಯವೇ ಧರ್ಮ’
ಸಾರುತೀ ಸಂದೇಶ,
ತೋರಿ ಪೂರ್ಣಾವೇಶ,
ನೌಶೇರ ಗಡಿಯಲ್ಲಿ–
ತಾಯ್ನಾಡ ಮಡಿಲಲ್ಲಿ–
ಉಸ್ಮಾನ ಮಲಗಿದನು
ಸ್ವಾತಂತ್ರ್ಯಕಾಗಿ !
ಕಾಶ್ಮೀರದ ಕಣಿವೆಯಲಿ,
ತಾಯ್ಮಾಡಿನ ಮಡಿಲಿನಲಿ,
ಒರಗಿದ ವೀರನನು !
ನಿದ್ದೆಯು ಕೆಡದಿದ್ದ ತೆರದಿ
ಭಾರತದ ವಿಮಾನ,
ಓಲಾಡಿಸಿ ತೇಲಾಡಿಸಿ
ಡಿಲ್ಲಿಗೆ ತಂದವನ;
ಗೌರವಯುತ ಭಕ್ತಿ ಸಹಿತ
ಗೋರಿಯೊಳಿರಿದರು;
ರಾಜಾಜಿಯು ಆಜಾದರು
ಜವಹರ ಸ್ಮರಿಸಿದರು;
ಸ್ಮರಿಸಿದರುಸ್ಮಾನನನು
ಗದ್ಗದ ಹೃದಯದಲಿ;
ಸ್ವಾತಂತ್ರ್ಯದ ಸಂದೇಶದ
ರೋಮಾಂಚನದಲ್ಲಿ !

* * * *



## ವಿವೇಕ ಸ್ಮೃತಿ

ಸತ್ಯಲೋಕದಲಿ ಪದ್ಮಪೀಠದಲಿ
ಧ್ಯಾನಲೀನನಿರೆ ಬ್ರಹ್ಮ;
ದಿವ್ಯದೃಷ್ಟಿಯಿಂ ನವ್ಯಸೃಷ್ಟಿಯಂ
ಗೈವ ಚಿಂತನೆಯೆ ಕರ್ಮ.
ಮಹಿಮಹಿಮಗಿರಿಯ ಗಹನಗಹ್ವರದಿ
ದನಿಯು ಮಾರ್ದನಿಸಿ ಬಂತು;
ವೇದಮಾತೆಯರು ರೋದಿಸುತ್ತಿಹರು
ಕರ್ಣಕುಹರ ಕೀಲಿಸಿತು !
“ಧರ್ಮ ಕೆಟ್ಟಿತ್ತೋ, ಕರ್ಮ ಬಿಟ್ಟಿತೋ,
ದೇವರಿಳಿದ ನೆಲದಲ್ಲಿ;
ಭೂತನರ್ತನವು ಪ್ರೇತವರ್ತನವು
ರಕ್ತಬೀಜಕುಲವಿಲ್ಲಿ.
ಸಾಮಗಾನದಲಿ ಸೋಮಪಾನದಲಿ
ಹಿಗ್ಗಿ ಬಾಳ್ದ ಜೀವನದಿ,
ಅಡಿಮೆ ಆತ್ಮನಿಗೆ ದುಡಿಮೆ ದೀನತೆಗೆ
ಬತ್ತಿತಯ್ಯೋ ! ಜೀವನದಿ”
ಶ್ರುತಿಯ ಸಂದೇಶದಲಿ ಸಾವಿತ್ರಿ ಗಾಯಿತ್ರಿ
ಪುತ್ರಿಯರು ರೋದಿಸೆ, ಪಿತಾಮಹಂ ಕೇಳ್ದು ;
ಪಾಪಲೇಪದಲಿ ಕಂಪಿಸಿತೆ ಪುಣ್ಯಧರಿತ್ರಿ ?
ಅಭಯಶಿಶುವಂ ರೂಪಿಸಿದ ಮುದವ ತಾಳ್ದು
ಅಷ್ಟ ವಸುಗಳ ಭಾಗ್ಯ ಸಪ್ತರ್ಷಿಗಳ ತಪಸು,
ನಾರದನ ತುಂಬುರನ ಗಾನಶಕ್ತಿ,
ಚಂದ್ರಮಕಲಾಪುಂಜ, ರವಿರಾಜ ತೇಜಸ್ಸು,
ರಮೆಯ ರೂಪವು, ಶಾರದೆಯ ವಚೋಯುಕ್ತಿ;
ಮೂರುಲೋಕಗಳ ಸರ್ವಸ್ವಗಳ ಸಾರಗಳ
ಸಂಗ್ರಹಿಸಿ ಚಿತ್ರಿಸಿದ ಮೂರ್ತಿಯಿಂತು !

ನೂರುವರ್ಷಗಳ ಹಿಂದಿನ ಕಾಲ, ಬಂಗಾಳ
ಭುವನೇಶ್ವರಿಯ ಗರ್ಭಕಿಳಿದು ಬಂತು.

ದಕ್ಷಿಣೇಶ್ವರದಿ ಪರಮಹಂಸನಿಹ
ರಾಮಕೃಷ್ಣ ಗುರುವರ್ಯ
ಕಾಳಿ ಕರುಣೆಯನು ಉಂಡು ಮೈಗೊಂಡು
ಕಂಡು ದೇವಹಿತಕಾರ್ಯ;
ಅರಸುತ್ತಿದ್ದನೋ, ಹರಸುತ್ತಿದ್ದನೋ,
ತಾಯಿ ಮಗುವನೆಂತಂತೆ,
ಗುರುವೆ ನಿನ್ನಡಿಗೆ ಬರುವೆನೆಂದನು
ಯುವ ನರೇಂದ್ರಗೀ ಚಿಂತೆ;
ಹಿಂದೆ ಯಮನಿಂದೆ, ಪಡೆದ ವರದಿಂದೆ
ಪ್ರೀತ ನಚಿಕೇತನೆಂತು;
ಪರಮಹಂಸಗುರುಪಾದಕಮಲಮಧು –
ಭ್ರಮರನಾದನವನಂತು ;
ಗಿರಿಯನೇರಿದನು ಸಿಂಹಧೈರ್ಯದಲಿ
ಭೀರುಹೃದಯ ಬೆರಗಾಗೆ ;
ಕಡಲ ದಾಂಟಿದನು ವಜ್ರವೀರ್ಯದಲಿ
ಗರುಡಪವನಜರ ಹಾಗೆ !
ಧೀರರಾಗಿ ಮುನ್ ಶ್ರದ್ಧೆಯಲಿ ಸಾಗಿ
ನುಗ್ಗಿ ಹೋಗಿ– ಜಯ ಮುಂದೆ !
ಮಾನವನ ಶಕ್ತಿ ದೇವರಲಿ ಭಕ್ತಿ
ಕೂಡಿ ಮುಕ್ತಿ ನಿಜವೆಂದೆ.
ಅಂಜದಡಿಯನಿಡು, ಹೆದರಿ ಪಾಪ ಬಿಡು,
ನೋಡು ಮುಂದಿಹುದು ಲಕ್ಷ್ಯ;
ದೇವತ್ವದಂಶ ಮಾನವನ ವಂಶ
ಸೋಹಮ್ಮಿಗದುವೆ ಭಾಷ್ಯ.
ಇದು ಯುಗಯುಗದ ವಾಣಿ ಶ್ರೀ ವಿವೇಕಾನಂದ–
ಗುರು ಘೋಷಿಸಿದ ಚಿರನವೀನತತ್ವ;



ವೇದ–ವೇದಾಂತ ಸಿದ್ಧಾಂತ, ಋಷಿ ಗೀರ್ವಾಣಿ,
ಭಾರತ ನವೋದಯದ ವಿಜಯಸತ್ವ.

ಬಂಗಾರದ ಬಂಗಾಳದಿ
ಜಾಜ್ವಲಿಸಿದ ಜ್ಯೋತಿ
ಮೂಡಲು ಪಡುವಲು ಹಬ್ಬಿತು.
ರವಿ–ಚಂದ್ರಮ ಕಾಂತಿ,
ಈ ಬೆಳಕನು ಹೊಂಬೆಳಕನು
ಕಂಡುಂಡರಾವು,
ಶತಮಾನದ ಸ್ಮೃತಿಗಾನದಿ
ಕವಿಕಾಣ್ಕೆಯ ಹೂವು.
ದೀನರು ದಲಿತದರಿದ್ರರು
ದೇವರದೇ ರೂಪು ;
ತಳೀರೇ ಹೂವೇ ಹಣ್ಣೇ
ಅರ್ಪಿಸಲದೆ ಸಾಕು.
ಮೇಲುಂಟೇ ಕೀಳುಂಟೇ
ಹರಿಲೀಲಾಂಗ;
ಪೆರ್ದೆರೆಯೇ ಕಿರುದೆರೆಯೇ
ಸುರಸಿಂಧುತರಂಗ ?
ಕರಿಜನರದು ಬಿಳಿಜನರದು
ಕೆನ್ನೆತ್ತರುವೊಂದೆ ;
ಒಂದೇ ಜನ ಒಂದೇ ಮನ
ಪರಮಾತ್ಮನ ಬಿಂದು
ಆಧ್ಯಾತ್ಮವ ಲೌಕಿಕದಲಿ
ಬಿಂಬಿಸಿದ್ಯೆ ಗುರುವೆ !
ಶಿಲೆಯೆಡೆಯಲಿ ಹೊನ್ನಿನ ಹುಡಿ
ತುಂಬಿಸಿ ತೋರಿರುವೆ.

ಬಾಳೆಲ್ಲವು ಬೆಳಕಾಯಿತು
ರವಿತೇಜನ ಕಿರಣ.
ಲೋಕದಿ ನಾಕವು ನಲಿಯಿತು
ಯತಿರಾಜನ ಕರುಣ.
ಎದೆಯೆಂದೆಯೀ ಗಂಡೆದೆಯೆನ
ಬೀರುತೆ ಬೆದರಿತ್ತು;
ಜನಜನವೂ ಭೀಮಾರ್ಜುನ
ಪೌರುಷ ಮಸಗಿತ್ತು.
ಪಾಷಾಣದಿ ಪೂವರಳಿತು
ನಿನ್ನಮೃತಸ್ಪರ್ಶ;
ಮೂರ್ಖತೆ ವಿನಯವನಪ್ಪಿತು
ಜಯ ಸತ್ಯಕೆ ಹರ್ಷ
ನೀ ಹಚ್ಚಿದ ಬೆಂಕಿಯ ಕಿಡಿ
ಸ್ವಾತಂತ್ರ್ಯಜ್ವಾಲೆ ;
ನೀ ಬೆಚ್ಚಿದ ನಾಡಿನ ಗುಡಿ
ಬಾನೆತ್ತರ ಲೀಲೆ,
ಹೊರ–ಹೊರಗೆಯೆ ಹಿರಿ ಹಿಗ್ಗುತ
ಪ್ರೇಯವ ಮೆಚ್ಚಿಹೆವು;
ಒಳವೊಳಗೆಯೆ ಕೊಳೆ ತುಂಬುತ
ಶ್ರೇಯವ ಮುಚ್ಚಿಹೆವು.
ಶತಮಾನದ ಸ್ಮೃತಿಗಾನದಿ
ಮುನಿವರ್ಯನ ಕರೆವೆ ;
ಎನ್ನಾತ್ಮಕೆ ನಿನ್ನಾತ್ಮದ
ಪುಣ್ಯವನೆರೆ ಗುರುವೆ !
ಬಿದ್ದಿಹೆ ತಳ–ಪಾತಾಳಕೆ
ಉದ್ಧರಿಸೆನ್ನೆರೆಯ !
ನೋವಿಲ್ಲದ ಸಾವಿಲ್ಲದ
ಜೀವಾಮೃತವೆರೆಯ !
ಶರಣಂ ಶ್ರೀಚರಣಂ



ಶ್ರೀ ಹರಿಹರಬ್ರಹ್ಮಾದ್ಯರಿಗೆ,
ಶರಣಂ ಗುರುಚರಣಂ
ಶ್ರೀರಾಮಕೃಷ್ಣಯತಿಪತಿಗೆ
ಶರಣಂ ಶುಭಚರಣಂ
ಶ್ರೀಶಾಶ್ವತವಿಶ್ರುತಕೀರ್ತಿಗೆ;
ಶರಣಂ ಶತಶರಣಂ
ಶ್ರೀಶತಮಾನದ ಸನ್ಮೂರ್ತಿಗೆ.

* * * *

## ಕಾಲಾತೀತ

ನಿನ್ನು ಹುಟ್ಟುಹಬ್ಬದಂದು,
ಕವನ ಕಟ್ಟಿ ಹಾಡಲೆಂದು,
ದಿಟ್ಟತನದಿವೊಪ್ಪಿದೆ ;
ನೀಲಜಲಧಿ ನೀರನೆಲ್ಲ
ಬೋಗುಣಿಯಲಿ ತುಂಬಬಲ್ಲ
ದುಡುಕಿದಲ್ತೆ ! ತಪ್ಪಿದೆ.
ನಿನ್ನಂತಹ ಪುಣ್ಯವಂತ
ತುಳಿದ ದಾರಿ ಧೂಳಿಕಣ
ನಖಶಿಖಾಂತ ಮುಚ್ಚಿದೆ;
ಅದೇ ಎನಗೆ ಶಿರಸ್ತ್ರಾಣ,
ಅದೇ ಪ್ರಾಣ; ಅದೇ ತ್ರಾಣ,
ಕಲ್ಪನೆಗರಿಬಿಚ್ಚಿದೆ !

ಅದೋ ನೋಡು!
ಶತಕಾರ್ಧದೊಂದು ತೆರೆ ಸರಿಯುತಿರೆ ;
ಗಗನದ ವಿಶಾಲದಂಗಣದಲ್ಲಿ ಸುತ್ತಲಲಿ
ದೇವದೂತರುಯೆಲ್ಲ ಕಿಕ್ಕಿರಿದು ನಿಂದಿರ್ದು

ಅನಿಮಿಷೋನ್ಮೇಷದಲಿ ನೆರೆನಿರೀಕ್ಷಸುತ್ತಿರುವ
ದಿವ್ಯದೃಶ್ಯವ ನೋಡು ! ಜನ್ಮ ಸಾರ್ಥಕ ಮಾಡು.
ಆತ್ಮಶಕ್ತಿಯ ತೇಜ ಪ್ರಜ್ವಲಿಸಿ ಚಲಿಸುತಿಹ
ವಜ್ರವೀರ್ಯದ ಕ್ಷೀಣದೇಹಿಯನು ನೀ ನೋಡು !
ಇರುಳೆದೆಯ ಸೀಳಿ ನಡೆಯುವ ಸೊಡರ ಕುಡಿಯಂತೆ,
ಊರುಗೋಲಾಧಾರವಾಗಿ ಸಾಗುವ ಮುಂತೆ–
ಮುನ್ನಡೆಸುತಿಹನು ಜನಗಣವ ಮಾಂತ್ರಿಕನಂತೆ
ಉದ್ಘೋಷ ಹರ್ಷದಿಂ ವಾರ್ಧಿ ಮೊಳಗುವ ತೆರದಿ
ಜಯತುಜಯವೆಂದು ಜನಕೋಟಿ ಬೆಂಬಳಿವಿಡಿದು
ಲೋಹಚುಂಬಕ ಶಕ್ತಿಯಾಕರ್ಷಿಸುವ ಭರದಿ
ಸಾತ್ವಿಕಾವೇಶದಲಿ ಸಾಗುತಿದೆ ! ಬೆಂಕಿಯಲಿ
ಬಿದ್ದರೂ, ಶತಶತಘ್ನಿಯ ಬಾಯ್ಗೆ ಸಿದ್ಧರು !

ಕುಂಟನೂ ಕೈಲಾಸವೇರಿದನು, ರಣಹೇಡಿ
ನರಸಿಂಹನಾದ, ಮಾಮೂಗನೂ ವಾಚಾಳಿ,
ಹಸುಳೆ ಹೆಂಗಸು ಹರೆಯದವರೆಲ್ಲ ಕೆರಳಿದರು
ಸಿಡಿಗುಂಡ ಮಲ್ಲಿಗೆಯ ದಂಡೆಯೆನೆ ಧೈರ್ಯದಲಿ
ಕೊರಳನರ್ಪಿಸಿ– ತಾಯ್ಗೆ ಜಯವೆಂದು ತೆರಳಿದರು !
ಸೂರ್ಯ ಮುಳುಗದ ಮಹಾಸಾಮ್ರಾಜ್ಯಪೀಠವನು
ನಡುಗಿಸಿತ್ತವನೊಂದು ಶಾಂತಿಮಂತ್ರ ಸ್ಫೂರ್ತಿ ;
ಬಿಗಿದ ಸಂಕಲೆಯ ಬಂಧನ ಕಳಚಿ, ಮೈ ಕೊಡಹಿ
ಏಳುತಿರುವಳು ತಾಯಿ, ಭುವನೇಶ್ವರಿಯು ಮರಳಿ ;
ಎದ್ದೇಳುವಳು ;

ಅಯ್ಯೋ ! ಬಿದ್ದೇಳುವಳು ಹೊರಳಿ ;
ಮೈಯೆಲ್ಲ ಗಾಯಗೊಂಡಿಹುದಂ, ಕೈಕಾಲುಗಳ
ಸಂಕಲೆಯ ಗೊಣಸು ಮುರಿದಿದ್ದರೂ– ತಾಯೊಡಲ
ಸಿಗಿವರೋ ಗರಗಸದಿ! ಮಕ್ಕಳೇ ಮರುಳುಗಳು.



ಏಕಾಕಿ– ಆ ಕ್ಷೀಣದೇಹಿ ಧಾವಿಸುತಿಹನು ;
ನೇತ್ತರೋಕುಳಿ ತುಳಿದು, ನವಕಾಳಿ ನರ್ತಿಸುವ
ಸೋದರನು ಸೋದರನ ಕೊರಳು ಹಿಸುಕುತಲಿರುವ
ಪೈಶಾಚತಾಂಡವ ರುದ್ರಭೂಮಿಯ ಕಡೆಗೆ
ತಾಯ ಮೈ ಮೆಲ್ಲವರಿ– ಹಾ! ಎಂದ ಮಾ ! ಎಂದ,
ಶಾಂತಿ ಶಾಂತಿಯು ಶಾಂತಿ ಎಂದ ನಲ್ನುಡಿಯಿಂದ.
ಹೇರಾಮ ! ಹೇರಾಮ ! ಪ್ರೇಮಕ್ಕೆ ವಿದ್ವೇಷ
ಗುಂಡಿಕ್ಕಿ ಕೊಂದಿತೋ ! ಸೊಡರಕುಡಿ ನಂದಿತೋ !
ಸತ್ಯದಲಿ, ಶಾಂತಿಯಲಿ, ಪ್ರೇಮದಲಿ, ಧರ್ಮದಲಿ
ಜಗವನೆತ್ತಿದ ಲೋಕವಂದ್ಯ ಗಾಂಧಿಯ ಕೊಂದು
ನಾವು ಸತ್ತೆವು !
ಪಾಪ ಭಾರವ ಹೊತ್ತೆವು ಮಂದು ;
ಬಿಡುಗಡೆಯ ತುತ್ತು ನೆತ್ತರಿನಿಂದ ತೊಯ್ದತ್ತು.
ನಮ್ಮ ನೆತ್ತಿಗೆ– ಜಗದ ಶಾಪ ಸುತ್ತಿಗೆ ಬಿತ್ತು !

ಮತ್ತೆ–
ಇಪ್ಪತ್ತೈದು ವರ್ಷಗಳ ತೆರೆ ಸರಿಯೆ ;
ಸ್ವಾತಂತ್ರ್ಯ ರಜತೋತ್ಸವದ ಬೆಳ್ಳಿಬೆಳಕಿನಲಿ
ಎಲ್ಲ ಕಡೆಗೂ ಒಮ್ಮೆ ದಿಟ್ಟಿ ಹರಿಯಿಸಿ ನೋಡು !
ಅದೊ ! ಚರಂಡಿಯ ಬದಿಗೆ ಕುಳಿತು ಕಣ್ಣೀರ್ಗರೆವ
ಭಾರತದ ನಿರ್ಭಾಗ್ಯಮಾತೆಯೊಬ್ಬಳ ನೋಡು !
ಐದು ಸಲ ಅವಳಿ ಮಕ್ಕಳ ಹಡೆದ ಮಾತಾಯಿ,
ಹತ್ತು ಮಕ್ಕಳ ತಾಯಿ !
ಆ ಮಹಡಿಮೇಲಿಂದ
ಎಸೆದಯೆಂಜಲ ಹೆಕ್ಕಿ ಮುಕ್ಕುವಳು ! ಚೀರಿಡುತ
ಸುತ್ತಲೆತ್ತಲು ಮುತ್ತಿಬಹ ಕ್ಷೀಣಶಿಶುಗಳನು
ದೂರದೂರಕೆ ದೂಡಿ, ತಾನೆಯೆಂಜಲಿನೆಲೆಯ
ಬಳಿ ಸೆಳೆದು ನೆಕ್ಕುವಳು !

ನಡುಬೀದಿ ನಿಲ್ಲಿಸಿದ
ಕಲ್ಲಿನ ಮಹಾಶಿಲ್ಪ– ಆ ಮಹಾತ್ಮನ ಪ್ರತಿಮೆ–
ಆ ದರಿದ್ರನಾರಾಯಣನ ನಿಜರೂಪ– ಬೆರಗಾಗಿ
ನಿಂತು ನೋಡುತಲಿತ್ತು !
ಕಂಬನಿಯ ಸುರಿಸಿತ್ತು !
ಬೆಳ್ಳಿಹಬ್ಬದ ನೋಟ ಕಲ್ಲನ್ನು ಕರಗಿಸಿತು !
ಉನ್ನತೋನ್ನತ ಮಹೋನ್ನತದ ಸೌಧದ ಮೇಲೆ
ಸ್ಥೂಲದೇಹದ ದೇಶಭಕ್ತ ಗಾಂಧೀದೂತ
ತಿಂದ ಮಾಂಸದ ಜೊತೆಗೆ ಕುಡಿದ ದ್ರಾಕ್ಷಾರಸವು
ಹೊಟ್ಟೆಯೊಳು ಹೊರಳಾಡಿ ಮಥಿಸುತಿರೆ, ಹುಳಿ ತೇಗು
ಎಡೆಬಿಡದೆ ಮರುಕೊಳಿಸುತಿರಲು, ತಡೆಯಲು ಸಲ್ಲ !
ಕಕ್ಕಿದ ರಸೋದರದಿನುಕ್ಕಿದ ದ್ರವದಿಂದ
ಸಜ್ಜೆವನೆ ಬಚ್ಚಲಿಗು ಕಡೆಯಾಗೆ, ನೋಡಲ್ಲಿ !
ಮಿಸುನಿ ಚೌಕಟ್ಟಿನಲಿ ಬಿಗಿದು ಕುಳ್ಳಿರಿಸಿರ್ದ
ಮೇಲು ಕೆಳಗೂ ಮತ್ತ ಇಬ್ಬದಿಗು ಮೊಳೆಹೊಡೆದು
ನೇತಾಡಿಸಿರ್ದ ಗುರುಗಾಂಧೀದೇವನ ಚಿತ್ರ !
ಸಾವಿರಹೆಡೆಯ ಕುಪಿತಸರ್ಪ ಬುಸುಗುಟ್ಟುತಲಿ
ಸಾವಿರ ಬಾರಿ ಕಚ್ಚಿ ಚುಚ್ಚುತ್ತಿರುವ ನೋವನ್ನು
ಏಗೈದು ತಪ್ಪಿಸಲು ಸಾಧ್ಯವಾಗದೆ ಸಂಕಟವ ಪಡುತ
ಸಹಿಪ ಕುರಿಮರಿಯಂತೆ– ನಡುಗಿತ್ತು ! ನಡುಗಿತ್ತು !

ಅವ ಜ್ಞಾನವೃದ್ಧ !
ಹರೆಯದೊಳಂತೆ ಹಿರಿಯವನು
ವೇದವೇದಾಂಗಗಳನೋದಿರುವ ಪ್ರಾಚಾರ್ಯ,
ವಿಶ್ವವಿದ್ಯಾಲಯ ಸಭಾಂಗಣದಿ ಶಿಷ್ಯರಿಗೆ
ಉಪನಿಷನ್ಮಂತ್ರವನು ವ್ಯಾಖ್ಯಾನಿಸುತ್ತಿಹನು ;
ಓಂ ಸಹನಾವವತು
ಸಹನೌ ಭುನಕ್ತು
ಸಹವೀರ್ಯಂ ಕರವಾವಹೈ



ತೇಜಸ್ವಿನಾವಧೀತಮಸ್ತು
ಮಾ ವಿದ್ವಿಷಾವಹೈ
ಓಂ ಶಾಂತಿಃ ಶಾಂತಿಃ....
ಶಾಂತಿಮಂತ್ರವು ಮೂರನೆಯ ಬಾರಿ ಕಿವಿದೆರೆಗೆ
ಬೀಳುವುದ ಮುನ್ನ– ಹಾ! ಹೊಡೆಯಿತೋ ಕಲ್ಗುಂಡು,
ಸ್ವಚ್ಛಖಲ್ವಲಲಾಟಪುಟಕೆ, ಚಿರಿಚಿಮ್ಮುತಲಿ
ನೆತ್ತರಿನ ಕಾರಂಜಿ ಸುತ್ತಲೂ ಸಿಡಿಯುತಿರೆ
ರಕ್ತಾರ್ದ್ರವಾಯ್ತಹೋ ! ಶುಭ್ರಶ್ವೇತಾಂಬರವು
ಉಪನಿಷನ್ಮಂತ್ರದೇವತೆಗಿಂತು ಪ್ರಾಣಬಲಿ
ತೆತ್ತು, ಚಿರಶಾಂತಿಯಲ್ಲೊರಗಿದನೊ ಪ್ರಾಚಾರ್ಯ,
ನಡೆದುದೈ–
ಶಿಷ್ಯಕೋಟಿಯು ಘೋಷಯಾತ್ರೆಯಲಿ
ಕ್ಯಾಬರೆ ದಿಗಂಬರೆ ಕುಣಿವ ಮೋಹಮಹಲಿನೆಡೆ ;
ನಿರ್ಜನಸಭಾಂಗಣದ ನಡುವೆ ತೂಗಾಡಿಸಿದ
ಅ ಅಹಿಂಸಾಮೂರ್ತಿಚಿತ್ರ ಕಂಪಿಸುತ್ತಿತ್ತು ;
ಕಣ್ಣೀರ ಕಿಡಿಯನುರುಳಿಸಿತು ! ಧರೆ ನಡುಗಿತ್ತು !

ತೆರೆ ಹಾರಿತಹ !
ಭವಿಷ್ಯದ ದೃಶ್ಯ ಕಂಡೆಯಾ ?
ಗಡಗಡನೆ ಪೊಡವಿ ನಡುಗಿತು. ಪ್ರಳಯಕಾಲವೆನೆ,
ಕ್ರಾಂತಿಸ್ಫುಲಿಂಗದಿಂ ಸ್ಥಿರೆಯು ಸೀಕರಿಹೋಯ್ತು ;
ಬುಡಕಿತ್ತು ಹಾರಿಹೋದುವು ದುಷ್ಟಶಕ್ತಿಗಳು,
ಸುಟ್ಟುರೆಗೆ ಸಿಲುಕಿ ಘೂರ್ಮಿಸುವ ತರಗೆಲೆಯಂತೆ !
ಉಲ್ಲೋಲಕಲ್ಲೋಲವಾಯ್ತು ವಿಪ್ಲವವಾರ್ಧಿ ;
ಆಲದಾಯೆಲೆ ಮೇಲೆ ಆಡುತಿಹ ಶಿಶುವಂತೆ
ಉಳಿದಿತೋ ಸಚ್ಛಕ್ತಿ ; ಜನಮನದ ಶಿವಶಕ್ತಿ,
ಮರಳಿ ಹೊಸ ಸೃಷ್ಟಿ :
ಸರ್ವರು ಸಮಸಮಾನರೆನೆ
ಸರ್ವೋದಯವ ಸಾರುತಿಹ ವಿನೂತನೆ ಸೃಷ್ಟಿ ;

ಸರ್ವರಿಗು ಸಂತುಷ್ಟಿ ; ಕುರುಡಿಗಂಜನ ದೃಷ್ಟಿ,
ಅಲ್ಲಿ–
ಭಯವಿಲ್ಲ, ದಯೆಯೇ ಎಲ್ಲ. ಶೋಷಣೆಯ
ಘರ್ಷಣೆಯ ಸುಳಿವಿಲ್ಲ, ಎಲ್ಲವು ನಿರಾಂತಕ,
ಎಲ್ಲೆಲ್ಲು ನಿಶ್ಯಂಕ, ಸಮಸುಖಿಗಳೆಲ್ಲರೂ,
ಎಲ್ಲರುಪಕಾರಿಗಳು, ಎಲ್ಲರು ಉದಾರಿಗಳು,
ಸಕಲರೂ ಸಹಕಾರ ನೀಡುವರು, ನೋಡುವರು
ತನ್ನಂತೆ ಪರರ; ಸಾಂತ್ವನದಿ ಮಾತಾಡುವರು
ಭ್ರಾತೃತ್ವ ಮಿತ್ರತ್ವದಿಂದ ಜತೆಗೂಡುವರು,
ಸತ್ಯಕ್ಕೆ ಧರ್ಮಕ್ಕೆ ದೇಶಕ್ಕೆ ದುಡಿಯುವರು,
ದುಡಿತದೊಳೆ ದೇವರನು ಕಾಂಬ ಸತ್ಕರ್ಮಿಗಳು,
ಹಿಡಿಮಣ್ಣ ಹುಡಿಯಲ್ಲಿ ಸ್ವರ್ಣಪರ್ವತ ಪಂಕ್ತಿ
ಕಡೆವಮರ ಶಿಲ್ಪಿಗಳು ! ತ್ಯಾಗದೊಳೆ ಭೋಗಿಗಳು.
ದೇವಸಾಯುಜ್ಯ ಸನ್ನಿಧಿಯ ಪಡೆದ ಮಹಾತ್ಮ
ಕಣ್ಣಾರೆ ಕಾಣುತಿಹನೆಲ್ಲವನು ದಿವದಿಂದ;
ಹರ್ಷಾಶ್ರುವರ್ಷಧಾರಾಕಾರ ಸುರಿಸುತಲಿ,
ತಂಪಾಯಿತೈ ನೆಲವು. ನೆಲದ ಮಾನವ ಕುಲವು;
ಚಿಗುರಿತು ಪುನಶ್ಯಾಂತಿ ಸಸ್ಯಶ್ಯಾಮಲೆಯಾಯ್ತು
ಧರಣಿ ; ಸಜ್ಜನರು ಸಂತೃಪ್ತಿಯಲಿ ಬಾಳಿದರು ;
ಮಳೆಬಂದು ಹೊಳೆತುಂಬಿ ಹರಿಯತೊಡಗಿತು ; ಗಾಂಧಿ
ದಿವದೊಳಿದ್ದೇ ಇಳೆಯನಾಳಿದನು ; ಬಾಳಿದನು !
ಚಂದ್ರಾರ್ಕತಾರಾಳಿ ಪ್ರಜ್ವಲಿಸುವನಿತುಕಾಲ.
ಸಾಹಸ್ರಸಾಹಸ್ರ ವರ್ಷ ತುಂಬಿದ ಕಾಲ,
ಚಿರಕಾಲ ಭದ್ರಶುಭಮಂಗಳ ಮೆರೆವ ಕಾಲ,
ಕಸ್ತೂರಿಗಂಧವೆನೆ ಜಸದಿ ಪರಿಮಳ ಸುತ್ತು
ಪಸರಿಸಿತು– ಷಟ್ ಖಂಡಭರಣಿ ಮಂಡಳದಲ್ಲಿ.
ಬುದ್ಧ ಮಹಮ್ಮದ ಕ್ರಿಸ್ತ ಜರತುಷ್ಟ್ರ ಜಿನದೇವ
ಸಾಕ್ರೆಟಿಸ್ ಪ್ಲೇಟೊ ಟಾಲಿಸ್ಟಾಯ್ ಮುಂತಾದ
ಸಂತರೆಲ್ಲರು ಸೇರಿರುವ ದಿವ್ಯ ಸಭೆಯಲ್ಲಿ



ಅಧ್ಯಕ್ಷತೆಯ ಪೀಠ ಗಾಂಧಿಯೇರಿರೆ, ಘೋಷ
ಕೇಳಿಸಿತು– ಮರ್ತ್ಯದಿಂ, ಮೊಳಗಿ ಮಾರ್ಮೊಳಗುತಲಿ;
"ರಘುಪತಿ ರಾಘವ ರಾಜಾರಾಮ್
ಪತಿತಪಾವನ ಸೀತಾರಾಮ್
ಈಶ್ವರ ಅಲ್ಲಾ ತೇರೇ ನಾಮ್
ಸಬಕೊ ಸನ್ಮತಿ ದೇ ಭಗವಾನ್"

ನಾ ನೋಡಿದೆ–
ನಿನ್ನಯ ಶುಭದವತಾರವ ತಂದೆ !
ನಾ ಕೇಳಿದೆ–
ಕಹಳಾರವ ನಿನ್ನಯ ಮುಖದಿಂದೆ !
ನಾ ಬೇಡಿದೆ–
ಬಿಡುಗಡೆಯನು ನಿನ್ನಯ ದಯದಿಂದೆ !
ನಾ ಕಾದಿದೆ –
ಸ್ವಾತಂತ್ರ್ಯಕೆ ನಿನ್ನಯ ಬಲದಿಂದೆ !
ನಾ ತಾಳಿದೆ–
ಸಂತೋಷವ ನಿನ್ನಯ ನೆನಹಿಂದೆ!
ನಾ ಬಾಳಿದೆ–
ಮನುಜತ್ವದಿ ನಿನ್ನಯ ವರದಿಂದೆ !
ನಾ ಹಾಡಿದೆ
ಕವನವನಿದೊ ನಿನ್ನಯ ಹೆಸರಿಂದೆ !
ನಿನ್ನಂತಹ ಗುಣವಂತನು
ನಿನ್ನಂತಹ ಘನವಂತನು
ನಿನ್ನಂತಹ ಸಿರಿಸಂತನು
ನೀನೊಬ್ಬನೆ ತಂದೆ !
ನಿನ್ನಯ ಹೆಸರೆತ್ತುತಲಿ,
ಕವಿಪೀಠದ ಹತ್ತುತಲಿ
ಹಾಡಿದೆ ನಾ ಹಿಗ್ಗುತಲಿ.
ಕರುಣೆಯ ಶಿಶುವೆಂದೆ !

ಈ ಲೋಕವನ್ನೆಬ್ಬಿಸಿದೆ,
ಆಲೋಕವ ತಬ್ಬುತಿದೆ,
ಮೂಲೋಕದಿ ಹಬ್ಬುವುದೆ
ನಿನ್ನಯ ಹೆಸರೊಂದೆ !
ಅವಿನಾಶವು ತವನಾಮ
ಅಸಮಾನದ ಗುಣಧಾಮ !
ಕಲ್ಪಿತವೀಕವಿಕರ್ಮ,
ಸೂರ್ಯಗೆ ಸೊಡರೆಂದೆ !

* * * *

## ಸ್ವಗತ

ಕ್ರಾಂತಿಕಾಲದ ಕುಮಾರಕನಾಗಿ ಹುಟಿದೆನು–
ಮೊದಲಿನ ಮಹಾಯುದ್ಧ ಮಸಗುವಂದು;
ಕ್ರಿಸ್ತಾಬ್ಧ ಸಾಹಸ್ರದೊಂಬತ್ತುನೂರ ಹದಿ–
ನೈದನೆಯ ವರ್ಷದಲಿ ಜೂನೆಂಟರಂದು
ನಿನ್ನೆ ನಾಂ ಬಾಲಕನು ಇಂದಿಗೂ ಬಾಲಕನೆ.
ವರುಷ ಮೂಹತ್ತು ಬಳಿ ಬಂದಿತ್ತಲ್ಲ ;
ಶತಮಾನದರ್ಧಾರ್ಧದಾಯುಷ್ಯ ದಾಂಟಿತೆನೆ
ಇಂದಿಗೂ ನಿಜಮನುಜನಾದುದಿಲ್ಲ.
ನಿಜಮನುಜನೆಂದೆನೆ ? ನಿಜಕು ನಾಂ ಮನುಜನೆ ?
ದೇಹಧರ್ಮವಿದೊಂದೆ ಮನುಜತ್ವವೇನು ?
ಕಷ್ಟಗಳ ಸಹಿಸಲ್ಕೆ, ನಿಷ್ಠುರದಿ ನುರಿಯಲ್ಕೆ,
ಬಾಳ್ವೆ ಹೋರಾಡಲ್ಕೆ– ಬಲ್ಲೆನೇನು ?
ಎನ್ನ ಕೃತಿಗಳ ನೋಡಿ ಜಗವು ಮೆಚ್ಚುವುದಿರಲಿ,
ಜಗವ ಮೆಚ್ಚಿಪೆನೆಂಬ ಹುಚ್ಚು ಹಿಡಿದಿಲ್ಲ;
ಎನ್ನಾತ್ಮಸಂತೃಪ್ತಿಯೊಂದೆನಗೆ ಸಾಕಿಲ್ಲಿ
ಎನ್ನಿಂದಲೆನ್ನಾತ್ಮ ತೃಪ್ತಿ ಪಡೆದಿಲ್ಲ.



ಹಸಿರು ಹೊಲ ಬಯಲಲ್ಲಿ, ಗೊನೆಹಣ್ಣ ತೋಟದಲಿ,
ಕಲಕಲನಿನಾದದಿಂ ನದಿ ಹರಿಯುವಲ್ಲಿ,
ಗಿಡಬಳ್ಳಿಮರತುಂಬಿ ಚೆಲುಚೆಲ್ಲಿದೂರಿನಲಿ,
ತುಳುರಾಣಿ ತೊಟ್ಟಿಲಲಿ ಬೆಳೆದೆನದು ಹಳ್ಳಿ.
ಓ ಎನ್ನ ತಾಯ್ನೆಲವೆ ! ತುಳುನಾಡ ಭೂದೇವಿ.
ನಿನ್ನ ಮರೆಯಲ್ಕುಂಟೆ ಜನ್ಮ ಜನ್ಮಂ ?
ನಿನ್ನ ಪೂರ್ಣೋದರದಿ ಹೊತ್ತು ಸಲಹುವ ತಾಯೆ,
ಋಣವ ತೀರಿಸಲುಂಟೆ ? ನಾನಂದೆ ಧನ್ಯಂ!
ಪಶ್ಚಿಮಾದ್ರಿಕಿರೀಟ ಧರಿಸಿ ಮೆರೆದೌ ಮಾತೆ,
ಸಾಗರನೆ ತವಪಾದ ತೊಳೆಯುತಿಹನು ;
ನೇತ್ರಾವತಿಯ ನೇತ್ರಧಾರೆಯೇನಿದು ? ನೋವಿ–
ದೇತರಿಂದಾಯ್ತಮ್ಮ ? ತಿಳಿಯೆ ನಾನು;
ವೀರರಂ ಪಡೆದುದಿಲ್ಲೆಂದಿಂತು ಮರುಕವೆ ?
ಭಾರತಿಯ ಸಿರಿಕುವರಿ ನಿನಗಿದೇ ನೋವು !
ಕೈಕಾಲುಬಿಗಿದ ಸಂಕಲೆಯ ಕಡಿವೆವು, ನೋಡು–
ಭರತಮಾತೆಗು ನಿನಗು ಕೂಡಿ ಮಂಗಳವು.

ಹೇಳಿದೆನು– ನಾ ಹುಟ್ಟಿದೂರು ತುಳುನಾಡಿನಲಿ
ಪ್ರಕೃತಿ ಚೆಲುವನು ಚೆಲ್ಲಿದೊಂದು ಹಳ್ಳಿ :
ಗದ್ದೆ ಕೆಸರಲಿ ಕಾಡುಮುಳ್ಳಿನಲಿ ದುಡಿದುಡಿದು–
ನಮ್ಮ ಹಿರಿಯರ ಬಾಳ್ವೆ ಬೆಳಗಿತಲ್ಲಿ
ಬೇಟೆ ಕಂಬಳ ಕೋಲ ತಾಳಮದ್ದಳೆಗಳಲಿ
ನಮ್ಮ ಹಿರಿಯರ ಹುರುಪು ನೋಡಬೇಕು ;
ಅಶ್ವಧಾಟಿಯ ಹಿಡಿದು ನಮ್ಮಜ್ಜ ಜೈಮಿನಿಯ
ಓದುತಿರೆ, ಸರಸತಿಯೆ ಕುಣಿಯಬೇಕು.
ಅಳಿಯಕಟ್ಟಿನ ಮನೆಗೆ ನಮ್ಮಜ್ಜ ಯಜಮಾನ,
ಮನೆತುಂಬ ಸಂಸಾರ, ಬಂಟಜಾತಿ;
ತುಳುನಾಡಿಗಿಳಿದೊಮ್ಮೆ ನಡೆದು ನೋಡಿರಿ, ಬನ್ನಿ,
ಬಂಟರೆಂದರೆ ತಿಳಿವಿರದೆಷ್ಟು ಖ್ಯಾತಿ.

ಜಾತಿ ಮಾತನ್ನೆತ್ತಿ ಹಿಗ್ಗಿ ಹೇಳಿದೆನಿಲ್ಲ–
ನನ್ನ ಹಿನ್ನೆಲೆ ಬಾಳ್ವೆ ಚಿತ್ರಿಸಿದೆನು ;
ಜಾತಿಯೊಂದೇ ನಾವು– ಮಾನವರು– ಹೆಚ್ಚಾಗೆ
ಭಾರತೀಯರು, ದಾಸ್ಯಹಾಸ್ಯಜೀವಿಗಳು.

ನಮ್ಮ ತಾಯ್ ಹಿರಿಮಗಳ ಹಿರಿಸೋದರಳಿಯನಿಗೆ
ನಮ್ಮಜ್ಜ ಧಾರೆಯೆರೆದಿತ್ತ ಕತೆ ಹೇಳ್ವೆ ;
ಒಂಬತ್ತು ವರ್ಷದಾ ಹುಡುಗಿ ತಾನಾಗೆಂದು
ಒಮ್ಮೊಮ್ಮೆ ಪೇಳ್ವರೆನ್ನಮ್ಮ ಬೆತೆಬಾಳ್ವೆ
'ಊರಿಗೆ ಉಪಕಾರಿ, ಮನೆಗೊಂದು ಮಾರಿ'
ಎನುವಂತಿತ್ತು– ತಂದೆಗುಣವಂತೆ ;
ಮಾವನೊಳು ಮಡದಿಯೊಳು ಜಗಳಾಡಿ ಹೊಡೆದಾಟಿ
ಸಂಸಾರ ಸುಖವೆಲ್ಲ ಕೆಡಿಸಿರುವರಂತೆ,
ಮೂರು ಮಕ್ಕಳ ತಾಯಿ ಪಡೆದರೂ, ನಾವಿಂದು
ಇಬ್ಬರೇ ಉಳಿದವರು ; ನಮ್ಮಕ್ಕ– ನಾನು.
ತಂಗಿಯೊರ್ವಳ ಕಂಡ ಕನಸೊಂದು ಕಟ್ಟುತಿದೆ.
ಎಂಥ ಚೆಲುವಿನ ಕೂಸು ! ಬಾಳ್ವೆ ಕನಸೇನು ?
ಎನ್ನ ಪ್ರೀತಿಸುವವರು, ನಾನು ಪ್ರೀತಿಸುವವರು
ಇಬ್ಬರಿಂದಿಗೆ ಕಡಿಮೆಯೆಂದು ತಿಳಿದು ;
ತಂದೆಯಿದ್ದರೆ– ಈಗ– ತಂಗಿಯಿದ್ದರೆಯೆಂದು
ಒಮ್ಮೊಮ್ಮೆ ಕರುಳು ಹುಡುಕಾಡುತಿಹುದು.

ಮಧುರ ಮಧುರಂ ಬಾಲ್ಯಕಾಲವಾನಂದಮಯ,
ಮನವೆಲ್ಲ ನಿರ್ಮಲಂ, ಸುಂದರಂ ಜಗವು ;
ಹಗೆಯಿಲ್ಲ, ದಗೆಯಿಲ್ಲ, ಸಿಟ್ಟಿಲ್ಲ, ಗುಟ್ಟಿಲ್ಲ–
ಮಧುರ ಮಧುರಂ ಬಾಲ್ಯ, ಹೋಯ್ತೆ ? ಸೋಜಿಗವು
ಪಾಟ ಬ್ರಾಹ್ಮಣರೊಡನೆ, ಆಟ ಹೊಲೆಯವರೊಡನೆ,
ಓದುವುದು ಒತ್ತಾಯ, ಆಡುವುದೆ ಹಿತವು ;
ಗೆಳೆಯ ಹೊಲೆಯನ ಕಂಡು, ಸಾಲೆ ತಪ್ಪಿಸಿಕೊಂಡು,



ದನಮೇಯಿಸುತ ಬಂದ ದಿನವೆಂಥ ಸುಖವು.
ಒಳಗೆ ಹೊನ್ನೆಣ್ಣೆಯಲಿ ಮಿಣಿಮಿಣುಯುತಿಹ ಸೊಡರು
ಅಂಗಳದಿ ತಿಂಗಳನು ಹಾಲುಚೆಲ್ಲಿಹನು ;
ಒಳಗಿರಲು ಮನವಿರದೆ, ಹೊರಗೆ ನಿದ್ರಿಸಬಿಡದೆ,
ಅಳುತ ಮಲಗಿದ ರಾತ್ರಿ ಕನಸು ಕಂಡಿಹೆನು;
ಬಂಗಾರದೊಂದು ಹಕ್ಕಿಯೆನೇರಿ– ಬಾನಿನಲಿ
ಸುತ್ತಲೂ ಸುತ್ತಾಡಿ ಬಂದ ಸವಿ ಕನಸು
ಏನು ಸೊಗಸದು ? ಜೀವನದೊಳಿನ್ನು ಬರಲುಂಟೆ ?
ಸ್ವಪ್ನಮಯವೈ ಬಾಲ್ಯ, ಸುಂದರಂ ನೆನಸು.

ಹದಿನಾರು ವರ್ಷಗಳವರೆಗೆ ನಾನೊಮ್ಮೆಯೂ
ತಲೆನೋವೆ ಕಂಡಿಲ್ಲ, ರೋಗರುಜೆಯಿಲ್ಲ ;
ಏಳುತಿಂಗಳ ತನಕ ಹಿಡಿದ ಜ್ವರಬಿಡದೆನ್ನ
ದೇಹವನು ದಂಡಿಸಿತು, ಮತ್ತೆ ಸುಖವಿಲ್ಲ.
ತಂದೆಯನು ಚಿಕ್ಕಂದಿನಲ್ಲೆ ಕಳಕೊಂಡಿಹೆನು
ಮಾವ ಕಣ್ಮುಚ್ಚಿದರು, ನಮ್ಮಜ್ಜ ಬಳಿಕ ;
ಜೀವನದ ಕಹಿಯನ್ನು, ಸಾವುನೋವುಗಳನ್ನು,
ಕಂಡುಂಡೆ ಬೆಳೆದಿಹೆನು– ಪಟ್ಟಿಹೆನು ಮರುಕ.
ನೆನೆವೆನೆನ್ನಯ ಗೆಳೆಯ ನಂಬೂದಿರಿಯ, ಕೊನೆಯ–
ಪತ್ರ ಬರೆದೈ, 'ಮಿತ್ರ ಬಾ ಮದುವೆಗೆ'ಂದು;
ಮದುವೆಯಾದೆಯ ? ಹಂತ, ಗೆಳೆಯನನು, ಗೆಳತಿಯನು
ಮರೆತೆ ಹೋದೆಯ ? ನೆನಪನುಳಿಸಿ ನೀಂ ಮುಂದು.
ಹುಟ್ಟುವುದೆ ಮೊದಲಾಗಿ, ಸಾಯುವುದೆ ಕೊನೆಯಾಗಿ,
ಮಾನವಂ ಜೀವನಂ ಮಾಡಬಲ್ಲ ;
ಬಾಳ್ವೆಯಂತರದಲ್ಲಿ ದಿನದಿನದ ಹೋರಾಟ–
ಹೂಡಿ, ಮುನ್ನುಗ್ಗಿದಗೆ– ಕೀರ್ತಿಯೆಲ್ಲ.

ಹೇಳಿದೆನು– ನಾನು ಬ್ರಾಹ್ಮಣರೊಡನೆ ಕಲಿತುದನು,
ಸಂಸ್ಕೃತವನೋದಿದೆನು ಕನ್ನಡ ಜತೆಗೆ ;

ಉಭಯ ಸಾಹಿತ್ಯಗಳ, ಬರಿಯ ಸಾಹಿತ್ಯಗಳ
ಓದಿ ಸವಿ ಸವಿಯುವುದೆ ಹಿತವಾಯ್ತು ನನಗೆ.
ಸಕ್ಕದದ ಸಕ್ಕರೆಗೆ ಕನ್ನಡದ ಕತ್ತುರಿಯು
ಸೇರಿದರೆ– ಸವಿಯದನು ಕೇಳಬೇಕೆ ?
ವಾಲ್ಮೀಕಿ ಜತೆಯಲ್ಲಿ ಪಂಪನಂ ಕಲಿತಲ್ಲಿ
ಆಗುವಮಿತಾನಂದ– ಹೇಳಬೇಕೆ ?
ಕೇಶಿರಾಜನ ಕೂಡೆ ಪಾಣಿನಿಯ ಮುಗಿಸಿದೆನು.
ಹನುಮಂತ ಸಾಗರವ ದಾಂಟಿದಂತೆ !
ಕಡಲಿನಾಳದೊಳೇನು ಮೀನುಂಟೊ, ಮುತ್ತುಂಟೊ,
ವಾಯುಸುತ ಕಂಡನೆ ? ವ್ಯಾಕರಣವಂತೆ !
ಕನ್ನಡದ ವಿರಾಜಮಾರ್ಗದಲಿ ನೋಡಿದೆನು
ಘರ್ಷಣೆಗಳಪ್ಪುದನು– ಹಿಗ್ಗಿಹೋದೆ ;
ಹಳೆಯ ಹಾದಿಯ ಬಿಟ್ಟು, ಹೊಸಪಂಥವಂ ತೊಟ್ಟು
ಹೋರಾಟಕಿಳಿದಲ್ಲಿ– ಯೋಧನಾದೆ.
ಕನ್ನಡದ ಗಡಿನಾಡಿನಲ್ಲಿ ನಾ ಹುಟ್ಟಿರಲು
ಹೇಡಿಯೆನಿಸದೆ ಯೋಧನಾಗಬೇಕು ;
ಕನ್ನಡಾಂತರ್ಗತಂ ತುಳುನಾಡು ನನ್ನದಿದು
ಭಾರತಾಂತರ್ಗತಂ ಕನ್ನಡದ ಬದುಕು.
ಮಲೆಯಾಳಿಗಳೊಳೆನಿತೊ ಮಿತ್ರರೆನಗಿಹರಿಂದು
ಕೇರಳದ ಕೊಡೆ ನಾ ಕಾದುವೆನೆ ಹೇಗೆ ?
ಒಂದೆ ಕನ್ನಡ ನಾಡು, ಒಂದೆ ಕೇರಳ ನಾಡು,
ಒಂದೆ ಭಾರತಮಾತೆ ಕಂದರಾವ್ ಕಡೆಗೆ,
ಕನ್ನಡ ಕಾವ್ಯಗಳನೋದಿ ನಾಂ ಹೇಳುವುದು,
ಮಲೆಯಾಳ ಸಾಹಿತ್ಯ ಗೆಳೆಯ ನಾಯರನು ;
ಇಬ್ಬರೂ ಸಂತೋಷಗೊಂಡಿಹೆವು, ಕಂಡಿಹೆವು.
ಕನ್ನಡಂ ಕೇರಳಂ ಕೂಡಿ ನಡೆವುದನು
ಕನ್ನಡದ ಋಣವುಂಟು– ನಾಂ ಮರೆಯಬಲ್ಲೆನೆ ?
ಆವ ಕಾಣ್ಕೆಯ ಕೊಟ್ಟು ತೀರಿಸುವೆನೊ ?
ದಿನದಿನಂ ನಿಮಿಷನಿಮಿಷಂ ನೆನೆಯುತಿಹೆನಿದನೆ
ಸೇವ ಸಲಿಸುವೆ ದೇವಿ ಸಾಲದೇನೊ ?



ವಿಶ್ವಸಾಹಿತ್ಯ ಭಂಡಾರವನ್ನೊಡೆದೊಡೆದು
ವಿಶ್ವಭಾರತಿಪೂಜೆಗೈವೆನೇನು ?
ವಿಶ್ವದ ವಿಶಾಲತೆಯ ಸಂಬಂಧ ಸಾಧಿಸಲು
ಆಂಗ್ಲಭಾಷೆಗೆ ಶರಣುಹೋದೆ ನಾನು.
ಇತಿಹಾಸ ವಿಜ್ಞಾನ ರಾಜಕೀಯಗಳನ್ನು
ಓದುತಿರೆ– ರೋಮಾಂಚನವೇಳುತಿತ್ತು ;
ಇಪ್ಪತ್ತುವರ್ಷದಾ ತಾರುಣ್ಯ ಕಾಲವದು
ಸ್ವಾತಂತ್ರ್ಯಸಂದೇಶ ಮೊಗಳಗುತ್ತಿತ್ತು !
ಹೊಡೆತಕ್ಕೆ ಹಣೆಕೊಟ್ಟು, ಸಿಡಿಗುಂಡಿಗೆದೆಗೊಟ್ಟು,
ಹೆಣ್ಣೇನು, ಗಂಡೇನು, ನಗುತ ನಗುತ
ಸೆರೆಮನೆಯ ಸಾಗುತಿಹರೀ ನೋಟ ನೋಡಿದರೆ
ಹೃದಯವಿದ್ದವ ಮರೆಯಲುಂಟೆ ಸತತ ?
ಸಾಹಿತ್ಯ ಸಂತೋಷ, ಸ್ವಾತಂತ್ರ್ಯ ಸಂದೇಶ,
ಎನ್ನೆದೆಯನರಳಿಸಿದೆ, ಮನವ ಕೆರಳಿಸಿದೆ ;
ಕರ್ತವ್ಯಕರ್ಮದಲಿ ಕೈಹಾಕಿ ದುಡಿವಾಗ
ದೌರ್ಬಲ್ಯ ಜಗ್ಗುತಿದೆ. ಮತಿಯ ಮರುಳಿಸಿದೆ.

ಕವನಗಳ ಕಟ್ಟಿದನು, ಕಟ್ಟಿ ಬರೆದಟ್ಟಿದೆನು,
ಮೈಸೂರು ಬಿಟ್ಟು ಮಿಕ್ಕೆಲ್ಲ ಕಡೆಗು ;
ಅಚ್ಚಾಗಿ ಬರುವಾಗ ಹುಚ್ಚಾಗಿ ಹೋಗಿಹೆನು
ನೆಲವ ಬಿಟ್ಟೇರಿಹೆನು– ಬಾನಿನೆಡೆಗು !
ಮೊದಲಿನೆನ್ನಯ ಕವನ ಮುದ್ರಣವ ಮುದ್ದಿಸುತ
ಬಂದದಿನವಿಂದಿಗೂ ನೆನಪುಳಿದಿದೆ ;
ನಾಡಿರಲಿ, ಕಾಡಿರಲಿ, ನರನೊ, ವಾನರನಿರಲಿ,
ಎಲ್ಲರಿದಿರೊಳು– ಹಾಡಿ ಹಾಡಿ ನಲಿದೆ,
ನೆನೆದರಯೆ ನಾನಿಂದು ನಾಚುತಿಹೆ, ನಿಜವಾಗಿ
ಹುಚ್ಚುಹುಚ್ಚಲ್ಲವೇ ಹುಡುಗಬುದ್ಧಿ ?
ದಿನ ದಿನಂ ಕಳೆದಂತೆ– ಮೈಜ್ವರಂ ಬಿಟ್ಟಂತೆ
ಹೆಮ್ಮೆಯಿಳಿಯಿತು; ಹೊಂದಲುಂಟೆ ಸಿದ್ಧಿ ?

ನಾ ನಿರಾಶಾವಾದಿಯಲ್ಲ– ಮುಂದೊಂದು ದಿನ
        ಶಕ್ತಿಯುತಸಾಹಿತ್ಯ ಸೃಷ್ಟಿಸುವೆನು ;
ಎನ್ನೆದೆಯ ತುಮುಲ ನಿಲ್ಲಿಸಲಾರೆನಿಲ್ಲದಿರೆ
        ಎನ್ನಾತ್ಮನಿಗೆ ತೃಪ್ತಿ ಹುಟ್ಟಿಸುವೆನು.

ಅನ್ನವನು, ಬಟ್ಟೆಯನು, ವಿದ್ಯೆಯನು, ಬುದ್ಧಿಯನು
        ಕೊಟ್ಟ– ನಮ್ಮಜ್ಜ ಕಣ್ಣುಮುಚ್ಚುವಾಗ,
ಜೀವನದ ಹೋರಾಟಕಿಳಿಯಲೇ ಬೇಕಾಯ್ತು
        ಪತ್ರಿಕೋದ್ಯೋಗ ದೊರಕಿತ್ತು ಬೇಗ,
ಊರೂರ ಸುದ್ದಿಗಳನೋದುವುದು ಬರೆಯುವುದು
        ನಿಜವೆಷ್ಟೊ ಸುಳ್ಳೆಷ್ಟೊ ಯಾರು ಬಲ್ಲ ?
ಪರತಂತ್ರರೈ ನಾವು ಮಾತಿಗೂ ಬರೆಹಕೂ
        ನಿರ್ಬಂಧ ಸಾವಿರವು– ಜೀವನವಿದೆಲ್ಲ.
ತುಂಬುಬಾಳುವೆ ಬದುಕಬೇಕು. ನಮ್ಮನು ಹಿಂಡಿ
        ಹಿಂದೆಳೆವ ಪಶುಶಕ್ತಿ ಮುರಿಯಬೇಕು;
ಜೀವನದಿ ಹೋರಾಡಬೇಕು, ನಾವಿದರಲ್ಲಿ
        ಸೋತರೂ ಸೋಲಲ್ಲ– ಗೆದ್ದರದೆ ಬದುಕು.
ಭಾವನಾಮಯ ಜೀವನಂ ಯೌವನಂ– ಬಲ್ಲೆ,
        ಭಾವನೆಗು ಬೆಲೆಯುಂಟು, ನಿಜವೆಂಬೆನು;
ಸಂಸಾರಿ ಭಾವಿಕನು, ಸನ್ಯಾಸಿ ಭಾವಿಕನು,
        ಭಾವನೆಯ ಬಲಿತಂದು ಕೃತಿಕಾಂಬೆನು,
ಯೌವನದ ಹೆಸರೆತ್ತಿದಾಗ ನೆನಪಾಗುತಿದೆ–
        ಭ್ರಮರಜೀವನವೊಂದು– ಪ್ರಕೃತಿಮಾಟ;
ಮುಚ್ಚಿ ಮರೆಸುವುದಿಲ್ಲ, ಬಿಚ್ಚಿ ತಿಳಿಸುವುದಿಲ್ಲ,
        ತಪ್ಪೊ ಒಪ್ಪೋ ಹೇಳಿ ಹೆಣ್ಣುಕೂಟ ?
ಸ್ವರ್ಗಹೋಗಲಿ ಮತ್ತೆ ನರಕ ಬಂದರು ಬರಲಿ ;
        ಮುಂದೆ ಬಹ ಸಂಕಟಕೆ ತಲೆಯೊಡ್ಡುವೆ !
ಇಂದೊಮ್ಮೆಯೆನ್ನೆದೆಗೆ ತೃಪ್ತಿ ದೊರಕುವುದುಂಟೆ ?
        ಎಂದೆಂದಿಗೂ ನಗುತ ನರಕ ಪುಗುವೆ !



ನಾಡುನುಡಿಗಳಿವೆರಡೆ ನನ್ನೆದೆಯನರಳಿಸಿವೆ
        ಧರ್ಮ– ದೇವಾಲಯಗಳೆನಗೆ ದೂರ :
ಅಜ್ಞಾನಿಯಿರಬಹುದು, ಅಪರಾಧಿಯಿರಬಹುದು,
        ಮನಕೆ ಮೆಚ್ಚದ ಭಕ್ತಿಯೇನು ಸಾರ ?

* * * *

ಸ್ವಗತಗಳ ನಾನಿಷ್ಟೆ ಹೇಳಿದೆನು, ಮುಂದೊಮ್ಮೆ
        ಆತ್ಮಗೀತವ ಹಿಗ್ಗಿ ಹಾಡಲುಂಟು ;
ಎನ್ನಲಿಹ ದೌರ್ಜನ್ಯವೆನ್ನೆದೆಯ ದೌರ್ಬಲ್ಯ
        ಕಿತ್ತು– ಎದೆ ಹಿಗ್ಗಿ ನಾಂ ಹಾಡಲುಂಟು.

(–೧೯೪೨)

* * * *

# ಪ್ರಗತಿ ಪಥ

"ಪಾಪಗೈದಿರಲು ಪ್ರಾಯಶ್ಚಿತ್ತವ
ಅನುಭವಿಸಲೆಬೇಕು;
ದೀಪವಿಲ್ಲದಿರೆ ಕೂಪದಾಳಕ್ಕೆ
ಉರುಳಿ ಸಾಯಬೇಕು ;
ಕೋಪಗೊಂಡ ಜನ ಕತ್ತಿಯೆತ್ತಿರಲು
ಕಡಿತ ಸಹಿಸಬೇಕು !
ವಿಪ್ಲವಕಿದೆ ದಾರಿ
ಹಿಂಸೆಯು
ಹಿಂಸೆ ಹೆರವು ಮಾರಿ !"



### ನಾದ : ನಾಲ್ಕು – ಪ್ರಗತಿ ಪಥ

## ಕೊರಗ

ಸುಡುವ ಬಿಸಿಲಿನ ಬೇಗೆಯುರಿ ಬಡಿದು, ತೊಗಲೆಲ್ಲ
ಸುಟ್ಟು ಸೀಕರಿಹೋದರೂ ಬಣ್ಣ ಕೆಡದಂಥ
ಕರಿಮೆಯ್ಯ ಹೀರಿಜೀವ ! ಭೋರೆಂಬ ಜಡಿಮಳೆಗೆ
ಅಡಿಯಿಂದ ಮುಡಿವರೆಗು ನೀರು ಧಾರಾಕಾರ
ಸುರಿಯುತಿದ್ದರು ಶೀತನಿರ್ಲಿಪ್ತಸಮಭಾವ !
ಮೈಮಾನ ಮುಚ್ಚಲಿಕೆ, ನಡನಡುಗಿಸುವ ಚಳಿಗೆ,
ಹರಕುಚಿಂದಿಯ ಹೊದಿಕೆ– ಏನಿಲ್ಲವೀತನಿಗೆ !

ಪ್ರಕೃತಿಯ ಪ್ರಕೋಪಕ್ಕೆ ತಾಪಕ್ಕೆ ಶಾಪಕ್ಕೆ
ಎಲ್ಲದಕು ಮೂಕಬಲಿಯಾಗಿಯೇ ಬಾಳ್ದವನು !
ಕಾಟಕಾಡಾನೆಗಳ ತೊತ್ತಳದ ತುಳಿತಕ್ಕೆ
ಹಗಲಿರುಳು ತಲೆಯೊಡ್ಡಿ ಬೆಟ್ಟದಡಿಯಲಿ ಚಾಚಿ
ಬಿದ್ದಿರುವ ಹೆಬ್ಬಂಡೆಯಂತಿಹನು ! ಬುರುಡೆಗವಿ
ಒಳಮುದಡಿ ಮಿದುಳೋ ಮಹಾಮೌನಿ ! ಇರಲೊಂದು
ಮನೆಯಿಲ್ಲ, ಮತವಿಲ್ಲ, ಗುರಿ ತೋರ್ಪ ಗುರುವಿಲ್ಲ.
ಸುಖದುಃಖದರಿವಿಲ್ಲ, ನಲ್ಮೆಬಲ್ಮೆಗಳಿಲ್ಲ ;
ಇಲ್ಲವೆಂಬುದೆ ಇವನ ಬದುಕು ಭಾಗ್ಯಗಳೆಲ್ಲ !
ಏನಾದರೂ ತನಗೆ, ನೋವಾದರೂ ತನುಗೆ
ಎಂತಾದರೂ ಮನಕೆ– ಯಾವುದಕು ಇವ ಕೊರಗ !

ನಾಡನಾಳುವ ಮಂದಿ– ಉತ್ತಮೋತ್ತಮ ಜನರು
ವೇದಶುದ್ಧ ಸಮಾಜ, ಮುಖಕೆ ಉಗುಳುವ ತೆರದಿ
ಇವನ ಪೀಳಿಗೆಗೆಸೆದು ಹೆಸರು ಕಾಡಿನ ಕೊರಗ !
ಮಾನಾಪಮಾನವೋ, ಲಾಭವೋ, ನಷ್ಟವೋ

ಸೋಲೊ ಗೆಲವೋ ಸುಖವೊ ದುಃಖವೋ ಬಂದಿರಲಿ,
ಮೇಣಾವುದೂ ಬರದಿರಲಿ, ಎಂತಾದರೂ ಕೊರಗ !

ಚಂಡಾಲ ಭಿಕ್ಷುಕಿಗೆ ಶಿಷ್ಯಪಟ್ಟವನಿತ್ತು
ಮಗಳಂತೆ ಮಮತೆಯಲಿ ಸಾಕಿದಾ ಶ್ರೀಬುದ್ಧ
ಇವಗಾಗಿ ಕೊರಗಿದ್ದ ; ಕ್ರಿಸ್ತ, ಮಹಮ್ಮದ ಮತ್ತೆ
ಜಿನದೇವ ಜರತುಷ್ಟ್ರ, ಪ್ಲೇಟೊ ಟಾಲಿಸ್ಟಾಯ್
ಸಾಕ್ರಟೀಸ್ ಮುಂತಾದ ಶಕಪುರುಷರೆಲ್ಲರೂ
ಅಂದಿನಿಂ ಬೋಧಿಸಿದರಿಂದಿಗೂ ಇವ ಕೊರಗ !

ದೇವಸುತನೀತ ಮನುಕುಲದ ಮೂಲದ ಮನುಜ
ಇವನೆ ಹರಿಜನ, ನರಜನರಿಗೆಲ್ಲ ಮೊದಲಿಗನು–
ಎಂದು, ಈ ಹಿಂದುಳಿದ ಬಂಧುವನ್ನುದ್ಧರಿಸೆ
ಬಂದ ಗಾಂಧಿಯು ಸಂದ ಗುಂಡಿಗಾಹುತಿಯಾಗಿ !
ಆಹುತಿಗೆ ಸಂದರೂ ಇವ ನಿರಂತರ ಕೊರಗ !
ಆತ್ಮಪರಮಾತ್ಮತತ್ವವ ತಿಳಿಸೆ ಗೀತೆಯಲಿ
ಶ್ರೀಕೃಷ್ಣ ಭಗವಂತ ಹೇಳಿದಾ ಹಿರಿ ಮಾತು
ಇವನ ಕಂಡಾಗೆಲ್ಲ ಎನಗೆ ನೆನಪಾಗುವುದು :
'ನೈನಂ ಛಿಂದಂತಿ ಶಸ್ತ್ರಾಣಿ
ನೈನಂ ದಹತಿ ಪಾವಕಃ
ನಚೈನಂ ಕ್ಲೇದಯಂತ್ಯಾಪಃ
ನ ಶೋಷಾಯತಿ ಮಾರುತಃ.'

* * * *



## ಅಭೇದ

ಯುಗಗಳು ನಾಲ್ಕು ಪುರಾಣದಲಿ
ಅಂತ್ಯಯುಗದ ಅಧಿಕಾರಿ ಕಲಿ ;
ಕೊನಯೊ ಭಯಾನಕ ಪ್ರಳಯದಲಿ
ಬೆಂಕಿ ಬೇನೆ ನೆರೆಮೊರೆಯಲ್ಲಿ !
ಬೆದರಬೇಡ
ನೀನೊಬ್ಬನೆ ಅಲ್ಲ ;
ಆಳಿಗು ಅರಸಗು
ಭೇದವೆ ಇಲ್ಲ ! ॥೧॥

ಜನಿಸಿದಂದೆ ಸಿರಿವಂತನೆ ? ಮೇಣು.
ಸಾವಂದಿಗೆ ಸಾಮ್ರಾಟನೆ ? ನೀನು
ಬಡವನೆಂದು ಬಲ್ಲಿದನೆಂದಲ್ಲ
ಎಡೆನೆನಹಿದು ದುಃಸ್ವಪ್ನವು– ಸಲ್ಲ,
ತೊಟ್ಟಿಲೊ ಮಸಣವೊ
ಎಲ್ಲರಿಗೊಂದೆ,
ಹುಟ್ಟುಮರಣಗಳ
ಬಲ್ಲೊಡೆ– ಮುಂದೆ. ॥೨॥

ಬಿಳಿಯರು ಕರಿಯರು ಯಾರೇ ಇರಲಿ,
ಹಿಂದು ಮುಸ್ಲಿಮರು ಕ್ರಿಶ್ಚನರಿರಲಿ;
ಬಿಳಿದೋ ಕರಿದೋ ಕಾವಿಯೊ ಹಸಿರೊ,
ಎಲ್ಲರ ನೆತ್ತರು ಕೆಂಪು– ಬಲ್ಲಿರೊ !
ಹೊರಗಿನ ವೇಷವು
ಬೇರೆಯೆ ಇರಲಿ;
ದಿವ್ಯಮಾನವತೆ
ಎದೆಯೊಳರಲಿ ! ॥೩॥

ಸೊಗುವುಂಡರೆ ಹಿರಿಹಿಗ್ಗುವುದುಂಟು,
ದುಃಖವಡಸೆ ದುಮ್ಮಾನದ ಗಂಟು
ಗಂಡಿಗು ಹೆಣ್ಣಿಗು– ಇದರಲಿ ನಂಟು,
ಭೇದವಿಲ್ಲ; ಏಕತೆಗದೆ ಅಂಟು,
ಪ್ರಕೃತಿ ಪುರುಷರೇ
ಸೃಷ್ಟಿಯ ಮೂಲ;
ತರತಮವೆಣಿಪುದು
ದೃಷ್ಟಿಯ ಸೋಲ್ಲ ! ॥೪॥

* * * *

## ಸಂಗ್ರಾಮ

ಸಾವಿರ ಸಾವಿರ ಯುಗ ಯುಗ ಉರುಳಲು
ಸಾಗಿದೆ ಸಂಗ್ರಾಮ ;
ದುರ್ಜನ ಸಜ್ಜನ ಸಂಗ್ರಾಮ.
ಶಿಶು ಪ್ರಹ್ಲಾದನ ಪೀಡಿಸಿದ,
ಹಿರಣ್ಯಕಶಿಪುವೆ ತಾ ಮಡಿದ !
ಕಂಬವನೊಡೆಯುತ ನರಹರಿ ಬಂದ,
ನಂಬಿದ ಧರ್ಮಕೆ ಜಯವನು ತಂದ,
–ಸಾಗಿದೆ ಸಂಗ್ರಾಮ.

ಹತ್ತು ತಲೆಗಳನು ಹೊತ್ತ ದಶಶಿರನು
ತುತ್ತಾದನು, ಶ್ರೀ– ರಾಮಬಾಣಕೆ,
ದರ್ಪದ ಪರ್ವತ ನೆಲಕೆ ಕುಸಿಯಿತು;
ಧರ್ಮದ ಬಾವುಟ ಬಾನೊಳರಳಿತು.
–ಸಾಗಿದೆ ಸಂಗ್ರಾಮ



ಪಂಚ ಪಾಂಡವರು ಕಾಡೊಳಿದ್ದರು,
ನೂರು ಕೌರವರು ಸುಖವ ಮೆದ್ದರು;
ಭೀಷ್ಮ ದ್ರೋಣರೋ ಶಕುನಿ ಶಲ್ಯರೊ
ಆನೆ ಕುದುರೆ ರಥ ಏನೆ ಇದ್ದರೂ
ದುಷ್ಟ ಕೌರವರ ಶಿರ ಉರುಳಿ;
ಧರ್ಮಪುತ್ರನಿಗೆ ಧರೆ ಮರಳಿ !
–ಸಾಗಿದೆ ಸಂಗ್ರಾಮ.

ಭಾರತ ಮಾತೆಯ ಮಕುಟವ ಮೆಟ್ಟಿ,
ರವಿಯಸ್ತಮಿಸದ ರಾಜ್ಯವ ಕಟ್ಟಿ,
ಅನ್ಯರನಾಳಾಗಿಸಿ ಮೇಲೇರಿ,
ದಾಸ್ಯದ ನೊಗವನು ಕೊರಳಿಗೆ ಹೇರಿ,
ಹಿಗ್ಗಿದರೆಲ್ಲರು ತಗ್ಗಿ ಹೋದರು
ಸತ್ಯಾಹಿಂಸೆಯ ತಪದಿ ಬೆಂದರು !
–ಸಾಗಿದೆ ಸಂಗ್ರಾಮ.

ದೀನದರಿದ್ರರ ದಿನದಿನ ದುಡಿಸಿ,
ಅವರ ಶೋಷಿಸುವ ಸಿರಿತನ ಗಳಿಸಿ,
ನೆತ್ತರು ಹೀರುವ ಜಿಗಳೆಯ ತೆರದಿ,
ದಲಿತರ ಮೆಟ್ಟುವ ದೈತ್ಯರ ದಳಕೆ,
ಕತ್ತಿ ಸುತ್ತಿಗೆಯ ಉತ್ತರ ಸಾಕೆ?
ಕಲ್ಕಿಯೆದ್ದು ತಲೆ ಕಡಿಯಲೆ ಬೇಕೆ ?
–ಸಾಗಿದೆ ಸಂಗ್ರಾಮ
ದುರ್ಜನ ಸಜ್ಜನ ಸಂಗ್ರಾಮ .

* * * *

## ರಣನಾದ

ಭೀಷಣಾದ್ಭುತ ಘೋಷ
ಪ್ರಳಯ ಭೈರವ ರೋಷ
ಭುಗಿಲೆಂದು ಕಿಡಿಗರೆದು
ಜಗದ ಜೀವವನರೆದು
ಜ್ವಲಿಸಿ ಧಗಧಗಿಸುತಿದೆ
ಲೋಕಾಂತ ನಡುಗುತಿದೆ. ॥೧॥

ಗುಡುಗು ಸಿಡಿ ಮಿಂಚುಗಳೊ
ವಿಷಮ ವಿಷಧಾರೆಗಳೊ
ಜೀವ ಸಂಸ್ಕೃತಿಗಳಿಗೆ
ಹಾ ! ಬಂತೆ ವಿಷಗಳಿಗೆ ?
ದಳ್ಳುರಿಯು ದಹಿಸುತಿದೆ.
ಕಲ್ಲೊಡೆದು ಕರುಗತಿದೆ. ॥೨॥

ಸರ್ವಸ್ವಾಹಾಯಜ್ಞ–
ಕಿದೊ, ಕಾಲ ಸರ್ವಜ್ಞ
ಸಂಪೂರ್ಣ ಸನ್ನದ್ಧ–
ನಾಗಿರುವನಿದು ಸಿದ್ಧ !
ಅಡಗಲಿಕೆ ತಳವಿಲ್ಲ
ನಡುಗುವುದು ತರವಲ್ಲ. ॥೩॥

ಹೃದಯಬಂಧುರಭಾವ
ಸದಯಸೋದರಜೀವ
ಶಾಂತಿನೀತಿಗಳಿಲ್ಲ
ಸತ್ಯಧರ್ಮಗಳೆಲ್ಲ
ಅಕಟ, ಪಾರುಷ್ಯದಲಿ
ಹಿಸಹಿಸದೆಯೆ ದಸುತಿದೆ ! ॥೪॥



ಲೋಕಮಾರಣಕೆಂದು
ಪಂಥಪೂರಣೆಯಾಯ್ತೆ ?
ಕಲಹ ಕಾರಣವೇನು
ದಗ್ಧಧೋರಣೆ ಬಂತೆ ?
ರಕ್ತರಣ ತೃಷ್ಣೆಯನು
ಕೊನೆಗೊಳಿಸಬಹುದೇನು ? ॥೫॥

ಈ ಪಾಪಿ ಜನಗಳಲಿ
ನೈಷ್ಠುರ್ಯವೆಷ್ಟಿದೆಯೊ ?
ಈ ಕಠಿಣ ಕಾರ್ಯದಲಿ
ಜಗವೇಕೆ ಬಿಗಿದಿದೆಯೊ ?
ಅವಸಾನಕೀ ಬುದ್ಧಿ
ವಿಪ್ಲವಕಿದೇ ಸಿದ್ಧಿ ! ॥೬॥

ರಕ್ಕಸರ ರಾಜ್ಯದಲಿ
ದೇವ ನಿಲ್ಲುವುದುಂಟೆ ?
ಈ ವನ್ಯನಿಯಮದಲಿ
ನ್ಯಾಯ ಕೇಳುವರುಂಟೆ ?
ಸತ್ಯಕ್ಕೆ ಜಯವೆಲ್ಲಿ ?
ಧರ್ಮಕ್ಕೆ ನೆಲೆಯೆಲ್ಲಿ ? ॥೭॥

ದಯೆ ಸತ್ಯ ಶಾಂತಿಗಳ
ಎದೆಗಪ್ಪಿಕೊಂಡಿರಲು
ವಿಷದುರಿ ಶತಘ್ನಿಗಳ
ತಡೆಯಬಹುದೇ ಹೇಳು ?
ಕೆರಳಿನಿಂತಿಹರೆಲ್ಲ
ತತ್ವಕ್ಕೆ ಬೆಲೆಯಿಲ್ಲ ॥೮॥

ಆತ್ಮರಕ್ಷಣೆ ಗೈವ
ತ್ರಾಣವಿರಲಿಲ್ಲೆಂದು
ಈ ಮಂದಿಗದರಿಂದ
ದುರ್ಮರಣವಾಯ್ತೆಂದು
ಜಗವೆ ನಿಂದಿಸದಿರಲಿ ;
ರಣನಾದ ಕೇಳಿರಲಿ . ॥೯॥

* * * *

## ಆಟಮಾಟ

ಆಟಮಾಟ ಕಾಲಕೂಟ
ಇನ್ನು ಮಾತು ಸಾಗಿದೆ;
ಹಿರೋಶಿಮೋ ನಾಗಸಾಕಿ
ಮಣ್ಣುಮುಕ್ಕಿ ಹೋಗಿದೆ. ॥೧॥

ಪುಣ್ಯಜನನಿ ಪ್ರೇಮಪಯಂ
ಶಿಶುವಿಗೂಡಿಸುತ್ತಿರೆ;
ತಾಯಿ ಮತ್ತು ಹಸುಳೆ ಸತ್ತು
ಎಲುಬು ಕೂಡಿ ಹೊತ್ತಿರೆ. ॥೨॥

ಗಂಡುಹೆಣ್ಣು ಎರಡುಕಣ್ಣು
ಒಲಿದು ನಲಿದು ನೆರೆದಿರಲ್ ;
ಬೆಂಕಿ ಮಳೆ ಬಂತು ಹೊಳೆ
ಕಿಚ್ಚು ಹೊನಲು ಕೊಚ್ಚಿರಲ್ ॥೩॥

ಅಂಥ ಮುದುಕ ಎಂತು ಬದುಕ
ಬೇಕು, ಸುರಿವ ಬೆಂಕಿಗೆ ?
ಬಾನುಬಯಲು ಕಾನುಕಡಲು
ಎಲ್ಲ ಸುಡುವುದೊಂದಿಗೆ ॥೪॥



ಪ್ರಳಯಲೀಲೆ ಜ್ವಲನಜ್ವಾಲೆ
ಜ್ವಲಿಸಿ ಜಗವನಪ್ಪಿತು;
ವಾಯು ವಿಷಂ ನೀರು ವಿಷಂ
ಜೀವ ಸುಟ್ಟು ಸತ್ತಿತ್ತು ! ॥೫॥

ಇಂತು ಹನನ ಪ್ರಾಣ ಹರಣ
ಲೋಕ ಶಾಂತಿಗೆಂಬರು !
ಪ್ರಜಾವಾಣಿ ರಾಷ್ಟ್ರವೆನ್ನಿ
ನಂಬುವವರು ಹುಂಬರು. ॥೬॥

ಹಿರೋಶಿಮೋ ನಾಗಸಾಕಿ
ಶಾಂತಿಪೂಜೆ ಮುಗಿಯಿತು ;
ಆಟಮಾಟ ಕಾಲಕೂಟ
ವಿಷಸಂಸ್ಕೃತಿ ಧಗಿಸಿತು. ॥೭॥

ನಿನ್ನೆ ಜಪಾನ್ ಮತ್ತೆ ತುಫಾನ್
ಕೊರಿಯದಲ್ಲಿ ಕಂಡಿತು ;
ನಾಳೆ ಚೀನ ಮತ್ತೆ ಏನ ?
ಏಷ್ಯದೇಶ ಹಬ್ಬಿತು. ॥೮॥

ಭಾರತವನು ಬಿಡುವರೇನು ?
ತಡೆಯಬೇಕು ಹುಚ್ಚರ ;
ಸುಟ್ಟನಾಡ ಪಟ್ಟಬೇಡ
ನಿಲಿಸು ಮನುಜ ಮಚ್ಚರ, ॥೯॥

ಧನದ ಶಕ್ತಿ ಜಗದ ಶಕ್ತಿ
ಹೆಚ್ಚಿ ಹುಚ್ಚು ಹಿಡಿಯಿತು ;
ಜನರ ಸುಡುವ ಜಗವೆ ಕೆಡುವ
ಬುದ್ಧಿ ಪ್ರಳಯ ತಂದಿತು. ॥೧೦॥

ರುದ್ರವರದಿ, ಶಿವನ ಶಿರದಿ
ಕಯ್ಯನೆತ್ತಿ ರಕ್ಕಸಂ;
ಬೆನ್ನಹತ್ತಿ ತನ್ನ ನೆತ್ತಿ–
ಗಿಟ್ಟು ತಾನೆ ಸುಟ್ಟಿಹಂ ! ॥೧೧॥

ಲೋಕ ಬದುಕಿ ತಾನು ಬದುಕಿ
ಬಾಳ್ವೆಯಿಂತು ಬೆಳಗಲಿ;
ಏರುವವನು ಜಾರುತಿಹನು
ನೋಡಿ ನೆಲೆಯ ನೆಗೆಯಲಿ ! ॥೧೨॥

ಪ್ರೇಮಪಥದಿ ಸತ್ಯರಥದಿ
ಸಾಗಿ ಶಾಂತಿಮಂದಿರಂ
ಸೇರೆ ಸಾಕು ತಿಳಿವು ಬೇಕು
ಜೀವಕುಸುಮ ಸುಂದರಂ. ॥೧೩॥

ಶಕ್ತಿದರ್ಪ ಶಾಪಸರ್ಪ
ಆಗಿ ಕಚ್ಚಿ ಕೊಲುವುದು ;
ನೀತಿ ನಲ್ಮೆ ಪ್ರೀತಿ ಗೆಲ್ಮೆ
ಹೃದಯತುಂಬಿ ನಲಿವುದು ॥೧೪॥

* * * *

## ವಿಪ್ಲವ

ದೀನದಲಿತರ ಚರ್ಮ ಸುಲಿಯುವ
ಕ್ರೂರಕರ್ಮದವರೇ.
ಜೀತದಾಳುಗಳ ರಕ್ತಹೀರುವ
ದೈತ್ಯಜನ್ಮದವರೇ,



ಮುಗ್ಧ ಹೆಂಗಳಿಗೆ ಮೋಸ ಮಾಡುವ
ದುಷ್ಟರಾದ ಜನರೇ,
ನಿಮಗೆ ಬಹಿಷ್ಕಾರ,
ನಮ್ಮದು–
ಒಕ್ಕೂರಲಿನ ಧಿಕ್ಕಾರ. ॥೧॥

ಸಿರಿಯ ಹುತ್ತದಲಿ ಹೆಡೆಯನೆತ್ತುವ
ವಿಷದ ಸರ್ಪನೀವು ;
ಕರುಳ ಕೀಳುತ ಹಿಂಸೆಗೆಯ್ಯುವ
ಕಟುಕರಯ್ಯ ನೀವು ;
ಸಾಧುಜನರಿಗೆ ಭೀತಿ ಹುಟ್ಟಿಸಿ
ಮೆಟ್ಟಿ ಮೆರೆವ ನೀವು ;
ಹುಲಿಗಳ ಸಂತಾನ !
ದಲಿತರೊ–
ಶತಘ್ನಿ ಸುಡುಬಾಣ ! ॥೨॥

ಶತಶತಮಾನದ ಸಂಕಟವೊತ್ತಿ
ಜಡಿದು ಸಿಡಿದು ಮದ್ದು,
ಆಚೆಗೀಚೆಗೆ ಹಿಂದೆಮುಂದಕೆ
ಮೇಲು ಕೆಳಗು ಸದ್ದು !
ಸುಡುಸುಡುವುದು ಮೇಣ್ ಕತ್ತಿಯು
ಬರ್ಚಿಯು
ಚಂದ್ರಾಯುಧ ಸುತ್ತು ;
ಗರ್ಜನೆ ಕೇಳುತಿದೆ !
ತಡೆಯಿರಿ–
ಎದೆಹೊರೆಯಿಳಿಯುತಿದೆ. ॥೩॥

ಪಾಪಗೈದಿರಲು ಪ್ರಾಯಶ್ಚಿತ್ತವ
ಅನುಭವಿಸಲೆ ಬೇಕು ;

ದೀಪವಿಲ್ಲದಿರೆ ಕೂಪದಾಳಕ್ಕೆ
ಉರುಳಿ ಸಾಯಬೇಕು;
ಕೋಪಗೊಂಡ ಜನ ಕತ್ತಿಯೆತ್ತಿರಲು
ಕಡಿತ ಸಹಿಸಬೇಕು.
ವಿಪ್ಲವಕಿದೆ ದಾರಿ !
ಹಿಂಸೆಯು–
ಹಿಂಸೆ ಹೆರವು ಮಾರಿ ! ॥೪॥

* * * *

## ಬಾ, ಹೊರಗೆ.......

ಪೂಜಾರಿ, ಇದೊ, ಸಾರಿ
ಹೇಳುತಿಹೆನು ;
ನೂರಾರು ದೂರುಗಳ
ಕೇಳುತಿಹೆನು : ॥೧॥

ಕರಿಶಿಲೆಯ ವಿಗ್ರಹವ
ಕೆತ್ತಿ ಕಡಿದು,
ಕಗ್ಗವಿಯ ಕೋಣೆಯಲಿ
ಒತ್ತಿ ಹಿಡಿದು ; ॥೨॥

ಕಣ್ಮುಚ್ಚಿ ರುದ್ರಾಕ್ಷಿ
ಮಂತ್ರ ಜಪಿಸಿ,
ಮನದಲ್ಲಿ ಮನುಕುಲವ
ಎಲ್ಲ ಶಪಿಸಿ ; ॥೩॥

ದೇವಂಗೆ ನಾನೊಬ್ಬ
ಹತ್ತಿರೆಂದು,



ಮಿಕ್ಕವರು ಹೊಲೆಯವರು
ದೂರವೆಂದು ; ॥೪॥

ಇವ ಭಟ್ಟ ಅವ ಸೆಟ್ಟಿ
ಭೇದ ಹೂಡಿ.
ಮುಸ್ಲಿಮರ ಕ್ರಿಶ್ಚನರ
ಮ್ಲೇಂಛ ಮಾಡಿ ; ॥೫॥

ಪರಮಾತ್ಮ ಪೆಸರಲ್ಲಿ
ಪಾಪಗೆಯ್ವ,
ವೇದಗಳ ಓದದೆಯೆ
ಬೋಧೆಗೆಯ್ವ ; ॥೬॥

ಜಾತಿಯಾ ಧರ್ಮದಾ
ಭೀತ್ತಿ ಬಿತ್ತಿ,
ಹೊಟ್ಟೆಯನು ಹೊರುವುದಕೆ
ವೇಷವೆತ್ತಿ ; ॥೭॥

ರಾಷ್ಟ್ರವನು ಜನತೆಯನು
ಕಾಡುತಿರುವೆ !
ನಿನ್ನಾತ್ಮವಂಚನೆಯ
ಮಾಡುತಿರುವೆ ! ॥೮॥

ಪೂಜಾರಿ, ಇದೊ ಸಾರಿ
ಹೇಳಿರುವೆನು;
ನೂರಾರು ದೂರುಗಳ
ಕೇಳಿರುವೆನು. ॥೯॥

ಕರಿಶಿಲೆಯ ಕಾಠಿಣ್ಯ
ಹೃದಯದಲ್ಲಿ;
ಕಗ್ಗವಿಯ ತಾಮಸವು
ಬುದ್ಧಿಯಲ್ಲಿ. ॥೧೦॥

ಮನದಲ್ಲಿ ವಿಷವಲ್ಲಿ
ಹಬ್ಬಿರುವುದು ;
ಮೇಲು ನಾ ಕೀಳು ನೀ
ಕೊಬ್ಬಿರುವುದು. ॥೧೧॥

ಎಷ್ಟು ದಿನ ನಾವಿದನ
ಸಹಿಸಿದ್ದೆವು !
ಬಿಡುಗಡೆಯ ಬರಲೆಂದು
ಕಾದಿದ್ದೆವು ; ॥೧೨॥

ಭಾರತವು ಬಿಡುಗಡೆಯ
ಪಡೆದ ಮೇಲೆ,
ವಿದ್ರೋಹ ವಂಚನೆಗೆ
ಅಂತ್ಯಲೀಲೆ. ॥೧೩॥

ಬಾ, ಹೊರಗೆ– ಗುಡಿಯೊಳಗೆ
ಹುದುಗಲೇಕೆ ?
ನೆನೆನೆನೆದು ದುಷ್ಕರ್ಮ
ನಡುಗಬೇಕೆ ? ॥೧೪॥

ಕೆರಳಿರುವ ಜನತೆಯನು
ಕೆಣಕಬೇಡ ;
ತಪ್ಪುಗಳ ಒಪ್ಪಿಕೊಳ
ಬದುಕ ನೋಡ ! ॥೧೫॥



ಪೂಜಾರಿ, ಇದೊ, ಸಾರಿ
ಹೇಳಿಯಾಯ್ತು ;
ನೂರಾರು ದೂರುಗಳ
ಕೇಳಿಯಾಯ್ತು. ॥೧೬॥

ಬಿಡುಗಡೆಯ ಬೆಳಕಿನಲಿ
ಮಿಂದಿರುವರು;
ವಜ್ರಮಯ ದೇಹದಲಿ
ನಿಂದಿರುವರು; ॥೧೭॥

ಪ್ರೀತಿಯನು ಹೃದಯದಲಿ
ತುಂಬಿರುವರು ;
ನೀತಿಯನು ನಡತೆಯಲಿ
ನಂಬಿರುವರು ; ॥೧೮॥

ಅಮೃತಮಯ ಜೀವನದ
ಸಂತಸದಲಿ,
ಸಮತೆಯಾ ಸಿರಿಬಾಳ
ಸಾಹಸದಲಿ, ॥೧೯॥

ಮೇಲಿಲ್ಲ ಕೀಳಿಲ್ಲ
ಮಾನವರಲಿ ;
ಬಡವನೂ ಬಲ್ಲಿದನು
ಒಂದೆಯಿಲ್ಲಿ. ॥೨೦॥

ಏಕಸಮ ಸೋದರರು
ಸರ್ವಜನರು ;
ಬಂಧುರರು ಬಾಂಧವರು
ಭರತಸುತರು. ॥೨೧॥

ವಿಶ್ವಾತ್ಮ ಪರಮಾತ್ಮ
ಒಬ್ಬನಿರಲು,
ಎಲ್ಲರಿಗು ಆತನೇ
ದೇವನಿರಲು ; ॥೨೨॥

ಆ ದೇವ ಈ ದೇವ
ಬೇರೆಯುಂಟೆ ?
ಭೇದವನು ಮಾದೇವ
ಮಾಡಲುಂಟೆ ? ॥೨೩॥

ಬ್ರಾಹ್ಮಣರು ಹರಿಜನರು
ಒಂದೇ ರಕ್ತ ;
ರಾಮನೂ ರಹಿಮನೂ
ಏಕ ಶಕ್ತ ! ॥೨೪॥

ಪಾದ್ರಿಯೂ ಮುಲ್ಲನೂ
ದೇವಭಕ್ತ ;
ಕ್ರಿಸ್ತನಿಗೂ ಕೃಷ್ಣನಿಗು
ಭೇದ ವ್ಯರ್ಥ ! ॥೨೫॥

–ಇಂತಿಹುದು ನವಯುಗದ
ಕ್ರಾಂತಿನಾದ ;
ಹಾರದಿರು ಹೆದರದಿರು
ವೀರವಾದ ! ॥೨೬॥

ಗುಡಿಯಲ್ಲಿ ಗುಟ್ಟಿನಲಿ
ಶಪಿಸಬೇಡ ;
'ಮಡಿ ನಾನು ಹೊಲೆ ನೀನು'
ಜಪಿಸಬೇಡ ॥೨೭॥



ಬಾ, ಹೊರಗೆ– ಪೂಜಾರಿ,
ಸಾಕು ಸುಲಿಗೆ ;
ಬಾರದಿರೆ ಗತಿಯಿಲ್ಲ
ಜನರ ಬಳಿಗೆ ॥೨೮॥

ಪೂಜಾರಿ, ಇದೊ, ಸಾರಿ
ಹಾಡಿರುವೆನು ;
ಬಿಡುಗಡೆಗೆ ಬೆಲೆಯುಂಟು
ನೋಡಿರುವನು. ॥೨೯॥

* * * *

## ವಿಶ್ವಗರ್ಭದ ಗೋಳು

ಜಡಿಯೆ ಜಂಝಾವಾತ, ಹೊಡೆಯೆ ಮೇಘವ್ರಾತ,
ಸುಡೆ ಜಗವ ಸಿಡಿದೆದ್ದ ಸಿಡಿಲ ಝರಿಯೊ ?
ಬಾಂದಳವೆ ಗುಡುಗುತಿದೆ, ಭೂತಳವೆ ನಡುಗುತಿದೆ,
ರಣಕಾಳಿಯಾರ್ಭಟೆಯ ಧ್ವನಿಲಹರಿಯೊ ?
ಹರಡಿಹುದು ಕಾಡ್ಗಿಚ್ಚು ಕಠಿಣೋನ್ನತಗಳಿದಿರೆ ?
ಮರಬಳ್ಳಿಬಂಡೆಗಳು ಸುಡುಸುಡುತಿವೆ ;
ಧಗಧಗಿಪ ಜ್ವಾಲೆಯಲಿ ವಿಷವಹ್ನಿಮಾಲೆಯಲಿ
ವನನಿಬಿಡಜೀವಿಗಳು ನರನರಳಿವೆ.
ಪಡುಗಡಲು ಭೋರ್ಗರೆದು ಪ್ರಳಯಪಂಥಕೆ ಕರೆದು
ಮಸಗಿ ತೆರೆನೊರೆಗಳಲಿ ಧುಮುಕುತಿಹುದು ;
ಶತ ಶತಘ್ನಿಗಳಿಂದ ಸಿಡಿವ ಗುಂಡುಗಳಿಂದ
ಜಗಜೀವ ತಲ್ಲಣಿಸಿ ಮರುಗುತಿಹುದು.

ಹಿಂದಿನಿತಿಹಾಸದಲಿ ಪೂರ್ವದ ಪುರಾಣದಲಿ
ದೇವದಾನವರ ಕಾದಾಟ ಕತೆಯುಂಟು;

ತರತರದ ರೂಪದಲಿ ವಿಧವಿಧದ ಮಾಯೆಯಲಿ
        ಹಗಲಿರುಳು ಹೋರಾಟ ನಡೆದುದುಂಟು
ಸತ್ಯಧರ್ಮಗಳನ್ನು ಮಿಕ್ಕು ನಡೆದವರನ್ನು
        ಯುಗಪುರುಷ ತಾ ಬಂದು ಗೋಣ್ಮುರಿದನಂದು,
ಸತ್ಯಧರ್ಮಗಳೆಲ್ಲಿ? ಯುಗಪುರುಷನಿರವೆಲ್ಲಿ ?
        ಯಾರು ಮಣ್ಮುಕ್ಕುವರೊ ತಿಳಿಯದಿಹುದಿಂದು.
ಸರ್ವತ್ರ ಸಂದೇಹ ಸರ್ವರಲಿ ಸಂಶಯವು
        ಯಾರು ಧರ್ಮಧ್ವಜನೆತ್ತಿ ಹಿಡಿದವರು ?
ಯಾರಿದನು ತಿಳಿಸುವರು? ಯಾರು ತಿಳಿದವರಿಹರು?
        ಯಾರ ನಂಬುವುದಿಂದು? ಯಾರ ನುಡಿ ನಿಜವು?

ಆಕ್ರಮಣ ಪರಪೀಡೆ ಸುಲಿಗೆ ಸೂರೆಯೆ ನೋಡೆ,
        ಇದೆ ನೀತಿಯೆಲ್ಲರದು, ಹಿಂಸೆಯೇ ಶೌರ್ಯ,
ಈ ನೀತಿ ಸರಿಯೇನು? ತತ್ವಧ್ಯೇಯಗಳೇನು?
        ಉತ್ತರಗಳಿದಕುಂಟೆ? ತಮ್ಮದೇ ಕಾರ್ಯ.
ತಮ್ಮದೇ ತಮಗಿರಲಿ, ತಮ್ಮ ಮನೆ ಬೆಳಗಿಸಲಿ,
        ತಮ್ಮವರು ಬಾಳಿರಲಿ, ಪರಪೀಡೆಯೇಕೆ?
ಪರರಾದರೇನಾಯ್ತು? ಪರರಾಜ್ಯವಲ್ಲವೇ?
        ಪರದೇಶದ ಪರರದ್ಯೆ ! ತಮಗಾಸೆಯೇಕೆ?
ಹಾ ಬುದ್ಧಿ ಬರಲಿಲ್ಲ, ಪಶುಕಾರ್ಯ ನಿಲಲಿಲ್ಲ,
        ನೀತಿ ನಿಯಮಗಳಳಿದು ಹುಚ್ಚೆದ್ದಿತು.
ಬಲವು ನ್ಯಾಯವೆ ಜಗದಿ ? ಬಲಕೆದುರು ಪ್ರಬಲವಿದೆ ;
        ಹೋರಾಟ ಹೆಚ್ಚಾಯ್ತು ಕಿಚ್ಚೆದ್ದಿತು.

ಸತ್ಯಕ್ಕೆ ಗೆಲವೆಂದು, ಧರ್ಮಕ್ಕೆ ನೆಲೆಯೆಂದು,
        ಬಾಂದಳಕೆ ಬಾಯೊಡ್ಡಿ ಕೂಗಲೇನು ?
ಸೆಳೆದಾಟ ಸೆಣಸಾಟ ಹೋರಾಟ ಚೀರಾಟ
        ಜಗವೆ ಕಿವುಡಾಗಿಹುದು ಕೇಳ್ವುದೇನು ?
ಅರಮನೆಯು ಸಿರಿಮನೆಯು ನವರತ್ನ ಭಂಡಾರ



        ಎಲ್ಲ ಧಾಳಾಧೂಳಿ ಕೇಳು ವಾದ :
'ಸರ್ವರಿಗು ಸಮಪಾಲು'– ವಿಶ್ವಗರ್ಭದ ಗೋಳು.
        ಶತಕೋಟಿಕಂಠಗಳ ನವನಿನಾದ.
ಆಳೊಡೆಯರೆಂದಿಲ್ಲ, ದುಡ್ಡಿ ನಾಳ್ವಿಕೆ ಸಲ್ಲ,
        ರಾಜಮುಕುಟಗಳಿಲ್ಲ– ಸಮತೆಯೆಲ್ಲ ;
ಸರ್ವಾಧಿಕಾರಿಗಳ ದರ್ಪ ನಡೆಯುವುದಿಲ್ಲ.
        ನವತತ್ವ ನಾಟಿಹುದು ಜನತೆಗೆಲ್ಲ.
ಸಂದೇಹ ಸಂಕುಲವು ವಿಷಮತೆಯು ಗೊಂದಲವು
        ರಣಪ್ರಮತ್ತರ ಬೊಬ್ಬೆಯಡಗಲಿಹುದು ;
ಹೊಸಜಗದ ನಿರ್ಮಾಣವಾಗಲಿದೆಃ ಮೊಳಗುತಿದೆ
        ಕಹಳೆಯದೊ, ಸಮತೆಯನೆ ಸಾರುತಿಹುದು.

* * * *

## ನಮ್ಮ ದೇವರು

ಧರ್ಮದೇವಾಲಯದಿ ತತ್ವ ಘಂಟಾನಾದ
ಮೊಳಗುತಿದೆ ; ಮಾರ್ಮೊಳಗು ದಿಗ್ದಿಗಂತ !
ಸಂಸಾರ ಸುಳ್ಳೆಂಬ, ಮೋಕ್ಷವೇ ಮೇಲೆಂಬ
ನರಕ ದೊರಕುವುದೆಂಬ ಶುದ್ಧ ವೇದಾಂತ ! ॥೧॥

ವೇದಾಂತಿ ! ನೀ ಪುಣ್ಯವಂತ, ದೇವರ ದೂತ,
ಹೋಗು ಮೋಕ್ಷಕೆ ಪಾಪಜೀವನಂ ಬೇಡ ;
ವೈಕುಂಠವೋ ಮತ್ತು ಕೈಲಾಸವೋ ಹತ್ತು
ಬೋಧನೆಯ ಬಿಟ್ಟು ನೀ ಸಾಧನೆಯ ಮಾಡ. ॥೨॥

ಯಾವ ಪಾಪವೊ ದೇವ ಶಾಪವೋ ತಟ್ಟಿದರು
ಶುದ್ಧನಾಗಿಯೆ ಬಂದೆ ! ಭಾಗ್ಯದಿಂದೆ ;
ಶುದ್ಧನಾಗಿಯೆ ಹೋಗು ! ಚಿಂತನಂ ಬೋಧನಂ
ಕಾಲಹರಣಂ– ನೋಡಬೇಡ ಹಿಂದೆ. ॥೩॥

ಯಾ ಶಾಪದಿನಿಳಿದು ಬಂದಿಲ್ಲ, ನಾವೆಲ್ಲ
ದೇವದೂತರೆಯಲ್ಲ– ಶುದ್ಧರಲ್ಲ ;
ಮಣ್ಣಿನೊಳೆ ಹುಟ್ಟಿ ಮಣ್ಣಿನ ಮಕ್ಕಳಾಗಿಹೆವು.
ಕೆಸರಂಟಿಹುದು ನಮ್ಮ ಮೈಗೆ ಎಲ್ಲ ! ॥೪॥
ದುಡಿತವೇ ನಮ್ಮ ದೇವರು, ಲೋಕ ದೇವಕುಲ,
ಬೆವರೆ ಹೂ ಹಣ್ಣುಕಾಯ್, ಕಣ್ಣೀರೆ ತೀರ್ಥಂ;
ಎಮ್ಮೊಂದಿಗಿರ ಬಾಳ ಸಾವು ನೋವಿನ ಗೋಳ–
ನುಂಡಿಹೆವು ಸಮ ಪಾಲ– ನಮಗದುವೆ ಮೋಕ್ಷಂ ! ॥೫॥

* * * *

## ಚಿನ್ನಕನಸು ಕಂಡೆನೊಂದು

ದೂರಪೂರ್ವಕಿಂದು ರಣದ ಜ್ವಾಲೆ ಜ್ವಲಿಸಿ ಮುಟ್ಟಿತು ;
ಪಾಶ್ಚಿಮಾತ್ಯರುಗ್ರಪಾಪ ಹಂತ ನಮಗು ತಟ್ಟಿತು !
ಅಯ್ಯೊ ಹನನ, ರುದ್ರ ಮರಣ, ಮುತ್ತಿತು ರಣ ಮಾರಣ
ಭರತಜನನಿ ಪುಣ್ಯಧರಣಿ ಬೀಳ್ವುದೆ ಬಲಿ ಕಾರಣ ?

ರಕ್ತಸಿಕ್ತ ಮೃತ್ಯುಭಕ್ತ ನರಪಿಶಾಚಮೇಳವೊ ?
ರಾಗರೋಷದುಗ್ರವೇಷ, ವಿಕಟವಕಟ ತಾಳವೊ ?
ಬಾನು ಕಡಲು ಭೂಮಿಯೊಡಲು ಸಿಡಿಸಿಡಿವುದು ಪೂತಕೆ !
ಸತ್ಯಜೀವ ದಯಾಭಾವ ಸುಡುಸುಡುವುದು ಯೇತಕೆ ?

ನಗರನಗರ ಗ್ರಾಮ ಗ್ರಾಮ ಗೃಹಕುಟೀರ ಹೊರಳ್ದವು,
ವೃದ್ಧ ತರುಣ ಬಾಲ ಮರಣ ! ಹೆಣ್ಣು ಗಂಡು ನರಳ್ದವು ;
ಏನು ಪಂಥ ? ಕೊಲ್ಲುವಂಥ ಕಾರ್ಯವೊಂದು ಧೈರ್ಯವೆ ?
ವಧಿಸುವವರು ಬದುಕಿಸುವರೆ, ಈ ಪ್ರಮಾದ ಶೌರ್ಯವೆ ?

ವಾಯುಲೋಕವಾಳಿಯಾಯ್ತು, ಕಡಲಗರ್ಭ ಸೀಳಿಯಾಯ್ತು.
ಯಂತ್ರದಲ್ಲಿ ನಿಸರ್ಗಗೆಲಿದನಂತಸುಖವ ಸುಲಿದುದಾಯ್ತು ;



ಮನಜಗೈದ ಮಾಟವಿಂದು ನರಕುಲವನೆ ನುಂಗುತಿಹುದು,
ವಾಯು ಪೃಥ್ವಿ ಕಡಲು ಸುತ್ತಿ ಮೂರು ಮುನಿದು ಮುಕ್ಕುತಿಹುದು.

ಆಳಬೇಕು ಬಾಳಬೇಕು ಬೆಳಗಬೇಕು ಕೆಲವರೊ?
ಬೀಳು, ಗೋಳು ದಾಸ್ಯ ಹಾಸ್ಯ ಸುಲಿಗೆ ಬಲಿಗೆ ಹಲವರೊ?
ಅಸಮ ವಿಷಮ ತಾರತಮ್ಯ ಭೇದಬುದ್ಧಿ ಮಸಗಲಿಂತು,
ವಿಶ್ವಜನನಿ ಕಂಬನಿಯಲಿ ಜ್ವಲಜ್ಜ್ವಾಲೆ ಹರಿದುಬಂತು.

ಬಾಂಬುಮಳೆಯ ಸುರಿಯುವಾಗ, ಗುಂಡುಹೊಳೆಯು ಹರಿಯುವಾಗ,
ರುಂಡಮುಂಡ ಹೊರಳುವಾಗ, ಮೃತ್ಯುಮುಖದಿ ನರಳುವಾಗ,
ಬಣ್ಣಭೇದವುಂಟೆ ಹೇಳಿ ? ಧನಿದರಿದ್ರರೆಲ್ಲ ಕೇಳಿ !
ಎಂಥ ರುದ್ರನೃತ್ಯಕೇಳಿ, ಕೆರಳಿರುವಳು ಕ್ರಾಂತಿಕಾಳಿ.

ಯುಗದ ಕೊನೆಗೆ ಪ್ರಳಯವಂತೆ, ಹೊಸತು ಸೃಷ್ಟಿಯಪ್ಪುದಂತೆ,
ಸಾರಿದವು ಪುರಾಣ ಮುಂತೆ, ಭಾವಿಸಿದ್ದೆ ಕಥೆಯಕಂತೆ,
ಪ್ರಳಯ ಸಮಸಮಾನ ದೃಶ್ಯವಿದನು ಕಂಡು ಬೆರಗನಾಂತೆ,
ಶಾಂತಿಸುಖದ ನವ್ಯಸೃಷ್ಟಿ ನೋಡಲುಂಟೆ? ನಿತ್ಯ ಚಿಂತೆ.

ರತ್ನಮಕುಟ ಹಾರಿ ಹೋಯ್ತು, ಸಿಂಹಪೀಠ ಧ್ವಂಸವಾಯ್ತು,
ಅರಮನೆಗಳು ಕರಗುತಿರಲು ದರ್ಪಶಿಖರ ಕುಸಿದುಬಿತ್ತು ;
ಹೊಸತು ಜಗದ ಸೃಷ್ಟಿಯಿಲ್ಲಿ. ದೀನ ಜನರ ತುಷ್ಟಿಯಲ್ಲಿ
ನಿತ್ಯ ಸತ್ಯ ಶಾಂತಿ ನೀತಿ ಸಮತೆ ಮಮತೆ ತುಳುಕುವಲ್ಲಿ.

ವಿಷಮ ವಿಷಸಮಾಜವಳಿಯೆ ದಿವ್ಯಲೋಕದುದಯವೆಂದು
ಚಿನ್ನಕನಸು ಕಂಡೆನೊಂದು, ಮೂಡು ದಿಶೆಯ ನೋಡಿ ನಿಂದು ;
ಪಶ್ಚಿಮವನು ಕಾಳರಾತ್ರಿ ಮುಚ್ಚಿ ಧಾತ್ರಿ ಘೋರವಾಯ್ತು.
ಪೂರ್ವರಾಷ್ಟ್ರರಮಣಿಮುಖದಿ ಸೂರ್ಯಕಿರಣಕಾಂತಿಯಿತ್ತು.

* * * *

# ನಾಡು ನುಡಿ

“ಎನ್ನ ಹೃದಯದ ಸ್ಫೂರ್ತಿ
ಎನ್ನ ಜನತೆಯ ಶಕ್ತಿ
ಎನ್ನ ನಾಡಿನ ಕೀರ್ತಿ– ಹೆಚ್ಚಿಸಲ್ಕೆ ;
ಎಮ್ಮೊಂದಿಗರ ಬದುಕು
ಬಾಳಾಗಿ ಬೆಳಗಿಸಲು
ಬಲಿತ ಲೇಖನಿ ಬೇಕು–ರಕ್ತವದಕೆ ಮಸಿ ! ”



**ನಾದ : ಐದು – ನಾಡು ನುಡಿ**

## ಶ್ರೀಮುಖ

ಆರ್ಯರೋ, ಮೊಗಲರೋ, ಕ್ರೈಸ್ತರೋ, ತಡೆಯೇನು ?
ಎಲ್ಲರೂ ಬರಲೆಂದು ಸ್ವಾಗತಿಸಿದೆ ;
ಜಾತಿಮತ ಬೇರೆನದೆ ಬಣ್ಣನುಡಿ ಬದಲೆನದೆ
ಭೇದವೆಣಿಸದೆ ತಾಯೆ ! ನೀ ಸಲಹಿದೆ,
ವಿಶ್ವಸಂತತಿಯೆಲ್ಲ ನಿನ್ನ ಪುಣ್ಯೋದರದ
ಹಸುಕೂಸುಗಳುಯೆಂದು ಹಾಲುಣಿಸಿದೆ ;
ಒಂದೆ ತೊಟಿಲೊಳಿಟ್ಟು ತೂಗಿ ಶೋಭನವಾಗಿ
ಪ್ರೇಮಸಂಗೀತದೊಳೆ ಮೆಯ್ಮರೆಸಿದೆ.

೨

ನಿನ್ನದೆಯ  ಹಾಲುಂಡು, ದಿವ್ಯ ಚೇತನಗೊಂಡು,
ಮನುಜಸಂತತಿಯೆನಿತು ಬಾಳಲಿಲ್ಲ ?
ನಿನ್ನ ಪಾಲನೆಯಲ್ಲಿ ಜೀವಭಾವಗಳರಲಿ
ಎನಿಬರಮಿತಾನಂದ ತಾಳಲಿಲ್ಲ ?
ನಿನ್ನ ಕೈತುತ್ತಿನಲಿ ವಜ್ರದೇಹಿಗಳಾಗಿ
ಎನಿತು ವಂಶಜರು ಮಗುಳೇಳಲಿಲ್ಲ ?
ನಿನ್ನ ಹರಕೆಯ ಪಡೆದು ಧೈರ್ಯ ಸಾಹಸ ಹಿಡಿದು
ವೀರರೆನಿಬರು ರಾಷ್ಟ್ರವಾಳಲಿಲ್ಲ ?

೩

ಕುರುಡ ಕತ್ತಲೆಯಲ್ಲಿ ಜಗವೆ ಕಂಗೆಡುತಿರಲು
ನೀನೆ ತಿಳಿವಿನ ಬೆಳಕನೆತ್ತಿತೋರ್ದೆ ;
ಪಾಷಾಣಹೃದಯಿಗಳು ಪಶುಯಜ್ಞಕಿಳಿದಿರಲು
ಹಿಂಸೆ ಸಲ್ಲದುಯೆಂದು ನೀತಿಸಾರ್ದೆ ;

ಬೇನೆಯೋ, ಬೇಗುದಿಯೊ, ಸಂಕಟವೆ ಬಂದಿರಲಿ
ಸಹನೆ ಮೀರದಿರೆಂದು ಬುದ್ಧಿಯೊರೆದೆ ;
ಧರ್ಮವನು, ಕರ್ಮವನು, ಸತ್ಯವನು, ತತ್ವವನು,
ಎಲ್ಲವನು ಜಗಕಿಂತು ಧಾರೆಯೆರೆದೆ !

೪

ವಿಂಧ್ಯಹಿಮಗಿರಿಗಳುನ್ನತಿಯ ಮೀರಿತು, ಮಾತೆ !
ನಿನ್ನ ಘನತೆಗೆ ಲೋಕ ಬೆರಗಾಯಿತು !
ಗಂಗಾ ಸರಸ್ವತೀ ಯಮುನಾ ಪ್ರವಾಹಗಳ
ಮೀರಿ ತವಸಂಸ್ಕೃತಿಯ ನೆರೆ ಹರಿಯಿತು !
ಸೂರ್ಯ ಚಂದ್ರರಿಗೆಲ್ಲ ಪ್ರಭೆಯನಿತುಯಿರಲಿಲ್ಲ
ನಿನ್ನ ಕೀರ್ತಿಜ್ಯೋತಿ ಪ್ರಜ್ವಲಿಸಿತು !
ಮೇಘಮಂಡಳವೇರಿ ವಿಜಯವೀರಧ್ವಜವು
ಸ್ವಾತಂತ್ರ್ಯಸಂಭ್ರಮದಿ ಸಂಚಲಿಸಿತು !

೫

ಹಾ ! ಪ್ರಮಾದಗಳಾಯ್ತೆ ? ಜಡನಿದ್ರೆ ಹಿಡಿದಿತ್ತೆ ?
ಸೂರೆಯಾಯಿತೆ ಸೊತ್ತು ಸುಲಿಗೆಯಾಯ್ತೆ ?
ನಿನ್ನ ನೆಳಲಂ ಪಡೆದು ಬದುಕಿ ಬಲಗೊಂಡವರೆ
ಹಂತ ! ತುಳಿದರೆ ತಲೆಗೆ ಮಕುಟಮಣಿ ಬಿತ್ತೆ ?
ಅವಮಾನಗಳನಿಂತು ಶತಮಾನ ಸಹಸಿದೌ !
ಶಕ್ತಿಭೈರವಿ ಜನನಿ ! ತಾಳ್ಮೆಯುಂಟೆ ?
ಕ್ಷಮೆಯ ಮೀರದೆ ನೋವು; ಶಕ್ತಿಪುತ್ರರು ನಾವು
ಹರಿಸಿಬಿಡು ! ತೆರಳುವೆವು ತಡೆವರುಂಟೆ ?

೬

ಒಮ್ಮತದೊಳೇಕಪಂಥವ ಹಿಡಿದೆ ಸಾಗುವೆವು
ಸೋದರರು, ಕ್ಷಮಿಸಮ್ಮ ! ಬಡಿದಾಡೆವು ;
ಹೊಸಜಗದ ನಿರ್ಮಾಣದೀ ಸಂಧಿಕಾಲದಲಿ



ನಿನ್ನ ಘನತೆಗೆ ಕೊರತೆಯಾಗಬಿಡೆವು.
ಹಸಿರುಡುಗೆ ಪಸೆದುಟ್ಟು, ಸಿಡಿಮುಡಿಗೆ ಹೂತೊಟ್ಟು,
ಭುವನೇಶ್ವರಿಯೆ ! ನೀನು ಮೆರೆಯಬೇಕು ;
ಶುಭದಿನದ ಹೊಸಬೆಳಕಿನಾನಂದಶೋಭೆಯಲಿ
ನಿನ್ನ ಶ್ರೀಮುಖವೊಮ್ಮೆ ನೋಡಬೇಕು.

* * * *

## ಅಲ್ಲ, – ಇದು ಮರಿ ಮಣ್ಣು

ಅಲ್ಲ– ಇದು ಮರಿ ಮಣ್ಣು,
ನವನಿಧಿಯ ಗನಿ ಹೊನ್ನು,
ಈ ನೆಲದ ಬೆಳಕೆ ಬೆಳಗಿಸಿತೆನ್ನ ಕಣ್ಣು ;
ಆವ ಅಮೃತದ ಗಳಿಗೆ
ಇಳಿದೆ ನೀಯಿಳೆಯೊಳಗೆ
ಆ ಜನನಿಗರ್ಭದಿಂದೀಮಾತೆಯುಡಿಗೆ ? ॥೧॥

ಎನ್ನ ನೀ ಪಾಲಿಸಿದೆ
ಲಾಲಿಸಿದೆ ತೇಲಿಸಿದೆ
ನಿನ್ನೆದೆಯ ಕ್ಷೀರೋದಧಿಯಲಿ ನಾನೋಡ,
ಗಿರಿಶಿರದ ಹುಲ್ಲಂತೆ
ಹೊತ್ತುಯೆನ್ನನು ನಿಂತೆ
ಋಣದ ತೀರಿಸಲೊಡಲನರ್ಪಿಸುವೆ ನೋಡು. ॥೨॥

ತಾಯಿಳೆಯ ಕಿರುಪುತ್ರ
ಎಂಬ ನೆನಪೆ ಪವಿತ್ರ
ಎಂಥ ಸೋದರರು ಸೋದರಿಯರಿಹರೆನಗೆ,
ನಲ್ಮೆಯ ಸುಧಾಭಾಂಡ,
ಬಗೆ ವಿಪುಲ ಬ್ರಹ್ಮಾಂಡ,
ಒಂದೆ ಮತ ಒಂದೆ ಪಥ ಒಂದೆ ವ್ರತವೆಮಗೆ. ॥೩॥

ನಾವೆಲ್ಲರೊಂದೆಂಬ
ಪ್ರೀತಿ ಬಂಧನ ಸ್ವರ್ಗ.
ಎರಡೆಂಬ ಸ್ವಾತಂತ್ರ್ಯ ಘೋರನರಕ,
ನಾನು ನೀನೆನಬೇಡ,
ಬೇರೆನದೆ ಜತೆಗೂಡ,
ಮುಪ್ಪುರಿಯ ಹಗ್ಗವೆನೆ ಶಕ್ತಿಯೆರಕ ! ॥೪॥

ಎಲ್ಲರೊಂದಿಗೆ ಕುಡಿವ
ಗಂಜಿ ತಿಳಿ ಪೀಯೂಷ
ಒಬ್ಬನೇ ಉಂಬೆನೇ ವಿಷವಹುದು ಹಾಲು !
ಇರಲಿ ಬಡತನವೆನಗೆ
ಎದೆಯ ಸಿರಿತನವುಳಿಗೆ,
ಸಂಕಟವೊ ಸಂತಸವೊ ಸಲುಗೆ ಸಮಪಾಲು. ॥೫॥

ಜಗದಗಲದೀ ನೆಲವು
ಬೆಳಗುತಿಹ ಬಾಂದಳವು
ಸೂರ್ಯಚಂದ್ರರೊ ಬಿಸಿಲೊ ಬೆಳ್ದಿಂಗಳಿರಲಿ
ಬೀಸುತಿಹ ಗಾಳಿಯೋ
ಸೂಸುತಿಹ ಬೆಂಕಿಯೋ
ನದಿಯೊ ನೀರಧಿಯೊ ಎಲ್ಲರಿಗೂ ಹಂಚಿರಲಿ. ॥೬॥

ಇಂತಾಗೆ ನಾವೆಲ್ಲ
ಭೇದವೆಣಿಸಲು ಸಲ್ಲ
ಒಮ್ಮತವೆ ಸಮ್ಮತವು ಮನುಜಕುಲಕೆ,
ಧರ್ಮವೊಳ್ಳಿತಿಗಾಗಿ
ದೇವರೊಳ್ಳಿತಿಗಾಗಿ
ಧರ್ಮ ದೇವರು ಜಗಕೆ ಶ್ರೇಯ ನೀಡಲಿಕೆ.

* * * *



# ಐಕ್ಯಗಾನ

ಐಕ್ಯವೊಂದೇ ಮಂತ್ರ,
ಐಕ್ಯದಿಂದೆ ಸ್ವತಂತ್ರ,
ಐಕ್ಯಗಾನದಿ ರಾಷ್ಟ್ರ ತೇಲುತಿರಲಿ !
'ಭಾರತದಿ ಮಮಜನ್ಮ
ಸ್ವಾತಂತ್ರ್ಯವೇ ಧರ್ಮ'
–ಒಕ್ಕೊರಲಿನುದ್ಘೋಷ ಕೇಳುತಿರಲಿ ! ॥೧॥

ಹೊಲೆಯರೇ, ಬ್ರಾಹ್ಮಣರೆ
ಮುಸ್ಲಿಮರೆ ಕ್ರಿಶ್ಚನರೆ,
ಎಲ್ಲವರೂ ನಮ್ಮವರೆ ಎದೆಯರಳಲಿ !
'ರಾಷ್ಟ್ರವೊಂದೇ ಜೀವ;
ಎಂದು ಸಾರಿರಿ, ಯಾವ
ರಕ್ಕಸರು ಇದಿರಿಲ್ಲ ನಾವ್ ಕಡುಗಲಿ ! ॥೨॥

ಅರೆಹೊಟ್ಟೆಯುಂಡ ನಾವ್,
ಬರಿ ಚಿಂದಿ ತೊಟ್ಟ ನಾವ್,
ಸುಲಿಗೆಗೊಳಗಾದ ನಾವ್ ಎಲ್ಲರೊಂದೇ !
ಆಳು ಹೋಳಾಗಿರಲು,
ಬಾಳು ಗೋಳಾಗಿರಲು,
ಮೇಲು ಕೀಳೇನುಂಟು ? ಎಲ್ಲರೊಂದೇ ! ॥೩॥

ಭಾರತಿಯ ಬಸುರಿಂದ
ಜಾರಿಬಿದ್ದೆವೆ ? ಬಂದ
ಭೂರಿ ಬವಣೆಗಳನ್ನು ನೆನೆಯಿರೊಮ್ಮೆ !
ನೆನೆನೆನೆದು ದಿನದಿನವು,
ದುಡಿದುಡಿದು ಜನಜನವು,
ಭಾರತದ ಸ್ವಾತಂತ್ರ್ಯ ಮೆರೆಸಿ, ಹೆಮ್ಮೆ ! ॥೪॥

ಅಜ್ಞಾನ ಪಂಕದಲಿ
ಅದ್ದಿರುವ ಜನರಲ್ಲಿ
ಮತಭೇದ ಬರಲುಂಟೆ ? ಎಲ್ಲರೊಂದೇ ;
ಪಕ್ಷವೇ ? ಪಂಥವೇ ?
ಜಾತಿಯೇ ? ನೀತಿಯೇ ?
ಮೌಢ್ಯ ಮುರಿಯುವ ಬನ್ನಿ ಎಲ್ಲರೊಂದೇ ॥೫॥

ಸ್ವಾತಂತ್ರ್ಯ ಪಡೆದಿಹೆವು,
ತಲೆಯೆತ್ತಿ ನಡೆಯುವೆವು,
ವಜ್ರದೇಹಿಗಳಾವು ಬನ್ನಿರೆಲ್ಲ ;
ಸ್ವಾತಂತ್ರ್ಯವೇ ಪಕ್ಷ,
ಸ್ವಾತಂತ್ರ್ಯವೇ ಪಂಥ,
ಸ್ವಾತಂತ್ರ್ಯವೇ ಜಾತಿ ಎನ್ನಿರೆಲ್ಲ. ॥೬॥

ಭಾರತದ ಬಿಡುಗಡೆಗೆ
ಹೋರಾಡಿರುವ ನಮಗೆ
ಯಾರ ಭಯ?ನಾವಿಂದು ಮುಂದಾಗಿರೆ ;
ತೇಲುವೆವೊ, ಮುಳುಗುವೆವೊ,
ಏಳುವೆವೊ, ಬೀಳುವೆವೊ,
ಎಲ್ಲರೂ ಒಮ್ಮೆಗೇ ಒಂದಾಗಿರೆ. ॥೭॥

ಐಕ್ಯದಮೃತದ ರಸಕೆ
ಜೀವಜೀವದ ಬೆಸುಗೆ
ಕೂಡಿ ಬರೆ ಭೀಮಬಲ ನಮ್ಮೊಳುಂಟು ;
ಹದಿನಾಲ್ಕು ಲೋಕವನು,
ಸಪ್ತಸಾಗರವನ್ನು
ಗೆದ್ದು ದಾಂಟುವ ಶಕ್ತಿ– ವೇಗವುಂಟು ॥೮॥



ತಿಳಿನೀರ, ಸವಿ ಹಣ್ಣ,
ಗಂಧ ಮಂದಾನಿಲನ
ನೀಡುವಳು ನಮಗೆಲ್ಲ ಪುಣ್ಯಧರಣಿ ;
ಮಂದಸ್ಮಿತೆಯು ಮಧುರ–
ಭಾಷಿಣಿಯು, ಭೂಷಣೆಯು
ಸಶ್ಯಶ್ಯಾಮಲೆ ದೇವಿ ನಮ್ಮ ಜನನಿ ॥೯॥

ಚೆನ್ನಬೆಳ್ದಿಂಗಳಿಂ–
ಪುಲಕಿತ ನಿಶಾಮಯೀ,
ಸ್ವರ್ಣಗರ್ಭೆಯೆ, ತಾಯೆ ! ನಮ್ಮ ಕಾಯೆ ;
ಅರಳ್ದ ಹೂ ಗೊಂಚಲಿಂ,
ಚೆಲುವ ದ್ರುಮದಲಗಳಿಂ,
ಸುಖದಾತೆ, ವರದಾತೆ, ನಮ್ಮ ತಾಯೆ, ॥೧೦॥

ಈ ತಾಯ ಮಕ್ಕಳು,
ಬೇರೆ ಬೇರಾಗಲು,
ನಾವಾದೆವೊಕ್ಕಲು ಕೇಳಿರೆಲ್ಲ :
"ಇಡು ಹೆಜ್ಜೆ, ನಡೆ ಮುಂದೆ,
ಪಡೆಪ್ರೇಮ ಬಲದಿಂದೆ
ಐಕ್ಯಭಾರತ ಜವದೆ ಬಾಳಿರೆಲ್ಲ". ॥೧೧॥

ಜಾತಿ–ಕುಲ–ಮತ–ಕರ್ಮ
ಕಟ್ಟಳೆ ಕುಹಕ ಧರ್ಮ,
ಕಟ್ಟಕೂಡಿಸಿ ಕಿಚ್ಚಿಕೊಟ್ಟು ಸುಡಿರಿ ;
ಸೋದರತೆ, ಮಾನವತೆ,
ಸತ್ಯ–ಶಾಂತತೆ, ಸಮತೆ,
ಅಸ್ತಿವಾರದಿ ಜನತೆ ಕಟ್ಟಿ ಬಿಡಿರಿ ॥೧೨॥

* * * *

ಐಕ್ಯವೊಂದೇ ಮಂತ್ರ,
ಐಕ್ಯದಿಂದೆ ಸ್ವತಂತ್ರ,
ಐಕ್ಯಗಾನದಿ ರಾಷ್ಟ್ರ ತೇಲುತಿರಲಿ ;
ಭಾರತದಿ ಮಮಜನ್ಮ
ಸ್ವಾತಂತ್ರ್ಯವೇ ಧರ್ಮ,
ಒಕ್ಕೊರಲಿನುದ್ಘೋಷ ಕೇಳುತಿರಲಿ.

* * * *

## ಜಾಗೃತಿ

ಎಚ್ಚರವು, ಎಚ್ಚರವು, ವೀರಪುತ್ರರೆ ಬೇಗ.
ಜಾಡ್ಯದುಃಸ್ವಪ್ನಗಳ ಕಾಲ ಕಳೆದತ್ತು ;
ಎಚ್ಚತ್ತು ಕಣ್ಣಾಲಿ ಬಿಚ್ಚುತ್ತ ನೋಡೀಗ,
ಮೌನಸನ್ಯಾಸಕಿಹ ದಿನವದುರುಳಿತ್ತು. ॥೧॥

ಎಚ್ಚರಿನ ಸಮಯವಿದು ಕಾಳಿಮೆಯ ಕುರುಹಿಲ್ಲ
ಆತ್ಮಶಕ್ತಿಯ ಸತ್ಪ್ರಕಾಶ ಪಸರಿಸಿದೆ ;
ಮಾಯಕದ ಮಾಲಿನ್ಯ ಭಯಭೀತಿಯುಳಿದಿಲ್ಲ
ಎಲ್ಲೆಲ್ಲು ಜಾಗೃತಿಯ ಜನತೆ ಜನ್ಮಿಸಿದೆ. ॥೨॥

ಸುತ್ತಲೂ ಜಗದಗಲ ಮಿಗವಕ್ಕಿ ಮರವೆಲ್ಲ
ಎಚ್ಚರಿನೊಳೆಚ್ಚತ್ತು ಕೂಗಿಡುತಲಿಹವು ;
ಪಾಷಾಣ ಪಶುಹೃದಯವನೆ ಕಹಳೆ ಕೆರಳಿಸಿರೆ,
ವೀರಕಲೆ ಹೊರಹೊಮ್ಮೆ ಮಾರ್ದನಿಸುತಿಹವು ॥೩॥

ಪಾಶವಿಶಕ್ತಿಯನು ಕಾಲಡಿಗೆ ನುಗ್ಗೊತ್ತಿ
ಸ್ವಾತಂತ್ರ್ಯ ಸತ್ಯಶೋಧನೆಗೆ ಮುಂಬರಿದು ;



ನೋಡಿದರೋ ! ಬಾಡಿರದೆ ನಗೆಮೊಗದೆ ಹಿಗ್ಗೊತ್ತಿ,
ವಿಶ್ವತೋಮುಖವಾಗಿ ಕಹಳೆ ಕೂಗುವುದು. ॥೪॥

ಎಂತಾದರೇನಾದರೊಂದೆ ಲಕ್ಷ್ಯದಿ ಸಿದ್ಧಿ–
ಗಾಗಿ ಮುನ್ನಡೆವರೀ ಸಾಹಸಿಕರು ;
ಪಂತದ ಪರಾಕ್ರಮವ ಸತ್ಯಶಕ್ತಿಯೊಳದ್ದಿ
ನಿತ್ಯನಿರ್ಮಲಕೀರ್ತಿ ಪಡೆಯಲಿಹರು. ॥೫॥

ಸೂರೆಯಾಯಿತು ಸೊತ್ತು. ಸರ್ವಸುಖ ಸಂಪತ್ತು,
ಮಾನ್ಯಮಾತೆಗೆ ಕಣ್ಣನೀರ ಕೈತುತ್ತು ;
ಇಂತಾದರೂ ಕೆಲರು– ಮುಸುಕಿಕ್ಕಿ ಮಲಗಿಹರು
ಹಾ ಹಂತ ! ಇವರೆಂದಿಗೆಚ್ಚರೊಂದುವರು ? ॥೬॥

ನಿತ್ಯನಿದ್ರೆಯೊಳೆ ಮರವಟ್ಟು ಬಿದ್ದಿಹಿರೇಕೆ ?
ಕೀಳುಕುನ್ನಿಗಳಾಗಿ ಕೊಳೆಯಲಿಹಿರೇನು ?
ಎಚ್ಚಿರನೊಳೆಚ್ಚರಿರಿ, ಸ್ವಾತಂತ್ರ್ಯ ಶಕ್ತರವಿ
ಉದಿಸಿಬಹ ತರುಣಕಿರಣವೆ ಕಾಣದೇನು ? ॥೭॥

ಜಾಜ್ವಲ್ಯಮಾನವದೊ, ನವಸೃಷ್ಟಿಯಾಗುತಿದೆ
ದುರ್ನಿಯಮ ದುರ್ದಿನದ ಸುಳಿವಿಲ್ಲಿ ಪಲ್ಲ;
ನವ್ಯಶಕ್ತಿಯು ರಕ್ತಕಣದಿ ಖಣಖಣಿಸುತಿದೆ.
ಸತ್ಯಸ್ವಾತಂತ್ರ್ಯಸೂರ್ಯನ ಬೆಳಕಿದೆಲ್ಲ. ॥೮॥

ಸ್ವರ್ಗಸೋಪಾನದಲಿ ಸ್ವಾತಂತ್ರ್ಯ ಯೋಧರನು
ಸ್ವಾಗತೀಕರಿಸುತಿಹರದೊ, ಮುಂದು ಮುಂದು ;
ಪಾರತಂತ್ರ್ಯದ ಪಾಶ ಕಡಿದೊಗೆದ ವೀರರಿಗೆ
ಸ್ವರ್ಗ– ಸಿರ್ಗಗಳಿಹವು ಕಾಲಡಿಗೆ ಬಂದು. ॥೯॥

ಬಿಡೆಬಿಡೆವು ಎಂದೆಂದು ನಮ್ಮದೀ ಸೊತ್ತೆಂದು
ಕಾದಾಡಿ ತಾಯ್ನಾಡ ಕೀರ್ತಿಯುಳಿಸುವೆವು ;

ಸತ್ಯಸಾಧನೆಗಾಗಿ ಮಣ್ಣೊಡಲು ಬಿಡಲಾಗಿ
ನಿತ್ಯಶುಭ್ರಯಶಶ್ಶರೀರ ಬೆಳಗುವೆವು. ॥೧೦॥

ಘೋರಘರ್ಜನೆಯಿರಲಿ, ದಾನವಾರ್ಭಟವಿರಲಿ,
ಮಾರಿಮೃತ್ಯುವೆ ಮುಂದು ಗುಡುಗುಡಿಸಿ ನಿಂದಿರಲಿ ;
ಮಂಗಲೋತ್ಸವದಂದು ಸಂಗೀತಸ್ವರವೆಂದು
ಅದನಾಲಿಸುತ ನುಗ್ಗುನುಗ್ಗುವೆವು ಮುಂದು. ॥೧೧॥

ಮುಂದು ಮುನ್ನುಗ್ಗುತಲಿ ಹೆಮ್ಮೆಯಿಂದ ಹಿಗ್ಗುತಲಿ
ಸರ್ವಸತ್ವದಿ ರಣದ ಭೇರಿ ಹೊಡೆಯುವೆವು ;
ಕೆಚ್ಚೆದೆಯ ಕಟ್ಟಾಳುತನದಿ ಬೆಳಗಲಿ ಬಾಳು
ಸ್ವಾತಂತ್ರ್ಯಸ್ವಾವಲಂಬನವ ಪಡೆಯುವೆವು. ॥೧೨॥

ಶಾಂತಿಯೈ ಸಮರದಲಿ, ಕ್ರಾಂತಿಕಿಡಿ ಮಿಂಚಿರಲಿ
ಬಿಸಿರಕುತ ರೋಮರಂಧ್ರದಲಿ ಚಿಮ್ಮಿರಲಿ ;
ಭವ್ಯಭಾರತಮಾತೆ ಎಚ್ಚೆತ್ತ ಮಕ್ಕಳಲಿ
ವರದಹಸ್ತವನಿರಿಸಿ ಹರಸಿ ನಿಂದಿರಲಿ. ॥೧೩॥

ನಿಮಿಷ ನಿಮಿಷಕೆ ನಮ್ಮ ದಾಸ್ಯತೆಯು ನೀಗಿರಲಿ
ಪರತಂತ್ರಬಂಧನವು ಬಿಗಿವಡೆಯದಿರಲಿ ;
ನಮ್ಮ ರಾಷ್ಟ್ರಪತಾಕೆ ಮುಗಿಲಟ್ಟ ಮುಟ್ಟಿರಲಿ
ಸತ್ಯಸ್ವರ್ಗಿಯ ಸಂದೇಶ ಸಾರುತಲಿ ॥೧೪॥

ಕಣ್ಣೀರ ಕಳೆಯಮ್ಮ ! ನಿನ್ನಡಿಯ ಸೇವೆಯಲಿ
ಎನಿತೊಂದು ಕಷ್ಟ ಹೋರಾಟಗಳೆ ಬರಲಿ ;
ಅದಕಾಗಿ ನಮ್ಮೊಡಲನೀಡಾಡಿ ಕೀರ್ತಿಯಲಿ
ನಿನ್ನ ನೆಲೆ ನಿಲಿಸುವೆವು ಭಾಷೆ ತಿಳಿದಿರಲಿ. ॥೧೫॥

ನಿನ್ನ ಸೇವೆಯೊಳಿದುವೆ ತನುವ ತೃಣವಾಗಿರಲಿ
ಯಜ್ಞಕುಂಡದೊಳಿಂದೆ ಆಹುತಿಗೆ ಸಲಲಿ;



ಧಗಧಗಿಸಲೀ ದೇಹ ! ಸತ್ಯಸಂತೋಷದಲಿ
ಅರ್ಪಿಸುವೆವಿದೊ ಪುಣ್ಯಪಾದಪದ್ಮದಲಿ. ॥೧೬॥

* * * *

## ಗೋವೆಯ ಕರೆ

ದಾಸ್ಯದಾರಿದ್ರ್ಯಗಳ ವಜ್ರಪಂಜರವನ್ನು
ಭೇದಿಸುತ ಭಾರತದ ಸಿಂಹ ನಿಂದಿರಲು ;
ಸ್ವಾತಂತ್ರ್ಯಸುಖದ ಸಂಚಾರಸಂಭ್ರಮವನ್ನು
ಕಾಲ್ಮುಳ್ಳು ಕೆಡಿಸಿಹುದು– ಗೋವೆ ನೊಂದಿರಲು ॥೧॥

ಕಿತ್ತೆಸೆಯಿರೋ – ಶೂರಸತ್ಯಾಗ್ರಹಿಗಳೆ, ಮನ
ಮುಟ್ಟದೇ ?– ಗೋವೆ ರೋದಿಸುತಿಹುದು ಕೇಳಿ !
'ನೀನೆ ಗೃಹಪತಿ, ಪಾತ್ರೆ ಮಾತ್ರ ಮುಟ್ಟಲು ಬೇಡ,'
ಎಂಬ ಸಾಮ್ರಾಜ್ಯರೋಗಕೆ ಮದ್ದು ಹೇಳಿ, ॥೨॥

ಭಾರತದ ಸ್ವಾತಂತ್ರ್ಯಕರ್ಥವೇನಿದೆ ಮತ್ತೆ
ಗೋವೆ ನರನರಳುತಿರೆ ದಾಸ್ಯಪಂಕದಲಿ ?
ಶರ್ಕರಾಮಧುರಪಾಯಸಕೆ ರುಚಿಯೇನಿಹುದು
ಕುಡಿಯುತಿರೆ ಕಳ್ಳಿನಂಗಡಿಯ ಪಾತ್ರೆಯಲಿ ? ॥೩॥

ಅಂಗುಲಾಂಶವನಾದರೂ ಬಿಡೆವು ; ತಾಯ್ನಾಡ
ಪುಣ್ಯನೆಲದಲಿ ಪರರ್ಗೆ ಪಾಲುಗೊಡೆವು ;
ಯೋಜನವಿಶಾಲಭೂಮಂಡಲವ ಬಯಸೆವೈ
ಅನ್ಯದೇಶದ ನೆಲಕೆ ಕೈಚಾಚೆವು. ॥೪॥

ನೆನೆಯಿರೋ ಆ ದಿನವ ಧರ್ಮದೇವಾಲಯವ
ಧೂಳಿದೂಸರಗೈದು ನಮ್ಮ ಜನಗಣವ,

ಹೊಡೆದೋಡಿಸಿದ ದಿನವ, ದುಷ್ಕೃತಿಯ ದುರ್ದಿನವ,
ನೆನಹು ಸುಡದೆ ? ಕೇಳಿ ಗೋವೆ ರೋದನವ. ॥೫॥

ಭಾರತದ ಸ್ವಾತಂತ್ರಯಜ್ಞಪೂರ್ಣಾಹುತಿಯು
ಗೋವೆಯಲಿ, ಬಲಿದಾನಕೆದ್ದು ಬನ್ನಿ !
ಆಹುತಿಗೆ ಸಂದರೂ, ಬೆಂಕಿಯಲಿ ಬೆಂದರೂ,
ಬಿಡುಗಡೆಯ ಪುಣ್ಯಫಲ ಗೆದ್ದು ತನ್ನಿ. ॥೬॥

ಇದು ಚರಮ ಸಂಗ್ರಾಮ ! ಗಂಡೆದೆಯ ಬಂಡಾಯ,
ಸ್ವಾತಂತ್ರ್ಯಧರ್ಮಸಂಸ್ಕೃತಿಯ ಸಮರ ;
ಇದೆ ಮೋಕ್ಷಸಾಧನವು ಬಿಡುಗಡೆಯೆ ವೈಕುಂಠ,
ಗೋವೆ ಕರೆಯುತಲಿಹುದು– ಕ್ರಾಂತಿವೀರ ! ॥೭॥

* * * *

## ಪ್ರೇಮಸೌಧಾಗಾರ

ಒಂದೆ ಭಾರತ ದೇಶ
ಒಂದೆ ಭಾರತ ಜೀವ
ಎಂದಾದರೂ ಬೇರೆ ಆಗಲುಂಟೆ ?
ಒಂದೆ ಭಾರತಸುತರು,
ಒಂದೆ ಸಮಸೋದರರು
ಎಂದಾದರೂ ಭೇದ ಎಣಿಸಲುಂಟೆ ? ॥೧॥

ಸೋದರರನು, ಸೋದರರನ
ಬೆನ್ನ ತಿವಿಯುವುದನ್ನ,
ಕಲಿಸಿಕೊಟ್ಟಿರುವಂಥ ರಕ್ಕಸರಿರಾ !
ಮಹಮ್ಮದೀಯನು– ಹಿಂದು,
ಒಂದಲ್ಲ, ಬೇರೆಂದು,
ಭೇದವಿಷಬೀಜವನು ಬಿತ್ತಿರುವಿರಾ ? ॥೨॥



ನವಕಾಳಿ ನರಹತ್ಯ,
ಪಂಜಾಬಿನೀಕೃತ್ಯ,
ಮಾಡಿಸುತ ಪೀಡಿಸಿದ ಪಾಪಾತ್ಮರೆ ;
ಎರಡು ಜನತಾವಾದ
ಎನ್ನುವೀ ದುರ್ಬೋಧ
ಇತ್ತು ಕಷ್ಟವ ಕೊಟ್ಟ ದುಷ್ಟಾತ್ಮರೇ ; ॥೩॥

ಜಾತಿ–ಪಂಥಗಳಿಂದ,
ದ್ವೇಷತಳಹದಿಯಿಂದ,
ಗಾಳಿಗೋಪುರ ರಾಷ್ಟ್ರ ಕಟ್ಟಿದವರು ;
ಜಾತಿ ಹೊಡೆದಾಟದಲಿ
ದ್ವೇಷ ದಾವಾಗ್ನಿಯಲಿ
ಗೋಪುರವು ಕುಸಿವುದನು ದಿಟ್ಟಿಸುವರು. ॥೪॥

ಈ ಸ್ವಾರ್ಥಸಾಧಕರ,
ಈ ರಾಷ್ಟ್ರಭಂಜಕರ,
ಈ ದೇಶದ್ರೋಹಿಗಳ ಹುಟ್ಟಡಗಲಿ ;
ಹಾ ! ಪುಣ್ಯಭಾರತಿಯು,
ಸೌಭಾಗ್ಯದಾರತಿಯು,
ಆ ವಿಶ್ವಕೀರುತಿಯ ಮುಟ್ಟಿ ನಿಲಲಿ. ॥೫॥

ಹಿಮವಂತನೌನ್ನತ್ಯ,
ಸಾಗರದ ಗಾಂಭೀರ್ಯ,
ಭರತಪುತ್ರರ ಶೌರ್ಯ ಉಗ್ಗಡಿಸಲಿ ;
ಗಂಗೆ ಯಮುನೆಗಳೆಂಬ,
ಮೊಲೆಹಾಲ ಸವಿತುಂಬ,
ಉಣಿಸಿ–ಭಾರತಿ–ತಣಿಸಿ ಅಗ್ಗಳಿಸಲಿ, ॥೬॥
ಇಂದಿನೀ ಹೊಡೆದಾಟ
ಇಂದಿನೀ ಹುಚ್ಚಾಟ

ಎಂದಾದರೂ ಮರಳಿ ಮಾಡಬಹುದೆ ?
ಇಂದಿನೀ ಪಾತಕವ,
ಇಂದಿನೀ ಸೂತಕವ,
ಎಂದಾದರೂ ಕನಸು ಕಾಣಬಹುದೆ ? ॥೭॥

ಧನಿಕರೊಂದೇ ಜಾತಿ,
ಬಡವರೊಂದೇ ಜಾತಿ,
ಜಾತಿಯೆರಡೇ ಜಗದಿ ಎಲ್ಲು ನೋಡೆ !
ಆಳೊಡೆತನವು ಹೋಗಿ,
ವಿಶ್ವವಿಷಮತೆ ನೀಗಿ,
ಪ್ರೀತಿಸಮತೆಗಳಾಗಿ ಗೆಲ್ಲು ನಾಡೆ ! ॥೮॥

ರಾಷ್ಟ್ರದೀ ವಿಭಜನೆಯ,
ಎದೆಯೆದೆಯ ವೇದನೆಯ,
ನೀಗಿಸಲು ದಿನರಾತ್ರಿ ದುಡಿವ ಬನ್ನಿ ;
ಹೊಲೆಯ ಬ್ರಾಹ್ಮಣನೆನದೆ,
ಹಿಂದು ಮುಸ್ಲಿಮನೆನದೆ,
ಐಕ್ಯಭಾರತ ಜವದೆ ಪಡೆವ ಬನ್ನಿ ; ॥೯॥

ಹೃದಯ ಸಂಕೋಚಗಳ
ಬದಿಗೊತ್ತಿ, ನಾವೆಲ್ಲ
ಮನಸನು ವಿಶಾಲತೆಗೆ ಹರಿಸಬೇಕು ;
ಮಾನವತೆ ಪಂಚಾಂಗ
ಸೋದರತೆ ಸರ್ವಾಂಗ,
ಪ್ರೇಮಸೌಧಾಗಾರ ಮೆರೆಸಬೇಕು. ॥೧೦॥

* * * *



# ಮೃತ್ಯುವಿಂದಮೃತಕ್ಕೆ......

ಕಾಮಧೇನುವನಿಂದು,
ಗರಗಸದಿ ಕೊರೆಯುವರೆ !
ಭರತಭೂಮಿಯನು ಇಬ್ಬಾಗಿಸುವರೆ ?
ಬಂದ ಮಕ್ಕಳನೆಲ್ಲ,
ಒಂದೆ ತೊಟ್ಟಲೊಳಿಟ್ಟು
ತೂಗಿರುವ ತಾಯ ಕೈ ಕಡಿಯುತಿಹರೆ ? ॥೧॥

ಸಾಗರದ ಮಥನದಲಿ,
ಅಮೃತ ದೊರಕುವ ಮೊದಲು,
ವಿಷಮ ಹಾಲಾಹಲವೆ ಹುಟ್ಟಿತಂತೆ ;
ಸ್ವಾತಂತ್ರ್ಯರಣದಲಿ,
ಬಿಡುಗಡೆ ಪಡೆಯುತಿರಲು,
ರಾಷ್ಟ್ರವೆರಡಾಗಬೇಕಾಗಿ ಬಂತೆ ? ॥೨॥

ಜಗಜೀವಗಳ ಸುಡುವ
ವಿಷಮ ಹಾಲಾಹಲವ,
ಎದೆಗಾರನಾ ನೀಲಕಂಠ ನುಂಗೆ.
ಹೊಸ ಹುರುಪು ಹುಟ್ಟುತಲಿ,
ದೇವ ದಾನವರಲ್ಲಿ,
ಕಡಲ ಕಡೆಯಲು ದೊರಕಿತಮೃತಗಂಗೆ. ॥೩॥

ರಾಷ್ಟ್ರದೈಕ್ಯದ ಬಾಳ.
ಗೈದಿಂತು ಹೋಳ್ ಹೋಳ.
ಹೆಡೆಯೆತ್ತಿ ನಿಂತ ಜಾತೀಯ ಸರ್ಪಂ;
ಬಿಡುವ ಗರಳವನಂತು
ನುಂಗಿ ನೀರ್ಕುಡಿವಂತ
ಆ ತಪೋಮೂರ್ತಿ ಗಾಂಧೀಜಿ ಇರ್ಪಂ ॥೪॥

ಒಬ್ಬನೇ ಶಿವನು, ಮೇಣ್
ಇಬ್ಬರುಂಟೇ ಜಗದಿ ?
ಒಬ್ಬನೇ ಮಹಾತ್ಮನನ್ಯರಿಲ್ಲ ;
ಒಬ್ಬ ಯೇಸುಕ್ರಿಸ್ತ,
ಒಬ್ಬ ಪೈಗಂಬರನು,
ಇಬ್ಬರಿದ್ದರೆ ತೋರಿ ವಾದವಿಲ್ಲ. ॥೫॥

ಭಾರತದ ಬಿಡುಗಡೆಗೆ,
ಹೋರಾಡಿರುವ ನಮಗೆ,
ಯಾರು ಪೂಜ್ಯರು ಗಾಂಧಿಗಿಂತ ಮೇಲು ?
ಸ್ವಾತಂತ್ರ್ಯದಮೃತ ಕಲ–
ಶವನಿಂದು ತರುವಂದು,
ಬೆಕ್ಕಿಗೊಂದಿರಬೇಕೆ ಬೇರೆ ಪಾಲು ? ॥೬॥

ಸ್ವಾತಂತ್ರ್ಯದುತ್ಸವದಿ,
ಭಾರತವು ಮೈಮರೆಯೆ,
ಎಲುಬನ್ನು ಕಚ್ಚುತತ್ತಿತ್ತ ಸೆಳೆಯೆ :
ನೋಡುತಲಿ ಕರುಣೆಯಿರಲಿ,
ಮನದಲ್ಲಿ ಮರುಗುತಲಿ,
ಪ್ರಾರ್ಥಿಸುವನಾಗಾಂಧಿಯೊರುವ ತಿಳಿಯೆ. ॥೭॥

ಸತ್ಯ ಧರ್ಮಗಳಿಂದ,
ಶಾಂತಿ ನೀತಿಗಳಿಂದ
ಸತ್ಯಾಗ್ರಹಿಗಳ ಬಲಿದಾನದಿಂದ ;
ಎರಡು ಶತಮಾನಗಳ
ದಾಸ್ಯ ನೊಗ ಭಾರಗಳ,
ಗಾಂಧೀಜಿ ಕಳಚಿದರಹಿಂಸೆಯಿಂದ. ॥೮॥



ಚಾಕು ಚೂರಿಗಳಿಂದ,
ಬೆನ್ನಿನಿರಿತಿಗಳಿಂದ.
ಭ್ರಾತೃರಕ್ತದ ಕ್ರೂರ ತೃಷ್ಣೆಯಿಂದ ;
ಸ್ವಾತಂತ್ರ್ಯಸಮರದ ವಿ–
ರೋಧಿಗಳು ಹಿಡಿದಿಹರು ;
ಭಾರತಿಯ ಸಿರಿಮುಡಿಯ ದರ್ಪದಿಂದ ॥೯॥

ಅಗ್ನಿಕನ್ಯೆಯ ನೆವದಿ
ರಕ್ತರಂಜಿತವಾಯ್ತು,
ಭಾರತಂ– ಹಿಂದಿನಿತಿಹಾಸದಲ್ಲಿ ;
ಧರಣಿಯೊಲಿದರೆ ಜನನಿ.
ಕೆರಳಿದರೆ ಭೈರವಿಯು !
ಏಂ ಕುರುಕ್ಷೇತ್ರವೊ ಭವಿಷ್ಯದಲಿ ? ॥೧೦॥

ದೇಶವಿಭಜನೆಯಿಂದ,
ಹೃದಯದೀ ನೋವಿಂದ
ಸ್ವಾತಂತ್ರ್ಯ ಬರಲು ಸುಖವುಂಟೆ ನಮಗೆ ?
ಒಂದೆ ತಾಯೆದೆಹಾಲ–
ನುಂಡೆ ಬಲಗೊಂಡಿರುವ
ಸೋದರರೆ ಬೇರೆಯ ಜನಾಂಗವಾಗೆ. ॥೧೧॥

ಹಿಂದು ಮುಸ್ಲಿಮ ಕ್ರಿಸ್ತ
ಸಿಕ್ಖ ಪಾರ್ಸಿ ಸಮಸ್ತ
ಎಲ್ಲರೂ ನಿನ್ನವರೆ ಎಂದೆ ತಾಯೆ ;
ಇಂದೇತಕೀ ಕ್ರಾಂತಿ ?
ಬೇರೆಂಬ ವಿಭ್ರಾಂತಿ !
ಏನು ಸ್ವಾರ್ಥವೊ ! ಕ್ಷಮಿಸಿ ನಮ್ಮ ಕಾಯೆ. ॥೧೨॥

ಸ್ವಾರ್ಥಸುಡುನಂಜಿಂದ,
ದ್ವೇಷದಳ್ಳುರಿಯಿಂದ,
ಜಾತಿಜ್ವಾಲಾಮುಖಿಯ ಕಿಚ್ಚಿನಿಂದ ;
ಉರಿಯಿತೋ ! ನಾಡಿಂದು
ಸುರಿದು ನೆತ್ತರಬಿಂದು,
ಅಮೃವರ್ಷವ ಸುರಿಸು ನಿನ್ನ ದಯೆಯಿಂದ. ॥೧೩॥

ತಮದಿಂದ ಜ್ಯೋತಿಗೆ
ಮೃತ್ಯುವಿಂದಮೃತಕ್ಕೆ
ಪಾಪದಿಂ ಪುಣ್ಯಕ್ಕೆ– ನಮ್ಮ ನಡೆಸು ;
ಇಬ್ಬಾಗವೊಂದಾಗಿ,
ಲೋಕದಲಿ ಮುಂದಾಗಿ,
ಭಾರತವ ಕಣ್ಣಾಗಿ, ನೀನೆ ನಿಲಿಸು. ॥೧೪॥

* * * *

## ಗಾಂಧೀ ದರ್ಶನ

ಶಾಂತಸಾಮ್ರಾಜ್ಯದ ಮ–
ಹಾಂತ ಸಾಮ್ರಾಟನನು
ಕಂಡೆನಣ್ಣಾ
ಹರ್ಷಗೊಂಡಿಹನ್ನ. ॥೧॥

ನಿಷ್ಕಾಮಕರ್ಮದಲಿ
ಕಾರ್ಯರಂಗಕ್ಕಿಳಿದು
ನಗುತಲಿಹನು
ಜಗದಿ ಮಿಗುತಲಿಹನು. ॥೨॥

ಸತ್ಯಾಗ್ರಹೋಪಲದಿ
ಸರಳಜೀವನದಿಂದ



ಸವೆದ ಮೂರ್ತಿ
ಲೋಕಭರಿತ ಕೀರ್ತಿ ॥೩॥
ತೇದ ಶ್ರೀಚಂದನದ
ತಿರುಳಿಂದ ತಿರುತಿರುಗಿ
ಬರದೆ ಕಂಪು ?
ಕಾರ್ಯಕಿದುವೆ ಪೆಂಪು. ॥೪॥

ವಿಶ್ವಬಾಂಧವ್ಯತೆಯ
ನಿತ್ಯಸಂಬಂಧವನು
ಬೆಳೆಸುವಂದು
ವಂದ್ಯನಾದ ಬಂಧು. ॥೫॥

ಜ್ಞಾನಸಂಪೂರ್ಣತೆಯ
ಧ್ಯಾನಸಂಸಿದ್ಧಿಯಿಂ
ಮೆರೆವ ಯೋಗಿ
ನಿತ್ಯಪೂರ್ಣತ್ಯಾಗಿ. ॥೬॥

ಆತ್ಮಶಕ್ತಿಯ ಬಲದಿ
ಪೂರ್ಣಮುಕ್ತಿಯನಳೆದು
ಶಾಂತನಾದ
ಕರ್ಮಧರ್ಮಯೋಧ. ॥೭॥

ರಾಷ್ಟ್ರಸಂಸ್ಥಾಪನೆಯ
ಸ್ವಾತಂತ್ರ್ಯರಣಭೇರಿ
ಹೊಡೆವನಿವನು
ಸತ್ಯಶಕ್ತನಿಹನು. ॥೮॥

ಸರ್ವಸುಂದರವಾದ
ಜ್ಞಾನಬಂಧುರವಾದ

ಗತಿಯನೊಂದು
ಪಡೆದ ಸ್ಥಿತಿಯಿದಿಂದು. ॥೯॥
ಪತಿತ ಪಾವನ ಶಕ್ತಿ
ಶುದ್ಧ ಸಾತ್ವಿಕಭಕ್ತಿ
ಇರುವುದಿಲ್ಲಿ ;
ದಿವ್ಯಸನ್ನಿಧಿಯಲ್ಲಿ ॥೧೦॥

ಈ ಪೂಜ್ಯಚರಣಗಳ
ಪುಣ್ಯಸ್ಪರ್ಶನದಿಂದ
ಬಂಡೆಯೊಡೆದು
ಹಾಲು ಸುರಿದು ಬಹುದು ॥೧೧॥

ತಮದಿಂದ ಜ್ಯೋತಿಗೆ
ಮೃತ್ಯುವಿಂದಮೃತಕ್ಕೆ
ವಿಶ್ವವನ್ನೆ
ಗಾಂಧೀ ಸಾಗಿಸುವನೆ ? ॥೧೨॥

* * * *

## ಒಂದೇ ಭಾರತ ವಂದೇ

ಬಂಗ್ಲಾ ಭಾರತ ಒಂದೇ !
ನಿತ್ಯ– ನಾವಣ್ಣ ತಮ್ಮಂದಿರೊಂದೆ ;
ಮತ್ತೆ– ನಾವಕ್ಕತಂಗಿಯರೊಂದೆ.
ಸತ್ಯ– ಆದೇಶ ಈ ದೇಶ ಒಂದೆ
ಬಂಗ್ಲಾ– ಭಾರತ ಒಂದೇ !
ಒಂದೇ– ಭಾರತ ವಂದೇ. ॥೧॥

ರಾಷ್ಟ್ರದ ಮೃದುಹೃದಯದಲಿ
ಹಂತ– ಗೆರೆಯೆಳೆದೆರು ನಿರ್ದಯದಲಿ ;



ಅಂದು– ನೆತ್ತರು ನೆಲವೆಲ್ಲಿ ಚೆಲ್ಲಿ,
ಮುಂದೆ– ಕುಣಿಕುಣಿದಳೊ ನವಕಾಳೀ !
ಒಂದೇ ಭಾರತ ವಂದೇ. ॥೨॥

ಸೇನೆಯ ಸಿಡಿಗುಂಡೆ ಮಂತ್ರ
ನೋಡು– ನಡೆದಿದೆ ನರಮೇಧ ತಂತ್ರ
ಹಾಳು– ಕೊಲೆಪಾತಕಿಗಳ ಕುತಂತ್ರ
ಬೇಕು– ಬಂಗ್ಲಾ ಜನಕ್ಕೆ ಸ್ವತಂತ್ರ,
ಒಂದೇ ಭಾರತ ವಂದೇ. ॥೩॥

ಐಕ್ಯ ನಮ್ಮಲ್ಲಿಹುದುದೆಂದು
ನಾವು– ಬೇರಲ್ಲ ನಾವೆಲ್ಲರೊಂದು
ನೋವು– ತಟ್ಟಿತು ನಮಗಿಲ್ಲಿ ನಿಂದು !
ಪಂಥ– ತೊಟ್ಟೆವು ಬಿಡುಗಡೆಗೆಂದು,
ಒಂದೇ ಭಾರತ ವಂದೇ. ॥೪॥

ಹೆಗಲ ನೊಗದ ಪರತಂತ್ರ
ಬೇಡ– ನಮ್ಮ ನಾವಾಳುವ ಯಂತ್ರ
ನೋಡ– ಬಂಗ್ಲಾದೇಶ ಸ್ವತಂತ್ರ,
ಹಾಡ– ಮಂಗಳ ಜೀವನ ಮಂತ್ರ
ಒಂದೇ ಭಾರತ ವಂದೇ. ॥೫॥

* * * *

## ಪುನರ್ನವ

ಎನಿತೊ ಜಡಜನ್ಮಗಳ ಪಾಪಲೇಪವ ಹೊತ್ತು
ಜೀವ ಧಾವಿಸುತ್ತಿತ್ತು.– ಬಿದಿ ಬೆನ್ನುಬಿಡದೆ !
ಮಾತೆ ಭಾರತಿ, ನಿನ್ನ ಪುಣ್ಯಗರ್ಭದೊಳೆನಗೆ
ಮಂಗಳಾಶ್ರಯವಿತ್ತು– ಸೊಗದ ಸೊದೆಯೆರೆದೆ.

ಎಲ್ಲ ದೇವರ ಹರಕೆ ಇಳಿದು ಬಂದಿತು ಶಿರಕೆ
ತಾಯ್ನೆಲದ ಹೊಸಬೆಳಕ ಕಂಡು ದಿನಕೆ
ಪಡೆದ ಪಿರಿಯರ ಬಯಕೆ ಫಲಿಸಿ ಭಾಗ್ಯಂಬೆಳಗೆ,
ಧನ್ಯವಾಯಿತು ಬದುಕೆ– ಮೈಗೆ ಮನಕೆ.

ಪಡೆದನು ಪುನರ್ನವವ ; ನಿನ್ನ ಪಾವನದೊಡಲಿ–
ನಿಂದಿಳಿದ ಬಳಿಕೆನಗೆ ನಿರ್ಭಯಂ ತಾಯೆ !
ಮೃತ್ಪಿಂಡದಲಿ ದಿವ್ಯಮಾನವ್ಯತೆಯ ನವ್ಯ
ಗಂಧಗುಣವನ್ನೆರೆದೆ– ವರದೆ ನೀ ಕಾಯೆ.

ಶತಕ ಶತಕಂ ಸಂದ ಜನುಮ ಜನುಮಗಳಿಂದ
ಬೇಡಿ ಬಂದಿಹ ಭಾಗ್ಯದೊಡಲಿನಿಂದ
ಬಳೆದೆನಿದೊ ಹಿಗ್ಗಿಂದ ನಾ ನಿನ್ನ ಕಿರುಕಂದ
ತಾಯೆ ! ನಿನ್ನೆದೆಯೊಲುಮೆ ಹಾಲಿನಿಂದ.

ಕಣ್ಣ ಕುರುಡನು ಕಳದೆ ಬೆಳಕಿನಂಜನವಿತ್ತು,
ಮೂಡಣ ದಿಗಂತದೊಳುಷಃಕಿರಣ ಕಂಡೆ ;
ಪ್ರಥಮಸೂರ್ಯೋದಯದ ಸ್ವರ್ಣದರ್ಶನವಾಯ್ತು.
ಹೇ ದಯಾಮಯಿ ! ದಯೆಯ ಧಾರಾಳವುಂಡೆ.

* * * *

ಮೈಮರೆತೆನೌ ! ನಿನ್ನ ಮಧುರಕಂಠಧ್ವನಿಗೆ
ಗಾನವಾಣಿಗೆ– ಲೋಕ ಸಂಗೀತಕೆ ;
ಎನ್ನ ಹೃದಯದ ವೀಣೆ ಮಿಡಿದು ನುಡಿಸಿತು ನಾದ
ನಿನ್ನ ಹಾಡಿಗೆ ಹಿಗ್ಗಿ ಸಂಮೇಳಕೆ.

ಅರಿತೆನು ಮೊದಲ್ನುಡಿಯನೊರೆದೆನು ತೊದಲ್ನುಡಿಯ
ನಿನ್ನಿಂದ– ನಿನ್ನ ಸುಖ ಸಂದೇಶದಿಂದ ;
ಕಡಲ ಭೋರ್ಗರೆಯಿಂದ, ಪೊಡವಿ ಮಿಗಮೊರೆಯಿಂದ,
ಖಗ ಕೂಜನಗಳಿಂದ– ಜಗ ಜೀವನದಿಂದ,



ಸರ್ವಸುಖ ಸಂಮೋದದಲಿ, ಜೀವಭಾವದಲಿ,
ಏಕನಾದವೆ ನಿನ್ನ ಕೊರಳ ದನಿಯು ;
ಎನ್ನ ಬದುಕಿನ ಬರಡು ಬಿದಿರಿನೀ ತುಂಡಿನಲಿ
ಹೊನ್ನ ಹಾಡನು ಸುರಿದೆ– ಪರುಷಮಣಿಯೆ !

ಹತ್ತಿರದ ಕುದುರೆಮುಖ ದೂರದ ಹಿಮಾಚಲವು
ಎತ್ತರೆತ್ತರಕೆನ್ನನೇರಿಸುತಿದೆ :
ಎತ್ತಣದು ಸೌಭಾಗ್ಯ ಭರತಪುತ್ರರು ವಿನಾ,
ಮತ್ತಾರಿಗಿಂತು ಪರಮೋನ್ನತಿಯಿದೆ ?

ಶ್ರೀಗೌರಿಶಂಕರದ ಶಿಖರದಾರೋಹಣದಿ
ಮನುಜಜನ್ಮಂ ಧನ್ಯಧನ್ಯಮಲ್ತೆ ?
ಆ ವಿಶ್ವವೈಭವವ ಶಿರದೊಳಾಂತಿಹ ಗುಣದಿ
ಹೇ ವಸುಂಧರೆ ! ನೀನೆ ಮಹಿಮೋನ್ನತೆ !

ಈ ಭೂಮಿ– ಭರತಭೂಮಿಯೆ ಎನ್ನ ತಾಯ್ನಾಡು,
ಮಮಮಾತೆ ಘನವಂತೆ– ಪುಣ್ಯಭರಿತೆ ;
ಹಿರಿಮೆಯೆನ್ನಯ ಹುಟ್ಟು ; ಬಿದಿಯನ್ನೆ ಬಡಿದಟ್ಟು–
ವೆನು, ಏಕೆ ಮರುಹುಟ್ಟು ? ಮುಕ್ತಿದಾತೆ.

* * * *

ಹೇ ಪಯಸ್ವಿನಿ ! ನಿನ್ನ ತೊರೆಯ ಮೊಲೆ ಹಾಲುಂಡು
ನೆಲವೆಲ್ಲ ತಣಿತಣಿಯೆ, ಜೀವ ಜೀವಿಸಿತು ;
ನೇತ್ರಾವತಿಯ ಜಲತರಂಗಲಾಸ್ಯವ ಕಂಡು,
ಪಡುಗಡಲೆ ಕುಣಿಕುಣಿಯೆ– ಪೃಥ್ವಿ ನರ್ತಿಸಿತು.

ಮುಟ್ಟಿದರೆ ಪಾಪವನು ಮುಳುಗಿದರೆ ಜನ್ಮವನು
ಬಿಡಿಸಿ ಬೆಳಗುವ ಜಮುನೆ ಜಾಹ್ನವಿಗಳು ;
ಇಷ್ಟಲ್ಲದೆಲ್ಲ ನೆಲವನು ತಣಿಸಿ ತಂಪೀವ
ಎಷ್ಟೊ ಹೊಳೆ ಹೊಳೆಯುತಿಹುದೀ ನಾಡೊಳು.

ಭರತಭೂಮಿಯ ಪಾದ ತೊಳೆವ ಕಡಲಿನ ತೆರೆಯ
ಭರತಿ ಭಾಗ್ಯವೆ ಪಿರಿದು ನೀನೆ ಜಗದಂಬೆ,
ಸುವಿಶಾಲಸಾಗರದ ರುಂದ್ರಗಂಭೀರತೆಯ
ಆಳದಂತೆನ್ನ ಬಾಳುವೆ ಬೆಳಗಲೆಂಬೆ.

ಇಂದ್ರಾಗ್ನಿವರುಣ ಪೂಷಣರೆಲ್ಲರನು ಬರಿಸಿ
ಸೋಮರಸವೆರೆದ ವೇದರ್ಷಿಗಳ ಜನನಿ ;
ರಾಮಾಯಣದ ಮಹಾಭಾರತದ ಭವ್ಯೇತಿ–
ಹಾಸಪುಳಕಿತಗಾತ್ರೆ ಧೀರಧರಣಿ.

ಪಂಚಾಗ್ನಿಮಧ್ಯದಲಿ ತಪವ ಸಾಧಿಸಿದವರು,
ಶರಧಿಯಂ ಧೀಂಕಿಟ್ಟ ಶೂರಸುತರು ;
ಸುಡುವ ಪತಿಯ ಚಿತಾಗ್ನಿಗೊಡಲನೊಪ್ಪಿಸಿದವರು,
ನಿನ್ನ ಮಕ್ಕಳು– ಸತ್ತು ಸಾಯದವರು.

ಶ್ರೀ ರಾಮ ಶ್ರೀಕೃಷ್ಣ ಬುದ್ಧ ಮಧ್ವಂ ಬಸವ
ಜಿನ ಶಂಕರಂ ಗಾಂಧಿ ಘೋಷ ಪಂಕ್ತಿ ;
ಆ ಹಿರಿಮೆ ಆ ಗರಿಮೆ ಆ ಮೈಮೆ ಆ ಗೈಮೆ
ಹಿಡಿಮಣ್ಣ ಹುಡಿಯಲ್ಲಿ ಸ್ವರ್ಣಕಾಂತಿ.

ಇದೆ ಪರಂಪರೆಯೆನಗೆ ಮೇಣೆನ್ನ ಸಂತತಿಗೆ
ಇದೆ ಭಾರತದಿ ಪುಟ್ಟಿಬಂದ ಭಾಗ್ಯಂ ;
ಇದರಿಂದಲೊದವಿದೆನ್ನಯ ಹೃದಯಸಂಸ್ಫೂರ್ತಿ
ಅದೆ ಜೀವನಜ್ಯೋತಿ– ಸಂದ ಸೌಖ್ಯಂ.

* * * *

ನಾನು ಮಣ್ಣಿನಮಗನು– ಮಂದಾರಮಾಲೆಯೆನೆ
ನೊಗನೇಗಿಲು ಹೊತ್ತು ತಿರುಗುವವನು ;
ಹೊಲನೆಲವನುಳುವವನು– ಕೆಸರಿನಲಿ ಕಸದಲ್ಲಿ
ಗೊಬ್ಬರದ ಗುಂಡಿಯಲಿ ದುಡಿಯುವವನು.



ಇದೆ ಸೌಖ್ಯವೆನಗೆ ಭಾರತದಿ ಪಡೆದಿಹ ಜನ್ಮ–
ಕಿದೆ ಭಾಗ್ಯವೀಪುಣ್ಯ ಯಾರಿಗುಂಟು ?
ಹಸಿದ ಹೊಟ್ಟೆಗೆ ಮುಷ್ಠಿ ಹಸುಗೆಯನ್ನವನೀವ
ದುಡಿತದೊಳೆ ದೇವರೊಡನೆನಗೆ ನಂಟು.

ಕೈಲಾಸವೇರುವುದು, ವೈಕುಂಠ ಸೇರುವುದು,
ತಾಯ್ನಾಡ ಮಣ್ಣಿನಿಂ ಬೇರೆಯೇನು ?
ನಾನೊಲ್ಲೆ ಮೋಕ್ಷವಂ– ನಾಬಲ್ಲೆ ದೀಕ್ಷೆಯಂ,
ಹುಟ್ಟೂರ ದೂಳು ಹುಡಿಯೊಳೆ ಬೆರೆವೆನು.

ಇದು ಪಾವನಂ; ಧರಣಿ ಜನನಿ ಚರಣಸ್ಪರ್ಶ,
ಧೂಳಿ ಗಂಧಪ್ರಸಾದ ಮುಕ್ತಿಮಾರ್ಗಂ
ತಾಯ್ನೆಲದ ಕೆಸರನೀರ್ ಮಂದಾಕಿನೀತೀರ್ಥ,
ಹುಲ್ಲೆ ರೋಮಾಂಚ, ಬದುಕೆಲ್ಲ ಬಂಗಾರಂ.

ಏನ್ನೊಡಲ ಕರುಳ ಕುಂಕುಮವ ತೆಗೆದೊಪ್ಪಿಸುವೆ,
ಹೆರೆಹಣೆಗೆ ಬೊಟ್ಟಿಟ್ಟು ಮೆರೆಯೆ ತಾಯೆ !
ನಿನ್ನ ಸಿರಿಮೊಗದ ಮಾಂಗಲ್ಯ ಭಾಗ್ಯಂ ಬೆಳಗೆ
ಸವೆಸವಯಲೀದೇಹ ! ಸಾವನರಿಯೆ

ಸಸ್ಯಶ್ಯಾಮಲೆ ದೇವಿ, ಹರಸೆನ್ನ ನೀನೊಪಿ,
ಮರುಹುಟ್ಟು ಬಂದರೂ ನಿನ್ನುದರದಿ ;
ಇದೆ ದುಡಿತವೆನಗಿರಲಿ– ನೇಗಿಲಿನ ಹಿಡಿತದಲಿ
ಬಲಗೊಟ್ಟು ಬದುಕಿಸೈ, ನೀನೆ ದಯದಿ.

* * * *

## ಈ ಕನಸು

ದಾರಿದ್ರ್ಯ ದಾಸತ್ವ
ದೌರ್ಬಲ್ಯಗಳ ದೂಡಿ
ಪೂರ್ಣಮಾನವರಾಗಿ ಬಾಳಬೇಕು ;
ಸ್ವಾತಂತ್ರ್ಯ ಸಮಭಾವ
ಸೌಹಾರ್ದಗಳು ಕೂಡಿ
ರಾಷ್ಟ್ರಜೀವನವರಳಿ ತೋರಬೇಕು. ॥೧॥

ಸಾಗರದ ಗಾಂಭೀರ್ಯ
ಹೃದಯದಾಳದಿ ತುಂಬಿ
ಪ್ರೇಮಮಯ ಜೀವರಸ ತುಳುಕಬೇಕು ;
ಹಿಮವಂತನೌನ್ನತ್ಯ
ಘನತೆ ಜನತೆಯೊಳಿದ್ದು
ಶಿರವೆತ್ತಿ ಲೋಕದಲಿ ಚರಿಸಬೇಕು. ॥೨॥

ಹೃದಯಕ್ಷೀರೋದಧಿಯು
ಪ್ರೇಮಸುಧೆ ಸುರಿಸುತಿರೆ,
ದ್ವೇಷವಿಷಜನಮನದ ದಹಿಸದಿರಲಿ ;
ಜ್ಞಾನಮಂದಾಕಿನಿಯ
ನಿರ್ಮಲೋದಕ ಒಸರೆ
ಕಾಪಟ್ಯಕಲ್ಮಶಂ ಕಿಡಿಸದಿರಲೆ ! ॥೩॥

ಮನುಜ ಹೃದಯದ ದಿವ್ಯ
ಪ್ರೇಮಮಯ ದೇಗುಲವ
ವಿಶ್ವಾಸಕಲಶ ಬೆಳಬೆಳಗಿಸಿರಲಿ ;
ಕರುಣಾಮಯಂ ಕಿರಣ
ಸತ್ಯಸೂರ್ಯೋದಯವ
ಸೇರಿ ಚಿತ್ರಪ್ರಭೆ ಸುತ್ತು ಚೆಲ್ಲುತಿರಲಿ. ॥೪॥



ಸ್ವರ್ಗಗಂಗೆಯನಂದು
ಮರ್ತ್ಯಲೋಕಕೆ ತಂದು,
ಆ ಭಗೀರಥನೆನಿತು ಪಿರಿಯಾನಂದಂ ;
ಪತಿತಲೋಕವನಿಂತು
ನಾಕಕೇರಿಸೆ ಬಂತು
ಸ್ವಾರಾಜ್ಯ ಭಾರತಕೆ ವರಪ್ರಸಾದಂ. ॥೫॥

ಈ ಕನಸು ಹೊಸತಿಲ್ಲ
ಕವಿಯ ಕಲ್ಪನೆಯಲ್ಲ,
ಇದೆ ನಿಜದೆ ಸ್ವಾತಂತ್ರ್ಯವೆಂಬೆ ನಾನು ;
ಗುಂಡೆದೆಗೆ ಹೊಡೆದರೂ
ಶಿಲುಬೆಯಲಿ ಜಡಿದರೂ
ಪ್ರೇಮವಾಣಿಯೊಳೊರೆದರೆಲ್ಲರಿದನು. ॥೬॥

* * * *

## ರಾಷ್ಟ್ರನಟ

ದಾಸ್ಯದಾನವನ್ನು
ತುಳಿದು ತೊತ್ತಳತುಳಿದು
ರಾಷ್ಟ್ರನಟ ಮೈಮರೆದು ನರ್ತಿಸುವನು !
ಅಡಿಮೆಗೆಡೆಕೊಡೆನೆಂದು,
ಬಿಡುಗಡೆಯ ಬಿಡೆನೆಂದು,
ಝುಣರುಗೆಜ್ಜೆಯ ದನಿಗೆ ಕುಣಿಯುತಿಹನು ॥೧॥

ಈ ತುಳಿತವೀಕುಣಿತ
ಈ ಮತ್ತನೃತ್ಯವನು,
ಕಂಡ ಕವಿ ಮೌನವಂ ಮುರಿದೆದ್ದನು !
ಇದು ನವೋದಯವೇನು?

ಬಿಡುಗಡೆಯ ಬೆಲೆಯೇನು ?
ರುದ್ರತಾಂಡವನೃತ್ಯ ಮೆಚ್ಚದಿಹನು. ॥೨॥

ಕೆರಳು ಕಲ್ಪನೆಗಳನು
ಮರುಳು ಜಲ್ಪನೆಗಳುನು
ಸ್ವಾತಂತ್ರ್ಯಸುಖವೆಂದು ತಿಳಿಯಲುಂಟೆ ?
ಬಿಳಿಜನರ ಪೀಠದಲಿ
ಕರಿಜನರು ಕುಳಿತಲ್ಲಿ
ಬಿಡುಗಡೆಯು ಬಂತೆಂದು ಹಿಗ್ಗಲುಂಟೆ ? ॥೩॥

ಅಧಿಕಾರ ಮದಗಜದ
ಬೆನ್ನೇರಿ ಬರುತಿರುವ
ಸ್ವಾರ್ಥಬೇತಾಳನನು ಸಹಿಸಲುಂಟೆ ?
ಸ್ವಾತಂತ್ರ್ಯ ಸುಂದರಂ,
ಬಂದಿಹುದೆ ಭೈರವಂ ?
ಹೋರಾಟ ಕೊನೆವರೆಗು ಮುಗಿಯಲುಂಟೆ ? ॥೪॥

* * * *

## ಬಿಡುಗಡೆಯು ಬಂತು

ಸ್ವಾತಂತ್ರ್ಯ– ಭಾರತಕೆ ಬಂತು ಬಂತು ;
ಬೇಕು ಬೇಕೆಂದ– ಬಿಡುಗಡೆಯು ಬಂತು

ಅನ್ಯರ ವಿಭುತ್ವಗಳ,
ಅನ್ಯಾಯ ಮೋಸಗಳ,
ನಿರ್ನಾಮಗೊಳಿಸಿ– ಸ್ವಾತಂತ್ರ್ಯ ಬಂತು
ದಾಸ್ಯದಾರಿದ್ರ್ಯಗಳ,
ಹಾಸ್ಯದೌರ್ಬಲ್ಯಗಳ,



ಮುರಿವ ಭರವಸೆಯ– ಬಿಡುಗಡೆಯು ಬಂತು.
ಎರಡು ಶತಮಾನದಲಿ,
ಬರಡಾದ ಭೂಮಿಯಲಿ,
ಸಾರಿವ ರಸಗಂಗೆ –ಸ್ವಾತಂತ್ರ್ಯ ಬಂತು
ಇನ್ನೆಂದಿಗೆಂದಿಗೂ
ಯುಗಯುಗಗಳಂದಿಗೂ,
ಅಡಿಮೆಯಿಲ್ಲೆಂಬ– ಬಿಡುಗಡೆಯು ಬಂತು. ॥೨॥

ನಮ್ಮದೀ ನಾಡೆಂಬ,
ನಾವೆ ನಾಡವರೆಂಬ,
ಹೆಮ್ಮೆ ಹೆಚ್ಚಿಸುವ –ಸ್ವಾತಂತ್ರ್ಯ ಬಂತು.
ತಗ್ಗಿಸದೆ ತಲೆಯನ್ನು,
ಬಗ್ಗಿಸದೆ ಬೆನ್ನನ್ನು,
ಹಿಗ್ಗಿ ಮುನ್ನಡೆವ –ಬಿಡುಗಡೆಯು ಬಂತು. ॥೩॥

ಗಾಂಧೀಜಿ ಒಳಗಿದ್ದು,
ನೇತಾಜಿ ಹೊರಬಿದ್ದು,
ಕ್ರಾಂತಿ ಕೆರಳಿಸಿದ –ಸ್ವಾತಂತ್ರ್ಯ ಬಂತು.
ಕೋಟಿ ಕಂಠಗಳಿಂದ,
'ತೊಲಗಿ ಭಾರತದಿಂದ'–
ಉದ್ಘೋಷಗೈದ –ಬಿಡುಗಡೆಯು ಬಂತು. ॥೪॥

ಹಿಂದು ಮುಸ್ಲಿಮ ಕ್ರಿಸ್ತ,
ಸಿಕ್ಖ ಪಾರ್ಸಿ ಸಮಸ್ತ,
ಒಂದಾಗಿ ಪಡೆದ –ಸ್ವಾತಂತ್ರ್ಯ ಬಂತು.

ಅಬಾಲ ವೃದ್ಧರು
ಮಹಿಳೆಯರು ಶುದ್ಧರು,
ಬಲಿದಾನವಿತ್ತ –ಬಿಡುಗಡೆಯು ಬಂತು. ॥೪॥

ಲಾಠಿ ಪನ್ನೀರೆಂದ,
ಸಿಡಿಗುಂಡೆ ಹೂವೆಂದ,
ಸತ್ಯಾಗ್ರಹಿಗಳ –ಸ್ವಾತಂತ್ರ್ಯ ಬಂತು.
ನಿರ್ಮಲದ ಹೃದಯದಲಿ
ನಿರ್ಮಲದ ಕದನದಲಿ,
ನಿರ್ಮಲದಿ ಪಡೆದ –ಬಿಡುಗಡೆಯು ಬಂತು. ॥೬॥

ವಿಷಮತೆಯ ವಿಷವಿರದ,
ಸಮತೆಯ ಸುಧಾರಸದ,
ಕನಸು ನೆನಸೆನಿಸುವ –ಸ್ವಾತಂತ್ರ್ಯ ಬಂತು.
ಬಿಸಿರಕುತ ಮಸಿಯಲ್ಲಿ,
ಮೃದುಹೃದಯತಲದಲ್ಲಿ,
ಕವಿ ಬರೆದ ಕಾವ್ಯ –ಬಿಡುಗಡೆಯು ಬಂತು. ॥೭॥

* * * *

## ಎಚ್ಚರೆಚ್ಚರ ಗೆಳೆಯ

ಸ್ವಾರ್ಥವಿಷಮಯಸರ್ಪ
ಜಾತಿ ಹೆಡೆಯನ್ನೆತ್ತಿ,
ಬಿಚ್ಚಿ ಬುಸುಗುಟ್ಟುತಿದೆ ಕಚ್ಚುತಿದೆ ನೋಡ ;
ಕಚ್ಚುತಿದೆ ಮೈ ಮನವ
ರಾಷ್ಟ್ರಪುರಷನ ಸುತ್ತಿ,
ಎಚ್ಚರೆಚ್ಚರ ಗೆಳೆಯ ಬಲಿಬೀಳಬೇಡ. ॥೧॥

ಹಿಂದೆ ನಾವ್ ಸ್ವಾತಂತ್ರ್ಯ
ತಂದ ಹೋರಾಟದಲ್ಲಿ,
ಯಜ್ಞಕುಂಡದ ಬಲಿಗು ಒಂದಾದೆವು :



ಒಂದಾಗಿ– ನಾವೆಲ್ಲ
ಮುಂದಾಗಿ, ಬಲಿದಾನ–
ದಿಂದಾಗಿ, ಬಿಡುಗಡೆಯ ಬೆಲೆ ಪಡೆದವು. ॥೨॥

ಇಂದು, ಬಿಡುಗಡೆ ಬಂದ
ಸುಂದರ ಮುಹೂರ್ತದಲಿ,
ಸೋದರರು ಸೋದರರು ಬೇರಾದೆವೆ ?
ಒಂದಲ್ಲ ನಾವೆಂದು
ಹಿಂದು ಮುಸ್ಲಿಮರೆಂದು,
ಮಾತೃಭೂಮಿ ಸಿಗಿದು ದೂರಾದೆವೆ ? ॥೩॥

ರಾಷ್ಟ್ರದೇಹವೆ ಸೀಳೂ !
ಹೇಳಲೇನಾ ಗೋಳು ?
ರಾಷ್ಟ್ರ ಪುರುಷನ ಬಾಳು ಹೋಳು ಹೋಳು ;
ತಾಯ್ನೆಲವೆ ಮೊರೆಯಿಟ್ಟು,
ಬಾಂದಳವೆ ಬಾಯ್ಬಿಟ್ಟು,
ರೋದೋಂತ ರೋದಿಸಿತು ! ಹಾಳು ಹಾಳು. ॥೪॥

ವಿಧವೆಯರ ಕಂಬನಿಯ,
ಹಸುಗಳೆಗಳ ಚೀರ್ದನಿಯ,
ತಾಯಿಮಕ್ಕಳ ಕೂಗ ಕೇಳು ಕೇಳು :
ಮನೆಯಿಲ್ಲ, ಮಠವಿಲ್ಲ,
ಹೊಲವಿಲ್ಲ, ನೆಲವಿಲ್ಲ !
ಬೆಂದೊಡಲ ಬೇಗೆಯನು ತಾಳು ತಾಳು. ॥೫॥

ಪಡಬಾರದೀ ಬನ್ನ
ಪಟ್ಟರಿವರೇ ಕಣ್ಣ?
ತುಂಡಾದ ಭಾರತದಿ ತಂಡವಾಯ್ತೊ :
ಧರ್ಮಪುರುಷಂ ರಾಷ್ಟ್ರ–

ಪಿತ ಗಾಂಧಿ 'ಮಾ'ಯೆಂದ,
ಪ್ರೇಮಕ್ಕೆ ವಿದ್ವೇಷ ಗುಂಡಿಕ್ಕಿತೊ ! ॥೬॥

ಒಂದಲ್ಲ ನಾವೆಂದು,
ಹಿಂದು ಮುಸ್ಲಿಮರೆಂದು,
ಹಟಹಿಡಿದ ರಕ್ಕಸರ ಹಸಿವಡಗಿತೆ ?
ಕಳುವು, ಸುಲಿಗೆಯು, ಕೊಲೆಯು,
ಪಾತಕವು, ಧರ್ಮವೇ ?
ಜಾತಿಪ್ರೀತಿಯೆ ? ಸ್ವಾರ್ಥತೃಷೆ ಹೆಚ್ಚಿತೆ ? ॥೭॥

ಮರದ ಕೇಡೇ ಮರವ
ಕೊರೆವಂತೆ, ಕೊಲುವಂತೆ,
ರಾಷ್ಟ್ರಘಾತಕೆ ದ್ವೇಷಕೃಷಿಯೆ ಬೇಕು ;
ಮನುಕುಲ ಸಂತತಿಯ
ಮನವರಳಿ ನಿಲ್ಲದಿರೆ,
ಸ್ವಾತಂತ್ರ್ಯನಾಶಕ್ಕೆ ಸ್ವಾರ್ಥ ಸಾಕು. ॥೮॥

ಕುರುಡರಾ ತಂಡವನು,
ಹಿರಿಕುರುಡ ಮುನ್ನಡೆಸೆ,
ಬರಡು ಬಾವಿಗೆ ಬೀಳ್ವ ತೆರದಿ ಕೆಲರು,
ಜಾತಿಪ್ರೀತಿಯ ತೋರಿ,
ಮತದ ಮರುಳನು ಬೀರಿ,
ಅಜ್ಞರನಧೋಗತಿಗೆ ದೂಡುತಿಹರು. ॥೯॥

ಅಜ್ಞಾನ, ದಾರಿದ್ರ್ಯ,
ಸ್ವಾರ್ಥ, ಮನ ಮುಚ್ಚಿರಲು,
ಹಿಂದು ಹಿಂದಕೆ ನಮ್ಮ ಜಗ್ಗುತಿಹುದು ;
ವಿಜ್ಞಾನ ಸಂಪತ್ತು,
ಸಮಭಾವ ಹೆಚ್ಚಿಸಲು,
ಮುಂದುಮುಂದಕೆ ರಾಷ್ಟ್ರ ನುಗ್ಗಲಿಹುದು. ॥೧೦॥



## ಹರಕೆ

ಸ್ವಾತಂತ್ರ್ಯ ವೃಂದಾನವದೊಳೆಸೆವ ಸಸಿತುಳಸಿ–
ಯಾಗಿ ನಾ ದೇವಪೂಜೆಯ ಬಯಸಲೊಲ್ಲೆ ;
ತಾಯ್ನಾಡತೋಟದಲಿ ಹೂಚಿಗುರು ಹೆಚ್ಚಿಸುವ
ಗೊಬ್ಬರದ ಪುಡಿಯಾದರೆದೆ ಭಾಗ್ಯಬಲ್ಲೆ ! ॥೧॥

ಸ್ವಾತಂತ್ರ್ಯನಂದನದ ವರಕಲ್ಪತರುವಾಗಿ,
ಅಜರಾಮರರನುಣಿಸಿ ತಣಿಸಲೆಳಸೆ,
ಎನ್ನ ತಾಯ್ನೆಲದ ಒಡವನ ಗಂಟಲಾರುತಿರೆ
ಗಂಜಿತಿಳಿಯಾಗುವೀ ಭಾಗ್ಯದಾಸೆ. ॥೨॥

ಸ್ವಾತಂತ್ರ್ಯ ಮಧುಪಾನಮುದಿತ ಷಟ್ಪದನೆನಿಸಿ,
ಝೇಂಕೃತಿಯಹಂಕೃತಿಯು ಸೋಂಕದಿರಲಿ;
ತಾಯ್ನೆಲವ ಮುತ್ತಿಡುವ ಕಟ್ಟಿರುವೆ ಸಾಲಾಗಿ
ನೀರವಂ ಜೀವನಂ ಸಾಗುತಿರಲಿ ! ॥೩॥

ಯಾರಿಗೂ ಪಾಲಿಡದ, ಯಾರನೂ ತಿನಬಿಡದ,
ಧನಕನಕರತ್ನರಾಶಿಯು ರಾಜ್ಯಬಯಸೆ ;
ಎನ್ನ ತಾಯ್ನಾಡ ಸೋದರನ ದೀನಾನನದ
ಕಣ್ಣೀರ ಕಳೆಯಬಲ್ಲೆನೆ? ತೀರ್ಥವೊರಸೆ ! ॥೪॥

ಬುದ್ಧಿಯಲಿ, ಸಂಪತ್ಸಮೃದ್ಧಿಯಲಿ, ವೃದ್ಧಿಯಲಿ,
ಶುದ್ಧಮಾನವನೆಂಬ ಜನ್ಮ ಬೇಡ ;
ಬಿಡುಗಡೆಯ ದಾರಿಯಲಿ ಬಿದ್ದ ಕೊಳೆಕೆಸರನ್ನೆ
ಹೆಕ್ಕುವಾ ಹಕ್ಕೆನೆಗೆ ಪುಣ್ಯ ನೋಡ ! ॥೫॥

ಎಲ್ಲಿಯೋ, ವೈಕುಂಠದಲ್ಲಿಯೊ ಜನಿಸಿದರು,
ದೇವತ್ವ ದೊರಕಿದರು ಬಯಸಲಾರೆ ;

ಇಲ್ಲಿಯೆ ತಾಯ್ನಾಡಿನಲ್ಲಿಯೇ ಹುಟ್ಟುಪೆನು,
ಕ್ರಿಮಿಕೀಟವಾದರೂ ಕೊರಗುದೋರೆ ! ॥೬॥

ಸ್ವಾತಂತ್ರ್ಯಸ್ವರ್ಗಸೋಪಾನ ಸಾವಿರವೇರಿ,
ಸೌಖ್ಯನಂದನ ವಿಹಾರದೊಳಿಷ್ಟವಿಲ್ಲ ;
ತಾಯ್ನೆಲದ ಗದ್ದೆಕೆಸರಿನ ತೀರ್ಥದೊಳೆ ಮಿಂದು,
ಪುಣ್ಯಪುಳಕಿತನಪ್ಪೆ ನಷ್ಟವಿಲ್ಲ ! ॥೭॥

ಸ್ವಾತಂತ್ರ್ಯ ಸಾಮ್ರಾಜ್ಯಸಾರ್ವಭೌಮತೆ ಪಡೆದು,
ಅಧಿಕಾರ ತಾಂಡವಂ ನೆನೆಯಲೊಲ್ಲೆ ;
ತಾಯ್ನಾಡ ಹಿಡಿಮಣ್ಣ ಸ್ವರ್ಣಪರ್ವತವಾಗಿ
ಗೈವ ಬಲ ಬೇಕೆನಗೆ– ದುಡಿತದಲ್ಲೆ ! ॥೮॥

ಸ್ವಾತಂತ್ರ್ಯಹಿಮಗಿರಿಯ ಗೌರಿಶಂಕರವೇರಿ,
ಲೋಕನಾಕವ ಬೆರಗುಗೊಳಿಸಲೆಳಸೆ ;
ಬಿಡುಗಡೆಯ ತಗ್ಗುಗದ್ದೆಯ ಹುಣಿಯ ಹುಲ್ಲಾಗಿ
ಗೋವುಮೇವಿನ ಬದುಕಿಗೊದಗುವಾಸೆ. ॥೯॥

ಸ್ವಾತಂತ್ರ್ಯಲೋಕಸಂಚಾರಿ, ವಾಯುವಿಷಾರಿ,
ಪುಷ್ಪಕವಿಮಾನಯಾನದೊಳಾಸೆಯಿಲ್ಲ ;
ಧರಣಿಜನನಿಯ ಪುಣ್ಯಪಾದಧೂಳಿಯ ಹೊರುವ
ತಿರುಕನೆನ್ನಯ ಭಾಗ್ಯ ಯಾರು ಬಲ್ಲ ? ॥೧೦॥

ಸ್ವಾತಂತ್ರ್ಯಧರಣಿಭಾರವ ಹೊತ್ತ ಶೇಷನೆನೆ
ಗರ್ವಾಂಧಕಾರ ಮನ ಮುಸುಕದಿರಲಿ ;
ಬಿಡುಗಡೆಯ ಬಂಡಿಯೆಳೆಯುವ ಹುರಿಯ ಹಗ್ಗದಲಿ
ಕಿರುಕಣ್ಣಿಯೆನಿಸುವೆನು ಪುಣ್ಯವಿರಲಿ ! ॥೧೧॥



ಕಾಶಿಯೋ, ರಾಮೇಶ್ವರವೊ, ಗಂಗೆ ತುಂಗೆಯೋ,
ತೀರ್ಥಯಾತ್ರಾಟನದ ಪುಣ್ಯವೊಲ್ಲೆ ;
ತಾಯ್ನೆಲದ ಹೊಲದ ನೇಗಿಲಕುಳದ ಹಾದಿಯಲಿ
ಕೆಸರಿನೊಳೆ ಕುಸಿಯುವೆನು ; ಧನ್ಯನಲ್ಲೆ ! ॥೧೨॥

ಸ್ವಾತಂತ್ರ್ಯಗಗನದಲಿ ರವಿಚಂದ್ರತಾರಾಳಿ
ಜ್ವಲಿಸುವಂತಿರೆ ಬೆಳಗಲಾಸೆಯಿಲ್ಲ ;
ಮಾತೃಭೂಮಿ ದುಃಖಗಾಢಾಂಧಗಾರದಲಿ
ಮಿಂಚುಹುಳುವಾಗಿ ಮಿನುಗಿರ್ಪೆನಲ್ಲ. ॥೧೩॥

ಸ್ವಾತಂತ್ರ್ಯಸಾಗರತಿಮಿಂಗಿಳಂ ತಾನಾಗಿ,
ಸುಖಸಂಕುಲದ ಗಿಳಂಕರಿಸಲೆಳಸೆ ;
ಬಿಡುಗಡೆಯ ತೊರೆಕೆರೆಯ ಹಸಿರುಹಾವಸೆಯಾಗಿ
ಹರಿಹರಿದು ಹೋದರೂ ನೋವನೆಣಿಸೆ ! ॥೧೪॥

ವೇದಶಾಸ್ತ್ರಪುರಾಣಕಾವ್ಯೇತಿಹಾಸಗಳ
ಜೀರ್ಣಿಸಿದ ಪೂರ್ಣಿಸಿದ ಪಾಂಡಿತ್ಯ ಬೇಡೆ ;
ಎನ್ನ ತಾಯ್ನಾಡ ನಿರ್ಭಾಗ್ಯ ಸೋದರನೊಡನೆ
ನಲ್ವಾತನಾಡುವೆನು– ನಿತ್ಯ ನೋಡ. ॥೧೫॥

ವ್ಯಾಸ ವಾಲ್ಮೀಕಿ ಹೋಮರ ಡಾಂಟೆ ಪಂಪರೊಲು
ಕಾವ್ಯಸಾಮ್ರಾಜ್ಯದೊಡೆತನ ಬಯಸೆನು ;
ಶುಕವಾಗಿ, ಪಿಕವಾಗಿ, ಕಿರುದುಂಬಿ ಮರಿಯಾಗಿ,
ತಾಯ್ನೆಲವ ನಂತಿಪೆ ದಿನದಿನ ದಣಿಯೆನು. ॥೧೬॥

ವಿಶ್ವವಿಶದಚರಿತ್ರಗ್ರಂಥಸಂವುಟದಲ್ಲಿ
ಸ್ವರ್ಣವರ್ಣದಿ ನಾಮದುಲ್ಲೇಖವೊಲ್ಲೆ ;
ತಾಯ್ನಾಡ ನೆಲದಲ್ಲಿ, ಹಿಡಿಮಣ್ಣ ಹುಡಿಯಲ್ಲಿ
ಬೆರೆವ ಭಾಗ್ಯವೆ ಸಾಕು– ಸಾಯುಜ್ಯವಲ್ಲೆ. ॥೧೭॥

ಸ್ವಾತಂತ್ರ್ಯಸುಧೆಯ ಪಾನದೊಳಮರರಾಗಿರಲಿ,
ಸೋದರರು ಸರ್ವರೂ ಸೌಖ್ಯವಿರಲಿ ;
ಅಮೃತಮಥನದಿ ವಿಷವ ನುಂಗಿದ ಮಹಾತ್ಮನಾ
ಚರಣಧೂಳಿಗಳೆನ್ನ ಶಿರದೊಳಿರಲಿ. ॥೧೮॥

* * * *

## ರಕ್ತಮಸಿ

ಎನ್ನೆದೆಯ ಬಿಸಿರಕ್ತ
ಕುದಿಕುದಿಸಿ, ಮಸಿಮಾಡಿ,
ನಾಂ ಬರೆಯಬಲ್ಲೆನೆ ?– ನಾನು ಕವಿಯು;
ವಿಶ್ವಜನನಿಯ ಗರ್ಭ,
ಮಾತೃಭೂಮಿಯ ಬಸಿರು
ತಾಂ ತಪಿಸುತಿದೆ ! ಪೇಳಲಾವ ಪರಿಯು ? ॥೧॥

ಜಗದ ನಾಯಕರೆನಿಸಿ,
ಜನರ ನಾಯಕರೆನಿಸಿ,
ಸಾಮ್ರಾಜ್ಯ ಸರ್ವಾಧಿಕಾರಿಗಳ ಬಯಸಿ,
ಬಡತಾಯಿ ಮಕ್ಕಳನು,
ಬಲಿಕೊಡುವ ಮೂರ್ಖರನು,
ಇರಿವ ಲೇಖನಿ ಬೇಕು –ರಕ್ತವದಕೆ ಮಸಿ ! ॥೨॥

ದುರ್ಬಲರ ಮರ್ದಿಸುತ,
ಪಶುಬಲದಿ ವರ್ಧಿಸುತ,
ರಾಷ್ಟ್ರರಾಷ್ಟ್ರಗಳ ಸ್ವಾತಂತ್ರ್ಯ ಸೆಳೆಯುತ್ತ,
ಸುಲಿಗೆ ಸಂಸ್ಕೃತಿಯೆಂದು
ತಿಳಿದಿರುವ ಪಾಪಿಗಳ
ಮುರಿವ ಲೇಖನಿ ಬೇಕು– ರಕ್ತವದಕೆ ಮಸಿ. ॥೩॥



ಸ್ವಾತಂತ್ರ್ಯ ಸ್ವಾತಂತ್ರ್ಯ
ಸ್ವಾತಂತ್ರ್ಯ ಸ್ವಾತಂತ್ರ್ಯ
ಮೂರಕ್ಷರದೊಳೇನು ಮಾಟವಿಹುದೊ ?
ಸ್ವಾತಂತ್ರ್ಯ ಯಜ್ಞದಲಿ
ಬಲಿಗೊಂಡ ಬಂಧುಗಳ
ನುತಿಪ ಲೇಖನಿ ಬೇಕು ರಕ್ತವದಕೆ ಮಸಿ. ॥೪॥

ಪರತಂತ್ರ ರಾಷ್ಟ್ರದಲಿ
ಮಾತೃಭೂಮಿಯ ಸೇವೆ
ಮಾಡಿ 'ಮಹಾಪಾಪ'ಕಾಗಿ– ಶಿಲುಬೆ,
ಏರಿದ ಹುತಾತ್ಮರಾ
ನೆನಪುಕಿಡಿ ಸಿಡಿಯಲ್ಕೆ
ಕುದಿವ ಲೇಖನಿ ಬೇಕು –ರಕ್ತವದಕೆ ಮಸಿ. ॥೫॥

ಲಾಠಿ ಪನ್ನೀರೆಂದು,
ಸಿಡಿಗುಂಡೆ ಹೂವೆಂದು,
ಸೆರೆಮನೆಯೆ ಸ್ವರ್ಗಸುಖವೆಂದು ಬಗೆದ ;
ಭಾರತದ ವೀರ ಸ–
ತ್ಯಾಗ್ರಹಿಗಳಿತಿಹಾಸ
ಬರೆವ ಲೇಖನಿ ಬೇಕು– ರಕ್ತವದಕೆ ಮಸಿ. ॥೬॥

ಶ್ರಮಜೀವಿಗಳ, ಬೆವರು
ಕಂಬನಿ ರಕುತಗಳಲಿ
ತೊಯ್ದು ಸಂಪತ್ತಿನ ಸುಖೋಪಭೋಗದಲಿ ;
ಮೆರೆಯುವ ಮದಾಂಧರನು
ಲೋಕಕಂಟಕರನ್ನು
ತಿವಿವ ಲೇಖನಿ ಬೇಕು ರಕ್ತವದಕೆ ಮಸಿ. ॥೭॥

ಬಡವ ಬಲ್ಲಿದನೆನುವ,
ಕೀಳು ಮೇಲೆಂದೆನುವ,
ಹೊಲೆಯಬ್ರಾಹ್ಮಣನೆನುವ ಕರಿಬಿಳಿಯನೆನುವ,
ವಿಷಮ ವಿಷಮಯ ಸಮಾ
ಜದ ಬೇರ ಕಿತ್ತೊಗೆಯೆ
ಕೊಡಲಿ ಲೇಖನಿ ಬೇಕು– ರಕ್ತವದಕೆ ಮಸಿ. ॥೮॥

ಸಂಕಷ್ಟ ಸಾಸಿರದಿ,
ಸಂದೇಹ ಸಂಕುಲದಿ,
ಕಂಗೆಟ್ಟು ಮುಂಬಟ್ಟೆ ಕಾಣದಿರಲು ;
ಮುತ್ತಿರುವ ಕತ್ತಲೆಯ
ಕಿತ್ತು ಸೂರ್ಯೋದಯವ
ಸಾರ್ವ ಲೇಖನಿ ಬೇಕು ರಕ್ತವದಕೆ ಮಸಿ. ॥೯॥

ಹಳೆಜಗದ ನೀತಿಗಳು,
ಕೊಳೆಜನರ ರೀತಿಗಳು,
ಕಶ್ಮಲವಿಚಾರಗಳು ಕೊಚ್ಚಿಹೋಗಿ :
ಹೊಸಜಗದ ನವಸೃಷ್ಟಿ
ಮಸಗಲ್ಕೆ ನೆರವಪ್ಪ
ಮಸೆವ ಲೇಖನಿ ಬೇಕು– ರಕ್ತವದಕೆ ಮಸಿ. ॥೧೦॥

ಎನ್ನ ಹೃದಯದ ಸ್ಫೂರ್ತಿ
ಎನ್ನ ಜನತೆಯ ಶಕ್ತಿ,
ಎನ್ನ ನಾಡಿನ ಕೀರ್ತಿ– ಹೆಚ್ಚಿಸಲ್ಕೆ ;
ಎಮ್ಮೊಂದಿಗರ ಬದುಕ
ಬಾಳಾಗಿ ಬೆಳಗಿಸಲು
ಬಲಿತ ಲೇಖನಿ ಬೇಕು– ರಕ್ತವದಕೆ ಮಸಿ. ॥೧೧॥

* * * *



## ಹೇ ರಾಮ

ಇಂದ್ರಪ್ರಸ್ಥದಿ ಯಮುನಾತಟದಿ,
ಶಾದ್ವಲನಿರ್ಮಲರಾಜಘಾಟದಿ,
ಮಲಗಿಹ ಭಾರತಭಾಗ್ಯವಿಧಾತ,
ಮರಣದಿ ಮರೆಯದ ಗಾಂಧೀತಾತ,
ವಂದಿಸಿ ನಿಂದೆನು ತಲೆವಾಗಿ;
ಹೇರಾಮ್ ಎಂದಿತು ಶಿಲೆ ಕೂಗಿ. ॥೧॥

ಕರಿಶಿಲೆಯ ಹಾಸಿದೆ ನುಣ್ಣಗೆ ಮೇಲೆ,
ಶ್ವೇತಾಕ್ಷರಕಿದೆ ಮಾಂತ್ರಿಕಲೀಲೆ ;
ಆರ್ತಸ್ವರದಿಂದೆದೆನಡುಗಿತ್ತು !
ನಿಂತ ನೆಲವೆ ಬಾಯ್ಬಿಡುವಂತಿತ್ತು !
ವಾತಾವರಣವು ಶೀತಳ ಸುತ್ತು ;
ಹೇರಾಮ್‌ದನಿ ಮಾರ್ದನಿಸಿತ್ತು. ॥೨॥

ಹಾಸು ಗಲ್ಲು ಹಾಹಾ ಎನುತಿತ್ತು,
ಬೀಸುಗಾಳಿ ಭೋಭೋರಿಡುತ್ತಿತ್ತು,
ಗಗನದಿ ಗರುಡನ ಕೂಜನವಿತ್ತು,
ರೋದೋಂತವು ರೋರೋಧಿಸುತ್ತಿತ್ತು.
ಯಮುನಾನದಿ ಮೌನದಿ ಹರಿದಿತ್ತು.
ಹೇರಾಮ್ ಕಿವಿ ಕೀಲಿಸುತ್ತಿತ್ತು. ! ॥೩॥

ಆಬಾ ಮನು ಮೊಮ್ಮಕ್ಕಳ ಹೆಗಲು,
ಗಾಂಧೀತಾತಗೆ ಊರುವ ಕೋಲು.
ನಡೆದಿರೆ– ಬಿರ್ಲಾಭವನದ ಹಾದಿ,
ಪ್ರಾರ್ಥನೆಗೆಂದು ಮಹಾತ್ಮಾಗಾಂಧಿ:
ಹಂತ ! ಹಂತಕನು ಗುಂಡುಗಳೆಸೆದ !
ಹೇರಾಮ್ ಕೊನೆಗಾಲದ ಮೊರೆತ. ॥೪॥

‘ಈಶ್ವರಅಲ್ಲಾ ನಿನ್ನಯ ಹೆಸರು ;
ಸರ್ವರಿಗೂ ಸನ್ಮತಿ ದಯದೋರು’
ಎಂದು ಸೋದರತೆ ಸಾರಿದ ತಂದೆ;
ಕೊಂದೆವು ನಾವೇ ನಿನ್ನನು ಎಂದೆ !
ನಿಮ್ಮೀ ಪಾಪವ ನೀಗಿಸಲೆಂದು
ಹೇರಾಮ್ ಮೊರೆಯಿಡುವೆಯ ಇಂದು ? ॥೫॥

ಹೊಡೆದೆವೋ ಹೊಡೆತದಲಿ ನೋಯದನ.
ಕೊಂದೆವೋ ಕೊಲಬಾರದೆಂದವನ,
ಸುಟ್ಟೆವೋ ಬೆಂಕಿಯಲಿ ಸುಡದವನ,
ಮರೆತೆವೋ ನಾವ್ ಮರೆಯಬಾರದನ
ಕಳೆದೆವಯ್ಯೋ ಕಳಕೊಳ್ಳಬಾರದನ
ಹೇರಾಮ್ ನಾವೆಂಥ ಪಾಪಿಜನ ! ॥೬॥

ಕಲ್ಪವೃಕ್ಷ ಕಡಿವುದು ತರವಲ್ಲ.
ಧರಣಿಜನನಿಯನು ಸಿಗಿವುದು ಸಲ್ಲ,
ಹಿಂದುಮುಸ್ಲಿಮರು ಬಂಧುಗಳೆಲ್ಲ
ಹೋಳಾದರೆ ಹಾಳಾಗುವೆವಲ್ಲ ;
ಮಾ– ಮಾ– ಎಂದರೆ ಕೇಳಿದರಿಲ್ಲ !
ಹೇರಾಮ್ ಬಧಿರಗೆ ಕಿವಿಯಿಲ್ಲ. ॥೭॥

ದೆಹಲಿ ಕರಾಚಿಯ ಪಟ್ಟದ ಮೇಲೆ,
ಬಿಳಿಯರನಟ್ಟಿದ ಕರಿಯರ ಲೀಲೆ ;
ನವಕಾಳಿಯ ನರಹತ್ಯವ ಕಂಡೆ;
ಕೆನ್ನೀರೊರೆಸುತ ಕಣ್ಣೀರುಂಡೆ,
ಹಾಲುಕಡಲು ಹಾಲಾಹಲ ಕೊಡಲು
ಹೇರಾಮ್ ಕೂಗಿತು ಶಿಲೆಯೊಡಲು ! ॥೮॥



ಸಿಡಿಗುಂಡಿಗೆ ಎದೆಗುಂಡಿಗೆಯೊಡ್ಡಿ,
ಬಿಡುಗಡೆಗರ್ಪಿಸಿ ಒಡಲನು ಬಡ್ಡಿ,
ವಿದ್ವೇಷಕೆ ಸ್ನೇಹಾಮೃತವೆರೆದೆ
ಗುರುವೇ ! ಮರೆತೆವು ಸ್ವಾರ್ಥದ ನೆನೆದೇ
ನೀ ಮಹಾತ್ಮ– ಶಪಿಸುವುದೇ ಇಲ್ಲ ;
ಹೇರಾಮ್ ವರವೆಂಬೆನೆ ಸೊಲ್ಲ ? ॥೯॥

ಮೃತ್ಯುವೆ ನಿನಗಮರತ್ವವ ನೀಡೆ;
ನಿನಗಾರೆಣೆ ನೀನಲ್ಲದೆ ನೋಡೆ ;
ಅರೆಮೈ ಬತ್ತಲೆಯಾದರು ರೂಪು,
ನಿನ್ನಡಿದೂಳೆ ಹಸಾದವು ಬಾಪು.
ಕೊಂದವನಿಗು ನೀ ಕರುಣೆಯ ತೋರಿ,
ಹೇರಾಮ್ ಎಂದೆಯ ಕ್ಷಮೆಕೋರಿ ? ॥೧೦॥

ಸತ್ಯದ ಶಾಂತಿಯ ದೀವಿಗೆಯೆತ್ತಿ.
ಕತ್ತಲೆಯ ಮುತ್ತಿರೆ ಬೆಳಕನು ಬಿತ್ತಿ;
ಹಗೆತನ ದಗೆತನ ಕತ್ತಿಕಠಾರಿ
ಎತ್ತದೆ, ದೂಡಿದೆ ದಾಸ್ಯದ ಮಾರಿ,
ನಿನ್ನಯ ಪುಣ್ಯವನೆಲ್ಲದ ಮಾರಿ,
ಹೇರಾಮ್ ನಮಗಿನ್ನೇಂ ದಾರಿ ? ॥೧೧॥

ಹರಿಯ ಗುಡಿಗೆ ಹರಿಜನರು ಬಿಡದೆ
ಅನ್ಯರಡಿಮೆಯೊಳೆ ಮೇಲ್ಮೆಯ ಪಡೆದೆ,
ದಯೆಯ ತೊರೆದು ಜಗಜೀವವ ಶಪಿಸಿ
ಆತ್ಮ ಮರೆತು ಪರಮಾತ್ಮನ ಜಪಿಸಿ
ಕಡಿದಶ್ವತ್ಥವ ಮಸಣಕ್ಕೊಯ್ಯೆ ;
ಹೇರಾಮ್ ಕೂಗಿತು ಕಲ್ ನೋಯೆ ! ॥೧೨॥

ಬೊಬ್ಬೆ ಹೊಡೆದು ಬಡತನವೋಡಿಸುವ,
ಪಕ್ಷಬಿಟ್ಟರೊ ಪಟ್ಟವ ಹಿಡಿವ;
ಮಂತ್ರಿತ್ವದಿ ಮೊಮ್ಮಕ್ಕಳು ಮೆರೆವ,
ಜೋಡೆತ್ತುಗಳನು ಗರಗರ ಸಿಗಿವ,
ಗಾಂಧಿಭಕ್ತರಾವೇಶವಿದೇನು !
ಹೇರಾಮಽ ಎನ್ನುವಿಯೇ ನೀನು ? ॥೧೩॥

ಸಿರಿವಂತರ ಬಾನೆತ್ತರ ಬೆಳೆಸೆ,
ದೀನದರಿದ್ರರ ನರಕಕ್ಕಿಳಿಸೆ ;
ಆವ ಮುಖಂಡನೊಳೇನಿದೆ ವ್ಯಾಜ್ಯ ?
ರಾಮನದೋ ರಾವಣನದೊ ರಾಜ್ಯ ?
ನಾಡಿನ ಮಾಡಿನ ಕಳಸವು ಬೀಳೆ,
ಹೇರಾಮಽ ಕೂಗಿತು ಕರಿಕಲ್ಲೆ ! ॥೧೪॥

ಅನ್ನವ ಕೊಡುವವನಿನ್ನೂ ಬಡವ,
ಅದನು ತಿಂಬವನು ತೇಗನು ಬಿಡುವ;
ಕತ್ತಲು ಮುತ್ತಿದೆ ಹಳ್ಳಿಯ ಬದುಕು,
ಬಾಂದಳ ಬೆಳಗಿದೆ ಡಿಲ್ಲಿಯ ಬೆಳಕು,
ಹಾಡಿನ ಪಲ್ಲವಿ ಸಮತಾವಾದ !
ಹೇರಾಮಽ ನಡೆನುಡಿಯಲಿ ಭೇದ. ॥೧೫॥

'ಪಕ್ಷಪಂಥ ನನಗೇತಕೆ ಹೇಳು?
ನಾನೆಂದರೆ ರವಿ ಪಡುವ ಮೂಡಲು !'
ಆತ್ಮಸಾಕ್ಷಿ ಸ್ವಚ್ಛಂದತೆಯಂತೆ !
ಪ್ರೇಮನಾಮ ವ್ಯಭಿಚಾರಕ್ಕೆ ಬಂತೆ ?
ಬೇಲಿಯೆ ಹೊಲವನು ಮೇಯುವುದೆ ?
ಹೇರಾಮಽ ಶಿಲೆ ಕೂಗುವುದೆ ? ॥೧೬॥



ಬಿರುಗಾಳಿಗೆ ಹಡಗವ ನೀನೊಯ್ದೆ,
ಗುರಿತೋರದೆ ಹಾ ? ಕಣ್ಮರೆಯಾದೆ;
ಎಂತು ಸಾಗಲೀ ನಾಡಿನ ನೌಕೆ.
ತಿಮಿತಿಮಿಂಗಿಲಗಳಬಡಿತಕ್ಕೆ ?
ದೇವರೊಡನೆ ಮೊರೆಯಿಡುವವೆವು ನಾವು;
ಹೇರಾಮಽ ತಲಪುವೆವೇ ರೇವು ? ॥೧೭॥

ನೀ ಬೀರಿನ ನಗು ಚಂದ್ರಪ್ರಕಾಶ,
ನೀನಾಡಿದ ನುಡಿ ವೇದದ ಭಾಷ್ಯ;
ನೀ ತೋರಿದ ಪಥ ಮುಕ್ತಿಯ ಮಾರ್ಗ,
ನೀ ಮಾಡಿ ನರಲೋಕವ ಸ್ವರ್ಗ,
ಋಷಿಸಂತಾನವೆ ರಕ್ಕಸರು;
ಹೇರಾಮಽ ಇದೆ ನಿಟ್ಟುಸಿರು. ॥೧೮॥

ಬರುವನು ಕಲ್ಕಿ ಕುದುರೆಯ ಹತ್ತಿ,
ಕೈಗಳಲ್ಲಿ ಮಸೆಮಸೆದಿಹ ಕತ್ತಿ ;
ದಯೆಯಿಲ್ಲದೆ ತಲೆ ಕಡಿಯುವನಂತೆ,
ಅಯ್ಯೋ ! ಓಕುಳಿ ಚೆಲ್ಲದೆ ಮತ್ತೆ ?
ಇದ ನೆನೆದೇ ನೀ ಮರುಗುವುದೆ ?
ಹೇರಾಮಽ ಕಲ್ ಕರಗುವುದೆ ? ॥೧೯॥

ಹೇರಾಮಽ ಕೈಮುಗಿಯುತ ನಿಂತೆ,
ಹೇರಾಮಽ ಮೈನಡುಗುವುದಂತೆ ;
ಹೇರಾಮಽ ಕಂಬನಿಯೊಸರಿತ್ತೆ ?
ಹೇರಾಮಽ ನನಗಿದುವೇ ಚಿಂತೆ;
ಹೇರಾಮಽ ನಮಗಾಗಿಯೆ ಸತ್ತೆ ;
ಹೇರಾಮಽ ನಿನಗಾಗಿಯೆ ಅತ್ತೆ . ॥೨೦॥

## ನಾಡಹಬ್ಬದ ಹಾಡು

ಕನ್ನಡಂ ಕನ್ನಡಂ ಕನ್ನಡಧ್ವಾನಮ್
ಹೊನ್ನ ಕನ್ನಡ ನಾಡಹಬ್ಬದೀಗಾನಮ್.
ಕನ್ನಡದ ತೊರೆಯಿಂದ ನೊರೆಯಿಂದ ಮೊರೆಯಿಂದ
ಕನ್ನಡದ ಕಡಲಿಂದ ಸಂಭ್ರಮಾಹ್ವಾನಮ್
ಕನ್ನಡದ ಕಾಡಿನಲಿ ಬಾನಿನಲಿ ಬಯಲಿನಲಿ
ಕನ್ನಡಗರೆದೆಯಲ್ಲಿ ಕನ್ನಡಧ್ವಾನಮ್
ಕನ್ನಡಂ ಕನ್ನಡಂ ಕನ್ನಡಧ್ವಾನಮ್
ಹೊನ್ನ ಕನ್ನಡ ನಾಡಹಬ್ಬದೀಗಾನಮ್ ॥೧॥

ಕೇಳಿದೋ, ಸಿರಿನಾಡು ನಮ್ಮ ನಾಡು
ಹಿಂದಿನದಂ; ಹೆಮ್ಮೆಯಿಂ ಹಿಗ್ಗಿ ಹಾಡು;
ಯಾವಂದು ಸೃಷ್ಟಿಯೋ, ಯಾವಂದು ವೃಷ್ಟಿಯೋ,
ಶತಮಾನ ಸಾಸಿರಕೆ ಹಿಂದೆ ಹಿಂದೆ ;
ಈ ನಾಡು ಕನ್ನಡಂ ನಮ್ಮ ನುಡಿ ಕನ್ನಡಂ
ಬೆಳಗಿ ಬಂತೋ ಜಗದಿ ಮುಂದೆ ಮುಂದೆ.
ಅಂಧಂತಮಂ ತುಂಬಿ ಸುತ್ತಲು ಜಗತ್ತಿನಲಿ
ದಿವ್ಯದರ್ಶನದೃಷ್ಟಿ ಕುರುಡಾಗಿರೆ;
ನಮ್ಮದೀ ನೆಲದಿಂದ ಬೆಳಕು ಹೊರಟಿತು ಚೆಲ್ಲಿ
ನವ್ಯತತ್ವಜ್ಞಾನ ಸೊಡರಾಗಿರೆ,
ಕೇಳಿದೊ, ಸಿರಿನಾಡು ನಮ್ಮ ನಾಡು
ಹಿಂದಿನದು, ಹೆಮ್ಮೆಯಿಂ ಹಿಗ್ಗಿ ಹಾಡು. ॥೨॥

ನೆನೆಯಿರೋ, ಹಿರಿಯರಂ ಪುಣ್ಯವಿಂದು,
ನವರಾತ್ರಿ ದಿನರಾತ್ರಿ ಧನ್ಯರೆಂದು
ಈ ನಮ್ಮ ಚಿನ್ನಮಣ್ಣಿನ ಪುಣ್ಯಫಲವುಂಡು
ವಜ್ರದೇಹಿಗಳಾಗಿ ಬದುಕಿದವರು ;
ಜನನಿಯ ಪಯಸ್ವಿನಿಯ ಎದೆಹಾಲ ಸವಿಯುಂಡು



ತೇಜಸ್ವಿನಿಂ ತುಂಬಿ ತುಳುಕಿದವರು;
ಎತ್ತರದ ಕುದುರೆಮುಖವೇರಿ ದಿಗ್ದೇಶದಲಿ
ವಿಜಯ ಭೇರೀರವಂ ಮೊಳಗಿದವರು;
ಪಡುಗಡಲ ತೆರೆಮೇಲೆ ಹಿಗ್ಗಿನಿಂ ಕುಣಿಕುಣಿದು
ರತ್ನರಾಶಿಯ ತಂದು ಚೆಲ್ಲಿದವರು
ನೆನೆಯಿರೋ ! ಹಿರಿಯರಂ ಪುಣ್ಯವಿಂದು,
ನವರಾತ್ರಿ ದಿನರಾತ್ರಿ ಧನ್ಯರೆಂದು, ॥೩॥

ಕೂಡಿರೋ ಹಾಡಿರೋ, ಹಬ್ಬವಿಂದೆಮಗೆ ;
ನಾಕವೇ ಲೋಕಕಿಳಿತಂದಿಹುದು ಬಳಿಗೆ,
ಹಾರೆಗುದ್ದಲಿ ಮತ್ತು ನೊಗನೇಗಿಲಂ ಹೊತ್ತು,
ಚಿನ್ನಕನ್ನಡನಾಡ ಮಕ್ಕಳಿಲ್ಲಿ;
ನಾಡಹಬ್ಬಕೆ ಬನ್ನಿ ಕಪಿಲೆಬಸವರ ತನ್ನಿ,
ಅಂಗಳದಿ ತುಂಬಿಹುದು ಧಾನ್ಯ ಚೆಲ್ಲಿ;
ಮೈಮರೆತ ಮೇಳದಲಿ, ಧೈತಕಿಟ ತಾಳದಲಿ,
ಪಾಡ್ದನದ ಪಲ್ಲವಿಯ ರಾಗದಲ್ಲಿ;
ನಲಿಕೆ ನಾಟ್ಯಗಳಲ್ಲಿ, ದುಡಿಮದ್ದಳೆಗಳಲ್ಲಿ
ಚೆನ್ನಚೆನ್ನಿಯರಾಟ ಕೂಟದಲ್ಲಿ
ಕೂಡಿರೋ ಹಾಡಿರೋ, ಹಬ್ಬವಿಂದೆಮಗೆ ;
ನಾಕವೇ ಲೋಕಕಿಳಿತಂದಿಹುದು ಬಳಿಗೆ, ॥೪॥

ಸೃಷ್ಟಿಮಾತೆಯೇ, ನಿನ್ನ ಸಂಪ್ರೀತಿ ಪುತ್ರಿ
ವೇದಗಳ ಗಾಯತ್ರಿ ಕನ್ನಡ ಧರಿತ್ರಿ;
ಬಾನಂಗಳದಿ ಮೋಡ ಕೊಳೆಕಸಗಳನಿತಿಲ್ಲ
ರವಿಚಂದ್ರ ತಾರಾಳಿ ರಶ್ಮಿ ಹಾಲಿಹುದು ;
ಹಚ್ಚನೆಯ ಹಸಿರೆಲ್ಲ ! ತೊರೆಯಲ್ಲಿ ನೆರೆಯಿಲ್ಲ,
ನಿರ್ಮಲಂ ಜೀವನಂ ಚೆಲ್ವು ಹರಿದಿಹುದು !
ಈ ಸತ್ಯ ಸೌಂದರ್ಯ, ಈ ಜೀವ ಮಾಧುರ್ಯ
ಎಮ್ಮದೀ ಸಿರಿನಾಡ ಹಬ್ಬಕಾಯ್ತು;

ಸತ್ಯಲೋಕವು ಪುಣ್ಯವೈಕುಂಠಕೈಲಾಸ
ಕನ್ನಡದ ಮಣ್ಣಿಗಿಂದಿಳಿದು ಬಂತು;
ಸೃಷ್ಟಿಮಾತೆಯೆ ನಿನ್ನ ಸಂಪ್ರೀತಿ ಪುತ್ರಿ
ವೇದಗಳ ಗಾಯತ್ರಿ ಕನ್ನಡ ಧರಿತ್ರಿ. ॥೪॥

ಎನ್ನದೀ ವಂದನಂ, ಎನ್ನದೀ ಗಾಯನಂ
ಈ ಲೋಕ ಆಲೋಕ ಮೂಲೋಕಕು
ವಾಣಿ ವೀಣಾಪಾಣಿ ವರದೆ ಶಾರದೆ ದೇವಿ,
ಕುಣಿಕುಣಿದು ಬಾರವ್ವ ಕವಿಯ ನಾಲಗೆಗೆ
ಪುಂಡರೀಕಾಕ್ಷ ಹೃತ್ಪುಂಡರೀಕನಿವಾಸೆ,
ಹೊನ್ನಹೊಳೆ ಹರಿಸೆನ್ನ ಕನ್ನಡದ ನೆಲಕೆ,
ಶಕ್ತಿ ಭೈರವಿ ! ಚಂಡಿ ಚಾಮುಂಡಿ ಶ್ರೀದುರ್ಗೆ,
ಎನ್ನ ಸಿರಿನಾಡ ಗಡಿಗುಡಿಯ ಕಾಯೆ ;
ಮೂರುಲೋಕದ ಹರಕೆ, ನೂರುನುಡಿಗಳ ಬಯಕೆ,
ನಾಡಹಬ್ಬದಿ ನಮಗೆ ಕೊಡಿಸಿ ತಾಯೆ.
ಎನ್ನದೀ ವಂದನಂ ಎನ್ನದೀ ಗಾಯನಂ
ಈ ಲೋಕ ಆಲೋಕ ಮೂಲೋಕಕು. ॥೫

* * * *

## ಎನ್ನೆದೆ ತಂತಿಯ ದಿನದಿನ ಮಿಡಿವುದು

ಕನ್ನಡವೆಂದರೆ ನನ್ನೆದೆ ನಲಿವುದು
ಕನ್ನಡ ನಡೆನುಡಿ ಮನಕೆ ಮೆಚ್ಚಿಹುದು ;
ಕನ್ನಡ ಕನ್ನಡ ಕನ್ನಡವೆನುವುದು,
ಎನ್ನೆದೆ ತಂತಿಯ ದಿನ ದಿನ ಮಿಡಿವುದು. ! ॥೧॥

ಉನ್ನತ ಪರ್ವತಮಾಲೆಯ ಬೆಡಗನು,
ಸನ್ನುತ ಪರಿಮಳ ಗಂಧದ ಸೊಬಗನು,



ಚಿನ್ನದ ಗಣಿಯನು ! ಮೊರೆಯುವ ಕಡಲನು,
ಕನ್ನಡ ನಾಡಿನೊಳಲೆಯುತ ಕಂಡೆನು ॥೨॥

ಕಲಕಲನಾದದಿ ನದಿ ಹರಿದಾಡಿರೆ,
ಫಲಪುಷ್ಪಗಳಲಿ ತರುಲತೆ ಕೂಡಿರೆ,
ಕಲರವ ಗೈಯುತ ಶುಕಪಿಕ ಹಾಡಿರೆ,
ಚೆಲುವೆಲ್ಲೆಲ್ಲಿಯು ತುಂಬಿದೆ ನೋಡಿರೆ ! ॥೩॥

ಗಂಗ ಕದಂಬ ಚಾಲುಕ್ಯರಲೂಪರು,
ಸಂಗರಕಲಿಗಳು ರಟ್ಟ ವಿಕ್ರಮರು,
ಹಿಂಗದ ವಿಜಯನಗರದಧಿರಾಜರು,
ಸಂಗಡ ಕಳಚೂರ್ಯರು ಧರೆಯಾಳ್ದರು. ॥೪॥

ವಿದ್ಯಾರಣ್ಯರು, ಮಧ್ವವರೇಣ್ಯರು,
ಸಿದ್ಧಿಪಡೆದರೀ ನಾಡನೊಳೆಲ್ಲರು,
ಶುದ್ಧರೂ, ಭಕ್ತಿ ಪ್ರಸಿದ್ಧರು, ನಾಡಿನೊ,
ಳಿದ್ದರು, ಕನಕ ಪುರಂದರ ಬಸವರು. ॥೫॥

ರನ್ನ ಪಂಪರದೊ ವೀರಗಾನದಲಿ,
ಹೊನ್ನಮ್ಮನು ಕಂತಿಯು ಹೆಂಗೊರಳಲಿ
ಚೆನ್ನಾಯ್ತೆನೆ, ಚೆಲುಹಾಡ ಹಾಡಿದರು,
ಕನ್ನಡ ಸವಿನುಡಿಯೆಂದು ಸಾರಿದರು. ॥೬॥

ಶಿಲೆಗಳ ಕೆತ್ತುತ ಜೀವಮೂರ್ತಿಗಳ
ಕಲೆ ಕೂಡಿಸಿ ತೋರುವ ಶಿಲ್ಪಿಗಳ
ನೆಲೆಯಿದು, ಕಲೆಗಳ ಕಲಿಗಳ ಬೀಡಿದು !
ಚೆಲುವಿನ ಗೂಡಿದು, ಕನ್ನಡ ನಾಡಿದು. ॥೭॥

ಇಲ್ಲಿಯ ಹೆಂಗಳ ಮಕ್ಕಳ ಬೆಡಗನು,
ಸಲ್ಲಲಿತದ ಸಂಸಾರ ಸೊಬಗನು,
ಎಲ್ಲಿಯು ಕಾಂಬೆನೆ ? ಸ್ನೇಹದ ಸಿರಿಮನೆ,
ಎಲ್ಲಾ ಗುಣಗಳಿಗಿದುವೆ ತವರ್ಮನೆ. ॥೮॥

ದಸರೆಯ ದೀಪಾವಳಿಗಳ ಕಾಲದಿ.
ಎಸೆವುದು ನೆಲವಿದು ಸುಖಸಮ್ಮೇಳದಿ;
ಪಸರಿಸುತಿರುವುದು ಕನ್ನಡಪ್ರೀತಿಯು;
ದೆಸೆ ದೆಸೆ ತುಂಬಿದೆ ಕನ್ನಡಕೀರ್ತಿಯು. ॥೯॥

ಕನ್ನಡನಾಡಿನ ಬಾವುಟ ಹಾರಿಸಿ,
ಕನ್ನಡಮಾತೆಯ ಬಿರುದನು ಬಾರಿಸಿ,
ಕನ್ನಡ ಕನ್ನಡ ಜಯ ಜಯವೆನ್ನುತ
ಕನ್ನಡಿಗರು ಮುನ್ನಡೆವರು ಸಂತತ. ॥೧೦॥

* * * *

## ಮೆರವಣಿಗೆ

ಯಾವ ದೂರವನು ಸಾರಿ ಬಂದಿತೋ
ಎನ್ನ ತಾಯ ತೇರು ;
ಯಾವ ಎತ್ತರವ ಏರಿನಿಂದಿತೋ
ಗುಡಿಯೆ ಹಾರು ಹಾರು ;
ಯಾವ ಆಳವಿದೆ, ಯಾವ ಸತ್ವವಿದೆ.
ನುಡಿಯೆ ತೋರು ತೋರು
ಬೆರಗುಗಂಗಳಲಿ ಬಾನಿನಂಗಳದಿ
ನೊಡುತಿಹರು ಯಾರು ? ॥೧॥

ಈ ಹಳ್ಳಿಯಿಂದ, ಆ ಡಿಲ್ಲಿವರೆಗಿದೋ
ಬಂತು ಮೆರಣವಣಿಗೆ ಬಂತು,



ಗಂಗೆ ನೀರೊಳು ತುರಂಗ ಮೀಯಿಸಿದ
ಕ್ಷಾತ್ರಶಕ್ತಿಯಿಂತು,
ಕನ್ನಡಿಗರ ಕುಲ ಕೋಟೆ ಮೆರೆಯುತಿದೆ
ಧವಳಕೀರ್ತಿ ಹೊತ್ತು,
ತಾಯಿ ಭಾರತಿಯ ಮುಖದ ಮಂಗಳಕೆ
ಆರತಿಯನು ಎತ್ತು. ॥೨॥

ತಂಗೆ ಈ ತುಂಗೆ ಅಕ್ಕ ಅ ಗಂಗೆ
ತವರು ಭರತಭೂಮಿ,
ಎಲ್ಲ ಸೇರಿರುವ ಪುಣ್ಯಸಂಗಮದ
ಸ್ವರ್ಣಪರ್ವವೆನ್ನಿ,
ಇಲ್ಲಿ ಎಲ್ಲವರು ಕೂಡಿ ಹಾಡುವರು
ತಾಳಮೇಳ ತನ್ನಿ ;
ನೀವು ನಮ್ಮವರು ನಾವು ನಿಮ್ಮವರು
ಇಂತು ಬಾಳ ಬನ್ನಿ. ॥೩॥

ಸ್ನೇಹಸೇತುವನು ಬಿಡದೆ ಬೆಸೆವೆವೋ
ತೆಂಕು ಬಡಗು ಊರು;
ಒಂದೆ ಜನವು ಮೇಣ್ ಒಂದೆ ಮನವು ಕಾಣ್
ಒಂದೆ ತಾಯಿ ಬೇರು,
ಊರ್ಧ್ವಮೂಲದಲಿ ಅಧಃಶಾಖದಲಿ
ಸದಾಶ್ವತ್ಥ ಹಸಿರು
ಉಂಟು ಆತ್ಮನಿಗೆ ನಂಟು ಪರಮಾತ್ಮ
ನದಿಯೊ ಕಡಲ ಬಸಿರು. ॥೪॥

ವೀರಸೂನಮ್ಮ ಜನನಿ ಪಡೆದಳೊ
ರತ್ನದಂತ ಪುತ್ರರನು;
ರಣದ ಕ್ರಾಂತಿಯನು ಮನದ ಶಾಂತಿಯನು
ಬೆಸೆದ ಜೀವಸತ್ವರನು

ಕಡಲ ಭೋರ್ಗರೆತ ಕಾಡುಮಿಗ ಮೊರೆತ
ನದಿನಿನಾದ ಸಂಗೀತ.
ನಡೆದು ನೋಡು ಈ ನಾಡಿನುದ್ದಗಲ
ನಡತೆಯಿಂದ ಸುಪ್ರೀತ. ॥೫॥

ಪೃಥ್ವಿ ಗಂಧವತಿ, ನದಿ ಮಧುಸ್ಯಂದಿ,
ಶಿಲೆಯು ಕಲೆಯ ಗೂಡು;
ಈ ನಿರಾಭರಣ ಮೆರವ ಶೃಂಗಾರ
ಬದುಕೆ ಹೊನ್ನ ಬೀಡು;
ಗೋಮಟೇಶ್ವರನ ಶ್ರವಣಬೆಳಗೊಳವು
ಬಾಲಿಕೆಯರ ಬೇಲೂರು
ಅತ್ತ ಮನ್ಮಥನ ಇತ್ತ ರತಿಯಿರವು
ಸಂಗ ನಿಸ್ಸಂಗ ತೋರು. ॥೬॥

ಋಷಿಯ ಭೋಗವನು ಪಡೆದ ಮೆಯ್ಯೊಳೇ
ಕಡುವಿರಾಗವನು ತಳೆದು :
ಇಹದ ಪ್ರೇಮವನು ಪರದ ಶ್ರೇಯದೊಳು
ಬಿಡದೆ ತೂಗಿ ನಡೆದು ;
ಹರಿತ ಕಡುಗವನು ಮಸೆದ ಕೈಯ್ಯೊಳೇ
ಹರಿವ ಲೆಕ್ಕಣಿಕೆ ಹಿಡಿದು ;
ಕಲಿಯು ಮೇಣು ಕವಿ ಆಗಿ ಮೆರೆವುದೇ
ಅರಳ್ದ ಕನ್ನಡದ ಬದುಕು. ॥೭॥

ಅಲ್ಲ– ಇದು ಗುಲ್ಲು, ಆಲಿಸುತ ನಿಲ್ಲು,
ಇದುವೆ ಕರ್ನಾಟ ಘೋಷ,
ಕನ್ನಡದ ಹೃದಯ ಶಿವನ ಡಮರುಗವು,
ಲೋಕಕೆನಿತು ಸಂತೋಷ !
ಘೂಕಸಂತತಿಗೆ ಕಿರಣ ಸಂಗತಿಯೊಳ್
ಇಲ್ಲದಿಹುದೆ ವಿದ್ವೇಷ ?



ಎತ್ತರವನೇರಿ ಧೀರ ಸಾಗುತಿರೆ
ಪಂಗು ಪದಗತಿಯ ಸಹಿಸ ! ॥೮॥

ಈ ಮಹೋತ್ಸವಕ್ಕೆ ಸ್ವರ್ಣದುತ್ಸವಕೆ
ತಾಯ ಕರೆ ಕೇಳಿ ಬಂದೆ ;
ಕನ್ನಡದ ಭೇರಿ ಮೊಳಮೊಳಗುತಿಹುದು
ಇಂದ್ರಪ್ರಸ್ಥಪುರದಿಂದೆ,
ಎನಿತು ಹರ್ಷವೋ ಸುಖದ ವರ್ಷವೋ
ಪುಲಕಗೊಂಡು ನಿಂದೆ ;
ನಾಡ ಬಾವುಟವು ಬಾನ ಬೆಳಗಿಸಿತು,
ಕೆಂಪು ಕೋಟೆಯಿಂದೆ. ॥೯॥

* * * *

## ಬೆಂಕಿ ಬಿದ್ದಿದೆ ಮನೆಗೆ

ಬೆಂಕಿ ಬಿದ್ದಿದೆ ಮನೆಗೆ ಓ ಬೇಗ ಬನ್ನಿ,
ಎಲ್ಲರು ಎದ್ದೆದ್ದು ಓಡಿ ಬನ್ನಿ,
ಕನ್ನಡದ ಗಡಿ ಕಾಯೆ,
ಗುಡಿಕಾಯೆ, ನುಡಿಕಾಯೆ,
ಕಾಯಲಾರೆವೆ ಸಾಯೆ !
ಓ ಬನ್ನಿ ಬನ್ನಿ. ॥೧॥

ಹಾರೆಗುದ್ದಲಿ ಕೊಡಲಿ ನೊಗನೇಗಿಲೆತ್ತುತಲಿ,
ನೆಲದಿಂದ ಹೊಲದಿಂದ ಹೊರಟು ಬನ್ನಿ,
ಕನ್ನಡದ ನಾಡಿಂದ
ಕಾಡಿಂದ ಗೂಡಿಂದ
ಕಡಲಿಂದ ಸಿಡಿಲಿಂದ
ಗುಡುಗಿ ಬನ್ನಿ, ॥೨॥

ಅಕ್ಕದಿರೆ ಅಣ್ಣದಿರೆ ತಂಗಿಯರೆ ತಮ್ಮದಿರೆ
ಬೇಗೆಯನ್ನಾರಿಸಲು ಬೇಗ ಬನ್ನಿ;
ಕನ್ನಡದ ಛಲವೊಂದೆ,
ನೆಲವೊಂದೆ, ಬಲವೊಂದೆ,
ನಾಡನುಳಿಸುವೆವೆಂದೆ,
ಓಡಿ ಬನ್ನಿ. ॥೩॥

ಕನ್ನಡದ ಕುಲಕೋಟಿಯೆಚ್ಚರೆಚ್ಚರವಿರಲಿ
ಸಿಂಹ, ಸ್ವಪ್ನವ ಬಿಟ್ಟು ಕೆರಳಿ ನಿಲಲಿ;
ಅನ್ನೆಯಕ್ಕೆಡೆಗೂಡದೆ,
ಅಂಗುಲಂ ನೆಲಂ ಬಿಡದೆ,
ಅನ್ಯರಂ ತಡೆ ಹಿಡಿದೆ,
ನಾಡುಳಿಸಲಿ ! ॥೪॥

ಕೋಟೆ ಕೊತ್ತಲ ಕಟ್ಟಿ, ಮಂದಿಮಾರ್ಬಲವಿಟ್ಟು,
ಗಡಿಯನ್ನು ಗುಡಿಯನ್ನು ಕಾದ ಭಟರು,
ಕನ್ನಡಿಗರೊಗ್ಗಟ್ಟು,
ಧೀರದೀಕ್ಷೆಯ ತೊಟ್ಟು,
ಪ್ರಾಣವನೆ ಪಣವಿಟ್ಟು
ಕಣಕಿಳಿದರು. ॥೫॥

ಜಯತುಂ ಭುವನೇಶ್ವರೀ, ರಾಜರಾಜೇಶ್ವರಿ,
ಸಿರಿಗನ್ನಡಂ ಗೆಲ್ಗೆ ಶಿವೆ ಶಾಂಕರೀ !
ಏಳ್ಗೆ ಕರ್ಣಾಟಕಂ
ಬಾಳ್ಗೆ ಕರ್ಣಾಟಕಂ
ಆಳ್ಗೆ ಕರ್ಣಾಟಕಂ
ಜಗದೀಶ್ವರೀ ! ॥೬॥

* * * *



## ನಾವು ಗೆಲುವೆವು

ಸೊಲ್ಲು ಸಲ್ಲದು ಸೋಲು ನಮ್ಮ ಮುಂದೆ ।
ಗೆಲ್ಲ– ಬಾಳ್ವೆಯ ಬೆಳಕು– ಗೆಲುವೆವೆಂದೆ ॥

ಬಲವೊಂದೆ ಗೆಲವೆಂದೆ ನಂಬಲಿಲ್ಲ,
ಬಲ ದೇಹಬಲವಲ್ಲ, ಧೈರ್ಯವೆಲ್ಲ ;
ಒಬ್ಬನಿದ್ದರು ನಿಂತ ನೆಲ ನೆರವಿದೆ,
ನಾವು ಗೆಲುವವರೆಂಬೆದೆಯ ಸ್ವರವಿದೆ. ॥೧॥

ಕಜ್ಜ ಕೈಗೂಡಿದರೆ ಕುಗ್ಗದಿಹುದು,
ಮುಂದಿದೆ ಮಹೋನ್ನತಿಯು –ನುಗ್ಗಬಹುದು;
ಕಯ್ಪೆರಸ ಕುಡಿಕುಡಿದರೆದೆಗುಂದೆವು,
ಸಪ್ಪೆಬಾಳ್ವೆಯು ಬೇಡ ಸೋಲೊಪ್ಪೆವು. ॥೨॥

ಮಲೆವ ಮಲೆಗಳ ಮಧ್ಯೆ ಮನೆಯ ಕಟ್ಟಿ,
ಕಾಡಾನೆಗಳ ಹಿಡಿದು ಬೆನ್ನು ತಟ್ಟಿ,
ಹೆಬ್ಬಾವು ಹುಲಿ ಹೊಟ್ಟೆ ಸೀಳಿದವರು,
ನಮ್ಮ ಹಿರಿಯರು– ಬಲಿತು ಬಾಳಿದವರು. ॥೩॥

ನೇಗಿಲೋಳಿಯ ಸಮಕೆ ಸಾಗಿ ನಡೆದು,
ಗದ್ದೆಕೆಸರಲಿ ಮಿಂದು ಮಿಂದು ದುಡಿದು ;
ಕಳಮೆ ಕಂಪನ್ನದಲಿ ತೇಗಿದವರು.
ನಮ್ಮ ಹಿರಿಯರು– ವಜ್ರದೇಹದವರು. ॥೪॥

ತುಂಬುಮನ ತುಂಬುಮನೆ ತುಂಬಿದವರು,
ತುಂಬುಸಂಸಾರದಲಿ ನಂಬಿದವರು;
ತಿಳಿವೊಂದೆ ಬೆಳಕೆಂದೆ ಬೆಳಗಿಸಿದರು,
ನಮ್ಮ ಹಿರಿಯರು ಬದುಕ ಬೆಳಗಿಸಿದರು. ॥೫॥

ಸರಿದಾರಿ ತೊಲಗದೆಯೆ ಹಾದಿ ಹಿಡಿದ,
ತಲೆಯನ್ನು ತಗ್ಗಿಸದೆ ನುಗ್ಗಿ ನಡೆದ,
ಅದೆ ಪರಂಪರೆ ನಮಗೆ– ಸಾಕ್ಷಿಯವರು,
ನಾವು ಗೆಲುವೆವು– ಸೋಲವರಿಯದವರು. ॥೬॥

ನಾವು ಗೆಲುವೆವು ಗರ್ವದುರ್ಗಗಳನು,
ನಾವು ಹಿಡಿವೆವು ದರ್ಪಸರ್ಪಗಳನು,
ನಾವು ಮುರಿವೆವು ಮದದ ದಾಡೆಗಳನು,
ನಾವು ಗೆಲುವೆವು ಜನರ ಹೃದಗಳನು. ॥೭॥

ನಾವು ಗೆಲುವುದು ಜಗದ ಗೆಲವೆಂಬೆವು,
ಎಲ್ಲರೂ ಗೆಲಬೇಕು ಸೋಲೊಲ್ಲೆವು,
ನಾವು ಬದುಕುತ ಲೋಕ ಬದುಕಬೇಕು,
ಇದು ನಮ್ಮ ಗುರಿ– ನಾವು ಗೆಲಲೆಬೇಕು.
॥೮॥

ಪಶ್ಚಿಮಾದ್ರಿಯ ಶಿಖರವೇರಿ ನಡೆದು,
ಪಡುಗಡಲ ನೊರೆತೆರೆಯ ಮೇಲೆ ಕುಣಿದು ;
ಬಯಲಿನ ವಿಶಾಲದಲಿ ಆಡುತಿಹೆವು,
ನಾವು ಗೆಲುವೆವು– ಹಿಗ್ಗಿ ಹಾಡುತಿಹೆವು. ॥೯॥

ನಾವು ಗೆಲುವುದು ತಾಯಿನಾಡ ಗೆಲವು,
ನಾವು ಸೋತರೆ ತಾಯಿಗಶ್ರುಜಲವು !
ಜಯತು– ಭುವನೇಶ್ವರೀ, ನಾವ್ ಸೋಲೆವು,
ಜಯ ನಮಗೆ ಜಯ ನಿನಗೆ ಜಯವೆಂಬೆವು. ॥೧೦॥

* * * *



## ನೂರು ನೂರು ಕಣ್ಣೀರು

ನೂರು ನೂರು ಕಣ್ಣೀರು ಹರಿಸಿದೆನು
 ಮತ್ತೆ ಮೈಯ ಮರೆತೆ;
ನೋವೆ ? ನಲಿವೆ ? ನೆನೆದಶ್ರುಸುರಿಸಿದೆನು,
 ಬೊಗಸೆ ತುಂಬಿದೊರತೆ !

ಕಿರಿಯನೊಂದು ಕಾಣಿಕೆಯು ಹಿರಿಯನಿಗೆ
 ಬಾಷ್ಪಪುಷ್ಪವಿಡುವೆ ;
ಎನ್ನತಾಯ ಹಿರಿಗುವರ ಮುದ್ದಣಗೆ
 ಎರಗಿ ಕರವ ಮುಗಿವೆ.

ತುಳುವಬ್ಬೆಯು ಜೋಜೋ ಎನೆ ಹಾಡಿರೆ
 ಸಾಗರಸಂಭವಶ್ರುತಿಗೆ,
ಕುದುರೆಮುಖವು ಶಿರವೆತ್ತುತ ನೋಡಿರೆ
 ನದಿಕನ್ನಿಕೆ ಪದಹತಿಗೆ.

ತೆಂಗಿನ ಕಂಗಿನ ತಲೆ ತೂಗಾಡಿತು
 ಓಬೇಲೆಯ ಪಾಡ್ದನಕೆ ;
ದುಡಿತದ ಬೇನೆಗೆ ದುಡಿ ಮದ್ದಾಯಿತು
 ಬಡಿಯುವ ಚೋಮನ ಮನಕೆ.

ಆಟಿ ಕಳೆಂಜನ ಸೋಣದ ಜೋಗಿಯ
 ಅಂಗಣ ರಿಂಗಣ ನಲಿಕೆ,
ಮೇಳದಿ ತಾಳದಿ ಭೂತದ ಕೋಲದಿ
 ಕುಣಿಯಿತು ನೆಲ ನಂದಳಿಕೆ.

ಬೀಸುಗಾಳಿಯಲಿ ಸೂಸುಮಳೆಯಲಿ
 ಸಿಡಿಲು ಮಿಂಚಿನಬ್ಬರವು ;

ಓಟ ಕಂಬಳದಿ ಬೇಟೆ ಹಂಬಲದಿ
ಆಟ ದೊಂದಿಯಾರ್ಭಟವು

ಅಲ್ಲಿ– ದೇಗುಲದಿ ಗಂಟೆ ಮೊಳಗಿತು
ಅವನೊ ಮಾಲೆಗಾರ ;
ನಿಲ್ಲು– ದೇವರಾರತಿಯು ಬೆಳಗಿತು
ಬಾಗಿ ಬಕುತಿ ತೋರ

ಹಗಲು ರಾತ್ರಿಯಿದೆ ಜಾತ್ರೆಯಾಗಿದೆ
ತುಳುವ ನಾಡಿನಲ್ಲಿ ;
ರಸದ ರಥದ ಯಾತ್ರೆಯಲಿ ಸಾಗಿದೆ
ಜನತೆ ಜತೆಯೊಳಿಲ್ಲಿ.

ನವನವೋನ್ಮೇಷ ತುಂಬಿದಾವೇಶ
ನಿಜನಿಸರ್ಗದಾಟ ;
ವೀರಶೃಂಗಾರ ಹಾಸ್ಯ ಕಾರುಣ್ಯ
ರಸದ ರುಚಿಯ ಊಟ.

ಬಾಳ ಬವಣೆಯನು ಮರೆತೆ ಹಾಡಿದನು
ಮುದ್ದು ಮುದ್ದು ಮನಕೆ ;
ಉಪ್ಪು ನೀರನೇ ಹೀರಿ ಬೆಳೆದ ಸಸಿ
ಕಲ್ಪವೃಕ್ಷ ಜನಕೆ,

ಬಡವು ಬೆಂಕಿಯಲಿ ಒಡಲು ಬೆಂದಾಗ
ನೋವೆ ಕಾವ್ಯವೆಂದೆ ;
ಮಡದಿ ಮೆಚ್ಚುಗೆಯ ಕೊಡಲು ಬಂದಾಗ
ಜೀವ ದಿವ್ಯವೆಂದೆ.

ದೇಹ ಶ್ರೀಗಂಧ ಕೊರಡು ಸವೆಯಿತೋ
ಕ್ಷೀಣ ಕ್ಷೀಣವಾಗಿ;



ಭಾವ ಪರಿಮಳದ ಕಾವ್ಯವರಳಿತೋ
ನೂರು ದಳವೆ ಆಗಿ,

ಸುತ್ತು ಮುತ್ತು ಕಂಪೆಲ್ಲ ಹರಡಲು
ಜೀವ ಬತ್ತಿ ಉರಿದು ;
ಕಬ್ಬು ಹಿಂಡಿ ರಸವೆಲ್ಲ ಹೊರಡಲು
ಜಗಕೆ ಸವಿಯ ಸುರಿದು,

ಮನೆಯ ದುಃಖವನು ಮನದಮರುಕವನು
ಮರೆಯೆ ಕವಿಯೆ ಕವನಿಸಿದೆ ;
ಬಾಳುವೆಯ ಕಹಿಗೆ ಭಾವನೆಯ ಸಿಹಿಯ
ಸವರಿ ಸುಖದ ಸಮನಿಸಿದೆ.

ಎಳತು ಮಾಮರದ ಹೊಸತು ಶಾಖೆಯಲಿ
ಪಂಚಮಸ್ವರದ ಗಾನ ;
ಅಯ್ಯೊ ! ರಣಹದ್ದು ಹೊಂಚುಹಾಕುತಲಿ
ಒಯ್ಯೆ– ಹಾರಿತೋ ಪ್ರಾಣ.

ಕೊರಳ ಮೇಲೆತ್ತಿ ಶುಭನವೋದಯವ
ಸಾರಿತೊಂದು ಮುಂಗೋಳಿ;
ಕಣ್ಣು ತೆರೆದು ಜನ ಕಂಡಿತ್ತೈ ಜಗವ
ಜುಟ್ಟು ಕೊಯ್ದಳೋ ಕಾಳಿ !

ರಸಿಕರಾಜ್ಯದ ಮನ್ನಣೆಯ ಮಣೆಯ ರಸಋಷಿಯೆ,
ಸಪ್ತಾಕ್ಷರೀಮಂತ್ರ ಜಪಿಸಿ ಬಾಳ್ದೆ ;
ಎದೆಯ ಬೆಂಕಿಯಲಿ ಕಿಲುಬನು ತೊಳೆದ ಚಿನ್ನವೇ,
ಕನ್ನಡಕೆ ಹೊಸಬೆಳಕ ನೀನೆ ಬೀರ್ದೆ.

ಪದ್ಮಾವತೀಚರಣ ಚಾರಣಚಕ್ರವರ್ತಿಯೆನೆ
ಹಿಗ್ಗಿ ಹಾಡಿದನೊಬ್ಬ ಜಯದೇವನು ;
ಮುದ್ದಿಸಿ ಮನೋರಮೆಯ ನೀನು ಮುದ್ದಣನಾದೆ
ಪ್ರೇಮವೇ ಕಾವ್ಯಕ್ಕೆ ಜೀವವೇನು ?

ನಿನ್ನ ಮನವನು ಕದ್ದ ನೀನು ಕೈಹಿಡಿದಿದ್ದ
ಆ ಮನೋರಮೆಯ ಮಾತೆನಿತು ಮಾಟ,
ಕವಿಯ ಕಲ್ಪನೆಯೊಂದು ಸಾಮ್ರಾಜ್ಯ ಸೃಷ್ಟಿಯಲಿ
ನಿನ್ನ ರಮಣಿಯೆ ರಾಣಿ– ನೀನೆ ಸಾಮ್ರಾಟ.

ಜನರ ಸೊತ್ತನು ಸುಲಿದು ದ್ರವ್ಯರಾಶಿಯ ಪಡೆದು
ದುಡಿಸಿ ಸಾಯಿಸಿ ಕಟ್ಟಿಸಿದ ತಾಜಮಹಲು
ಪ್ರೇಯಸಿಯ ನೆನಹಿಂಗೆ– ಶಾಜಹಾನ್‌ದೊರೆ. ದೊರೆಯೆ
ಈ ಮನೋರಮೆಯ ಮೂರ್ತಿಗೆ ? ಬೆಲೆಯಹೇಳು ?

ಮರಮರವ ಕಂಡು ಕೂಗಿದ ಕಿರಾತನೆ ಹಿಂದೆ
ರಾಮಾಯಣವ ಹಾಡಿ ಕವಿಯಾದನು :
ದಿನದಿನವು ದೇವರಿಗೆ ಮಾಲೆಯರ್ಪಿಸಿ ಬಂದೆ
ರಾಮಕಥೆ ಬರೆದೆ– ಮುಕ್ತನೆ ಎಂಬೆನು.

* * * *

## ನವೋದಯದ ಋಷಿ

ಬಂಜೆಯಲ್ಲ– ತುಳುತಾಯಿ ಪಡೆದಳು
ಪಂಜೆಯಂಥ ಪುತ್ರರನು ;
ಕಂಡರಲ್ಲ, ಪಾಲ್ಗಡಲಿನೊಡಲೊಳು
ಹರಿಯ ಹೃದಯರತ್ನವನು.



ಬಂಟನಾವನೋ ಬಾಳುತಿದ್ದನು
ಬದುಕ ಬೆಳಗಿಸಿದನೇನು ?
ಬಂಟವಾಳವೆನೆ ಹೆಸರು ಮೆರೆದಿದೆ
ಅಲ್ಲೆ– ಪಂಜೆ ಜನಿಸಿದನು.

ತಾಯಿ ಸೀತಮ್ಮ, ತಂದೆ ರಾಮಪ್ಪ,
ಇಳಿದುಬಂದರೋ ಇಳೆಗೆ ;
ಮಗುವೆ ಕಣ್ಗೊಂಬೆ, ನಗುವೆ ಮೈತುಂಬೆ
ಬಣ್ಣ ಮೈನಿಂಬೆ ಬೆಳಗೆ.

ಶರಧಿ ಸಹ್ಯಾದ್ರಿ ಮಧ್ಯೆ ಶಾಲಿನಿಧಿ
ಆಳ ಉನ್ನತಿ ವಿಶಾಲ ;
ಇಂಥ ತೊಟ್ಟಿಲಲಿ ತಾಯಿ ಜೋಗುಳಿಸೆ
ಕನಸು ಕಂಡ ಕವಿ ಬಾಲ.

ಗೆದ್ದಕಳಮೆಗಳ ಬಳಸಿ ಕೇಳಿದನು
ನೇಜಿ ಹಾಡು– ಓ ಬೇಲೇ ;
ನಿದ್ದೆಬಿಟ್ಟು ಬಯಲಾಟ ನೋಡಿದನು
ಧಿಮಿತ ಧೀಂಕಿಟದ ಲೀಲೆ.

ಹರಿಯುತಿಹುದು ನದಿ ನಾದಕಲಕಲದಿ
ಜಲದಿಘೋಷಕದೆ ಶ್ರುತಿಯು ;
ಇದನು ಆಲಿಸುತ ಹೃದಯ ತೇಲಿಸುತ
ಮಯ್ಯಮರೆವ ಸಂಗತಿಯು.

ಪರವಪಂಬದರ ನಲಿವ ನಲಿಕೆಯರ
ದುಡಿಯ ಪಾಡ್ದನಗಳಲ್ಲಿ
ಭೂತ ಕೋಲ ನೇಮವು ನಡಾವಳಿ
ನಡೆಯುತಿರುವ ನೆಲದಲ್ಲಿ

ತುಳುವ ಸಂಸ್ಕೃತಿಯ ಸಾರ ಹೀರುತ
ರಾಯ ಮಂಗೇಶ ಬೆಳೆದ ;
ಕಲಿತ ಕನ್ನಡದಿ ಕವಿತೆ ಕಟ್ಟುತ
ಹೆಸರು ಕವಿಶಿಷ್ಯ ತಳೆದ.

* * * *

ಪಡುವಣದ ಗಾಳಿ ಬೀಸುತ ಬಂತು ತಾಯ್ನೆಲಕೆ,
ವಿಷವುಂಡು ಕೊನೆಗೆ ಸೊದೆಗೆಳಿಸಿದಂತೆ ;
ಅಡಿಮೆಸಂಕಲೆ ಬಿಗಿಯೆ ಜನತೆಗಾಯ್ತೆಚ್ಚರಿಕೆ,
ಬಿಡುಗಡೆಯ ನೇಸರುದಯವ ಕಾಂಬ ಚಿಂತೆ,

ಎಚ್ಚರೆಚ್ಚರವಾಯ್ತು ಕೇಳಿತ್ತುಷಾಸೂಕ್ತಿ
ಕುಲಕೋಟಿ ಕಲಕಂಠ ಕೂಡಿಹಾಡಿ,
ನಮ್ಮ ತಾಯ್ನಾಡೆಂಬ ನಮ್ಮ ತಾಯ್ನುಡಿಯೆಂಬ
ಅಭಿಮಾನವನು ಮೆರೆದ ಮೋಡಿನೋಡಿ ;

ಆ ನವೋದಯವ ಕನ್ನಡಕುಲಕೆ ಮಂತ್ರಿಸಿದ
ಋಷಿಚೇತನವು ಪಂಜೆ ಮಂಗೇಶರಾಯ ;
ಏನು ದಿವ್ಯ ಸ್ಫೂರ್ತಿ ! ನಿನಗೆ ಸಂದಿದೆ ಕೀರ್ತಿ
ನೀ ನಡೆದ ಹಾದಿಯನು ಹಿಡಿದೆವಯ್ಯ,

ಸೀಮೆ ಕೊಂಕಣದ ತೆಂಕಣಗಾಳಿಯಾಟವನು
ಹಾಡಿ ಕವನದ ಚಿತ್ರ ಮೋಡಿ ಮೆರೆದೆ ;
ಎರೆದೆ ತುಳು ಪಾಡ್ದನದ ರಸದ ಸವಿಯೂಟವನು
ಅಮರಕಥೆ ಕೋಟಿಚೆನ್ನಯವ ನಮಗೊರೆದೆ.

ಭಾರತಕೆ ದಣ್ಣಾಯಕರನಿತ್ತ ವೀರಸೂ
ಅಮ್ಮೆ ಕಾವೇರಿ ಹರಿಸಿದ ನಾಡನು ;
ಕನ್ನಡದ ಕಾಶ್ಮೀರ ಕೊಡಗು ಭೂರಮೆ ಸೊಬಗು



ಹಿಗ್ಗಿ ಹಾಡಿದೆ ಹುತ್ತರಿಯ ಹಾಡನು ;
ನೀ ಕವನ ಗಾರುಡಿಗ, ಬಾಗಿಲಿನ ಬಿಲದೊಳಿಹ
ಹಾವ ತಲೆದೂಗಿಸಿದೆ ಹೂವಿನಂತೆ ;
ರವಿ ಮೂಡುವನು, ಚಂದ್ರ ತೇಲುವನು, ನಕ್ಷತ್ರ
ಮಿನುಗುವುವು– ಕವಿ ಮಂತ್ರವಾದಿಯಂತೆ !

ನಿನ್ನ ವಿಕ್ರಮ ಹಲವು, ನಿನಗೆ ಪ್ರಥಮದ ಗೆಲುವು,
ಸಣ್ಣಕತೆಗಳ ಜನಕ, ಶಿಶುಗೀತೆ ತಾತ ;
ನೀ ಹರಟೆಮ್ಲಲ ಮಾತಿಗೆ ಮಧುವ ಲೇಪಿಸಿದೆ
ಹಾಸ್ಯಪ್ರಬಂಧದಿ, ನವೋದಯ ವಿಧಾತ.

ಬಂಧು ನೀ ಬೆನಗಲಗೆ, ಸನ್ಮಿತ್ರ ಮುದ್ದಣಗೆ,
ಸಂಗಾತಿ ಕಾಮತಗೆ, ರಾಷ್ಟ್ರಕವಿಗೆ ಗುರು ;
ಕಾವೇರಿಯಿಂದ ಗೋದಾವರಿಯ ವರಮಿರ್ದ
ಕನ್ನಡದ ಕುಲಕೋಟಿ ಎಲ್ಲ ನಿನ್ನವರು !

ಒಬ್ಬನೇ ಪಂಜೆ, ಒಬ್ಬ ಮುದ್ದಣ್ಣ
ಒಬ್ಬ ರತ್ನಾಕರಣ್ಣ ;
ಒಬ್ಬ ಪೈ ಮತ್ತ, ಇಬ್ಬರಿಲ್ಲಂತೆ
ಹೋಲ್ವರಾರು ಇವರನ್ನ ?

ಬಂಜೆಯಲ್ಲ– ತುಳುತಾಯಿ ಪಡೆದಳು,
ಪಂಜೆಯಂಥ ಪುತ್ರರನು ;
ಕಂಡರಲ್ಲ– ಪಾಲ್ಗಡಲಿನೊಡಲೊಳು,
ಹರಿಯ ಹೃದಯರತ್ನವನು

* * * * *

## ರಾಷ್ಟ್ರಕವಿ

ಉನ್ನತೋನ್ನತ ಪಶ್ಚಿಮಾದ್ರಿಯು
ಬೆನ್ನ ಹಿಂದಕೆ ನಿಂತಿದೆ,
ಅಳೆಯಲಾರದ ಆಳದಗಲದ
ನೀಲಜಲಧಿಯು ಮುಂತಿದೆ.

ಅತ್ತ ಗಜಶಾರ್ದೂಲ ಗರ್ಜನೆ
ಇತ್ತ ಪೆರ್ದೆರೆ ಮೊರೆತವು
ಇಂಥ ಮೇಳವು ರಾಗತಾಳವು
ನಿನ್ನ ಸ್ಫೂರ್ತಿಗೆ ದೊರೆತವು.

ಗಂಧವತಿ ಈ ಪೃಥ್ವಿ, ಕಳಮೆಯ
ಕಂಪು ಹೊಲ ಸಿರಿಮಂಚವು,
ತೆಂಗುಕಂಗಿನ ತೋಟ ತಲೆಯನು
ತೂಗುತಿರೆ ರೋಮಾಂಚವು.

ಭೂತನರ್ತನ, ದುಡಿಯ ವಾದನ,
ಯಕ್ಷಗಾನವು ಪಾಡ್ದನ ;
ನದಿನಿನಾದವು ಪಕ್ಷಿಕೂಜನ
ನಿನ್ನ ಪ್ರತಿಭೆಗೆ ಸಾಧನ.

ಕರುಣೆಯಿಂ ಕವಿತಾವತಾರವು
ನಿನಗೆ ವಾಲ್ಮೀಕಿಯ ತೆರ,
ದೇವಪುತ್ರನ ಶಿಲುಬೆಗಿಕ್ಕಿದ
ನೋವು, ಗೊಲ್ಗೊಥದಾಕರ ;

ವೇಶ್ಯೆ ವಾಸವದತ್ತೆ ಮಸಣದಿ
ಬುದ್ಧ ಭಿಕ್ಷುವನೀಕ್ಷಿಸೆ,



ಕವಷ ದೇವರ್ಷಿಯ ಮಹಾ
ದಾಹಕ್ಕೆ ಸೂಕ್ತವು ಸಾಕ್ಷಿಸೆ .

ಉತ್ತಮರ ನೀಚತ್ವ ಪ್ರಕಟಿತ
ಹೆಬ್ಬೆರಳ ಬಲಿದಾನದಿ ;
ತಂಗಿಯಾದಳು ಸುಗತಗಾ
ಮಾತಂಗಿ ನಿರ್ಮಲ ಹೃದಯದಿ

ವೇದ ಬೈಬಲ್ ಧಮ್ಮಪದ
ಜೈನಾಗಮವನೀ ಜೀರ್ಣಿಸಿ ;
ಎತ್ತಿತೋರಿದೆ ರತ್ನದಂತಹ
ಕಾವ್ಯಕಥೆಗಳ ಪೂರ್ಣಿಸಿ

ಎದೆಯ ಸ್ನೇಹವನೆರೆದು ಉರಿಸಿದೆ
ಕಾವ್ಯನಂದಾದೀಪವ,
ಜೀವ ಕೃಷ್ಣಾರ್ಪಿತವೆಯೆಂಬೆನು
ಆ ಅಭಿನ್ನದ ಭಾವವ ;

ಆತ್ಮನಲಿ ಪರಮಾತ್ಮದರ್ಶನ
ಕಾಂಬ ಮಹಿಮಾದೃಷ್ಟಿಯು
ಅದೆ ನಿರಂತರ ನಿನ್ನ ಚಿಂತನ
ಅದಕೆ ಕಾವ್ಯದ ಸೃಷ್ಟಿಯು.

ಸತ್ಯದನ್ವೇಷಣೆಗೆ ತೊಡಗಿ
ಚರಿತ್ರೆ ಶೋಧನೆ ಮಾಡಿದೆ,
ಕವಿಯ ಕಾಲವ ಕಾವ್ಯದಾಳವ
ಮಥಿಸಿ ಬೋಧನೆ ನೀಡಿದೆ.

ನೀನು ಪಾಂಡಿತ್ಯದ ಹಿಮಾಚಲ
ಶಿಖರ– ಗೌರೀಶಂಕರ ;

ನಿನ್ನ ಬಣ್ಣಿಸಲೆನ್ನಳವೆ ? ನಾ
ಕಿರಿಯವನು ಕವಿಕಿಂಕರ.

ಕವಿತೆ ಸಂಶೋಧನೆಗಳುಭಯವು
ಸವ್ಯಸಾಚಿಸಿ ಸಾಗಿತು
ಆಂಗ್ಲ ಕೊಂಕಣಿ ಕನ್ನಡಗಳ
ತ್ರಿವೇಣಿಸಂಗಮವಾಯಿತು.

ಪದ್ಯದಲ್ಲಿಯು ಗದ್ಯದಲ್ಲಿಯು
ನಿನ್ನ ಶೈಲಿಯು ನಿನ್ನದೆ ;
ಒಬ್ಬ ಪೈ ಮತ್ತೊಬ್ಬರಿಲ್ಲವು
ಎಂಬ ಹೆಮ್ಮೆಯು ನಮ್ಮದೆ.

ತೌಳವರ ಇತಿಹಾಸ, ಇರುಳಲಿ
ಮುಚ್ಚಿ ಮರೆತಿರೆ, ಬೀರಿದೆ
ಬೆಳಕನಲ್ಲಿಗೆ, ತುಳುವ ನಾಡನು
ಮೆಚ್ಚಿ ಮಮತೆಯ ತೋರಿದೆ ;

ಮತ್ತೆ ಮರುಹುಟ್ಟಿದ್ದರೆನ್ನನು
ಮರುಳಿಸೌ ನಿನ್ನಂಕಕೆ–
ಎಂದು ತೌಳವ ಮಾತೆಯನು ನೀ
ಭಿನ್ನವಿಸಿದ್ಯೆ ಬಿಂಕದೆ.

ಹೆತ್ತ ಕೊಂಕಣಿ ತಾಯಿ ನಿನ್ನನು
ಇತ್ತಳೈ ತುಳುವಬ್ಬೆಗೆ,
ಹೊತ್ತು ಮೆರೆಸಿದಳಲ್ತೆ ಕನ್ನಡ
ಮಾತೆ ಬೆಳಕಿಗೆ ಹಬ್ಬುಗೆ !

ಭಾರತಾಂಬೆಯ ಭಕ್ತಿಯೆನಿತೋ
ಆತ್ಮಶಕ್ತಿಯನಿತ್ತಿತ್ತು ;



ಎಲ್ಲ ತಾಯದಿರೆಲ್ಲ ಹರಕೆಯು
ನಿನ್ನ ಸಿರಿಮುಡಿಗೆತ್ತಿತ್ತು.

ದಾಸ್ಯದೈತ್ಯನ ಮುರಿಯೆ ಬಿಡುಗಡೆ
ದೇವರಿಗೆ ಕರೆ ನೀಡಿದ ;
ಭರತಮಾತೆಯ ಕಂಬನಿಯ ಕಿಡಿ
ನಿನ್ನ ನುಡಿಯೊಳು ನೋಡಿದೆ.

ತೃಷೆಗೆ ಎರೆದಾ ನೀರು ಹಾ !
ಉಪ್ಪಾದುದೆನ್ನುತ ಮರುಗಿದೆ ;
ರಾಹು ತೊಲಗಿಸಿ ಕೇತು ತಂದೆಯ
ತಂದೆ ? ಎನ್ನುತ ಕೊರಗಿದೆ.

ಜೇನು ಸುರಿಯುವ ಹಾಲು ಹರಿಯುವ
ನಾಡು– ಕನ್ನಡ, ಹಾಡಿದೆ;
ತಾಯೆ ಬಾ ಮೊಗತೋರು, ಮಕ್ಕಳ
ಹರಸು, ಎನ್ನುತ ಬೇಡಿದೆ.

ಬೆಣ್ಣೆ ಬರುತಿರೆ ಮಂತು ಮುರಿಯಿತೆ ?
ನಿನ್ನ ನೆಲ ಹೊರಗುಳಿಯಿತೆ ?
ಹಂತ ! ಗೂಬೆಯ ಗುಂಪು ಗಿಳಿಗಳ
ಹಿಂಡ ಚೆದರಿಸಿಹೋಯಿತೆ ?

ಪುಣ್ಯಸ್ಮರಣೆಗೆ ಕವನ ಪುಷ್ಪವ
ಅರ್ಪಿಸುವರೈ ಕವಿಗಳು ;
ಆನು ಕಣ್ಣೀರ್ತುಂಬಿ ತಂದಿಹೆ,
ಬಾಷ್ಪಬಂಧುವೆ ಕೈಕೊಳು.

ಶೋಕವೇ ಶ್ಲೋಕತ್ವ ಪಡೆಯಿತು
ಎನ್ನ ಹೃದಯದ ರಂಗದಿ,

ಕಾವ್ಯಕೌಮುದಿ ಕ್ಷೀರಸಿಂಚನ
ನಿನ್ನ ಹರಕೆಯ ಸಂಗದಿ.

* * * *

## ಈ ನಾಡು

ಉತ್ತರದಲಿ ಸೀತಾನದಿ ಗಡಿಯು,
ದಕ್ಷಿಣದಲ್ಲಿ ಪಯಸ್ವಿನಿಯು,
ಪೂರ್ವದಿ ಪಶ್ಚಿಮಗಟ್ಟವೆ ಮೇರೆ,
ಪಡುವಲು ಸುತ್ತಿದೆ ಕಡಲತೆರೆ,

ಈ ನಾಡನು– ತುಳುನಾಡನು, ಹಿಂದಕೆ
ಆಳಿದರರಸರು ದೊರೆತನದಿ ;
ಅಜಿಲರು, ಚೌಟರು, ಬಂಗರು, ಬಲ್ಲಾ–
ಳರು, ಸಾಮಂತರು ಮನೆತನದಿ.

ವಿಟ್ಟಲ, ಕುಂಬಳೆ, ಬಾರ್ಕೂರೆನ್ನುತ
ಸೀಮೆಗಳಿದ್ದುವು ಹಲವಿಲ್ಲಿ ;
ಸೀಮೆಗಳಾಳಿದ ರಾಜರ ಸಂತತಿ
ಇಂದಿಗು ಕೆಲವಿವೆ ಹೆಸರಲ್ಲಿ !

ಎಲ್ಲಾ ಸೀಮೆಯನ್ನೆಲ್ಲಾ ದೊರೆಗಳು
ಚಂದದೊಳಾಳಿದರೆಂದಲ್ಲ ;
ಆದರು, ರಾಜ್ಯದಿ ದಾನಧರ್ಮಗಳು
ನೇಮನಡಾವಳಿ ಕುಂದಿಲ್ಲ.

ಕಲ್ಲನು ಕೆತ್ತುತ ಜೀವವ ತುಂಬಿ
ತೋರಿದರೈ ತುಳು ಶಿಲ್ಪಿಗಳು !



ಸಲ್ಲಲಿತದ ಸವಿ ಪಾಡ್ದನ ಹಾಡಿ
ಉಬ್ಬಿದರೈ ತುಳುಕಬ್ಬಿಗರು.

ಹಾ ! ಕಾಲನ ಭೇತಾಲನ ಕುಣಿತಕೆ
ಅಂದಿನರಮನೆಗಳುರುಳಿದವು;
ಕಲಸಕನ್ನಡಿಯು, ಕೋಟೆಕೊತ್ತಳವು,
ಮಂದಿಮಾರ್ಬಲವು ಹೊರಳಿದವು !

ಸಿರಿಪಟ್ಟವನೇರಿದ ನೆಲದಲ್ಲಿ,
ನರಿಗಳು ನಾಯಿಗಳೋಡುತಿವೆ ;
ಸಿರಿವಂತರು ಬಾಳಿದ ಮನೆಯಲ್ಲಿ,
ಹಾವು ಹೆಗ್ಗಣವು ಕೂಡುತಿವೆ.

ಅಂದಿನ ಸಂಭ್ರಮ ವಿಪುಲವೈಭವಗ–
ಳಿಂದಿಗದೆಲ್ಲವು ಬರಿ ಕನಸು !
ಹಿಂದಿನ ವೀರರ ಕತೆಗಳ ನೆನೆದೇ
ಕಂಬನಿ ಸುರಿಸುತಲೆದೆತಣಿಸು !

ದೇಶವು ಭಾಷೆಯು ನಮ್ಮದಿದೆಂದು
ಹಿಗ್ಗುವ ಕಾಲದಿ ಜನರೆಲ್ಲ;
ಈ ನಾಡಿನ ಮಂದಿಯ ಹಣೆಯಲ್ಲಿ
ಆ ಭಾಗ್ಯವ ವಿಧಿ ಬರೆದಿಲ್ಲ.

* * * *

# ಚತುರ್ದಶಿ

"ನೇಗಿಲಿನ ಸಮಕೆ ಲೇಖನಿ ಹಿಡಿದಕಯ್ಯಲ್ಲಿ
ಗೆರೆ ತಪ್ಪಿದಿರೆ ಬರೆವೆ, ಭೂಪಟದಿ ಪುಟದಿ;
ತಲೆಯ ತೂಗಿತು ತೆನೆಯ ಭಾರದಲಿ ನವಶಾಲಿ
ಅರಳಿ ಬಂದಿತೊ ಕವಿತೆ, ಹೊಸತು ಸಂಪುಟದಿ"



ನಾದ : ಆರು – ಚತುರ್ದಶಿ

## ವೇದವ್ಯಾಸಗೆ

ವೇದಗಳ ಹಂಚಿಟ್ಟು ಹೆಸರಾಂತ ಋಷಿ ನೀನು
ಹೇ ವೇದವ್ಯಾಸಾರ್ಯ, ನಿನ್ನದಾದಿಮ ಕಾರ್ಯ–
ವೈ ಭುವನಕವನಸಂಗ್ರಹದಲ್ಲಿ, ಅಲ್ಲದೊಡೆ
ಈ ಚತುರ್ವೇದವಿದು, ಪೌರ್ವಸ್ತ್ಯ ಪೂರ್ವ ಸಂ–
ಸ್ಕೃತಿ ಸಾರಸರ್ವಸ್ವಾರಸ್ಯವಿದು– ಪ್ರಕೃತಿ ಮಾ–
ತೆಯ ಪ್ರೇಮದಾಮೋದದಾವೇಶಕಂದೊಲಿದ
ನಮ್ಮಾರ್ಯ ಋಷಿವರರ ಭಾವನಾಲಹರಿಯಿದು,
'ಚಿರಮಪೌರುಷಮೆ'ಂಬ ಘನತೆಯಂಗೊಳುತಿತ್ತೆ ?

ಐದನೆಯ ವೇದವೆನೆ ವಿದಿತವೈ ನಿನ್ನ ಕೃತಿ
ಶ್ರೀ ಮಹಾಭಾರತವು, ನವಶಕ್ತಿಯುತಮಾದ
ಭವದೀಯ ಲೇಖನಿಯು, ಚಿರವಿನೂತನ ರಾಜ
ಕೀಯ ತತ್ವದ ಖನಿಯು– ಪಶುಪಂಥವಂ ಮೆಟ್ಟಿ
ಮುರಿದಿಕ್ಕಿ ಸತ್ಯಧರ್ಮಕೆ ಪಟ್ಟ ಕಟ್ಟಿಸಿದೆ;
ಭರತಪುತ್ರರ ಘೋಷವನು ಮುಗಿಲು ಮುಟ್ಟಿಸಿದೆ.

* * * *

## ಆದಿಕವಿಗೆ

ಆದಿಕವಿ ವಾಲ್ಮೀಕಿ ರಾಮಾಯಣಾಮೃತದಿ
ಸಾಹಿತ್ಯ ಸುಮನಸರ ಸೊಗಬಡಿಸಲಿಲ್ಲವೆ ?
ಸವಿಯುಣಿಸಲಿಲ್ಲವೆ? ನಿಜವೆನ್ನಿ, ಶರಣೆನ್ನಿ,
ಹಿಂದಲ್ಲ ಇಂದಿಲ್ಲ ಮುಂದಿಗೂ ಎಂದಿಗೂ

ಅ ಕವಿಯೆ ಆದಿಕವಿ; ಅದೆ ಚಿರಂತನಕಾವ್ಯ,
ಓ ಭವ್ಯ ಕಾವ್ಯರ್ಷಿ, ಕರುಣೆಯಲಿ ಕಳೆಗೊಂಡ
ಸರಸತಿಯು ತಾನರಸಿ, ನಿನ್ನ ನಾಲಿಗೆ ತುದಿಯ
ತಾನೇರಿ ನಲಿಯುತಿರೆ, ಮಂದ ಹಾಸವ ಬೀರಿ
ಕಾವ್ಯಸೃಷ್ಟಿಯ ತೋರೆ, ತನ್ನನೇ ತಾ ಮರೆತೆ ;
ರಾಮನಾಮಾಮೃತವ ಪುಣ್ಯಪಾವನಕಥೆಯ
ಅಪ್ರತಿಮ ಸಂಪ್ರತಿಯ ಬರೆಬರೆದು ಹರ್ಷಿಸಿದೆ,
ಹಾಡಿಕೊಂಡಾಡಿಸಿದೆ, ಸಂಸ್ಕೃತದ ಕೃತಿರಚನೆ–
ಯಲಿ ನೀನು ಕಾಳಿದಾಸಗೆ ಗಣ್ಯಗುರುವೆಂದು
ರಸಿಕಲೋಕವೆ ನಿನಗೆ ತಲೆವಾಗುತಿಹುದಯ್ಯ.

* * * *

## ಶೂದ್ರಕಗೆ

ಸುರನರೋಭಯತಲೋಕಜೀವನವ ಜತೆಗೆಯ್ದು
ಭವಭೂತಿ ಕಾಳಿದಾಸರ ನಾಟಕಗಳೋದಿ
ಸಾಹಿತ್ಯ ಸವಿಯುಂಡು– ರಸಲೋಕ ಕೊಬ್ಬುತಿದೆ,
ಆದೊಡೇಂ ಶೂದ್ರಕನೆ, ನಿನ್ನಂತೆ ಎನ್ನಮನ
ವಂ ಸೂರೆಗೊಂಡವರು ಬೇರಿಲ್ಲ, ನಿಜ ಸಮಾ–
ಜದ ಚಲನಚಿತ್ರವಂ ತೆಗೆಮೊಗೆದು ತೋರಿಸಿದ
ಸಾಹಸಿಕರವರಲ್ಲ, ಸಂಸ್ಕೃತಸುನಾಟ್ಯ ಮಂ–
ದಿರವ ಬೆಳಗುವದೊಂದೆ ನಿನ್ನ ರೂಪಕ ದೀಪ.

ಜಡಶಾಸ್ತ್ರಿಗಳೊ ಪೂರ್ವ ಪೌರಾಣಿಕರೊ, ಕೆರಳಿ
'ಮೃಚ್ಛಕಟಿಕ'ವ ಮುರಿಯೆ ದಂಡುದೂಡಿರಬಹುದು;
ಸುಂದರ ಕಲಾಕೃತಿಯ, ಭಾವನಾ ಸಂಸ್ಕೃತಿಯ
ರಸ ಶತ್ರುಗಳು ತೆಗಳೆ ಕುಂದುಂಟೆ ? ಕವಿರಾಜ,
ಮಾತೆ ಭಾರತಿ ನಿನ್ನ ಕಾವ್ಯ ಕುಸುಮವನಾಯ್ದು
ವರಕಿರೀಟದೊಳಿಂತು ಮೆಚ್ಚಿ ಮುಡಿದಿಹಳಲ್ತೆ.



## ಧರ್ಮಚಕ್ರಪ್ರವರ್ತನೆಗೆಂದು ವೇಗವನು ನೀಡಿದನು

ಆದಿ ತೀರ್ಥಂಕರನು, ಋಷಭದೇವನು, ಯುಗದ
ಆದಿಯಲಿ ಸಾರ್ದೊಂದನಾದಿಸಿದ್ಧಾಂತವನು
ಸಾಧಿಸಿದ ಬೋಧಿಸಿದ ಜಗಜೇತ ಜಿನನೀತ,
ವೀತರಾಗನು ಕಪ್ಪುರದ ತೆರದಿ ಕರ್ಮಗಳ
ಸುಟ್ಟುರುಹಿ ಬಾಳ ಬೆಳಗಿಸಿದ ಜ್ಯೋತಿರ್ಮೂರ್ತಿ.
ರತ್ನಭಂಡಾರಗಳು ಹುಟ್ಟಿನೊಳೆ ವರ್ಧಿಸಿರೆ,
ವೀರತ್ವದಿಂದ ದುರ್ಭೂತಗಳ ಮರ್ದಿಸಿರೆ,
ವರ್ಧಮಾನನು– ಮಹಾವೀರನೆನೆ ಜಸವಡೆದ.

ಹಿಂಸೆ ಸಲ್ಲದು, ಸಂಯಮದಿ ತಪದಿ ಬಾಳುವುದು,
ಕಾಮಕ್ರೋಧಾದಿ ಶತ್ರುಗಳ ನಿಗ್ರಹಿಸುವುದು,
ರತ್ನತ್ರಯಂಗಳನು ಸಾಧಿಸುತ್ತ ಜಿನನಹುದು,
ಇಂತು ಧರ್ಮದ ತಿರುಳನರುಹಿದರ್ಹಂತಮುನಿ,
ಧರ್ಮಚಕ್ರಪ್ರವರ್ತನೆಗೆಂದು ವೇಗವನು
ನೀಡಿದನು: ತನ್ನ ತಪದೊಂದು ಹಿರಿಭಾಗವನು.

* * * *

## ನಮಸ್ತೆ

ಗದ್ದೆ ಕೆಸರನು ಕುಡಿದು, ಕಾಡುಮುಳ್ಳನು ಕಡಿದು
ಮುಂಜಾನೆಯಿಂದ ಸಂಜೆಯವರೆಗೆ ದುಡಿದುಡಿದು,
ಚಳಿಯೊ ಮಳೆಯೋ ಬಿಸಿಲೊ ಬೇಗಿಯೆಲ್ಲವ ಸಹಿಸಿ,
ಬೆವರು ಕಂಬನಿರಕುತ ಸುರಿಸಿ ನೆಲವನು ತಣಿಸಿ,
ಕೆಸರಿನಿಂದಮೃತಕಲಶವನೆತ್ತಿ ಕೊಡುತಿರುವೆ;

ಹಸಿದ ಬಾಯಾರಿದ ಜಗತ್ತಿಗನ್ನವನೆರೆವೆ !
ಸಸ್ಯಶ್ಯಾಮಲೆ ಸುಜಲೆ ಸುಫಲೆ ಮಾತೆಯ ಪುಣ್ಯ–
ಪುತ್ರ ರೈತ ನಮಸ್ತೆ, ನೀನೆ ಪರಮ ಪವಿತ್ರ.

ನಿನ್ನ ಋಣವೆನಗೆ ಹಿರಿದುಂಟಿದನು ತಿಳಿದಿಹೆನು,
ನಿನ್ನ ಗೈಮೆಯ ಮೈಮೆಯಿಂದಲೇ ಬದುಕಿಹೆನು ;
ದಿನದಿನಂ ದುಡಿವ ನಿನ್ನಯ ಧೀರ ಹೆಜ್ಜೆಯಲಿ,
ಧರ್ಮಚಕ್ರದಿ ಧರಣಿ ತಿರುಗುತಿಹುದಚ್ಚಿನಲಿ;
ಮುಂದುಮುಂದಕೆ ಮುಂದನಂತಕಾಲದವರೆಗೆ
ತವ ಋಣಂ ತೀರಿಸುವ ಕುಲ ಪರಂಪರೆಯೆನಗೆ.

* * * *

## ಗೋವೆ ನೋವ್ ಮಾಸಿಲ್ಲ

ಮೈಗಂಟಿರುವ ಬೇನೆ ಮದ್ದಿಂದ ಮಾಸದಿರೆ
ವೈದ್ಯರೆಂದರೆ : ಕೊರೆತವೊಂದೆ ಗತಿಯೆಂದು,
ಶಸ್ತ್ರಪ್ರಯೋಗ– ಹಿಂಸಾಕೃತ್ಯ ತಿಳಿದಿತ್ತು.
ವಿಧಿಯಿಲ್ಲದಾಯ್ತು! ಮಂಚದಿ ಮಲಗಿದಂದು–
ಕಣ್ಗೆ ಬಟ್ಟೆಯ ಕಟ್ಟಿ, ಮೈಗೆ ಸೂಜಿಯ ಚುಚ್ಚಿ
ಕೊರೆಕೊರೆದರತ್ತಲಿತ್ತಲು ಸುತ್ತ ನಿಂದು...........

ಉಳಿವಳಿವುಗಳ ಸೆಳೆತಗಳ ನಡುವ ಸಿಲುಕಿತ್ತು
ಪ್ರಾಣಪಕ್ಷಿಯು, ಕೆಳಗಗಾಧ ಜಲರಾಶಿ !
ವೈನತೇಯನೆ ಮೇಲೆ ಹಾರುತಿಹ ಹೊಂಚಿಕ್ಕಿ,
ಗರಿಗೆದರದೆಯೆ, ಮುದುಡಿತ್ತೈ ಜೀವಹಕ್ಕಿ !
ಭವ ಬಂಧನವೊ, ನಲುಮೆ ನಚ್ಚುಗೆಯೊ ಮೆಚ್ಚುಗೆಯೊ,
ಬದುಕಿನದೆನು; ವೈದ್ಯರೆಂದರು –ವಾಸಿಯೆಂದು !
ರಾಷ್ಟ್ರ ದೇಹದ ರೋಗ ಗೋವೆ ನೋವ್ ಮಾಸಿಲ್ಲ ;
ಅದಕೆ ಚೂರಿಯ ಚಿಕಿತ್ಸೆಯನೊರೆದರಿಲ್ಲ !

* * * *



## ಲೆನಿನ್

ಶೋಷಣೆಗೆ ಕನಲಿ ಘೋಷಣೆಗೆಯ್ದೆ, ನಿನ್ನೊಡನೆ
ಜನತೆಯುದ್ಘೋಷಿಸಿತು– ಬಾಂದಳಂ ಬಿರಿವಂತೆ !
ಕತ್ತಿಸುತ್ತಿಗೆ ಕೆತ್ತಿರುವ ಕೆಂಪು ಬಾವುಟವ
ಎತ್ತಿ ನಡೆದೈ ಲೆನಿನ್ ! ಮುಂಚೂಣಿಯಲಿ ಮುಂತೆ !

ನಿನ್ನೆದೆಯ ಕೆಚ್ಚುನೆಚ್ಚುಗಳ ಕಿಡಿ ಧಳ್ಳುರಿದು
ಸುಟ್ಟಿತೋ ದಾವಾಗ್ನಿ ಕಾಡೆಲ್ಲ ಸುಡುವಂತೆ !
ದರ್ಪಸರ್ಪಗಳು ವಿಷಗಳ ಕಾರಿ ಮುರುಟಿದುವು!
ಮತ್ತೆ ಸಮತೆಯಸೃಷ್ಟಿ; ಕ್ರಾಂತಿಯಿಂ ಸಂತುಷ್ಟಿ.

ನಿನ್ನ ಹುಟ್ಟಿಂದ ಹಿರಿದಾದ ರಷ್ಯದ ನಾಡ
ನಾನಿನ್ನು ಕಂಡಿಲ್ಲ; ನಿನ್ನ ಸ್ಫೂರ್ತಿಯ ಪಡೆದು
ಹೆಮ್ಮೆಯಿಂ ತಲೆಯೆತ್ತಿ ನಡೆಯುವಾ ನಾಡವರ
ಜೊತೆಗೂಡಿ ಉಂಡಿಲ್ಲ; ಜಗಜನತೆ ಋಣಿಯೆಲ್ಲ.

ನಿನ್ನ ಗರಿಮೆಯನು ಗುರುತಿಸಬಲ್ಲೆ ನಾನಿಲ್ಲೆ;
ಹಿಂಸೆಕಳೆದರೆ ಗಾಂಧೀತಾತನದೆ ನಿನಗೆ ಬೆಲೆ.

* * * *

## ಗಾಂಧೀಜಿಗೆ

ಎನಿತು ಶತಮಾನಗಳ ನಿಶ್ಚಲ ತಪೋನಿಷ್ಠೆ
ಫಲಿಸಿತೋ, ಭಾರತಿಯ ಸೌಭಾಗ್ಯ ಬೆಳಗಿತೋ,
ಸತ್ಯ ನಿರ್ಮಲ ಶಾಂತ ಮೂರ್ತಿ ಗಾಂಧೀಜಿ, ನಿಮ್ಮ
ಪುಣ್ಯ ಜನ್ಮೋದಯದ ಮಂಗಳೋತ್ಸವದಂದು !

ಅಸ್ತೇಯ–ಶುದ್ಧಿ–ದಯೆ ಸ್ಥಿರ ಸತ್ಯವ್ರತಗಳಲಿ
ಸಿದ್ಧಿಗೊಂಡಿಹ ನಿಮ್ಮ ಜೀವ ಪಾವನವಾಯ್ತು;
ಹೆತ್ತೊಡಲಿಗಮೃತಸಿಂಚನವಾಯ್ತು ನಿಮ್ಮಿಂದ
ರಾಷ್ಟ್ರ ಸರ್ವಾಂಗದಭ್ಯುದಯ ಸಾಧನೆಯಾಯ್ತು.

ದರ್ಪಮದ ಮೋಹಿತರು ಸ್ವಾರ್ಥಸುಖಸಾಧಕರು
ಮತಿಗೆಟ್ಟ ಮಾನವರು ಜಗವ ಪೀಡಿಸುತಿರಲು
ಪಶ್ಚಿಮದ ಭೂದೇವಿ ಕೆರಳಿದಳೆ? ಪ್ರಳಯ ಪಂ–
ಥವತೊಟ್ಟು ಲೋಕನಾಶಕೆ ಮನವ ಮಾಡಿದಳೆ ?
ಜೀವಿಗಳು ಕೂಗುತಿವೆ: ಕಾಪಾಡಿ ಕಾಪಾಡಿ–
ರೆಂದನ್ಯಗತಿಯಿಲ್ಲದಿಂದು ನಿಮ್ಮನೆ ನೋಡಿ.

* * * *

## ರವೀಂದ್ರಗೆ

ಹಿಮಗಿರಿಯ ಮುಂದೆ–
ಗುಂಪೆಯ ಗುಡ್ಡೆಯೆಂತು,
ಭಾಗೀರಥಿಯ ಬಳಿ–
ಪಯಸ್ವಿನಿಯದೆಂತು,
ರವಿರಶ್ಮಿಯಿದಿರು–
ಹೊನ್ನೆಣ್ಣೆ ಸೊಡರೆಂತು,
ಗರುಡಪಕ್ಷಿಯ ಜತೆಗೆ–
ಗುಬ್ಬಚ್ಚಿಯೆಂತು,
ನೀ ಮಹಾಕವಿ ವಿಶ್ವಕವಿಯೆನಿಸಿ ಮೆರೆದೆ ;
ನಿನ್ನ ಹಿರಿಮೆಗೆ ಹಿಗ್ಗಿ ನಾ ತೊದಲ್ನುಡಿದೆ.
ನಾಡಿನ ನವೋದಯಕೆ–
ಹಾಡಿದೈ ಕವಿಗುರುವೆ !
ಶತಕದುತ್ಸವಕೆ–
ಕಿರಿಯಂ ಶಿರವ ಮಣಿವೆ !



## ಗೆರೆ ತಪ್ಪದಿರೆ ಬರೆವೆ

ಅರ್ಧ ಶತಮಾನ ದಾಂಟುತ ಬಂತು ಜೀವನದಿ;
ಕಾಲು ಕೆಸರಲಿ ಮಿಕ್ಕ ಕಾಲು ಮರಳಿನಲಿ;
ಅಡಿಮೆ ಹೊಲೆ ಕೊಳೆಯಾಯಿತಾಯುಸ್ಸಿನರೆ ಬದುಕು
ಬಿಡುಗಡೆಯ ಬೇಗೆಗೆ ನಿವೃತ್ತಿ ಹುಡುಕು.

ಅಂದಿಗೂ ಶ್ರಮವೆ ದೈವತವೆಂದು ನೆರೆನಂಬಿ
ನಿಂದವನು, ಮೇಣದರ ಬಲದೆ ಬದುಕಿದೆನು;
ಇಂದಿಗೂ ದುಡಿತವೊಂದೇ ಹಿಡಿತವೀ ಬಾಳ
ಹುದರಕ್ಕಾಧಾರವೆಂದೆ ಬಿಡದಿಹೆನು.

ನೇಗಿಲಿನ ಸಮಕೆ ಲೇಖನಿ ಹಿಡಿದ ಕಯ್ಯಲ್ಲಿ
ಗೆರೆ ತಪ್ಪಿದಿರೆ ಬರೆವೆ ಭೂಪಟದಿ, ಪುಟದಿ;
ತಲೆಯ ತೂಗಿತು ತೆನೆಯ ಭಾರದಲಿ ನವಶಾಲಿ,
ಅರಳಿ ಬಂದಿತೊ ಕವಿತೆ, ಹೊಸತು ಸಂಪುಟದಿ.

ಮೆಚ್ಚುಗೆಯೊ ಚುಚ್ಚುಗೆಯೊ ಬಂದದ್ದು ಬರಲಿ;
ನೇಗಿಲಿನ ಜತೆಗೆ ಲೇಖನಿ ಕಯ್ಯೊಳಿರಲಿ.

* * * *

## ಎಂಥ ಕಾಣ್ಕೆಗೆ ಕಣ್ಗಳಿತ್ತೆ

ಇಹುದು: ಮೂಡಲಲಿ ಮೈಮೆಯೆ ಮೆಯ್ಯ ಪಡೆದಂತೆ
ಗಂಭೀರ ಧ್ಯಾನಸ್ಥಮೂರ್ತಿ ಪರಶಿವನಂತೆ
ಗರಿಮೆಗಿರಿ ಸಹ್ಯಾದ್ರಿ; ನೋಡದರ ಕೋಡಿನಲಿ
ಜಗಕೆ ಕಣ್ಣಾಗಂತಲಿ, ತಿಳಿವಿನಂಜನ ಚೆಲ್ಲಿ
ಮೂಡಿದನು ಉದಯರವಿ; ನೀಡಿದನು ಹೊಸ ಬದುಕ.

ದೂಡಿದನು ತೊಲಗು ತೊಲಗೆಂದು ಕತ್ತಲೆಯ ಶನಿಯ
ಹಾಡಿದನು ಕಾವ್ಯಸ್ಥ ಕಾವ್ಯವೆನೆ ಋತ ಕಥೆಯ.

ದೇವಕಾರುಣ್ಯದ ಮಹಾಗಾನ ಕೇಳಿದೆನು.
ಗಂಧವತಿ ರತ್ನಗರ್ಭೆಯ ಪ್ರಭೆಯ ನೋಡಿದೆನು.
ಪುಣ್ಯಸ್ಪರ್ಶದಿ ಸ್ವರ್ಣಪುಷ್ಪ ಪರಿಮಳಿಸಿತ್ತು;
ಅಲ್ಪತೆಯ ಹನಿ ಕರಗಿ ಮಿರುಗೆ ವಜ್ರ ಮಹತ್ತು !

ಎಂಥ ಕಾಣ್ಕೆಗೆ ಕಣ್ಗಳಿತ್ತೆ ಎನ್ನೊಡೆಯ;
ಅವತಾರ ಯುಗಕೊಮ್ಮೆಯೇ ಮಹಾಕವಿಯ.

* * * *

## ಧನ್ಯವಾದ

ಎನ್ನ ಜನನಿಯ ಪುಣ್ಯಗರ್ಭದೊಳು ನಾ ಜನಿಸೆ
ನೆರವಾದ ಆ ಅಗೋಚರ ಶಕ್ತಿಗೆ,
ಎನ್ನ ಮೈಮನಗಳಿಗೆ ಬಾವನ್ನ ತಂಪೆನಿಸೆ
ಕಾಯುತಿಹ ಕಾರುಣ್ಯದಾ ಮೂರ್ತಿಗೆ,
ಎನ್ನ ಬಾಳಿನ ಬಟ್ಟಲಲಿ ಜೇನನೆರೆದೆರೆದು
ಜೀವ ಸವಿಯಾಗಿಸಿದ ಆ ನಲ್ಮೆಗೆ
ಎನ್ನ ತಗ್ಗಿದ ಶಿರಕೆ ಹರಕೆಯಕ್ಷತೆ ಸುರಿದು
ಬೆಳ್ಗೊಡೆಯ ನೆರಳಿತ್ತ ಆ ಬಲ್ಮೆಗೆ

ಸಲಿಸುವೆ ಕೃತಜ್ಞತೆಯ, ಋಣವೆನಗೆ ಹಿರಿದು;
ಸಲಿಸುವೆನು ವಂದನೆಯ, ಬೊಗಸೆ ಕೈ ಮುಗಿದು;
ಸಲಿಸುವೆನು ಸ್ನೇಹವನು, ಮನಸಾರೆ ನೆನೆದು;
ಸಲಿಪೆ ಸರ್ವಸ್ವವನು; ಸುಖಿಯು ಹೊರೆಯಿಳಿದು.



# ತತ್ತ್ವ ಸತ್ತ್ವ

"ನಿಶೆಯಲಿ ಶಶಿ, ಶಿಲೆಯಲಿ ಪೊನ್,
ಪಂಕದಿ ಪಂಕಜವು;
ತೊಗಲೆಲುಬಿನ ಮಾಂಸದ ಮೆಯ್,
ಅಂತರ ಚಿಂತನವು."



ನಾದ : ಏಳು – ತತ್ವ ಸತ್ವ

## ಅವನೆ

ಆವನಂ ತಿಳಿಯಲೆಂ
ದೀ ಜಗದಿ ಜೀವಿಗಳು
ಸಾವು ನೋವುಗಳಿಲ್ಲದಲೆಯುತಿಹವೊ:

ನಿಮಿಷದಿಂ ದಿನವಾಗೆ
ದಿನದೊಳಬ್ದವು ಸಾಗೆ,
ಶತಮಾನ ಶತವಾಗಲರಿಯದಿಹನು.

ವೇದಗಳ ಬೋಧೆಯಲಿ,
ಸಾರುವ ಪುರಾಣದಲಿ
ಶಾಸ್ತ್ರಗಳ ಸೂತ್ರದಲಿ ಸೇರದಿಹನು.

ತಾತ್ವಿಕರ ತತ್ವದಲಿ,
ಮೌನಿಗಳ ಮೌನದಲಿ,
ತಾರ್ಕಿಕರ ತರ್ಕದಲಿ, ಸಿಲುಕದಿಹನು. ॥೧॥

ಅಳೆಯಲಾರದ ಆಳ–
ದಳತೆಯೊಂದಿರುವಲ್ಲಿ
ನೆಲೆಸಿರುವನೆಂದೆಲ್ಲ ವಾದಿಸುವರು

ಆಕಾಶದವಕಾಶ
ದರಮನೆಯನರಿತಲ್ಲಿ,
ಬೇಕಾದ ಸಂಪದವ ಸಾಧಿಸುವರು.

ಬಾಹ್ಯತೆಯಸಹ್ಯದಲಿ
ಆಂತರ್ಯದಾಳವನು
ಗಾಹಿಸುವಗಾಧದಲಿ ಶೋಧಿಸುವರು.

ಗಗನದಗಲದೊಳರಿತು
ಹಸನಾದ ಕುಸುಮವನು
ಸೊಗಸಾದ ಸೌಸವಕೆ ಮೋದಿಸುವರು. ॥೨॥

ಕಾಣಲಾರದ ತಾಣ–
ದೊಳಗಿರುವ ಕಲ್ಪನೆಯ
ಜ್ಞಾನ–ವಿಜ್ಞಾನವಿದು ವ್ಯರ್ಥವಲ್ಲ ?

ಪೋಗದೂರಿಗೆ ಬರೆಯ
ದೊಂದು ಪತ್ರವನಿತ್ತು
ಸಾಗಿಸುವ ಸಾಹಸದೊಳರ್ಥವಿಲ್ಲ.

ಸಂಸಾರದೀ ಸಾರ
ಸರ್ವ ಸಂಗ್ರಹದಲ್ಲಿ
ಸೇರದಿರುವನು ಕಂಡು ಸಾರ್ಥವಿಲ್ಲ. ॥೩॥

ಬೆಳಕನ್ನು ಪೊತ್ತೆತ್ತಿ
ತಿಳಿವಿಕೆಯನಚ್ಚೊತ್ತಿ
ಬೆಳಗುವರುಣನೊಳಿರ್ಪ ಅರುಣತೆಯದಾರ್ ?

ಮೂಡಣಿಂದೆದ್ದು, ಪಡು–
ವಣ ಕಡಲಿನೊಳಬಿದ್ದ
ಕತ್ತಲೆಯ ಕಿತ್ತಾರ್ಯನಾರ್ಯತೆಯದಾರ್ ?



ಗಾಢಾಂಧಾಕಾರದಲಿ
ಭೀಕರದ ಮೌನದಲಿ
ಗೂಢತೆಯ ಜೋಡಿಸಿಹ ನಿರ್ಲಿಪ್ತನಾರ್ ?

ಬಾಲಕರ ಬಾಲ್ಯದಲ್ಲಿ
ಚೆನ್ನಿಗರ ಚೆಲುವಿನಲಿ
ಲೋಲತೆಯ ಪಾಲಿಸಿಹ ಲೀಲಾತ್ಮನಾರ್ ?

ಕವಿಯ ಮಾತಿಗೆ ಬಂದು
ಭವ್ಯಭಾವವತಂದು
ನವ್ಯಕಾವ್ಯವ ರಚಿಸೆ ಸಾಹಾಯ್ಯನಾರ್ ?

ಶುದ್ಧಹೃದಯನು ಪಡೆವ
ನಿತ್ಯಮುಕ್ತಿಯೊಳಿರುವ
ಸತ್ಯ–ಶಾಂತಿಯ ಪ್ರೇಮದೊರತೆಯವನೇ.

ಅರುಣನರುಣತೆಯಲ್ಲಿ
ಸೂರ್ಯನಾರ್ಯತೆಯಲ್ಲಿ
ಸತ್ಯ–ಸೌಂದರ್ಯದಲಿ ವ್ಯಾಪ್ತನವನೇ.

ಚೆಲುವ ಚೆನ್ನಿಗರಾಯ
ಕವಿಯ ಕಾವ್ಯದ ಜೀವ
ಒಲುಮೆಗಲೆಯುತ ಕಾವ ದೇವನವನೇ. ॥೪॥

## ಚಿಂತನೆ

ಓ ಸನ್ಮಯ ! ನಿನ್ನಯ ದಯ
ಹೊನ್ನಿನ ಹೊಳಹಿನಲಿ;

ಅಂಗಾಂಗದಿ ಕಂಗೊಳಿಸಿತು.
ಮಂಗಳಲೇಪದಲಿ,

ಏಕಾಂತಕು ಲೋಕಾಂತಕು
ನಾಕಾಂತಕು ತುಂಬಿ,
ಚೆಲು ಚೆಲ್ಲಿತು, ನಲವೇರಿತು,
ಗೆಲವಾಯಿತು ನಂಬಿ. ॥೧॥

ನಿಶೆಯಲಿ ಶಶಿ, ಶಿಲೆಯಲಿ ಪೊನ್,
ಪಂಕದಿ ಪಂಕಜವು,
ತೊಗಲೆಲುಬಿನ ಮಾಂಸದ ಮೈ
ಅಂತರ ಚಿಂತನವು.

ಕತ್ತಲೆಯಲಿ ಮಿಂಚಿದುದೆನೆ
ಬತ್ತಿದ ಕೊಳ ತುಳುಕೆ;
ಕರುಣಾಮಯ ಕಿರಣದೊಳೀ
ಹರಣಕೆ ಹೆಗ್ಗಳಿಕೆ. ॥೨॥

ಮೂರ್ಖತೆಯಲಿ ಮಾರ್ದವವನು
ವಿದ್ವೇಷದಿ ದಯೆಯಂ;
ವಿಷಕುಂಭದಿ ರಸತುಂಬಿಸಿ
ಅಮರತ್ವದ ನೆಲೆಯಂ ;

ಸಲ್ಲಲಿತದ ಹುಲ್ಲಚಿಗುರ್
ಕಲ್ ಕೆಸರೊಳಗುದಿಸೆ;
ಎಲ್ಲೆಲ್ಲಿಯು ಸ್ಪರ್ಷಮಣಿಯು
ಬಲ್ಲವ ನೀ ಹರಸೆ ! ॥೩॥

ಮಹಿಳಾಮಣಿ ಮಾಂಗಲ್ಯದಿ
ಮಕ್ಕಳ ಮುದ್ದಿನಲಿ;



ಪುರುಷೋತ್ತಮ ಪೌರುಷದಲಿ
ಸಂತಸಸುದ್ದಿಯಲಿ;

ಸತ್ಯದಿ ಸೌಂದರ್ಯದಿ ಶುಚಿ
ಚಿತ್ತದ ಶೋಭೆಯಲಿ;
ನಿತ್ಯವು ಮಾಧುರ್ಯದಿ ರುಚಿ–
ವಸ್ತುವೆ, ನೀನಲ್ಲಿ.

ಇದು ಸನ್ನುತ ಮಹಿಮೋನ್ನತ
ಪದವೆನ್ನುತ ಮಣಿವೆ;
ಬದುಕಿನ ಬೆಲೆ ನಿಲುಮೆಯ ನೆಲೆ
ಕರುಣೆಯ ಕಲೆ ಕುಣಿವೆ !

ಇಂದಾದರು ಮುಂದಾದರು
ಎಂದಾದರು ಸಾಕು;
ಒಂದಾಗುತ ಬಂಧನದೀ
ಕ್ರಂದನ ಬಿಡಬೇಕು. ॥೫॥

ಓ ಚಿನ್ಮಯ ! ನಿನ್ನಯ ದಯ
ಮೃಣ್ಮಯ ದೇಹದಲಿ,
ತುಂಬಿಸಿ, ಪ್ರತಿಬಿಂಬಿಸಿದೆಯ ?
ನಂಬಿದ ನೇಹದಲಿ.

ಎತ್ತಲು ಮನೆ ಕತ್ತಲು, ಮನ
ಮುತ್ತಲು ಮೋಹದಲಿ;
ರನ್ನದ ಸೊಡರೆನ್ನೊಡಲಲಿ
ಬೆಳಗಿತು ಗೇಹದಲಿ. ॥೬॥

ಕೊರಡಾದರು ಕೊನರಿಡದೆ ?
ಮರುಧರೆ ಬೆಳೆಕೊಡದೆ ?

ಪುಣ್ಯಾಮೃತ ರಸಧಾರೆಗೆ
ಪಾಷಾಣವು ಪೂಬಿಡದೆ ?

ಹೊಲೆ ಬಸಿರಲೆ ಕೊಳೆ ಕೆಸರಲಿ
ಬಿದ್ದಿದ್ದಿಹ ಮೈಗೆ;
ನಿನ್ನೊಲವಿನು ಚೆಲ್ಲು ಚೆಲ್ಲಿರೆ
ಬಗೆ ಹಿಗ್ಗಿತು– ಹೀಗೆ ! ॥೭॥

ಮೋಡಗಳೆಡೆ ಮದ್ದಳೆ ಬಡೆ–
ದಾಟದ ಬಿಗುವೇರೆ;
ಮಿಗವಕ್ಕಿಗು ಸೊಗವುಕ್ಕಿತು
ಹಿಮ್ಮೇಳಕೆ ಸೇರೆ ;

ಆಕಾಶಕು ಸಂತೋಷವು
ಕಡಲುಕ್ಕಿತು ಬೇರೆ;
ಮಂಗಳ ಧರೆಯಂಗಣದಲಿ
ರಿಂಗಣ ಗತಿದೋರೆ. ॥೮॥

ಬಗೆ ನವಿಲಿದು ಕುಣಿ ಕುಣಿಯಿತು,
ಕಣ್ಗರಿಗಳ ಬಿಚ್ಚಿ;
ಶತಲೋಚನದವನಲೋಕನ
ಬ್ರಹ್ಮಾಂಡವ ಮುಚ್ಚಿ;

ಆದ್ಯಂತದ ವೇದಾಂತದ
ಬೋಧಾಂತಕೆ ಮೆಚ್ಚಿ;
ಆತ್ಮಗೆ ಪರಮಾತ್ಮನ ಸಾ–
ಯುಜ್ಯದ ಸುಖ ಹೆಚ್ಚಿ. ॥೯॥

ಆನಂದಮಯ, ನಿನ್ನಯ ದಯ
ಸಂಕಟ ಸುಖಗಳಲಿ



ಹಗಲಿರುಳಲಿ ಮುನ್ ಬೆನ್ನಲಿ
ಮಮಜೀವಕೆ ಸಲಲಿ.

ಚಿಂತಾವಿಷಸಂತಾನದ
ಕಾಂತಾರದಿ ಸುಳಿಯೆ;
ಹಾಲ್ಗಡಲಿನ ನೊರೆಯುಕ್ಕಿತು.
ಕರುಣೆಯ ಹನಿ ಸುರಿಯೆ. ॥೧೦॥

ಅಗ್ಗದ ಸೊಗ ವೆಗ್ಗಳಿಸಿತು
ಹಿಗ್ಗಿರೆ ನಿನ್ನೊಲ್ಮೆ;
ಸಗ್ಗದೊಡೆಯ ತಗ್ಗಿದೆ ನಾ
ಒಗ್ಗಿರೆ ನಿಜನಲ್ಮೆ

ತನುಮನಧನ ಕೃಪಾಕಿರಣ
ಕರ್ತೃನೀನೆ ಕಾರಣ;
ಭವಬಂಧನದ ವಿಮೋಚನ
ಇದೆ ಚೇತನ ಚಿಂತನ. ॥೧೧॥

ಕೃತಿಯಿದು ಕಸ, ಮತಿ ಮಧುರಸ,
ಧ್ಯಾನ ರಸಾಯನವು;
ತನು ನಶ್ವರ, ಮನ ಸುಸ್ಥಿರ,
ಚಿಂತನ ಶಾಶ್ವತವು.

ತವನಾಮವ ಚಿರಧಾಮದ
ಪರಿಣಾಮದಿ ನಿಲಲಿ;
ಭಾವೈಕ್ಯದಿ ಜೀವೈಕ್ಯದಿ
ಮಂಗಳ ಮಸಗಿರಲಿ ! ॥೧೨॥

* * * *

## ಊದಿಬಿಡು ನೀ

ಊದಿಬಿಡು ನೀ ಪಾಂಚಜನ್ಯವ
ಮಾರ್ದನಿಸಲದು ಮನ್ಮನ;
ಎತ್ತಿಹಿಡಿದೆನು ದೇವದತ್ತವ
ಶಕ್ತಿ ತುಂಬಿತು ಚೇತನ.

ನೀನು ಸಾರಥಿ ನಿನ್ನ ಮೂರುತಿ
ನಯನಕದೆ ನೀಲಾಂಜನ;
ಬಾಳ ತೇರಿದೆ ಬೀಳದೆರಿದೆ
ನಡೆಸುವವ ನೀನನುದಿನ. ॥೨॥

ದುರಿತದುರ್ಯೋಧನರು ನೂರ್ವರು
ಹುಟ್ಟಿನಿಂ ಬೆನ್ನಟ್ಟಲು;
ಕಾಡಿಗೋಡಿದೆ ನಾಡೊಳಡಗಿದೆ
ನಿಂದೆ ನೀ ಬೆಂಗಾವಲು ॥೩॥

ಮೋಹ– ಮೃಗಜಲ ಹೃದಯ ದುರ್ಬಲ.
ಧೈರ್ಯಧನು ಕೈಜಾರಿರೆ;
ಹೇಡಿತನವನು ಓಡಿಸಿದೆ ನೀ
ನೀತಿಗೀತೆಯ ಸಾರಿರೆ. ॥೪॥

ನನ್ನ ಗೈಮೆಯು ನಿನ್ನ ಮೈಮೆಯು,
ಮೊಳಗಿತೀ ದನಿ ಧಂದನ
ಏಕೆ ಲೋಭವು ಸಾಕು ಲಾಭವು
ಬೆಳಗಿತೈ ಜಯಜೀವನ. ॥೫॥

ನಾನೆ ವಿಜಯನು ನಾನಜೇಯನು
ನೀನು ವಾಘೆಯ ಹಿಡಿದಿರೆ ;



ನಾ ಕಿರೀಟಯು ಯಾರು ಸಾಟಿಯು ?
ನೀನು ಚಾಟಿಯ ಬಿಡದಿರೆ . ॥೬॥

ನಾನು ಪಾತ್ರವು ನೀನು ಸೂತ್ರವು
ಕುಣಿತ– ಮಣಿತವು ಸಾಗಿದೆ.
ಬೊಂಬೆ ಮುಂಗಡೆ ಬಿಂಬ ಹಿಂಗಡೆ
ಹಗ್ಗ ಹರಿದರೆ ಹೇಗಿದೆ. ? ॥೭॥

ಪುಣ್ಯಸ್ಪರ್ಶವೊ ಪಾಪಲೇಪವೊ
ಸಾಕ್ಷಿ ನೀನೇಯೀಕ್ಷಿಸು !
ನನ್ನ ಬೆನ್ನನು ನನ್ನ ಕಣ್ಣನು
ಸವ್ಯಸಾಚಿಸಿ ರಕ್ಷಿಸು. ॥೮॥

* * * *

## ಬಾನ್ ಬೆಳಕೆ

ಧವಳಗಿರಿಯ ಶಿರದಲ್ಲಿ
ಶತಶಂಖನಾದದಲಿ
ಮೊಳಗೆ ಶಬ್ದತರಂಗ ಯುಗದಾದಿಯಲ್ಲಿ
ನಾಲ್ದೆಸೆ ವಿಜೃಂಭಿಸಿತು.
ನಾಲ್ಮೊಗಂ ಘೋಷಿಸಿತು.
ಪ್ರಣವದೋಂಕಾರವ ವಿರಾಡ್ರೂಪದಲ್ಲಿ ॥೧॥

ನಾಕಲೋಕಾಂತವನು
ದ್ಯಾವಾಪೃಥಿವಿಗಳನು
ಹಬ್ಬಿವುಬ್ಬಿತು ರವಂ– ನೀರವಂ ಕೇಳೆ!
ಅಮೃತಪುತ್ರರ ಶಿರಕೆ

ಸುರಿಯುತಿಹುದೀ ಹರಕೆ
ಸಿಂಧುವೇ ಬಿಂದುರೂಪದಲಿ ಮೈತಾಳೆ. ॥೨॥

ಗುಹೆಗಹ್ವರದವೊಳಗೆ
ಪ್ರಣವಸೂರ್ಯಂ ಬೆಳಗೆ
ಧ್ಯಾನಸ್ಥ ಋಷಿಯ ದರ್ಶನವರಳಿತು;
ಪಂಚೇಂದ್ರಿಯದ ಗೇಹ
ಪುಲಕಗೊಂಡಿತು ದೇಹ
ಹೃದ್ವೀಣೆಯಲಿ ಶ್ರುತಿ ವಿಪಂಚಿಸಿತ್ತು. ॥೩॥

ಆ ಚತುರ್ವೇದಗಳು
ಹತ್ತುಪನಿಷತ್ತುಗಳು
ನಾದಮೂಲಕೆ ಮುನಿಗಳೊರೆದ ಭಾಷ್ಯಗಳು;
ಜೀವಾತ್ಮನ ವಿಕಾಸ
ಪರಮಾತ್ಮನ ಪ್ರಕಾಶ
ಮುಕ್ತಿಯ ಮಹಾಪಥಕೆ ದಾರಿದೀಪಗಳು. ॥೪॥

ನಿರ್ಮೋಹಮತಿಯಲ್ಲಿ
ನಿರ್ದೋಷ ಬುದ್ಧಿಯಲಿ
ನಿರ್ಮಲದ ಹೃದಯದಲಿ ವಾಗ್ಧಾರೆ ಹರಿಯೆ;
ಗಂಗಾ ಜಲತರಂಗ
ಕೊಳೆತೊಳೆಯೆ ಶುದ್ಧಾಂಗ
ಆಯಿತೋ ನೆಲದ ಭಾಗ್ಯದ ಕದವೆ ತೆರೆಯೆ. ॥೫॥

ಹೊನ್ನ ಬಣ್ಣದ ಪಾತ್ರ,
ಮೋಹ ಮಾಯೆಯ ಚಿತ್ರ.
ಮುಸುಕಾಯಿತದರಿಂದ ಸತ್ಯಮುಖವು;
ಮೋಸತೆರೆಯೇ ತೊಲಗು
ಬಾನ್‌ಬೆಳಕೆ ತೊಳತೊಳಗು
ಸತ್ಯಧರ್ಮದ ಬೆಳಗು– ನಿತ್ಯಸುಖವು. ॥೬॥



# ದೂಡಿಬಿಡಬೇಡ

ತಂದೆ, ತಂದೆ ನಲ್ನುಡಿಯ ಹೂಗಳನು
ಬಗೆಯ ಬೊಗಸೆಯಲಿ ತುಂಬಿ;
ದೂಡಿಬಿಡಬೇಡ ಕಾಡುಹೂವೆಂದು,
ಬಂದೆ– ನಿನ್ನಡಿಯ ನಂಬಿ! ॥೧॥

ಕಲ್ಲು ಮುಳ್ಳಿನಲಿ ಕೆಸರು ಹುಲ್ಲಿನಲಿ
ಇಲ್ಲವೇನು ಹೂಹಣ್ಣು?
ಬಲ್ಲೆ, ಎನ್ನೊಡೆಯ, ಎತ್ತಿಕೋ ಮತ್ತೆ
ಅಧಃಪಾತ ಬರಿ ಮಣ್ಣು. ॥೨॥

ದಾಸ್ಯಹಾಸ್ಯಭಾರದಲಿ, ಪೂರದಲಿ,
ಕೊರಳು ಕುಗ್ಗಿ ಮುಳುಮುಳುಗಿ
ಆರ್ಷಚೈತನ್ಯ ತೇಂಕುತಿರಲು ನೀ
ಚಂದ್ರನೌಕೆಯೆನೆ ಬೆಳಗಿ– ॥೩॥

ಬಂದೆ, ಬಾಂದಳದ ಬೆಳಕಿನಗಲದಲಿ
ನೇರ ದಾರಿಯನು ತೋರೆ;
ಕವಿದ ಕತ್ತಲೆಯ ಕಾಲುಕಿತ್ತಿತ್ತೋ
ಕರುಣಕಿರಣ ನೀ ಬೀರೆ ! ॥೪॥

ಗುಡಿಯ ಬೆಳಗಿಸಿದ ಮೂರ್ತಿ ನೀನಲ್ತೆ
ಶಿಲ್ಪಜೀವಶಕ್ತಿ;
ಅಲ್ಲಿ ಭಜನ ಪೂಜನವು ಸಾಗುತಿದೆ
ಶುಭದ ಶಿವದ ಭಕ್ತಿ. ॥೫॥

ಇಲ್ಲಿ, ದೂರದಲಿ– ಗುಡಿಯ ಹೊರಗೆ ಕೈ
ಮುಗಿದು ಬಾಗಿ ನಿಂತೆ;

ದಿವ್ಯದರ್ಶನವ ಕಮಡೆ ಹೇ ಪ್ರಭೋ,
ಚೆಲುವು ದೂರದಿಂದೆ. ॥೬॥

ಪುಣ್ಯವಂತರದೊ– ವೇದಮಂತ್ರಗಳ
ಘೋಷಿಸುತ್ತಲಿಹರು;
ನಿನ್ನ ಮುಖದ ಮಂಗಳಕೆ ಆರತಿಯ
ಎತ್ತಿ ಸುತ್ತಿ ಬಹರು. ॥೭॥

ಎದೆಯ ಕೊಳೆಯನ್ನು ತೊಳೆಯದೆಂತಿನ್ನು
ಪುಣ್ಯದೆಡೆಗೆ ಬರಲಿ?
ಎನ್ನ ಕಣ್ಣೀರೆ ದೃಷ್ಟಿಗಂಜನವು
ಧನ್ಯ ಜನ್ಮವಿರಲಿ ! ' ॥೮॥

ನಿನ್ನ ಪುಣ್ಯಾಗ್ನಿ ಸ್ಪರ್ಶ ಮಾತ್ರದಲಿ
ಭೂತಿಯೆನಿಸೆ ದೇಹ;
ಖಂಡ ಕರ್ಪೂರದಂತೆ ಜ್ವಲಿಸಿತೋ
ಭವದ ಪಾಪ ಗೇಹ. ॥೯॥

ತೇದ ಶ್ರೀಗಂಧದಂತೆ ಕರಗುತಿರೆ
ಕಂಪು ಪಸರಿಸಿತ್ತು;
ಕಾಡು ಮಲ್ಲಿಗೆಯ ಬೀಡು ಬೆಳಗಲ್ಕೆ
ನಿನ್ನ ಕರುಣೆ ಬಂತು. ॥೧೦॥

* * * *



## ಬುದ್ಧನ ಅಮೃತವಾಣಿ

ಇರಿಸಿ ನಿರ್ಮಲ ಪ್ರೇಮಭಾವವ
ಭರಿತಕೋಪಿಯ ಜಯಿಸಬಹುದೈ.
ವರ ಸದಾಚಾರದಿ ದುರಾಚಾರನನು ತಿರುಗಿಪುದು।
ನಿರುತ ದಾನವ ನೀಡುತ್ತಿದ್ದರೆ
ಪರಮ ಲೋಭಿಯ ತಿದ್ದಬಹುದೈ
ಇರುವ ಸತ್ಯದಿ ಸುಳ್ಳುಗಾರನ ನಾಚಿಸಲುಬಹುದು॥

ನಾವು ಧೈರ್ಯದೊಳಿದ್ದೆವಾದರೆ,
ಸಾವು ಸಂಕಟಕಂಜಲೇತಕೆ ?
ಜೀವಕೋಟಿಗೆ ಹಿಂಸೆ ಕೊಡದುದೆ ಪುಣ್ಯವೆನಿಸುವುದು ।
ಯಾವಾಗಾಗಲಿ ಮನುಜನಾರಿಗು
ನೋವು ಮಾಡದೆ, ಭ್ರಾತೃವೆಂದೇ
ತೀವಿದನುರಾಗದಲಿ ಕಾಂಬುದು, ಸುಖವ ಮೆರೆಯುವುದು.

* * * *

## ಬಿಡಿಸೆನ್ನ ಸೆರೆಯ

ಹೆತ್ತ ಜನನಿಗೆ ಮಣಿದು
ಹೊತ್ತ ಧರಣಿಯ ನೆನೆದು
ಹಾಡಿ ಹಿಗ್ಗಿದೆನೈದುದಶಕದಿಂದೆ;
ತಾಯೊಡಲ ಚಿತೆಗಿಟ್ಟೆ
ತಾಯ್ನೆಲದಿ ಗತಿಗೆಟ್ಟೆ
ಇಷ್ಟು ದಿನ ನಾನಿನ್ನ ಮರೆದೆ ತಂದೆ. ॥೧॥

ಸಂಗ್ರಾಮ– ವೀರದಲಿ
ಸಂಕಟದ ಕರುಣೆಯಲಿ
ಹರ್ಷ– ಶೃಂಗಾರದಲಿ ವಿಕಟಹಾಸದಲಿ;
ರೋಮಾಂಚ– ರೌದ್ರದೀ
ರಸ– ವಿರಸದಲಿ ತೊಳಲಿ
ತಂದೆ, ತವ ಸನ್ನಿಧಿಗೆ ಬಂದೆ ನಾ ಬಾಳಲಿ. ॥೨॥

ನೆಲದ ನೀರ ಪಿಪಾಸೆ
ಚೆಲುವ ನಲವುಗಳಾಸೆ
ಬಂಧು–ಬಳಗದ ಬಾಸೆಗಾಂ ಕಾದಿದೆ;
ಬಾಳ ತೇರಿಗೆ ಬಿಸಿಲು–
ಕುದುರೆ ಹೂಡಿದೆನಯ್ಯೊ !
ಎತ್ತಕೊಳ್ಳೀಶಿಶುವ ಮುತ್ತಿಡೆಂದೆ. ॥೩॥

ದಾಹ–ಮೋಹದಿ ಮುಳುಗಿ
ಲಾಭ–ಲೋಭದಿ ಸಿಲುಕಿ
ಸೋಲು–ಗೆಲವಿಂಗಳುಕಿ ಬದುಕಿ ಹಗಲಿರುಳು;
ಈ ವಿಷದ ವರ್ತುಲದಿ
ಸುಳಿ– ಸುಳಿದು ಜೀವಹುಳು
ನೆನೆದಿಲ್ಲ ನಿನ್ನನೊಡೆಯಾ ಬರಿದು ಬಾಳು! ॥೪॥

ಕಣ್ಣಿಯಿಂ ಕಡಿದೊಗೆಯೆ
ಮುಪ್ಪುರಿಯೊಳಾಂ ಹುರಿಯೆ
ಕಾವಲಿಯಿನೊಲೆಗೆ ನೆಗೆದಂತಾದೆನೆರೆಯ,
ಬಾಹ್ಯಬಂಧನದ ಸಂ–
ಕಲೆ ಕಡಿದೆನಾಂತರಿಕ
ಪಾಶದಿಂ ಬಿಗಿವಡೆದೆ–ಬಿಡಿಸೆನ್ನ ಸೆರೆಯ. ॥೫॥

* * * *



## ಮರುದ್ಭಿರಗ್ನೆ ಅಗಹಿ

ಅಗ್ನಿ ಬಾ ಮರುತುಗಳ ಜತೆಗೆ ಬಾ !
ಈ ಸುಂದರಾಧ್ವರಕ ಸಂಭ್ರಮೋಲ್ಲಸದಿ ಬಾ,
ಸೋಮರಸ ಪೀಯೂಷಪಾನಕಿದೊ ಪಾರಿ ಬಾ,
ಬಾ ನಿನ್ನೊಳೆನ್ನ ಕರುಳಿನ ಕರೆಯು ಕರುಣಿ ಬಾ,
ಅಗ್ನಿ ಬಾ ಮರುತುಗಳ ಜತೆಗೆ ಬಾ ! ॥೧॥

ಇಲ್ಲ ದೇವರೊಳಾರು, ಇಲ್ಲ ಮರ್ತ್ಯರೊಳಾರು,
ನಿನ್ನ ಕ್ರತುಶಕ್ತಿಯಂ ಮೀರಿದರು ಯಾರಿಹರು?
ಬಾ ಮಹಾಮಹಿಮ ನಿನಗಿದೊಯೆನ್ನ ಕರೆಯಿಹುದು,
ಅಗ್ನಿ ಬಾ ಮರುತುಗಳ ಜತೆಗೆ ಬಾ ! ॥೨॥

ಆ ಮಹಾ ಗಗನಾಂತರಾಳದಲಿ ಗೋಳದಲಿ,
ವಿಸ್ತಾರಸಂಚಾರಸಂವಾಸ ಮೇಳದಲಿ,
ಇದ್ದರೂ– ಅದ್ರೋಹರಪ್ಪ ದೇವರ ಕೂಡಿ,
ಅಗ್ನಿ ಬಾ ಮರುತುಗಳ ಜತೆಗೆ ಬಾ ! ॥೩॥

ಮೇಘನಿರ್ಘೋಷದಿಂದುಗ್ರರು ಸಮಗ್ರರುಂ,
ಸರ್ವಬಲಗರ್ವಿತರ ದರ್ಪನಿರ್ಮೂಲರುಂ,
ಆದ ಆ ಮರುರುಗಳ ನಾದದಿಂ ಮೋದದಿಂ
ಅಗ್ನಿ ಬಾ ಮರುತುಗಳ ಜತೆಗೆ ಬಾ ! ॥೪॥

ಶುಭ್ರಸ್ವರೂಪರೆನೆ, ಘೋರರೂಪರುಮೆನಿಸಿ,
ಸೃಷ್ಟಿ ಸಾಮ್ರಾಜ್ಯವಂ ಸುಕ್ಷತ್ರದಿಂ ವಹಿಸಿ,
ಹಿಂಸಕಧ್ವಂಸಕರುಮೆನಿಪ ಮರುತುಗಳೊಡನೆ
ಅಗ್ನಿ ಬಾ ಮರುತುಗಳ ಜತೆಗೆ ಬಾ ! ॥೫॥

ಸರ್ವಸುಖವಿರುವಲ್ಲಿ, ಸೂರ್ಯನಿಂ ಮೇಗಲ್ಲಿ
ಮೇಲು ಮೇಲ್ಲೋಕದಲಿ ಮಿರುಮುರುಗುತಿರುವಲ್ಲಿ,
ದಿವದ ಆ ದೇವರ್ಕಳೊಡನಾಡಿ ಕೂಡಿ ಬಾ
ಅಗ್ನಿ ಬಾ ಮರುತುಗಳ ಜತೆಗೆ ಬಾ ! ॥೬॥

ನೀಲಿಮವಿಶಾಲಸಾಗರಮಹಾವಕ್ಷದಲಿ
ಪರ್ವತೋನ್ನತಜಲತರಂಗದಸಂಘಟ್ಟದಲಿ
ಆವ ದೇವರ್ಕಳಾ ಮಹಾತ್ಮ್ಯಮೆರೆದಿಹುದೊ,
ಅಗ್ನಿ ಬಾ ಮರುತುಗಳ ಜತೆಗೆ ಬಾ ! ॥೭॥

ರಮಣೀಯ ರಶ್ಮಿಯಿಂ ಗಗನದಲಿ ಕಂಗೊಳಿಸಿ,
ಬಲದಿಂ ಮಹಾಸಮುದ್ರವ ದುರ್ಬಲಂಗೊಳಿಸಿ,
ಸಾಗರೋತ್ತರಕಿರಣಬೀರಿ ಬೀಗುವರೊಡನೆ,
ಅಗ್ನಿ ಬಾ ಮರುತುಗಳ ಜತೆಗೆ ಬಾ ! ॥೮॥

ಅಗ್ನಿ ಬಾ ಮರುತುಗಳ ಜತೆಗೆ ಬಾ !
ಎರೆವನಿದೊ ಸೋಮರಸ ಪ್ರಥಮ ಪಾನಕೆ ನಿನಗೆ,
ಹೇ ಅಗ್ನಿ ! ಕುಡಿ ನೀನೆ ಈ ಮಧುರಮಧುವನ್ನೆ.
ಬಾ ! ನಿನ್ನೊಳೆನ್ನ ಕರುಳಿನ ಕರೆಯು ಕರುಣಿ ಬಾ
ಅಗ್ನಿ ಬಾ ಮರುತುಗಳ ಜತೆಗೆ ಬಾ ! ॥೯॥

* * * *

## ತೋರು ಬೆಳಕಂ ಮುಂದೆ

ಆವನೈ ವೇದಂಗಳಿಂಗೆ ಋಷಭಂ ಮೇಣು
ವಿಶ್ವರೂಪಂ ತಾನು, ಅದಲ್ಲದಾವಂ ಸಂಭವಿಸಿದ
ತಾನಮೃತಸ್ವರೂಪವಹ ವೇದಂಗಳಿಂದಲಿ,
ಆ ಇಂದ್ರನೆಮ್ಮಂ ಜ್ಞಾನದಿಂದ ಬಲಗೊಳಿಸಲ್ಕೆ;



ದೇವ ನಾನಮೃತವಂ ಪಡೆವಂತೆ ನಡೆಸಯ್ಯ
ಎನ್ನೀ ಶರೀರಮಿದು ಶೋಭಾಯಮಾನಮಾಗಿರುತಿರಲಿ,
ಎನ್ನಿಯೀ ನಾಲಗೆಯು ಸವಿಯಹ ಮಾತುಗಳನಾಡುತಿರಲಿ,
ನಾಂ ಕಿವಿಗಳಿಂ ತುಂಬು ಕೇಳುತ್ತಿರಲಿ

ನೀನೆ ಬ್ರಹ್ಮದ ಕೋಶವಹೆ
ಲೋಕಜ್ಞಾನದಿಂ ವಿಹಿತನಹೆ
ಎನ್ನ ಶ್ರುತವನ್ನು ಕಾಪಾಡು;
ಸರ್ವವಂ ಸೃಜಿಸುತಲಿ, ವೃದ್ಧಿಗೊಳಿಸುತಲಿ
ಎನಗೆ ಶೀಘ್ರದಲಿ ವಸ್ತ್ರಗಳ ಗೋವುಗಳ
ಮೇಣನ್ನ ಪಾನಗಳ ಸರ್ವದಾ ನೀಡುತಿಹ.
ತದನಂತರಂ ಪಶುಗಳೊಂದಿಗಂಗೆ ರೋಮದಿಂ
ರಂಜಿಸುವ ಶ್ರೀಯನ್ನು ದಯಪಾಲಿಸಯ್ಯ;
ನೀನೆನಗೆಂಬೆನಿದೊ ಸ್ವಾಹಾ !

ಬ್ರಹ್ಮಚಾರಿಗಳೆನ್ನ ಬಳಿ ಬರಲಿ ಸ್ವಾಹಾ.
ಬಳಿ ಬರಲಿ ಬ್ರಹ್ಮಚಾರಿಗಳು ಎಲ್ಲೆಡೆಗಳಿಂದೆಂಬೆನೈ ಸ್ವಾಹಾ,
ಬ್ರಹ್ಮಚಾರಿಗಳೆನ್ನ ಬಳಿ ಬರಲಿ ಯೋಗ್ಯರಾಗುತಲಿ ಸ್ವಾಹಾ,
ಬ್ರಹ್ಮಚಾರಿಗಳು ದಮಯುತರಿರಲಿ ಸ್ವಾಹಾ.
ಬ್ರಹ್ಮಚಾರಿಗಳು ಶಮಯುತರಿರಲಿ ಸ್ವಾಹಾ.

ಯಶವಿರಲೆನಗೆ ಜನರ ಮಧ್ಯದಲಿ ಸ್ವಾಹಾ.
ಶ್ರೇಯವಿರಲೆನಗೆ ಶ್ರೀಮಂತರಲಿ ಸ್ವಾಹಾ,
ಭಗವಂತ ನಿನ್ನಂಥವನ ಪುಗುವೆ ಸ್ವಾಹಾ,
ಅಂಥ ಭಗವಂತನೀನೆನ್ನ ಪುಗು ಸ್ವಾಹಾ,

ನೀರೆಂತು ತಗ್ಗಿನೊಳ್ ಹರಿಯುವುದೊ
ಮೇಣೆಂತು ಮಾಸಗಳ್ ವತ್ಸರದಿ ಸೇರುವುವೊ
ಅಂತೆಯೆ– ಹೇ ವಿಧಾತನೆ, ಬ್ರಹ್ಮಚಾರಿಗಳ್

ಬಂದೆನ್ನ ಸೇರುತಿರಲೆಲ್ಲ ಕಡೆಯಿಂದೆಂಬೆ ಸ್ವಾಹಾ;
ನೀನೆ ವಿಶ್ರಾಮಧಾಮಂಯೆನಗೆ, ಪರಮಾತ್ಮ !
ತೋರು ಬೆಳಕಂ ಮುಂದೆ ಸೇರೆನ್ನನೆಲೆ ತಂದೆ,

* * * *

## ಸಂಹಿತೆ

ಜತೆಯೊಳಿರ್ವರಿಗೂ ದೊರಕಲಿ ಯಶವು
ಜತೆಯಲ್ಲಿಯಿರ್ವರಿಗೂ ಬ್ರಹ್ಮವರ್ಚಸ್ಸು ಲಭಿಸಲಿ,
ಮುಂದೆ ಅದರಿಂದೆ ಪಂಚಾಧಿಕರಣಂಗಳಲ್ಲಿ
ಸಂಹಿತೆಯೆನಿಸುವುಪನಿಷತ್ತಂ ವಿವರಿಸುವೆವಾವು.
ಆ ಮಹಾಸಂಹಿತೆಗಳಾವುವೆನಲ್;
ಅಧಿಲೋಕಮಾಧಿಜ್ಯೌತಿಷಂ ಮತ್ತೆ
ಅಧಿವಿದ್ಯಮಧಿಪ್ರಜಂ ಆಧ್ಯಾತ್ಮವೆಂಬುವಿವು.

ತದನಂತರದಲಿ ಅಧಿಲೋಕವಾವುದನಲ್ಕೆ
ಪೃಥಿವಿ ಹಿಂದಿನರೂಪ, ದ್ಯೌಃ ಮುಂದಿನ ರೂ,
ಆಕಾಶವದು ಸಂಧಿ, ವಾಯುವದು ಸಂಧಾನ
ಇಂತೆಂಬುದಧಿಲೋಕ.

ಆಮೇಲೆ ಅಧಿಜ್ಯೌತಿಷಮದೆಂತೆನಲ್ಕೆ:
ಹಿಂದಿನರೂಪವಗ್ನಿ, ಮುಂದಿನ ರೂಪನಾದಿತ್ಯ,
ಸಂಧಿಯದು ನೀರು, ಸಂಧಾನವದು ವಿದ್ಯುತೆನೆ,'
ಇಂತಿಂದಧಿಜ್ಯೌತಿಷಂ.

ಮುಂದೆ ಅಧಿವಿದ್ಯಮಾವುದೆನೆ :
ಹಿಂದಿನರೂಪವಾಚಾರ್ಯ, ಶಿಷ್ಯ ಮುಂದಿನ ರೂಪ,
ವಿದ್ಯೆಯದು ಸಂಧಿ, ಸಂಧಾನವದು ಉಪದೇಶಂ
ಅಧಿವಿದ್ಯಮಿಂತಿಹುದು.



ಮೇಣಧಿಪ್ರಜಮಾನವುದೆನೆ :
ಮಾತೆ ಪೂರ್ವರೂಪಂ, ಪಿತನು ರೂಪ ಮುಂದಿನದು,
ಪ್ರಜೆಯೈ ಸಂಧಿ, ಸಂಧಾನ ಪ್ರಜನನಂ,
ಇಂದದಧಿಪ್ರಜಮಹುದು.

ತದನಂತರಾಧ್ಯಾತ್ಮಮೆಂತೆನಲ್
ಕೆಳದವಡೆ ಪೂರ್ವರೂಪಂ,
ಮೇಲ್ದವಡೆ ಉತ್ತರರೂಪಂ,
ಮಾತುಸಂಧಿಯು, ಜಿಹ್ವೆಸಂಧಾನ.
ಇಂತೆನುವುದಧ್ಯಾತ್ಮಮೆನಿಸುವುದು,
ಇವುಗಳು ಮಹಾಸಂಹಿತೆಗಳು.

ಅವನೀವಿಧವ್ಯಾಖ್ಯಾತಮಾದೀ ಮಹಾಸಂಹಿತೆಗಳು
ಅರಿವನವಂ ಪ್ರಜೆಗಳೊಂದಿಗು ಪಶುಗಳೊಂದಿಗು
ಬ್ರಹ್ಮವರ್ಚಸ್ಸಿನೊಡನೆಯು ಮೇಣು
ಅನಾದಿಗಳ ಜತೆಗು ಸ್ವರ್ಗಲೋಕವ ಪಡೆವ.

* * * *

## ಶಾಂತಿ ಮಂತ್ರ

ಓಂ ಸೊಗವನೊದಗಿಸಲೆಮಗೆ ಸೂರ್ಯ,
ಸೊಗವನಾ ವರುಣ, ಸೊಗನೀಲಡಮಗರ್ಯಮನು,
ಸೊಗಮನೆಮಗಿಂದ್ರನು, ಬೃಹಸ್ಪತಿಯು,
ಸೊಗವ ಕರುಣಿಸಲೆಮಗೆ ವಿಷ್ಣುವು ಉರುಕ್ರಮನು.

ಮಣಿವೆ ಬ್ರಹ್ಮಂಗೆ,
ಮಣಿವೆನು ನಿನಗೆ ವಾಯುವೇ,
ನೀನೆಯಾಗಿರುವೆ ಪ್ರತ್ಯಕ್ಷಬ್ರಹ್ಮಂ,
ನಿನ್ನನ್ನೇ ಪೇಳ್ವೆ ಪ್ರತ್ಯಕ್ಷಬ್ರಹ್ಮನೆಂದಾನು.

ಋತವಂ ಪೇಳುತಿಹೆ
ಸತ್ಯವಂ ಪೇಳುತಿಹೆ
ಎನ್ನನದು ಪೊರೆಯಲ್ಕೈ,
ಪೇಳುವಾತನಂ ಪೊರೆಯಲದು
ಪೊರೆಯಲೆನ್ನಂ
ಪೊರೆಯಲ್ಕೈ ಪೇಳುವಾತನಂ.
ಓಂ ಶಾಂತಿಯ್ಕೈ, ಶಾಂತಿಯ್ಕೈ, ಶಾಂತಿಯ್ಕೈ.

* * * *

ಓಂ ಪಿರಿಯನಿಂದ್ರಂ ಪರಸಲೆಮ್ಮ ಪೇರೊಲ್ಮೆಯಲಿ,
ಎಲ್ಲ ಬಲ್ಲವ ಪೂಷನೊಳ್ಳಿತಂ ಕುಡುಗೆ,
ಕೆಡುಕ ಬಡಿದಟ್ಟುತಿಹ ತಾರ್ಕ್ಷ್ಯರ್ಯ ರಕ್ಷಿಸುತಿರಲಿ
ಆ ಬೃಹಸ್ಪತಿಯೆಮ್ಮ ಬುದ್ದಿ ಬೆಳಗಿಸುಗೆ,
ಓಂ ಶಾಂತಿಯ್ಕೈ, ಶಾಂತಿಯ್ಕೈ, ಶಾಂತಿಯ್ಕೈ.

* * * *

## ವಿಷವಿಕ್ಕಿದಾತನಿಗೆ ಅಮೃತವೆರೆಯುವೆಯೇನು ?

ಹಾಲನ್ನವಿತ್ತವಗೆ ಹಾಲನ್ನ ನೀಡುವೆಯ ?
ಇದು ಜೀವಜಂತುಗಳ ಸಹಜಗುಣವು;
ವಿಷವಿಕ್ಕಿದಾತನಿಗೆ ಅಮೃತವೆರೆಯುವೆಯೇನು ?
ಇದೆ, ನರನ ದೇವತ್ವಕೊಯ್ವ ಕಾರಣವು.

* * * *



## ನಾವೆಲ್ಲರೊಂದೆಂದು ಕಾಂಬವಂ ಜ್ಞಾನಿ

ಈಶನಿಂದಾವೃತಂ ಸರ್ವಮೀಜಗಮಿಲ್ಲಿ
ಏನೇನುಮಿಹುದೊ ಸಂಚಲನಾತ್ಮಕಂ,
ಅದರ ತ್ಯಾಗವೆ ದಿವ್ಯ ಭೋಗವೆಂಬುದನು ತಿಳಿ,
ಒಲ್ಲದಿರು ಎಲ್ಲ ಕಾಲಕು ಯಾರ ಧನಮಂ. ॥೧॥

ಕರ್ಮಗಳ ನೀ ನಿರಂತರಮಿಲ್ಲಿಗೆಯ್ಯುತಿರೆ
ನೂರು ವರುಷದ ಬಾಳ್ವೆ ಬಯಸಬೇಕು;
ಇಂತಲ್ಲದೆಂತುಮಿಲ್ಲವೊ ಹಾದಿ ಹೇ ನರನೆ,
ಕರ್ಮಫಲ ಲೇಪವಿಲ್ಲದ ಬದುಕು ಸಾಕು. ॥೨॥

ಸರ್ವಜೀವಿಗಳನ್ನು ತನ್ನಾತ್ಮದಲ್ಲಿಯು,
ತನ್ನಾತ್ಮವಂ ಸರ್ವಜೀವಿಗಳೊಳು;
ಇಂತಾತ್ಮವ್ಯತಿರಿಕ್ತವಾವುದಿಲ್ಲೆಂಬುದನು
ತಿಳಿದವನು ತೋರಿಸನಸಹ್ಯತೆಯನು. ॥೩॥

ಜೀವಜಂತುಗಳೆಲ್ಲ ತಾನ್ನಾತ್ಮವೇ ಎಂದು,
ನಾವೆಲ್ಲರೊಂದೆಂದು ಕಾಂಬವಂ ಜ್ಞಾನಿ,
ಆ ದಿವ್ಯದರ್ಶನವ ಪಡೆದಂಗೆ ಯಾವೊಂದು
ಮೋಹವೋ ಶೋಕವೋ ತಟ್ಟದೆನ್ನಿ. ॥೪॥

ವಿದ್ಯೆಯಿಂ ಬೇರೆಂದವಿದ್ಯೆಯಿಂ ದೂರೆಂದು
ಬುದ್ಧಿವಂತರು ತಿರುಳ ತಿಳಿಸಿರುವರು;
ಶ್ರದ್ಧೆಯಿಂದಾತ್ಮತತ್ವದ ದರ್ಶನದ ಪಡೆದು
ವೃದ್ಧಿಹೊಂದಿದ ಪೂರ್ವದಾಚಾರ್ಯರು ॥೫॥

ವಿದ್ಯೆಯಂ ಮೇಣವಿದ್ಯೆಯನಂತೆ ಉಭಯಮಂ
ಆವನರಿತಿಹ ನಿಜವ ಜೀವನದಲಿ,

ಮೃತ್ಯುವನವಿದ್ಯೆಯಿಂ ದಾಂಟುತಲಿ ಪಡೆಯುವಂ
ವಿದ್ಯೆಯಿಂದಮೃತವಂ ನಿಶ್ಚಯದಲಿ. ॥೬॥

ಸಂಭೂತಿಯಿಂದನ್ಯವೆಂದು ಪೇಳುತ್ತಿಹರು
ಪೇಳುವರಸಂಭೂತಿಯಿಂದ ಬೇರೆಂದು;
ಬುದ್ಧಿವಂತರು ತಿರುಳನೆಮಗಿಂತು ತಿಳಿಸಿಹರು
ಆತ್ಮತತ್ವವನರಿತು ಬಾಳಿರೆಂದು. ॥೭॥

ಸಂಭೂತಿಯನು ವಿನಾಶವನುಭಯನ್ನು ಸಹ
ಬಲ್ಲವನೆ ಬಲ್ಲಿದನುಯೆಲ್ಲರೊಳಗೆ;
ಮೃತ್ಯುವನವಿದ್ಯೆಯಂ ದಾಂಟುತಲಿ ಪಡೆಯುವಂ
ವಿದ್ಯೆಯಿಂದಮೃತವಂ ಜೀವ ಬೆಳಗೆ. ।೮॥

ಹೇ ಪೂಷಣನೆ ! ಹಿರಣ್ಮಯಪಾತ್ರದಿಂದಲದೊ
ಸತ್ಯದಾ ಮುಖ ಮುಚ್ಚಿಹೋಗಿರುವುದು;
ಎಚ್ಚರದಿ ನೀನು ಮುಚ್ಚಳವನ್ನು ತೆಗೆವುದೊ
ಸತ್ಯಕಾಮಗೆ ಎನಗೆ ಕಾಣಲಹುದು. ॥೯॥

ಈ ಪ್ರಾಣವಾಯುವಮೃತಾನಿಲನ ಸೇರಿರಲಿ
ಈ ಶರೀರಂ ಭಸ್ಮವಂ ಹೊಂದಲಿ;
ಓಂ ಕ್ರತುವೆ, ನೆನೆ ಗೈದುದೆಲ್ಲವೂ ನೆನಪಿರಲಿ
ಕ್ರತುವೆ ನೆನೆ, ಕ್ರತುವ ನೆನಪಿರಲಿ, ॥೧೦॥

ಹೇ ಅಗ್ನಿ, ನಮ್ಮ ಮುನ್ನಡೆಸುವುದು, ಸುಪಥದಲಿ,
ರೈಯೊದಗಿಸೈ ಹದನನೀನರಿತವಂ;
ಕುಟಿಲಪಾಪಗಳನ್ನು ಪರಿಹರಿಸು ಕರುಣದಲಿ
ನಿನಗಿದೊ ನಮೋನಮಃ ನೀನೆ ದೇವಂ. ॥೧೧।

* * * *



## ಹರಿತ ಕತ್ತಿಯ ಧಾರೆಯಂತೆ

ಸುಕೃತಫಲವನ್ನುಂಡು ಹೃದಯದಾಯಕಾಶವನು
ಬುದ್ಧಿಯನು ಹೊಕ್ಕವರು ಇರ್ವರಲ್ತೆ;
ನೆಳಲು– ಬೆಳಕುಗಳೆಂದವರ ಬ್ರಹ್ಮವಿದರು ಪಂ–
ಚಾಗ್ನಿಗಳು ನಾಚಿಕೇತರ್ಪೇಳ್ವರಂತೆ, ॥೧॥

ಆತ್ಮನಂ ರಥಿಕನೆಂದರಿವುದು, ಶರೀರವನು
ರಥವೆಂದು ನಚಿಕೇತ ನೀ ತಿಳಿವುದು;
ಬುದ್ಧಿಯಂ ವಿದ್ಧಿ ಸಾರಥಿಯೆಂದು ಮನವನ್ನು
ಕಡಿವಾಣವೆಂದರಿತುಕೊಂಡಿರುವುದು. ॥೨॥

ಇಂದ್ರಿಯಗಳಂ ಹಯಗಳೆನ್ನುವರು ತಿಳಿದವರು.
ಗೋಚರಗಳವುಗಳಿಗೆ ವಿಷಯಂಗಳು;
ದೇಹವಿಂದ್ರಿಯಮನಸ್ಸುಗಳಿಂದ ಕೂಡಿರುವ
ಆತ್ಮನಂ ಭೋಕ್ತೃವೆಂದೆನ್ನುತಿಹರು. ॥೩।

ಆವನೆಂದೆಂದಿಗುಂ ತಡಿಹಿಡಿಯದಿಹ ಮನದಿ
ತಿಳಿವಳಿಕೆಯವನೆನೆ ಪೆಸರ್ವಡೆದನು;
ಇಂದ್ರಿಯಂಗಳವಂಗೆ ವಶ್ಯವೆನಿಪುವು ನಿಜದಿ
ಉತ್ತಮಾಶ್ವಗಳ ಸಾರಥಿ ಹೊಡೆವನು. ॥೪॥

ಮತಿಯ ಸಾರಥಿ ಮಾಡಿ, ಮನವ ಹಗ್ಗವ ಮಾಡಿ
ಆವ ನರ ನಡೆಸುವನು ಮುನ್ನಡೆವನು;
ಅವನು ಯಾತ್ರೆಯ ಪಾರಗಾಣುವನು, ಕೃಪೆಗೂಡಿ
ವಿಷ್ಣುವಿನ ಪರಮಪದವಂ ಪಡೆವನು. ॥೫॥

ಪಂಚಭೂತಗಳು ಪಂಚೇಂದ್ರಿಯಗಳಿಂ ಶ್ರೇಷ್ಠ,
ಮನವು ಶ್ರೇಷ್ಠವು ಪಂಚಭೂತಂಗಳಿಂ,

ಮನಸಿನಿಂದಲು ಮತ್ತೆ ಬುದ್ಧಿಯೆನಿತೋ ಶ್ರೇಷ್ಠ,
ಬುದ್ಧಿಯಿಂ ಶ್ರೇಷ್ಠ ಮಹದಾತ್ಮ ನಿಜದಿಂ ॥೬॥

ಮಹಾದಾತ್ಮಕಿಂತಲವ್ಯಕ್ತಮದು ಶ್ರೇಷ್ಠಮೆನೆ,
ಶ್ರೇಷ್ಠನವ್ಯಕ್ತದಿಂ ಪರಮಪುರುಷಂ;
ಪರಮಪುರುಷನಿಗಿಂತ ಮಿಗಿಲೆಂಬುದಿಲ್ಲ, ನೆನೆ
ಅದೆ ಕೊನೆಯುಮದೆ ಪರಾಗತಿ ನಿಶ್ಚಯಂ. ॥೭॥

ಏಳಿರೆಚ್ಚರಗೊಳರಿ ! ಶ್ರೇಷ್ಠರಂ ಸೇರುತಲಿ
ತಿಳಿದುಕೊಳ್ಳಿರಿ ನೆಲೆಯನಾತ್ಮನಿರವಂ;
ಹರಿತಕತ್ತಿಯ ಧಾರೆಯಂತೆ ತುಳಿಯುವ ದಾರಿ
ಕಷ್ಟವೆಂಬರು ಬಲ್ಲವರು ಗಮ್ಯವಂ. ॥೮॥

ಕೇಳದಿಹ ಕಾಣದಿಹ ಮುಟ್ಟದಿಹ ಮೂಸದಿಹ
ಸವಿಯದಿಹ ಸವೆಯದಿಹ ತುದಿಮೊದಲಿರದಿಹ
ಹಿರಿದರಿಂದಾಚೆಗಿಹ ಚಲಿಸದಿಹ ಬ್ರಹ್ಮವನು
ತಿಳಿದವನು ಮೃತ್ಯುಮುಖದಿಂ ಮುಕ್ತನು. ॥೯॥

* * * *

## ಹೈಮವತಿಯಾದುಮೆಯ ಬಳಿಗೆ

ದೇವರ್ಕಳಿಂಗೆಬ್ರಹ್ಮಂ ಜಯಿಸತಾ ಬ್ರಹ್ಮ
ಜಯದಿ ದೇವರ್ಮಹಿಮರಾದರ್
ಈ ಜಯವು ನಮ್ಮದೀ ಮಹಿಮೆ ನಮ್ಮದಿದೆಂದು
ಯೋಚನೆಯನವರು ಗೈದರ್ ॥೧॥



ಅವರ ನೆಲೆಯನು ತಿಳಿಯಿತದು, ಮತ್ತೆ ಕಾಣಿಸಿತು
ಅವರಿಗೆ ಸತ್ಯದೊಂದಿರವಂ;
ಯಕ್ಷಮಿದು ಪ್ರತ್ಯಕ್ಷಮಾವುದೆಂಬುದನಂತು
ಅರಿಯಲ್ಲಿಲ್ಲವರದರ ನಿಜವಂ. ॥೨॥

ಅವರಗ್ನಿಯಂ ಕುರಿತು ಪೇಳ್ದರೀ ತೆರದಲ್ಲಿ;
ಹೇ ಜಾತವೇದ, ನೀನರಿಯವುದಿದನು;
ಈ ಯಕ್ಷವಾವುದೆಂಬುದನೆಂದೆನಲ್ಕಗ್ನಿ
ನುಡಿದನು ತಥಾಸ್ತು ಎಂದವನು. ॥೩॥

ಅಗ್ನಿಯೋಡಿದನು ಯಕ್ಷನ ಬಳಿಗೆ, ಪ್ರಶ್ನಿಸಿತು
ಯಕ್ಷ ನೀನಾರೆನ್ನುತವನ ಕೂಡೆ:
ನಾನಗ್ನಿಯಾಗಿಹೆಂ, ನಾ ಜಾತವೇದನೆಂ'
ಎಂದು ಪೇಳ್ದನು ಯಕ್ಷನೊಡನೆ. ॥೪॥

ಅಂತಪ್ಪ ನಿನ್ನೊಳಿನ್ನೆಂತಪ್ಪ ವೀರ್ಯವಿದೆ
ಪೇಳೆಂದು ಯಕ್ಷ ಪ್ರಶ್ನಿಸಿತು:
ದಹಿಸುವೆಂ ಸರ್ವವಂ ಧರಣಿಯೊಳಗಿರ್ಪುದಂ.
ಇಂತಗ್ನಿ ಅದಕುತ್ತರಿಸಿತು. ॥೫॥

ಇದನು ನೀ ದಹಿಸೆಂದಿಡಲು ಹುಲ್ಲುಕಡ್ಡಿಯನು,
ಎಲ್ಲ ಬಲದಿಂ ಸುಡದೆ ಹೋಗೆ,
ಹಿಂಚಿ ಹೇಳಿದನಗ್ನಿ ಯಾವುದೀ ಯಕ್ಷವಿದ
ನರಿಯಲಸದಳಮಾಯಿತೆನಗೆ ॥೬॥

ವಾಯುವಂ ಕುರಿತವರು ಪೇಳ್ದರೀ ರೀತಿಯಲಿ
ಹೇ ವಾಯು, ನೀ ತಿಳಿವುದಿದನು
ಈ ಯಕ್ಷವಾವುದೆಂಬುದನೆಂದೆನಲ್ ವಾಯು
ನುಡಿದನು; ತಥಾಸ್ತು ಎಂದವನು. ॥೭॥

ವಾಯುವೋಡಿದನು ಯಕ್ಷನ ಬಳಿಗೆ, ಪ್ರಶ್ನಿಸಿತು
ಯಕ್ಷ ನೀನಾರೆನುತವನ ಕೂಡೆ;
ನಾ ವಾಯುವಾಗಿಹೆಂ, ನಾ ಮಾತರಿಶ್ವನೆಂ,
ಎಂದು ಪೇಳ್ದಂ ಯಕ್ಷನೊಡನೆ. ॥೮॥

ಅಂತಪ್ಪ ನಿನ್ನೊಳಿನ್ನೆಂತಪ್ಪ ವೀರ್ಯವಿದೆ.
ಪೇಳೆಂದು ಯಕ್ಷ ಪ್ರಶ್ನಿಸಿತು;
ಎತ್ತುತಿಹೆನೆಲ್ಲವಂ ಪೃಥ್ವಿಯೊಳಗಿರ್ಪುದಂ
ವಾಯು ಬಳಿಕಿಂತುತ್ತರಿಸಿತು. ॥೯॥

ಇದನು ನೀ ಹಾರಿಸೆಂದಿಡೆ ಹುಲ್ಲುಕಡ್ಡಿಯನು,
ಎಲ್ಲಬಲದಿಂದೆತ್ತಲೊಲ್ಲದಾಗೆ
ಹಿಂಚೆ ಪೇಳ್ದಂ ವಾಯು: ಯಾವುದೀ ಯಕ್ಷವಿದ
ನರಿಯಲಸದಳಮಾಯಿತೆನಗೆ. ॥೧೦॥

ಬಳಕಿಂದ್ರನಂ ಕರೆದು ಪೇಳಿದರು: ಹೇ ಮಘವ,
ಆವುದೀ ಯಕ್ಷವೆಂಬುದನರಿವುದು;
ಅಂತಾಗಲೆಂದುವೋಡಿದನಿಂದ್ರ ಬಳಿಗದರ
ಮರೆಯಾಗುತವನಿಂದು ಪೋದುದಂದು, ॥೧೧॥

ಆಗಲವನಾಗಸದೊಳಿಹ ಶೋಭಮಾನಳಹ
ಹೈಮವತಿಯಾದುಮೆಯ ಬಳಿಗೆ
ಬಂದು, ಹೇಳವನಗಳೊಡನೆ: ದೇವಿ, ಯಾವುದೀ
ಯಕ್ಷವೆಂದದನು ತಿಳಸೆನಗೆ. ॥೧೨॥

ಅವಳೆಂದಳದು ಬ್ರಹ್ಮವೆಂದು, ಬ್ರಹ್ಮದ ಜಯದಿ
ಮಹಿಮೆಯಂ ನೀವಂತು ತಾಳ್ದಿರೆಂದು,
ಅದರಿಂದಲಿಂದ್ರನರಿತಂ ಬ್ರಹ್ಮವಂ ನಿಜದಿ
ಉಮೆಯಿತ್ತವುಪದೇಶ ಮನಕೆ ತಂದು. ॥೧೩॥



ಮಿಂಚು ಹೊಳೆದಂತೆ ಮೇಣ್ ಕಣ್ಮುಚ್ಚಿ ತೆರೆದಂತೆ,
ಕಂಡು ಕಾಣದೆ ಮಾಯವಪ್ಪುದಂತೆ;
ಇದು ಬ್ರಹ್ಮವಿಷಯದಾದೇಶವಾಗಿದೆ ಮತ್ತೆ
ಅಧಿದೈವತಾವಿಷಯವೆಂಬರಲ್ತೆ. ॥೧೪॥

ಮನವು ಬ್ರಹ್ಮದ ಸಮೀಪಕೆ ಜವದಿ ಪೋಪಂತೆ,
ಮನಸಿಂದಲಿದನು ಸಂಸ್ಕರಿಸಿದಂತೆ,
ಬ್ರಹ್ಮವಿಷಯದಲಿ ಮನ ಸಂಕಲ್ಪಗೈದಂತೆ
ಇರುವುದಧ್ಯಾತ್ಮವೆಂದೆಂಬರಲ್ತೆ. ॥೧೫॥

* * * *

## ಎಂತು ಜೇಡರ ಹುಳವು ಸೃಜಿಸಿತೊಳಕೊಳ್ಳುವುದೊ –

ಅಂದಥರ್ವಂಗೆ ಬ್ರಹ್ಮಂ ಪೇಳ್ದ ವಿದ್ಯೆಯನ–
ಥರ್ವನಂಗಿರಗೆ ತಾನದನರುಹಿದಂ;
ಆತ ಭಾರಧ್ವಾಜ ಸತ್ಯವಹನಿಗೆ ಪೇಳಲ್
ಅವ ಪರಾಪರವನಂಗಿರಸಗೆಂದಂ ॥೧॥

ಆ ಮಹಾಶಾಲ ಶೌನಕನೊಮ್ಮೆ ವಿಧಿಯಂತೆ
ಅಂಗಿರಸನಂ ಸಮೀಪಿಸಿ ಕೇಳ್ದನು;
ಭಗವಂತ ಯಾವುದನ್ನರಿತುಕೊಂಡರೆ ಸರ್ವ–
ವಿದು ತಿಳಿವುದುದೆನಗೆ ಪೇಳಯ್ಯ ನೀನು ॥೨॥

ಅಂಗಿರಸನವಗರುಹಿದನು: 'ಬ್ರಹ್ಮವಿದರೆಲ್ಲ
ಉಭಯವಿದ್ಯಗಳಿರುವುದೆನ್ನುತಿಹರು;
ಅವುಗಳನ್ನು ರಿಯಬೇಕೆನ್ನುವರು' ಪರವೆಂದು
ಅಪರವೆಂದಿಂತು ಪೆಸರಿರಿಸಿರುವರು. ॥೩॥

ಋಗ್ಯಜುಸ್ಸಾಮಗಳಥರ್ವವಪರಂ ವಿದ್ಯೆ,
ಅಕ್ಷರವ ಪರವಿದ್ಯೆಯಿಂ ಪಡೆವುದು;
ಶಿಕ್ಷೆ ಕಲ್ಪಂ ವ್ಯಾಕರಣ ನಿರುಕ್ತಂ ಛಂದ
ಜ್ಯೋತಿಷಗಳೆಂಬವಿವುವಪರವಹವು ॥೪॥

ಕಣ್ಗೆ ಕಾಣದ ಕೈಗೆ ಸಿಗದ ಗೋತ್ರವು ವರ್ಣ
ಇರದ ಕಣ್ ಕಿವಿ ಕಾಲು ಕೈಗಳಿರದ;
ನಿತ್ಯವಿಭು ಸರ್ವಗತ ಸೂಕ್ಷ್ಮನವ್ಯಯ ಸೃಷ್ಟಿ–
ಕರ್ತನಂ ಬಲ್ಲವರರಿವರಿಂತಿದೆ. ॥೫॥

ಎಂತು ಜೇಡರ ಹುಳವು ಸೃಜಿಸುತೊಳಕೊಳ್ಳುವುದೊ,
ಎಂತು ಸಸ್ಯಗಳು ನೆಲದೊಳ್ಮೊಳೆವುವೊ;
ಎಂತು ಜೀವಂತನರನಿಂ ಕೇಶರೋಮಗಳೊ,
ಅಂತೆ– ಅಕ್ಷರದಿ ವಿಶ್ವಂ ಜನಿಸಿತು. ॥೬॥

ತಪದಿಂದ ಬ್ರಹ್ಮವಿಕಸನಮಪ್ಪುದಾ ಬ್ರಹ್ಮ–
ನಿಂದನ್ನವುದ್ಭವಿಪುದನ್ನದಿಂದ;
ಪ್ರಾಣ ಮನ ಸತ್ಯಲೋಕಗಳು ಮೇಣ್ ಕರ್ಮಫಲ
ದಿಂದಪ್ಪುದಲ್ತೆ ತಾನಮೃತ ಸಿದ್ಧ. ॥೭॥

ಸರ್ವಜ್ಞ, ಸರ್ವವಿದನಾವನಾವನ ತಪವು
ಜ್ಞಾನಮಯವಾಗಿರ್ಪುದಾತನಿಂದ
ಈ ಬ್ರಹ್ಮವೀನಾಮವೀರೂಪವೀಯನ್ನ
ಎಲ್ಲ ಜನಿಸುವುವವನ ಕರುಣೆಯಿಂದ ॥೮॥

* * * *



## ರಥನಾಭಿಯಲ್ಲರಗಳಿರ್ಪಂತೆ

ಪಿಪ್ಪಲಾದನುಸಿರ್ದನಿಂತಾ ಭರದ್ವಾಜ
ಪುತ್ರಗೆ, ಸುಕೇಶಂಗೆ; ಹೇ ಸೌಮ್ಯ, ಕೇಳು;
ಅವನೊಳಗುತ್ಪನ್ನವಪ್ಪುವೀ ಹದಿನಾರು
ಕಲೆಗಳವ ನೆಲಸಿರ್ಪನೀಶರೀರದೊಳು. ॥೧॥

ಷೋಡಸಕಲಾಪೂರ್ಣನಾ ಪುರುಷನಿಂತೆಂದು
ಆಲೋಚನೆಯ ಗೈದನಾತನಂದು.
ಆರು ಪೊರಮಟ್ಟಿರಲು ನಾಂ ಪೊರಟು ಪೂಗುವೆಂ
ಆರು ನಿಂತಿರಲು ನೆಲೆನಿಲ್ವೆನೆಂದು. ॥೨।

ಪ್ರಾಣವಂ ಸೃಜಿಸೆ, ಪ್ರಾಣದಿ ಶ್ರದ್ಧೆ ಬಾನ್ ಗಾಳಿ
ಬೆಂಕಿ ನೀರ್ ನೆಲವಿಂದ್ರಿಯಂ ಮನಸ್ಸನ್ನಂ.
ಅನ್ನದಿಂ ವೀರ್ಯ ತಪ ಮಂತ್ರಂಗಳಾಕರ್ಮ
ಲೋಕಗಳು, ಲೋಕಂಗಳಿಂ ನಾಮಕರಣಂ. ॥೩॥

ಅದು ಎಂತೆನಲ್ಕೆ: ಕಡಲಿನ ಕಡೆಗೆ ಹರಿಯುತಿಹ
ತೊರೆ ತೊರೆಗಳೆಲ್ಲ ಕಡಲೊಡಲೊಳಡಗುತ ತಮ್ಮ
ನಾಮರೂಪಂಗಳಂ ಕಳೆದುಕೊಳ್ಳುವವೆಂತು,
ಮೇಣವುಗಳೆಲ್ಲ ಕಡಲೆಂಬ ಪೆಸರನೆ ಪಡೆವ–
ವೆಂತಂತೆ; ಪುರುಷನನೆ ಸೇರಬೇಕಾಗಿರ್ಪ
ಹದಿನಾರು ಕಲೆಗಳಿವು. ಈ ಸರ್ವಸಾಕ್ಷಿಯವು
ಪುರುಷನಂ ಸೇರಿ ಮರೆಯಾಗುವುವು, ಮೇಣವುಗಳ
ಆ ನಾಮರೂಪಗಳು ನೆರೆ ನಾಶವಾಗುವುವು.
ಆ ಇವನು ರಹಿತನ್ಶೈ ಕಲೆಗಳಿಂ, ಸಹಿತನ್ಶೈ
ಅಮೃತದಿಂ; ಮಂತ್ರವಿಹುದೀ ವಿಷಯಕಿಂತೆಂದು: ॥೪।

"ರಥನಾಭಿಯಲ್ಲರಗಳಿರ್ಪಂತೆ ಯಾವನೊಳು
ಕಲೆಗಳಿವು ಕೂಡಿಕೊಂಡಿಹುವು,
ವೇದ್ಯನಾದಾ ಪುರುಷನಂ ತಿಳಿಯೆ ನಿಮ್ಮನ್ನು
ವ್ಯಥೆಗೊಳಿಸದೈ ಕೊನೆಗೆ ಸಾವು." ॥೫॥

ಪಿಪ್ಪಲಾದಂ ಪೇಳ್ದನಿಂತು ಪ್ರಶ್ನಿಸಿದವರ್ಗೆ
ನುಡಿದನೀ ನಲೆಯನವ ಕೊನೆಗೆ:
'ಈ ಪರಬ್ರಹ್ಮವನ್ನಿಷ್ಟೆ ನಾನರಿತಿರ್ಪೆ
ಇದಕಿಂತ ಶ್ರೇಷ್ಠ ಮೇಣಿಲ್ಲ ನಿಜಕೆ.' ॥೬॥

ಶಿಷ್ಯರವನಂ ಪೂಜಿಸುತ ಪೇಳ್ದರಿಂತೆದು
ನೀನೆ 'ವಿದ್ಯೆಯ ದಡವನೆಮ್ಮ ದಾಂಟಿಸುವೆ
ತಂದೆ ನೀನಮಗೆ, ಮಣಿವೆವು ಪರಮಋಷಿಗಳಿಗೆ;
ನಮಸ್ಕಾರವಿದು ನಿಮಗೆ ಪರಮಋಷಿಗಳಿಗೆ. ॥೭೮॥

* * * *

## ಮರಣದಿಂ ಮುಂದೇನು ?

ಹಿಂದೆ ವಾಜಸ್ರವಸನೆಂಬವಂ ವಿಶ್ವಜಿತ್
ಯಜ್ಞವಂ ಕೈಕೊಂಡು ಪುಣ್ಯಪಡೆಯೆ,
ಸರ್ವಸ್ವವಂ ದಾನವಾಗಿತ್ತನಾತಂಗೆ
ನಚಿಕೇತ ಪುತ್ರನಿರ್ದಂ ಬಳಿಯ ಬೆಳಗೆ. ॥೧॥

ಋತ್ವಿಜರಿಗರ್ಪಿಸಲು– ದಕ್ಷಿಣೆಗಳಿವುಯೆಂದು,
ಗೋವುಗಳನ್ನೊಯ್ಯುತಿರೆ ನೋಡುತವನು,
ಎಳೆಯನಾದರು ಬುದ್ಧಿ ಹೊಳೆಯಲಾತನಿಗಂದು,
ಶ್ರದ್ಧಾನ್ವಿತನು ಚಿಂತಿಸುತ ನಿಂತನು. ॥೨॥



"ನೀರು ಹೀರಿ ಹುಲ್ಲನ್ನು ಮೇದು ನೆರೆ
ಹಾಲು ಹಿಂಡಿರುವ ಬರಡು
ಹಸುವನೀವ ನರನಾವನವ ಪೊಗುವ
ನಂದವಿರದ ಜಗ ಬರಡು." ॥೩॥

ಎಂದು ಯೋಚಿಸಿ, ತಂದೆಯೊಡನೆಂದನಾಸುತಂ:
"ತಾತ, ನೀನೆನ್ನನಾರಿಗೆ ಕೊಡುವೆಯಿಂದು?"
ಇಂತಿರ್ಮೆ ಮುಮ್ಮೆಯುಂ ಪ್ರಶ್ನಿಸಲ್ಕಾಪಿತಂ
ಕುಪಿತನೆಂದಂ ಮೃತ್ಯುಗೊಪ್ಪಿಸುವೆನೆಂದು. ॥೪॥

ಎಂದ ನಚಿಕೇತ ಯಮಲೋಕಕ್ಕೈದಿದನಲ್ಲಿ
ಧರ್ಮನಿರದಿರೆ, ಕಾದು ಕುಳಿತ ವೇಳೆ;
"ಶಾಂತಿಗುದಕಂ ಕೊಂಡು ಬಾ ಮೃತ್ಯು ನೋಡಿಲ್ಲಿ
ಅಗ್ನಿರೂಪದ ಬ್ರಾಹ್ಮಣಾತಿಥಿ ಜ್ವಾಲೆ !"

"ಆಶಾಪ್ರತೀಕ್ಷೆಗಳ ಸಂಗತವ ಸೂನೃತವ
ಇಷ್ಟಪೂರ್ತಗಳ ಶಿಶುಪಶುಗಳಿವನು,
ಆವಲ್ಪಮತಿಯ ಮನೆಯಲ್ಲಿ ಬ್ರಹ್ಮಜ್ಞಾನಿ
ಅನಶನದೊಳಿಹನವ ವಿನಾಶಿಸುವನು."

ಇಂತು ಮೊರೆಯಿಡಲು ಪರಿವಾರ, ಧರ್ಮಂ ಬಂದು,
"ಹೇ ಬ್ರಹ್ಮನ್ನತಿಥಿಯೆ! ನಮೋ ನಮಃ ನಿನಗೆ
ಒಳ್ಳಿತಾಗಲಿ; ಮೂರುರಾತ್ರಿ ನಿರಶನ ನಿಂತೆ,
ಮೂರು ವರಗಳ ಕೇಳು ಕೊಡುವೆನಂತೆ." ॥೬॥

–ಎಂದ ಯಮನಿಂದ ಕೇಳಿದ ಪ್ರಥಮವರವಿದನು:
"ಶಾಂತಸಂಕಲ್ಪ ಸುಮನಂ ವೀತಮನ್ಯು
ಆಗಲೆನ್ನಯ ತಂದೆ, ನಿನ್ನೊಂದು ದಯದಿಂದೆ,
ಮರಳಿ ಪೋದೆನ್ನಸ್ವೀಕರಿಸಲೆಂದೆ." ॥೭॥

ಯಮನೆಂದ: "ಮೃತ್ಯುಮುಖದಿಂದ ಬಂದಿಹ ಕಂದ
ನೀನೆಂದು ತಂದೆ ಕಾಂಬನು ಚಂದದಿಂದ
ಹಿಂದಿನಂತೆಯೆ; ಮತ್ತೆ ಕೋಪವಿಳಿವುದರಿಂದ
ಇರುಳ ಕಳೆವನು ಸುಖದ ಸ್ವಪ್ನದಿಂದ." ॥೮॥

"ಎಲ್ಲಿ ಭಯವಿರದೋ, ಮೇಣೆಲ್ಲಿ ಮರಣಂ ಬರದೊ,
ಎಲ್ಲಿ ಜರೆ ಕ್ಷುತಿಪಾಸೆಗಳು ಬಾಧಿಸದೊ,
ಎಲ್ಲಿ ಶೋಕಗಳಿಲ್ಲ, ಎಲ್ಲಿ ಮೋದವೆಯೆಲ್ಲ,
ಅಲ್ಲಿಯಾ ಸ್ವರ್ಗದಲಿ ಸೊಗವಿರುವುದಿಲ್ಲ." ॥೯॥

"ನೀಂ ಬಲ್ಲೆ ಸ್ವರ್ಗಕೊಯ್ವಗ್ನಿಯಂ ತಿಳಿಸೆನಗೆ
ಶ್ರದ್ಧಾನ್ವಿತಗೆ– ಸಗ್ಗಿಗರ್ಸರ್ವರು–
ಅಮೃತತ್ವ ಗಳಿಸಿರುವ ವಿದ್ಯೆಯಂ ಕಲಿವ ಬಗೆ
ಎರಡನೆಯ ವರದಲ್ಲಿ ಕರುಣೆದೋರು." ॥೧೦॥

ಎನಲು, ನಚಿಕೇತಂಗೆ ಧರ್ಮನೆಂದಂ: "ನಿನಗೆ
ಸ್ವರ್ಗ್ಯಾಗ್ನಿಯಂ ಬಿಡದೆ ಬೋಧಿಸುವೆನು;
ಅಮರಲೋಕಪ್ರಾಪ್ತಿ ಈ ಜಗದ ಸಂತೃಪ್ತಿ
ಬುದ್ಧಿನಿಹಿತಂ ವಿದ್ಧಿ ವಿದ್ಯೆಯಿದನು." ॥೧೧॥

ಆ ಮಹಾತ್ಮಂ ಪೇಳ್ದನಂದು: "ಮರಳಿಯು ಬೇಕೊ
ವರವೀವೆ ಕೇಳೀಗಳೆನ್ನೊಳಿಲ್ಲಿ;
ಈಯಗ್ನಿ ನಿನ್ನಯ ಪೆಸರ್ಪಡದಿರಲಿ ಇದಕೊ
ಬಹುರೂಪದೀಮಾಲೆ ಕೊಳ್ಕೊಳಿರಲಿ." ॥೧೨॥

ನಚಿಕೇತನುಸುರಿದನು. "ಮರಣದಿಂ ಮುಂದೇನು?
ಉಂಟೆಯಿಲ್ಲವೆಯೆಂಬ ಸಂಶಯದಲಿ
ನಿಶ್ಚಯವ ನುಡಿಯೆನಗೆ, ತಿಳಿಸಾತ್ಮವಿದ್ಯೆಯನು
ಇದನೆ ಕೇಳುವೆ ಮೂರನೆಯ ವರದಲಿ." ॥೧೩॥



"ಈ ಧರ್ಮವಣುರೂಪ ಸುಜ್ಞೇಯವಲ್ಲವಿದು,
ಹಿಂದೆ ದೇವರ್ಗು ಸಹ ಸಂದೇಹ ಬಂತು;
ಬೇಡು– ಬೇರೊಂದುವರ, ನಚಿಕೇತ ಸಲ್ಲದಿದು
ವರವಿದನು ಕೇಳದಿರು ಎಂದನಾ ಮೃತ್ಯು." ॥೧೪॥

ದೇವರ್ಗು ಸಂದೇಹ ಬಂದಿತಲ್ಲವೆ ಧರ್ಮ?
ಸುಜ್ಞೇಯವಲ್ಲವೆಂದೆಯೇ ತಿಳಿಸಲಿದನು
ನೀನಲ್ಲದನ್ಯ ಸಿಗಲೊಲ್ಲನೇತತ್ತುಲ್ಯ
ವರವಿಲ್ಲ" ವೆನಲು ನಚಿಕೇತಂಗೆಂದನು: ॥೧೫॥

"ನೂರುವರುಷಂ ಬಾಳ್ವ ಪುತ್ರಪೌತ್ರ ಕೇಳು,
ಭೂತಿಪಶುಗಳು ಜಗಹಿರಣ್ಯವಾಜಿಗಳು;
ಭೂಮಿಯ ವಿಶಾಲರಾಜ್ಯವು ಬೇಕೆ ? ನೀ ಹೇಳು,
ಬದುಕಬೇಕೆಂಬನಿತು ಕಾಲ ನೀ ಬಾಳು. ॥೧೬॥

ಇದಕೆ ಸಮನಹುದು ಬೇರೇನಿಹದೊ ಬೇಡಯ್ಯ
ಬೇಡು ವಿತ್ತವನು– ಚಿರಜೀವಿತವನು,
ಈ ಮಹಾಭೂಮಿಯೊಡೆತನಕೆ ಮನಮಾಡಯ್ಯ,
ನಿನ್ನಾಸೆಗಳನು ಈಡೇರಿಸುವೆನು ॥೧೭॥

ಅವಾವ ಬಯಕೆಗಳು ದುರ್ಲಭವೊ ಲೋಕದಲಿ
ಅವುಗಳಲಿ ಬೇಕಾದುದೆಲ್ಲವಂ ಬೇಡು;
ನರರೆಂದು ಪೊಂದದಿಹ, ರಥಗೀತಸಹಿತರಹ
ಅಪ್ಸರೆಯರಂ ಕೊಡುವೆ, ಕೇಳಿ ನೋಡು ?" ॥೧೮॥

ಎನಲು ನಚಿಕೇತನಂತಕಗೆಂದನಿಂತೆಂದು;
"ಕ್ಷಣಿಕವೀ ಸುಖ ನರನ ಸರ್ವೇಂದ್ರಿಯಂ
ಕ್ಷೀಣಿಸುವುದಿದರಿಂದ, ಬದುಕು ಸಹ ಬಲುಕಿರಿದು,
ನಿನಗೆ ಇರಲೀ ರಥಂ ನೃತ್ಯಗೀತಂ." ॥೧೯॥

ವಿತ್ತದಿಂ ತೃಪ್ತಿಯಾವುದಿಲ್ಲ ಮಾನವಗೆ,
ತ್ವದ್ದರ್ಶನವೆ ಧನವನೊದಗಿಸುವುದು;
ನೀನಾಳುವನಕ ಬಾಳುವೆವಾವು; ನೀಡೆನಗೆ
ಆ ವರವೆ ಬೇಕದನೆ ಕರುಣಿಸುವುದು. ॥೨೦

"ಜರೆ ಮರಣವಿರದಮರರಿರವರಿತಿರುವ ನರನು,
ಭೂಮಿಯಲಿ ಬಿದ್ದು ಮುಪ್ಪನ್ನಪ್ಪಿ ಸಾವವನು,
ಅತಿದೀರ್ಘ ಜೀವತದಿ ಗೀತನೃತ್ಯವ ಸುಖದಿ
ರಮಿಸಲೊಲ್ಲನು ಬಲ್ಲವನು ಲೋಕದಿ." ॥೨೧॥

"ಆವುದರ ಕುರಿತು ಸಂಶಯ ಬಂತು: 'ಮರಣದಿಂ
ಮುಂದೇನು', ಯೆಂದಿಂತು– ತಿಳಿಸದನೆ ಮೃತ್ಯು–;
ಆವುದತಿಗೂಢದಿಂ ಕೂಡಿಹುದೊ, ವರವದಂ
ನಚಿಕೇತ ಕೇಳುತಿಹ– ಬೇರಿಲ್ಲ ಮಾತು." ॥೨೨॥

* * * *



## ಪ್ರಾರ್ಥನೆ

ಬಾನಿನಲಿ ಬಯಲಲ್ಲಿ
ಕಡಲಲ್ಲಿ ಸಿಡಿಲಲ್ಲಿ
ಎಲ್ಲೆಲ್ಲು ನೀನಿರುವೆ ದೇವ ದೇವ !

ಕಲ್ಲಿನಲ್ಲಿ ಹುಲ್ಲಿನಲಿ
ಕಾಡಿನಲಿ ಗೂಡಿನಲಿ
ಸರ್ವತ್ರ ನೆಲಸಿರುವೆ ದೇವ ದೇವ !

ಪುಷ್ಪಪರಿಮಳದಲ್ಲಿ
ಸಂಗೀತನಾದದಲಿ
ನಿನ್ನ ಸನ್ನಿಧಿಯುಂಟು ದೇವ ದೇವ !

ಹೆತ್ತೊಡಲ ಪ್ರೀತಿಯಲಿ
ಸತ್ಯಗುಣ ನೀತಿಯಲಿ
ನಿತ್ಯ ನೀ ನೆಲಸಿರುವೆ ದೇವ ದೇವ !

ದುಡಿಯುವರ ದುಃಖದಲಿ
ದುಡಿಸುವವರ ಸುಖದಲ್ಲಿ
ನಿನ್ನ ಪ್ರೇರಣೆಯುಂಟು ದೇವ ದೇವ !

ಹಗಲಲ್ಲಿ ರಾತ್ರಿಯಲಿ
ಸ್ವಪ್ನಜಾಗೃತಿಯಲ್ಲಿ
ನೀನೆಮ್ಮ ಸಲಹುತಿಹೆ ದೇವ ದೇವ !

ಸೂರ್ಯ ಚಂದ್ರರ ಗಡಣ
ನಕ್ಷತ್ರ ಗ್ರಹರ ಗಣ
ಎಲ್ಲವೂ ನಿನ್ನ ಗುಣ ದೇವ ದೇವ !

ವೇದ ಪೌರಾಣಗಳು
ಬೈಬಲು ಕುರಾಣಗಳು
ನಿನ್ನನ್ನೇ ಹೊಗಳುತಿವೆ ದೇವ ದೇವ !

ರಾಮ ಜಿನ ಗೌತಮರು
ಯೇಸು ಪೈಗಂಬರರು
ಎಲ್ಲರೂ ನಿನ್ನವರು ದೇವ ದೇವ !

ಸಕಲ ಮತ ಧರ್ಮಗಳು
ನಿಖಿಲ ಜಗ ಜೀವಿಗಳು
ನಿನ್ನಮಲ ಲೀಲೆಗಳು ದೇವ ದೇವ !

ಮೃಷ್ಟಾನ್ನವುಣುವವರ
ಉಪವಾಸವಿರುವವರ
ನೀ ನಿತ್ಯ ನೋಡುತಿಹೆ ದೇವ ದೇವ !

ಸಿರಿತನವ ಬಡತನವ
ಗೆಳೆತನವ ಹಗೆತನವ
ನೀ ಪರೀಕ್ಷಿಸುತಿರುವೆ ದೇವ ದೇವ !

ಮಗುಗೆ ಮೊಲೆಯೂಡುತಿರೆ
ನಗುತ ಶಿಶುವಾಡುತಿರೆ
ನೀನದರ ಬಳಿಯಿರುವೆ ದೇವ ದೇವ !

ಮಗುತನವು ಯೌವನವು
ಮುದಿತನವು ಮರಣವು
ಎಲ್ಲ ನಿನ್ನಯ ಬಯಕೆ ದೇವ ದೇವ !



ಎಲ್ಲೆಲ್ಲು ನೀನಿರುವೆ
ಎಲ್ಲ ಕಾಲಕು ಪೊರೆವ
ಸಲ್ಲಲಿತ ಸದ್ಗುರುವೆ ದೇವ ದೇವ !

ಸನ್ಮಾರ್ಗದಲಿ ನಡೆಸು
ಸದ್ಗತಿಯನೇ ಕೊಡಿಸು
ಸರ್ವಾತ್ಮ ನೀ ಹರಸು ದೇವ ದೇವ !

* * * *